

ಡಾ. ಬಿ. ಎಸ್. ಗದ್ದಗಿಮಠ

# ಬದುಕು ಬರಹ

ಸಂಪಾದಕರು :
ಗವೀಶ ಹಿರೇಮಠ



ಡಾ. ಬಿ. ಎಸ್. ಗದ್ದಗಿಮಠ

# ಬದುಕು ಬರಹ

(ವಿಚಾರ ಸಂಕಿರಣ ಪ್ರಬಂಧಗಳು)

•

ಪ್ರಧಾನ ಸಂಪಾದಕರು

**ಕೆರೆಮನೆ ಶಂಭುಹೆಗಡೆ**

•

ಸಂಪಾದಕರು

**ಗವೀಶ ಹಿರೇಮಠ**

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,**

ಬೆಂಗಳೂರು - ೦೨

Dr. B. S. Gaddagimath - BADUKU BARAHA ;
A collection of seminar articles

Chief Editor : Keremane Shambhu Hegde

Edited by : Sri Gavish Hiremath;

Published by : B. N. Paraddi, Registrar,
Karnataka Janapada and
Yakshagana Academy;
Kannada Bhavan, J. C. Road,
Bangalore - 02

Pages : 10 + 119 = 129

Price : Rs. 70-00

© : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು

ಪ್ರಧಾನ ಸಂಪಾದಕರು : ಶ್ರೀ ಕೆರೆಮನೆ ಶಂಭುಹೆಗಡೆ

ಸಂಪಾದಕರು : ಶ್ರೀ ಗವೀಶ ಹಿರೇಮಠ

ಮೊದಲ ಮುದ್ರಣ : ೨೦೦೭

ಪುಟಗಳು : ೧೦ + ೧೧೯ = ೧೨೯

ಪ್ರತಿಗಳು : ೧೦೦೦

ಬೆಲೆ : ರೂ. ೭೦-೦೦

ಪ್ರಕಾಶಕರು : ಬಿ. ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – ೫೬೦೦೦೨

ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [08372] 238181 ಮನೆ : 238182 ಮೊ : 9448186063, 9880904707

# ಅಕಾಡೆಮಿ ಅಧ್ಯಕ್ಷರ ನುಡಿ . . . . .

ರಾಷ್ಟ್ರದ ಸಾಂಸ್ಕೃತಿಕ ಇತಿಹಾಸದಲ್ಲಿ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ, ಅಧ್ಯಯನ, ಪ್ರಸಾರ, ಪ್ರಕಟಣೆ, ಕಲಾವಿದರ ಪುರಸ್ಕಾರ, ಪ್ರಶಸ್ತಿಗಾಗಿಯೇ ಒಂದು ಅಕಾಡೆಮಿ ಸ್ಥಾಪನೆಯಗಿರುವುದು ಕರ್ನಾಟಕದಲ್ಲಿ ಮಾತ್ರ. ಇದೊಂದು ಹೆಮ್ಮೆಯ ಸಂಗತಿ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಕರ್ನಾಟಕ ಸರ್ಕಾರ ಸ್ಥಾಪಿಸಿರುವುದು, ನೆಲ ಮೂಲ ಸಂಸ್ಕೃತಿಗೆ ನೀಡಿದ ಬಹು ದೊಡ್ಡ ಗೌರವ ಎಂದೇ ಭಾವಿಸಿದ್ದೇವೆ. ಈ ಸ್ಥಾಪನೆಯಾಗುವುದರ ಹಿಂದೆ ಹಲವರ ಶ್ರಮವಿದೆ. ಒತ್ತಾಸೆಯೂ ಇದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇಪ್ಪತ್ತೈದು ವರ್ಷಗಳನ್ನು ಪೂರೈಸುತ್ತಿದೆ. ಒಂದು ಸಾಂಸ್ಕೃತಿಕ ಸಂಸ್ಥೆಗೆ ಈ ಅವಧಿ ಕಡಿಮೆಯೇನಲ್ಲ. ಈ ಅವಧಿ ಕರ್ನಾಟಕ ಜಾನಪದೀಯವಾಗಿ ಹಲವು ಮೈಲಿಗಲ್ಲುಗಳನ್ನು ನೆಟ್ಟಿದೆ. ಸಾಂಸ್ಕೃತಿಕ ದಾಖಲೆಯ ಭವ್ಯತೆಯನ್ನು ಮೆರೆದಿದೆ. ಜಾನಪದ ಸಂಪನ್ನ ಹೆಚ್. ಎಲ್. ನಾಗೇಗೌಡರಿಂದ ಆರಂಭಗೊಂಡು, ಈ ತನಕ ಬಂದ ಎಲ್ಲ ಅಧ್ಯಕ್ಷರು ಅವರವರ ಕೈಗೆಟಕುವ, ಸಾರ್ಥಕ ಕೆಲಸ ಮಾಡಿಹೋಗಿದ್ದಾರೆ. ಈ ಎಲ್ಲ ಮಹನೀಯರ ಸಾಧನೆ ದೊಡ್ಡದೆಂದೇ ನಾನು ಭಾವಿಸಿದ್ದೇನೆ. ಹಾದಿ ಬೀದಿಯಲ್ಲಿ ಭಿಕ್ಷಾಟನೆ ಮಾಡುವ ಕಲಾವಿದರನ್ನು ಗುರುತಿಸಿ, ಅವರವರ ಕಲಾ ಸಾಧನೆಗೆ ತಕ್ಕ ಹಾಗೆ ಗೌರವಿಸಿದೆ. ನಿರ್ಲಕ್ಷ್ಯಕ್ಕೆ ಒಳಗಾದ ಹಲವು ಕಲಾವಿದರನ್ನು ಸಾಂಸ್ಕೃತಿಕ ಗಣ್ಯರ ಸಮ ಕ್ಷಮದಲ್ಲಿ ಕೂರಿಸಿ, ಹಾರ ಹಾಕಿ, ಹಣ್ಣು ಹಣ ನೀಡಿ ಗೌರವಿಸುತ್ತಿದ್ದಾಗ, ಆ ಕಲಾವಿದ ಪಿಳಪಿಳನೆ ಕಣ್ಣು ಬಿಟ್ಟದ್ದನ್ನು, ಗಳಗಳನೆ ಭಾವೋದ್ರೇಕದಿಂದ ಅತ್ತದ್ದನ್ನು ನಾನು ಕಂಡಿದ್ದೇನೆ. ಆತನ ಕಲೆಯ ಮಹತ್ವ ಆತನಿಗೆ ಅರಿವಿಲ್ಲದಿದ್ದರೂ, ನಾಡಿನ ಸಾಂಸ್ಕೃತಿಕ ಪರಂಪರೆಯಲ್ಲಿ ಆತನ ಸ್ಥಾನ ಮಾನವೇನು ಎಂಬ ಅರಿವು ಅಕಾಡೆಮಿಗೆ, ಸಂಸ್ಕೃತಿ ಚಿಂತಕರಿಗೆ ಇರುತ್ತದೆ. ಹಾಗಾಗಿ ಇಲ್ಲಿ ಹಾಡು ಹಾಡುತ್ತಲೇ ಮರೆಯಾಗಿ ಬಿಡುತ್ತಿದ್ದ, ಕುಣಿದು ಇಲ್ಲವಾಗುತ್ತಿದ್ದ ಕಲಾವಿದರಿಗೂ ಅಕಾಡೆಮಿಯಿಂದಾಗಿ ಸಾಂಸ್ಕೃತಿಕ ಘನತೆಯನ್ನು: ಗಾಂಭೀರ್ಯವನ್ನು ತಂದು ಕೊಡುವುದಕ್ಕೆ ಸಾಧ್ಯವಾಗುತ್ತಿದೆ. ಈ ಬಗೆಯ ಹಲವು ಯೋಜನೆಗಳನ್ನು ಅಕಾಡೆಮಿ ರೂಪಿಸಿದೆ. ಇದರ ಅರಿವು ತಮಗೂ ಇದೆ ಅಂದುಕೊಂಡಿದ್ದೇನೆ.

ಯೋಗಾಯೋಗ ಅನ್ನುವಂತೆ ಅಕಾಡೆಮಿಗೆ ಇದೀಗ ಬೆಳ್ಳಿ ಹಬ್ಬದ ವೈಭೋಗ. ಕರ್ನಾಟಕ ರಾಜ್ಯ ಸುವರ್ಣ ಮಹೋತ್ಸವ ಸಂದರ್ಭವೂ ಇದೇ ಆಗಿದೆ. ಇದನ್ನು ಸಾರ್ಥಕವಾಗಿ, ಸ್ಮರಣೀಯವಾಗಿ ಆಚರಿಸಬೇಕೆಂಬುದು ಅಕಾಡೆಮಿ ಬಳಗದ ಆಲೋಚನೆ.

ಆ ಹಿನ್ನೆಲೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕಾರ್ಯೋನ್ಮುಖವಾಗುತ್ತಿರುವದನ್ನು ಇಲ್ಲಿ ದಾಖಲಿಸಲು ಹರ್ಷಿಸುತ್ತೇವೆ. ಈ ಕೆಲಸಕ್ಕೆ ನಾಡಿನ ಸಾಂಸ್ಕೃತಿಕ ಲೋಕದ ಗಣ್ಯರ, ಕಲಾವಿದರ, ವಿದ್ವಾಂಸರ ಸಾಂಸ್ಕೃತಿಕ ನೆರವನ್ನು ಅಕಾಡೆಮಿ ಬಳಗ ಎರಡೂ ಕೈಯೊಡ್ಡಿ ಬಯಸುತ್ತದೆ. ಕನ್ನಡ ನಾಡಿನ ಸುವರ್ಣ ಸಂಭ್ರಮ ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬೆಳ್ಳಿ ವರ್ಷದ ಬೆಳ್ಳಿ ಬೆಡಗಿನ ಆಚರಣಾ ಸಂಭ್ರಮ; ತಮ್ಮಗಳ ಕೂಡುವಿಕೆಯಿಂದಾಗಿ ವಿಜೃಂಭಿಸಬೇಕೆಂಬುದು ನಮ್ಮ ಹಂಬಲ. ಕರ್ನಾಟಕ ಸರ್ಕಾರದ ಮಾನ್ಯ ಕಾರ್ಯದರ್ಶಿಗಳಾದ ಶ್ರೀ ಐ. ಎಂ. ವಿಠ್ಠಲಮೂರ್ತಿ ಅವರು ಇದೇ ಮಾತನ್ನು ಸಾಂಸ್ಕೃತಿಕ ಸಭೆ, ಸಮಾವೇಶಗಳಲ್ಲಿ ಹೇಳುತ್ತಿದ್ದಾರೆ. ಕಾರ್ಯಕ್ರಮ ಕಲಾವಿದರ ನಿಜವಾದ ಸಂಭ್ರಮವಾಗಿರಬೇಕು. ಅದು ಪಾರದರ್ಶಕವಾಗಿರಬೇಕು. ಆತನ ಕಲೆಗೂ ಬೆಲೆ ಇರಬೇಕು. ಕಲಾವಿದನೂ ಬದುಕಬೇಕು. ಇದೇ ಬಯಕೆ ನಮ್ಮದೂ ಆಗಿದೆ. ಇದರಲ್ಲಿ ತಮ್ಮ ಸಹಕಾರವೂ ಇರಬೇಕೆಂದು ನಾಡಿನ ಸಾಂಸ್ಕೃತಿಕ ಲೋಕದ ಗಣ್ಯರಾದ ತಮ್ಮಲ್ಲಿ ಕೋರಿಕೆ ಇಡುತ್ತಿದ್ದೇನೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಕಾರ್ಯಚಟುವಟಿಕೆಗಳಲ್ಲಿ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು, ಈ ಕ್ಷೇತ್ರದ ಮಹತ್ವದ ಸಂಗತಿಗಳ ಬಗ್ಗೆ, ಜಾನಪದದಲ್ಲಿ ಕೆಲಸ ಮಾಡಿದ ಹಿರಿಯರ ಸೇವೆ – ಸಾಧನೆಗಳ ಬಗ್ಗೆ ಚಿಂತನೆ ಹೆಚ್ಚಿಸುವುದು ಮತ್ತು ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು ಚರ್ಚಿತವಾದ ಸಂಗತಿಗಳನ್ನು ಸಂಪಾದಿಸಿ ಪುಸ್ತಕ ರೂಪದಲ್ಲಿ ದಾಖಲಿಸುವುದು ಅಕಾಡೆಮಿಯ ಉದ್ದೇಶಗಳಲ್ಲಿ ಒಂದು. ಹಾಗೆ ದಿನಾಂಕ ೨೨–೯–೨೦೦೬ ರಂದು ಡಾ. ಬಿ. ಎಸ್. ಗದ್ದಿಗೆಮಠರವರ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ನೆರವೇರಿಸಲಾಗಿತ್ತು. ಅಂದು ಮಂಡಿತವಾದ ಪ್ರಬಂಧಗಳನನ್ನು ಮತ್ತು ವ್ಯಕ್ತವಾದ ಅಭಿಪ್ರಾಯಗಳನ್ನು ನಮ್ಮ ಅಕಾಡೆಮಿಯ ಸದಸ್ಯರಾದ ಶ್ರೀ ಗವೀಶ ಹಿರೇಮಠ ಅವರು ಸಂಪಾದಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ಅವರನ್ನು ಗೌರವಪೂರ್ವಕವಾಗಿ ಅಭಿನಂದಿಸುತ್ತೇನೆ.

ಸಾರಸ್ವತ ಪ್ರಪಂಚ ಇದನ್ನು ಆಸಕ್ತಿಯಿಂದ ಬರಮಾಡಿಕೊಳ್ಳುತ್ತದೆ ಎಂಬ ವಿಶ್ವಾಸ ನನ್ನದು.

ಬೆಂಗಳೂರು

**ಕೆರೆಮನೆ ಶಂಭು ಹೆಗಡೆ,**
ಅಧ್ಯಕ್ಷರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

## ಸಂಪಾದಕರ ಮಾತು ............

ಕರ್ನಾಟಕ ಜಾನಪದ ಅಧ್ಯಯನಕ್ಕೆ, ಸಂಶೋಧನೆಗೆ ನಾಂದಿ ಹಾಡಿದ ದಿ. ಡಾ. ಬಿ. ಎಸ್. ಗದ್ದಗಿಮಠ ಅವರು ಈ ನಾಡು ಕಂಡ ಅಪರೂಪದ ಜಾನಪದ ವಿದ್ವಾಂಸರು. ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಜಾನಪದ ಸಾಹಿತ್ಯದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಏಕೈಕ ವ್ಯಕ್ತಿ. ಜಾನಪದ ಸಾಹಿತ್ಯವನ್ನೇ ಬದುಕಾಗಿ, ಉಸಿರಾಗಿರಿಸಿಕೊಂಡಿದ್ದ ಡಾ. ಗದ್ದಗಿಮಠರು ಜಾನಪದ ಸಾಹಿತ್ಯದ ಮೌಲಿಕತೆಯನ್ನು, ಸಾಂಸ್ಕೃತಿಕ ವಿಕಾಸವನ್ನು ತೋರಿಸಿಕೊಟ್ಟ ನಾಡಿನ ಧೀಮಂತ ವ್ಯಕ್ತಿ.

ಡಾ. ಗದ್ದಗಿಮಠ ಅವರ ಬದುಕು–ಸಾಧನೆ ಕುರಿತು ಚಿಂತನ–ಮಂಥನ ನಡೆಯಬೇಕೆಂದು ಹದಿನೈದು ವರ್ಷಗಳ ನಂತರ ಮತ್ತೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನಿರ್ಣಯಿಸಿದ್ದು ಮಹತ್ವಪೂರ್ಣ ಸಂಗತಿ. ನಾಡಿನ–ರಾಷ್ಟ್ರದ ಪ್ರಸಿದ್ಧ ಯಕ್ಷಗಾನ ಕಲಾವಿದರು, ಸರಳ ಸಹೃದಯಿಗಳೂ ಆದ ಶ್ರೀ ಕೆರೆಮನೆ ಶಂಭು ಹೆಗಡೆಯವರು ಅಕಾಡೆಮಿಯ ಅಧ್ಯಕ್ಷರಾಗಿರುವಾಗ, ಈ ಚಿಂತನೆಗೆ ಚಾಲನೆ ದೊರೆತಿದ್ದು ಸಂತಸದ ವಿಷಯ.

ಜಾನಪದ ವಿದ್ವಾಂಸರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಂ. ಎಸ್. ಲಠ್ಠೆ, ಡಾ. ವೀರಣ್ಣ ದಂಡೆ, ಡಾ. ಕೆ. ಆರ್. ದುರ್ಗಾದಾಸ ವಿವಿಧ ವಿಷಯಗಳಲ್ಲಿ ಪ್ರಬಂಧ ಮಂಡಿಸಿ ಹಲವಾರು ವಿಷಯಗಳ ಮೇಲೆ ಬೆಳಕು ಹರಡಿದ್ದು, ಚರ್ಚೆಗೆ ಅವಕಾಶ ಕಲ್ಪಿಸಿ ಕೊಟ್ಟಿದ್ದು ಸಂತೋಷದ ಸಂಗತಿ.

ಈ ವಿಚಾರ ಸಂಕಿರಣದ ಸಂಚಾಲಕನಾಗಿ ಕಾರ್ಯನಿರ್ವಹಿಸುವ ಜೊತೆಗೆ ಎಲ್ಲಾ ಪ್ರಬಂಧಗಳನ್ನು ಕ್ರೋಢೀಕರಿಸಿ ಸಂಪಾದಕತ್ವದ ಜವಾಬ್ದಾರಿ ನೀಡಿ ಗ್ರಂಥ ಹೊರ ತರಲು ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅವಕಾಶ ಕಲ್ಪಿಸಿಕೊಟ್ಟಿದ್ದು, ನನ್ನ ಭಾಗ್ಯವೆಂದುಕೊಂಡಿದ್ದೇನೆ. ಅದಕ್ಕಾಗಿ ಅಕಾಡೆಮಿ ಅಧ್ಯಕ್ಷರಿಗೆ, ರಿಜಿಸ್ಟ್ರಾರ ಅವರಿಗೆ, ಎಲ್ಲಾ ಸದಸ್ಯರಿಗೆ ನಾನು ಋಣಿಯಾಗಿದ್ದೇನೆ.

ನಾನಿನ್ನೂ ಹೈಸ್ಕೂಲ ವಿದ್ಯಾರ್ಥಿಯಾಗಿದ್ದಾಗಲೇ ದಿ. ಡಾ|| ಗದ್ದಗಿಮಠ ಅವರ ಮಹಾ ಪ್ರಬಂಧ ಗ್ರಂಥದ ಪುಟಗಳನ್ನು ತಿರುಗಿಸಿದ್ದೆ. ಅವರ "ಕನ್ನಡ ಜಾನಪದ ಗೀತೆಗಳು" ಹಳ್ಳಿಯಲ್ಲಿಯೇ ಹುಟ್ಟಿ ಬೆಳೆದ ನನಗೆ ಅಲ್ಲಿಯ ಹಾಡು ಕುಣಿತ ಸುಗ್ಗಿಯ ಸೊಬಗು ಎಲ್ಲವೂ ನನ್ನವೇ ಎನಿಸಿದ್ದವು. ಮುಂದೆ ನಾನು ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಕೆಲಸಕ್ಕೆ ಸೇರಿದಾಗ ಅವರ ಇತರ ಸಂಪಾದಿತ ಕೆಲವು ಕೃತಿಗಳನ್ನು ಗಮನಿಸಿದ್ದೆ.

ಡಾ. ಗದ್ದಗಿಮಠರ ಸಾಧನೆ ಹಿರಿದು. ಜಾನಪದ ಕ್ಷೇತ್ರದಲ್ಲಿ ೧೯೫೦ ರಲ್ಲಿಯೇ ಸಂಶೋಧನೆಗೆ ಮುಂದಾಗಿ ಪ್ರೊ. ಕೆ. ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಮಹಾ ಪ್ರಬಂಧ ರಚಿಸಿ ಭಾರತೀಯ ಜಾನಪದ ವಿದ್ವಾಂಸರಲ್ಲಿ ಮೊದಲಿಗರಾಗಿ ಡಾಕ್ಟರೇಟ್ ಪಡೆದ ಗೌರವ ಅವರದಾಗಿದೆ. ನಮ್ಮ ಜಾನಪದ ಸಾಹಿತ್ಯ, ಸಂಸ್ಕೃತಿ, ಪರಂಪರೆ ಉಳಿಸಿಕೊಳ್ಳುವಲ್ಲಿ ನಿರಂತರ ಶ್ರಮಿಸಿದ ಹಿರಿಯ ವ್ಯಕ್ತಿ ಅವರು. ಇಂದು ನಾಡಿನ ಜಾನಪದ ಸಾಹಿತ್ಯ ಶ್ರೀಮಂತಗೊಂಡಿದ್ದರೆ ಅವರ ಪಾಲು ಹಿರಿದಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಈ ವಿಚಾರ ಸಂಕಿರಣದ ಅತಿಥಿಗಳಾಗಿ, ಆಶಯ ಭಾಷಣಕಾರರಾಗಿ, ಅಧ್ಯಕ್ಷರಾಗಿ ಬಂದಿದ್ದ ಡಾ. ವೃಷಭೇಂದ್ರ ಸ್ವಾಮಿ, ಡಾ. ಸೋಮಶೇಖರ ಇಮ್ರಾಪುರ, ಡಾ. ಎಸ್. ಆರ್. ಗುಂಜಾಳ, ಡಾ. ಬಸವರಾಜ ಮಲಶೆಟ್ಟಿ , ಡಾ. ಎ. ಮುರಿಗೆಪ್ಪ, ಡಾ. ವೀರಣ್ಣ ರಾಜೂರ, ಡಾ. ರಾಜೇಂದ್ರ ಯರನಾಳೆ ಅವರಂತಹ ವಿದ್ವಾಂಸರು ಡಾ. ಗದ್ದಗಿಮಠ ಅವರನ್ನು ಅವರ ಜಾನಪದ ಸಾಹಿತ್ಯವನ್ನು, ಸಾಧನೆಯನ್ನು, ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಾಗ ಡಾ. ಗದ್ದಗಿಮಠರು ಜೀವನದಲ್ಲಿ ಏನೆಲ್ಲ ಕಷ್ಟ–ನಷ್ಟ ಅನುಭವಿಸಿದ್ದರು ಎಂಬುದು ಸ್ಪಷ್ಟವಾಯಿತು. ಅವಕಾಶಗಳಿಂದ ವಂಚಿತರಾಗಿಯೂ ನಿರಾಶರಾಗದೆ, ಧೃತಿಗೆಡದೆ ಅವುಗಳಾಚೆಗಿರುವ ಜೀವನ ಮೌಲ್ಯಗಳನ್ನು ಕಂಡುಕೊಂಡರಲ್ಲ ಅದು ದೊಡ್ಡದು. ಬಡತನದಲ್ಲಿ, ಕಷ್ಟಗಳಲ್ಲಿ, ಸಮಸ್ಯೆಗಳಲ್ಲಿಯೂ ಸಾಧನೆ ಮಾಡುತ್ತ ಬಂದುದು ಸಣ್ಣ ಮಾತಲ್ಲ. ಈ ಎಲ್ಲಾ ಯಶಸ್ಸಿನ ಹಿಂದೆ ಭಾರೀ ಪ್ರಯತ್ನದ ಒಂದು ಇತಿಹಾಸವಿದೆ ಎಂಬುದು ಸ್ಪಷ್ಟವಾಯಿತು. ಅವರ ಬದುಕು ಪ್ರಯತ್ನ, ಪರಿಶ್ರಮ, ಸಾಧನೆಯಿಂದ ಮೆರಗು ಪಡೆದಿದೆ.

ಶಿಷ್ಟ ಸಾಹಿತ್ಯವೇ ನಿಜವಾದ ಸಾಹಿತ್ಯವೆನ್ನುವ ಕಾಲದಲ್ಲಿ ಜನಪದ ಕಲೆ, ಸಾಹಿತ್ಯದ ಬಗ್ಗೆ ಸರಿಯಾದ ಕಲ್ಪನೆಯೇ ಇಲ್ಲದ ದಿನಗಳಲ್ಲಿ ಜಾನಪದ ಸಾಹಿತ್ಯವು ಅಧ್ಯಯನಕ್ಕೆ ಯೋಗ್ಯವಾದುದು ಅದು ಯಾವ ಸಾಹಿತ್ಯಕ್ಕಿಂತ ಕಡಿಮೆಯಲ್ಲವೆಂಬುದನ್ನು ತೋರಿಸಿಕೊಟ್ಟು ವ್ಯಾಪಕ ಕ್ಷೇತ್ರ ಕಾರ್ಯ ಹಾಗೂ ಸಂಶೋಧನೆಯ ಮೂಲಕ ಜಾನಪದ ಜಗತ್ತಿಗೆ ಬೆಳಕು ಬೀರಿದ ಕೀರ್ತಿ ಡಾ. ಗದ್ದಗಿಮಠ ಅವರದು. ಉತ್ತರ ಕರ್ನಾಟಕದ ಬಿಜಾಪುರ, ಬೆಳಗಾಂವ, ಧಾರವಾಡ ಭಾಗದ ಹಳ್ಳಿ ಹಳ್ಳಿಗೆ ಹೋಗಿ ಹಲವು ವರ್ಷಗಳ ಕಾಲ ಜನಪದ ಸಾಹಿತ್ಯ ಸಂಗ್ರಹಿಸಿ ಜಾನಪದ ಸಾಹಿತ್ಯ ಲೋಕವನ್ನು ಸಮೃದ್ಧಿಗೊಳಿಸಿದರು. ಅವರು ಸಂಗ್ರಹಿಸಿದ ಹಾಡುಗಳ ಸಂಖ್ಯೆ ಲಕ್ಷ ಮೀರುತ್ತದೆಯೆಂದರೆ ಎಲ್ಲರ ಲಕ್ಷ ಆ ಕಡೆನೇ ಹರಿಯುತ್ತದೆ.

ಡಾ. ಗದ್ದಗಿಮಠ ಅವರ ಕ್ಷೇತ್ರಕಾರ್ಯದ ಬಗ್ಗೆ ಹೆಮ್ಮೆ ಪಡುತ್ತ ನಾಡಿನ ಇನ್ನೊಬ್ಬ ಹಿರಿಯ ವಿದ್ವಾಂಸರಾದ ಡಾ. ಜಿ.ಶಂ.ಪ. ಅವರು ಹೇಳಿದ ಮಾತು "ಜಾನಪದ ಅಧ್ಯಯನಕ್ಕೆ ಒಳ್ಳೆಯ ಆರಂಭವನ್ನು ಒದಗಿಸಿದ ಶ್ರೇಷ್ಠ ವಿದ್ವಾಂಸರು ಡಾ. ಬಿ. ಎಸ್.

ಗದ್ದಗಿಮಠ ಅವರು. ಜಾನಪದ ಕ್ಷೇತ್ರದಲ್ಲಿ ಸಂಶೋಧನೆಗೆ ನಾಂದಿ ಹಾಡಿದ ಆದ್ಯ ವಿದ್ವಾಂಸರು. ವ್ಯಾಪಕವಾದ ಕ್ಷೇತ್ರಕಾರ್ಯ ಹಾಗೂ ಉತ್ತಮ ಸಂಶೋಧನೆಗಳ ಮೂಲಕ ನಮ್ಮ ಜಾನಪದ ಕ್ಷೇತ್ರಕ್ಕೆ ವಿದ್ವತ್ತಿನ ಹೊಂಬಳೆಯನ್ನು ತೊಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ." ಅವರ ಘನ ವ್ಯಕ್ತಿತ್ವಕ್ಕೆ, ಅಪಾರ ಕೊಡುಗೆಗೆ ಇಷ್ಟು ಸಾಕಲ್ಲವೆ ?

ಡಾ. ಗದ್ದಗಿಮಠ ಅವರು ಬಾಳಿ ಬದುಕಿದ್ದು, ಕೇವಲ ೫೭ ವರ್ಷಗಳು ಮಾತ್ರ. ಅಷ್ಟು ಕಡಿಮೆ ಅವಧಿಯಲ್ಲಿ ಸಾಧಿಸಿದ್ದು ಹಿರಿದು. ಅವರ ಸಂಗ್ರಹದ ಸಾಹಿತ್ಯ ಬಹುಪಾಲು ಪ್ರಕಟಗೊಳ್ಳದೇ ಉಳಿದಿದೆ. ಪ್ರಕಟಗೊಂಡ ಕೃತಿಗಳಲ್ಲಿ "ನಾಲ್ಕು ನಾಡ ಪದಗಳು" "ಕಂಬಿಯ ಹಾಡುಗಳು" "ಜನತಾ ಗೀತೆಗಳು" "ಮಲ್ಲಮಲ್ಲಾಣಿ" "ಕುಮಾರ ರಾಮನ ದುಂದುಮೆ" "ಲೋಕ ಗೀತೆಗಳು" ಪ್ರಮುಖವಾದವು. ಪ್ರಕಟಗೊಳ್ಳಬೇಕಾದ ಸೋಬಾನ ಹಾಡುಗಳು, ಜೋಗುಳ ಹಾಡುಗಳು, ಜಾನಪದ ಮಹಾಭಾರತ, ಜಾನಪದ ರಾಮಾಯಣ, ಕಲ್ಯಾಣ ಬಸವ, ಶಿವಶರಣರ ಹಂತಿ ಹಾಡುಗಳು, ಕೋಲು ಪದಗಳಂಥ ಪ್ರಮುಖ ಸಂಗ್ರಹಗಳ ಹಸ್ತ ಪ್ರತಿಗಳು ಕಳೆದು ಹೋಗಿವೆ ಎನ್ನುವ ಮಾತು ಬಹಳಷ್ಟು ನೋವನ್ನುಂಟು ಮಾಡುತ್ತಿದೆ. ಇದೊಂದು ಜಾನಪದ ಜಗತ್ತಿಗೆ ದೊಡ್ಡ ಹಾನಿ. ಡಾ. ಗದ್ದಗಿಮಠ ಅವರು ಲಿಂಗೈಕ್ಯರಾದಾಗ ಮಕ್ಕಳೆಲ್ಲ ಚಿಕ್ಕವರು. ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಕನ್ನಡ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಮನೆಗೆ ಬಂದು ಅವರ ಧರ್ಮಪತ್ನಿ ದಿ. ಶ್ರೀಮತಿ ಅನಸೂಯಾತಾಯಿ ಅವರನ್ನು ಕಂಡು ಗದ್ದಗಿಮಠರ ಅಪ್ರಕಟಿತ ಕೃತಿಗಳನ್ನೆಲ್ಲ ವಿಶ್ವವಿದ್ಯಾಲಯದಿಂದ ಪ್ರಕಟಿಸುತ್ತೇವೆ, ಅವುಗಳನ್ನೆಲ್ಲ ಕೊಡಿ ಎಂದಾಗ ಅವರನ್ನು ನಂಬಿ ಕೊಟ್ಟರು, ಇದುವರೆಗೂ ಮುದ್ರಣವಿಲ್ಲ, ಹಸ್ತಪ್ರತಿಗಳೂ ಇಲ್ಲವೆಂದು ಅವರ ಹಿರಿಯ ಚಿ. ಬಾಬಣ್ಣ ಅವರು ಹೇಳಿದಾಗ ನೋವೆನಿಸಿತು. ಅವೆಲ್ಲ ಹಸ್ತ ಪ್ರತಿಗಳು ಸಿಕ್ಕು ಪ್ರಕಟಗೊಂಡು ಹೊರ ಬಂದರೆ ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ಸಂಪತ್ತು ದೊರೆತಂತೆ.

ಗದ್ದಗಿಮಠರ ಕಾಲದಲ್ಲಿದ್ದ ಬಡತನ, ಕಷ್ಟ ಈಗ ಆ ಮನೆಯಲ್ಲಿಲ್ಲ. ಅವರ ಮಕ್ಕಳೀಗ ಸ್ಥಿತಿವಂತರು. ಹಿರಿಯ ಚಿರಂಜೀವಿ ಧಾರವಾಡದಲ್ಲಿ ಹನ್ನೊಂದು ಎಕರೆ ಭೂಮಿ ಖರೀದಿಸಿ 'sarpan' ಕೃಷಿ ತೋಟಗಾರಿಕೆ, ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸಿ ಕೃಷಿ ವಿಶ್ವವಿದ್ಯಾಲಯ ಮಾಡುವಷ್ಟು ಕೆಲಸಗಳನ್ನು ಮಾಡುತ್ತ ಬಹಳಷ್ಟು ಸಾಧಿಸಿದ್ದಾರೆ. ಉಳಿದವರೆಲ್ಲ ಉತ್ತಮ ಹುದ್ದೆಯಲ್ಲಿದ್ದು ಬೆರಳೆಣಿಕೆಯ ಜನರೊಂದಿಗೆ ಗುರುತಿಸಿಕೊಂಡಿದ್ದಾರೆ. ಕಷ್ಟದ ದಿನಗಳೆಲ್ಲ ಕಳೆದು ಹೋಗಿವೆ. ಆದರೂ ಆ ದಿನಗಳ ನ್ನಾರೂ ಅವರು ಮರೆತಿಲ್ಲ. ಅವೆಲ್ಲ ವರ್ತಮಾನ ಕಾಲಕ್ಕೆ ಅವರಿಗೆ ಪಾಠಗಳಾಗಿಯೇ ಇವೆ.

ವಿಚಾರ ಸಂಕಿರಣದ ಮುಕ್ತಾಯ ಸಮಾರಂಭದಲ್ಲಿ ಕೆಲವು ವಿದ್ವಾಂಸರು ಡಾ. ಗದ್ದಗಿಮಠ ಅವರ ಚಿ. ಗಳಿಗೆ ಕೆಲವು ನಿರ್ಣಯಗಳ ಸೂಚನೆ ನೀಡಿದರು. ಡಾ. ಬಿ. ಎಸ್. ಗದ್ದಗಿಮಠ ಅವರ ಹೆಸರಿನಲ್ಲಿ ಟ್ರಸ್ಟ್ ನಿರ್ಮಿಸಿ ಅದರ ಮುಖಾಂತರ ನಿರಂತರ ಕೆಲಸಗಳಾಗುತ್ತ ಪ್ರತಿ ವರ್ಷ ಉತ್ತಮ ಜಾನಪದ ಕೃತಿಗೆ, ಜಾನಪದ ವಿದ್ವಾಂಸರಿಗೆ ಪ್ರಶಸ್ತಿ

ನೀಡಬೇಕು. ಅವರ ಹೆಸರಿನಲ್ಲೊಂದು ಜಾನಪದ ವಸ್ತು ಸಂಗ್ರಹಾಲಯವಾಗಬೇಕು. ಈ ಎಲ್ಲ ಬೇಕುಗಳು ಈಡೇರಬೇಕಾದರೆ ಅವರ ಮಕ್ಕಳ ಹಾಗೂ ನಾಡಿನ ಜನತೆಯ ಇಚ್ಛಾಶಕ್ತಿ ಬೇಕು, ಸರಕಾರ, ವಿಶ್ವವಿದ್ಯಾನಿಲಯಗಳು ಕೂಡ ಆ ನಿಟ್ಟಿನಲ್ಲಿ ಚಿಂತಿಸಬೇಕು. ಆಗ ನಿರ್ಣಯಗಳಿಗೆ ಅರ್ಥ ಬಂದೀತು.

ಕೊನೆಯದಾಗಿ ಕೃತಜ್ಞತೆಯ ಎರಡು ಮಾತು. ಈ ವಿಚಾರ ಸಂಕಿರಣದ ಸಂಚಾಲಕನಾಗಿ ನೇಮಕಗೊಂಡಾಗ ಇದನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯೇ ನಡೆಸಬೇಕೆಂದು ಸಂಕಲ್ಪಿಸಿದೆ. ಆಗಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎ. ಮುರಿಗೆಪ್ಪ ಅವರನ್ನು ಸಂಪರ್ಕಿಸಿ ಕನ್ನಡ ಅಧ್ಯಯನ ಪೀಠ ಹಾಗೂ ಜಾನಪದ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ಇದೊಂದು ಕಾರ್ಯಕ್ರಮ ಮಾಡೋಣವೆಂದಾಗ ಅವರು ಸಂತೋಷದಿಂದ ಒಪ್ಪಿಕೊಂಡರು. ಮುಂದೆ, ಕಾರಣಾಂತರದಿಂದ ಆ ವರ್ಷ ಕಾರ್ಯಕ್ರಮ ಮಾಡಲಾಗಲಿಲ್ಲ. ನಂತರ ಕಾರ್ಯ ಪ್ರವೃತ್ತಿಗೆ ನಾನು ಸಿದ್ಧನಾದಾಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಅಧ್ಯಕ್ಷರು ಬದಲಾಗಿದ್ದರು, ಮತ್ತೆ ಸದ್ಯದ ಡಾ. ಬಿ. ಆರ್. ಹಿರೇಮಠ ಅವರನ್ನು ಕಂಡು ವಿಷಯವನ್ನೆಲ್ಲ ತಿಳಿಸಿದಾಗ ಅವರೂ ಒಪ್ಪಿಕೊಂಡರು.

ಡಾ. ಬಿ. ಎಸ್. ಗದ್ದಗಿಮಠ ಅವರನ್ನು ಬಲ್ಲವರು ಅವರ ಸಾಹಿತ್ಯವನ್ನು ಅಭ್ಯಸಿಸಿದವರನ್ನು ಗುರುತಿಸಿ ಅವರನ್ನೆಲ್ಲ ಕಂಡು ಮಾತನಾಡಿದಾಗ ವಿಚಾರ ಸಂಕಿರಣದಲ್ಲಿ ಭಾಗಿಯಾಗಲು ಒಪ್ಪಿಕೊಂಡರು. ಅದೇ ರೀತಿ ಪ್ರಬಂಧಕಾರರು, ಅತಿಥಿಗಳು, ಅಧ್ಯಕ್ಷರು ತಮ್ಮ ತಮ್ಮ ಘನ ವಿಚಾರಗಳಿಂದ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಸ್ನೇಹಿತರಾದ ಡಾ. ಜೆ. ಎಂ. ನಾಗಯ್ಯ, ಡಾ. ವಿ. ಎಲ್. ಪಾಟೀಲ ಹಾಗೂ ನನ್ನ ಸೊಸೆ (ಸಹೋದರ ಮೃತ್ಯುಂಜಯನ ಧರ್ಮಪತ್ನಿ) ವಿಜಯಶ್ರೀ ಇವರೆಲ್ಲ ಪ್ರಬಂಧ ಮಂಡಿಸುವಂತಹ ಅಧ್ಯಾಪಕರಾಗಿದ್ದರೂ ಕಾರ್ಯಕ್ರಮ ನಿರ್ವಹಣೆಯ ಜವಾಬ್ದಾರಿಯನ್ನು ಒಪ್ಪಿಕೊಂಡು ಯಶಸ್ಸಿನಲ್ಲಿ ಪಾಲುದಾರರಾದರು.

ಡಾ. ಗದ್ದಗಿಮಠ ಅವರ ಇಡೀ ಕುಟುಂಬದ ಸದಸ್ಯರು ಪಾಲ್ಗೊಂಡು ಕಾರ್ಯಕ್ರಮಕ್ಕೆ ಶೋಭೆ ತಂದರು. ಇದೇ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜಾನಪದ ತಂಡದ ಕಲಾವಿದರು, ಸನ್ಮಾನ ಸ್ವೀಕರಿಸಲು ಬಂದಿದ್ದ ಹಿರಿಯ ಕಲಾವಿದರು, ಕರ್ನಾಟಕ ವಿಶ್ವ ವಿದ್ಯಾಲಯದ ಅನೇಕ ಪ್ರಾಧ್ಯಾಪಕರು, ಜಾನಪದ ವಿದ್ವಾಂಸರು ಉಪಸ್ಥಿತರಿದ್ದರು ಹಾಗೂ ನನ್ನಣ್ಣ ಪ್ರೊ. ಮಲ್ಲಿಕಾರ್ಜುನ ಹಿರೇಮಠ ಪ್ರಾರಂಭದಿಂದ ಮುಕ್ತಾಯದವರೆಗೂ ನನ್ನ ಜೊತೆ ಇದ್ದು ಸಹಕರಿಸಿದರು.

ಈ ಎಲ್ಲಾ ಮಹನೀಯರಿಗೆ ಜಾನಪದ ಅಕಾಡೆಮಿ ಅಧ್ಯಕ್ಷರಿಗೆ, ರಿಜಿಸ್ಟ್ರಾರ್ ಅವರಿಗೆ, ಸದಸ್ಯರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**– ಗವೀಶ ಹಿರೇಮಠ**

## ಪರಿವಿಡಿ

●


೧. ಅಕಾಡೆಮಿ ಅಧ್ಯಕ್ಷರ ನುಡಿ : ಶ್ರೀ ಕೆರೆಮನೆ ಶಂಭು ಹೆಗಡೆ iii

೨. ಸಂಪಾದಕರ ಮಾತು : ಶ್ರೀ ಗವೀಶ ಹಿರೇಮಠ v

ಉದ್ಘಾಟನಾ ಸಮಾರಂಭ

೧. ಉದ್ಘಾಟನಾ ಭಾಷಣ : ಶ್ರೀ ಕೆರೆಮನೆ ಶಂಭು ಹೆಗಡೆ ೧
ಅಧ್ಯಕ್ಷರು, ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ, ಬೆಂಗಳೂರು

೨. ಮುಖ್ಯ ಅತಿಥಿಗಳ ಆಶಯ ಭಾಷಣ : ಡಾ. ಬಸವರಾಜ ಮಲಶೆಟ್ಟಿ ೮
ಕನ್ನಡ ಪ್ರಾಧ್ಯಾಪಕರು, ವಿಜಯನಗರ
ಮಹಾವಿದ್ಯಾಲಯ, ಹೊಸಪೇಟೆ

೩. ಪ್ರಾಸ್ತಾವಿಕ ಭಾಷಣ : ಡಾ. ಎ. ಮುರಿಗೆಪ್ಪ ೧೬
ಭಾಷಾವಿಜ್ಞಾನ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ನೆನಹು–ನಮನ : ಶ್ರೀಮತಿ ಉಷಾ ಗದ್ದಗಿಮಠ ೧೮
ಕಲ್ಯಾಣನಗರ, ಧಾರವಾಡ

೫. ಅಧ್ಯಕ್ಷೀಯ ಭಾಷಣ : ಡಾ. ಬಿ. ಆರ್. ಹಿರೇಮಠ ೨೧
ಅಧ್ಯಕ್ಷರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಗೋಷ್ಠಿ – ೧

೧. ಡಾ. ಬಿ. ಎಸ್. ಗದ್ದಗಿಮಠ ಅವರ ಬದುಕು–ಬರಹ–ಸಾಧನೆ : ಡಾ. ಎಂ. ಎಸ್. ಲಠ್ಠೆ ೨೬
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೨. ಡಾ. ಬಿ. ಎಸ್. ಗದ್ದಗಿಮಠ ಅವರ ಬಿಡಿ ಬರಹಗಳು : ಡಾ. ವೀರಣ್ಣ ದಂಡೆ ೪೪
ಕನ್ನಡ ಪ್ರಾಧ್ಯಾಪಕರು
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೩. ಅಧ್ಯಕ್ಷೀಯ ಭಾಷಣ : ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ ೬೬
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ


## ಗೋಷ್ಠಿ – ೨


೧. ಡಾ. ಬಿ. ಎಸ್. ಗದ್ದಗಿಮಠ ಅವರ ಸಂಪಾದನೆ ಕೃತಿಗಳು : ಡಾ. ಬಿ. ವ್ಹಿ. ಮಲ್ಲಾಪುರ ೭೩
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಡಾ. ಬಿ. ಎಸ್. ಗದ್ದಗಿಮಠ ಅವರ ಕನ್ನಡ ಜಾನಪದ ಗೀತೆಗಳು : ಡಾ. ಕೆ. ಆರ್. ದುರ್ಗಾದಾಸ ೯೬
ಕನ್ನಡ ಪ್ರಾಧ್ಯಾಪಕರು
ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ

೩. ಅಧ್ಯಕ್ಷೀಯ ಭಾಷಣ : ಡಾ. ಸೋಮಶೇಖರ ಇಮ್ರಾಪುರ ೧೦೨
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಲಯ, ಧಾರವಾಡ


## ಸಮಾರೋಪ ಸಮಾರಂಭ


೧. ಮುಖ್ಯ ಅತಿಥಿಗಳ ಭಾಷಣ : ಡಾ. ವೀರಣ್ಣ ರಾಜೂರ ೧೦೭
ಕನ್ನಡ ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಸಮಾರೋಪ ಭಾಷಣ : ಡಾ. ರಾಜೇಂದ್ರ ಯರನಾಳೆ ೧೦೨
ಸಹಾಯಕ ನಿರ್ದೇಶಕರು, ಕನ್ನಡ
ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ

೩. ಅಧ್ಯಕ್ಷೀಯ ಭಾಷಣ : ಡಾ. ಎಸ್. ಆರ್. ಗುಂಜಾಳ ೧೦೭
ವಿಶ್ರಾಂತ ಪ್ರಾಧ್ಯಾಪಕರು
ಗ್ರಂಥಾಲಯ ವಿಜ್ಞಾನ ವಿಭಾಗ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

# ಉದ್ಘಾಟನಾ ಭಾಷಣ

ಶ್ರೀ ಕೆರೆಮನೆ ಶಂಭು ಹೆಗಡೆ

◆

ಈ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಸೇರಿದಂತಹ ವೇದಿಕೆಯ ಮೇಲಿನ ಎಲ್ಲ ಮಹನಿಯರೆ, ಎಲ್ಲ ವಿದ್ವಾಂಸರೆ, ಕಲಾ ಬಂಧು – ಭಗಿನಿಯರೆ, ಪತ್ರಿಕಾ ಹಾಗೂ ಪ್ರಸಾರ ಮಾಧ್ಯಮದವರೆ, ಎಲ್ಲಕ್ಕಿಂತ ಹೆಚ್ಚಾಗಿ ಈ ಸನ್ನಿವೇಶದಲ್ಲಿ ಒಂದು ಸಾರಸ್ವತ ಆವರಣದಲ್ಲಿ ಸೇರುವಂಥ ಅವಕಾಶವನ್ನು ಮಾಡಿಕೊಟ್ಟ ಭವ್ಯ ಚೇತನವಾದಂತಹ ದಿ. ಗದ್ದಗಿಮಠ ಮಹಾ ಚೇತನಕ್ಕೆ ನನ್ನ ವಂದನೆಗಳು.

ಬಹುಶಃ ಇವತ್ತಿನ ಈ ಸಮಾರಂಭದ ಉದ್ಘಾಟನೆಯ ಮಾತುಗಳನ್ನಾಡುವಾಗ ನನಗೆ ಗದ್ದಗಿಮಠ ಅವರ ವಿಷಯದಲ್ಲಿ ಬಹಳಷ್ಟು ಮಾತನಾಡುವ ಸಾಧ್ಯತೆಗಳು ಬಹಳ ಕಡಿಮೆ. ಯಾಕೆಂದರೆ, ಅವರ ನನ್ನ ನೇರ ಒಡನಾಟವಾಗಲಿ, ಪರಿಚಯವಾಗಲಿ ಇರಲಿಲ್ಲ. ಆದರೆ ಈ ಕಾರ್ಯಕ್ರಮದ ತಾತ್ವಿಕ ಧೋರಣೆ ನನಗೆ ತುಂಬ ಆಪ್ತವಾದ ಸಂಗತಿ. ಮುಖ್ಯವಾಗಿ ಇವತ್ತಿನ ಆವರಣ ಒಂದು ಅಕಾಡೆಮಿಕ್ ಶಿಸ್ತು ಮತ್ತು ಭಾವನಾತ್ಮಕ ಸಂಬಂಧ ಎರಡೂ ಕ್ರೋಢೀಕರಿಸಿದ ಒಂದು ವೇದಿಕೆಯಾಗಿ ಕಂಡು ಬರುತ್ತಿದೆ. ಗದ್ದಗಿಮಠರ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಇವತ್ತು ಮಾನಸಿಕವಾಗಿ ಎಂಥ ಒಂದು ಭಾವನೆಗಳನ್ನು ಹೊತ್ತಿರಬಹುದೆಂಬುದನ್ನು ನಾನು ಊಹಿಸಬಲ್ಲೆ. ಗದ್ದಗಿಮಠರ ಕುಟುಂಬದ ಎಲ್ಲಾ ಸದಸ್ಯರಿಗೆ ನಾ ಹೇಳೋ ಕಿವಿ ಮಾತಿಷ್ಟೆ, ಒಬ್ಬ ಶ್ರೇಷ್ಠ ವ್ಯಕ್ತಿಯ ಮಕ್ಕಳಾಗಿ, ಮೊಮ್ಮಕ್ಕಳಾಗಿ, ಸೊಸೆಯಂದಿರಾಗಿ ಹುಟ್ಟೋದು ಅದೃಷ್ಟ. ಬದುಕಿನಲ್ಲಿ ಅಲ್ಲಲ್ಲಿ ಇಂಥ ಸಂದರ್ಭಗಳು ಬರುತ್ತವೆ. ಅದನ್ನು ನಾವು ಮನಸಾ ಅನುಭವಿಸುವುದೇ ಭಗವಂತ ಕೊಟ್ಟ ಭಾಗ್ಯ. ನಿಮ್ಮ ಕುಟುಂಬಕ್ಕೆ ಇವತ್ತು ಆ ಭಾಗ್ಯವನ್ನು ಭಗವಂತ ದಯಪಾಲಿಸಿದ್ದಾನೆ. ಅದಕ್ಕಾಗಿ ಆ ವಿಷಯದಲ್ಲಿ ಒಂದು ರೀತಿಯ ಧನ್ಯತೆಯ ಅನುಭವವನ್ನು ನೀವು ಪಡೆದಿದ್ದೀರಿ ಅಂತ ನನಗನ್ನಿಸಿದೆ. ಯಾಕೆಂದರೆ, ನಾನೂ ಒಬ್ಬ ಶ್ರೇಷ್ಠ ಕಲಾವಿದನ ಮಗನಾಗಿ ಅಲ್ಲಲ್ಲಿ ಒದಗಿ ಬಂದಂತಹ ಅನುಭವದ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ.

ಆದರೆ ತಾತ್ಕಾಲಿಕವಾದ ಸಂದರ್ಭದಲ್ಲಿ ಧನ್ಯತೆಯನ್ನು, ಸಂತೋಷವನ್ನು ಅನುಭವಿಸುವುದರಲ್ಲಿ ಮಾತ್ರ ನಮ್ಮ ಕರ್ತವ್ಯ ಮುಕ್ತಾಯವಾಗೋದಿಲ್ಲ. ಆ ಭವ್ಯ ಚೇತನದ, ದಿವ್ಯ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಅವರ ಶ್ರೇಷ್ಠತೆಯ ಅನಂತತೆಯನ್ನು ಕಾಪಾಡಿಕೊಳ್ಳುವ ಏಕೈಕ ಜವಾಬ್ದಾರಿ ನಮಗೆ, ನಿಮಗೆ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕಿಷ್ಟಪಡುತ್ತೇನೆ.

ಗದ್ದಗಿಮಠ ಅವರು ಜಾನಪದ ಲೋಕಕ್ಕೆ ಬಹಳ ದೊಡ್ಡ ಉಪಕಾರ ಮಾಡಿದವರು. ಅನೇಕ ಐತಿಹಾಸಿಕವಾದಂತಹ ಮನಃಪದ ದಾಖಲೆಗೆ ಒಳಗಾದವರೆನ್ನುವುದನ್ನು ಬಹುಶಃ ಈಗಾಗಾಗಲೇ ಮಾತನಾಡಿದವರು ಹೇಳಿದ್ದಾರೆ. ಮುಂದೆ, ಅದನ್ನೇ ಪ್ರಸ್ತಾಪಿಸಲಿದ್ದಾರೆ. ನಮ್ಮ ಸದಸ್ಯರಾದ ಶ್ರೀ ಗವೀಶ ಹಿರೇಮಠ ಅವರು ಗದ್ದಗಿಮಠ ಅವರ ಹೆಸರಿನಿಂದ ಅಕಾಡೆಮಿ ವಿದ್ವಾಂಸ ಪ್ರಶಸ್ತಿ ಕೊಡುತ್ತಿರುವ ಬಗ್ಗೆ ಹೇಳಿದರು. ಸರಕಾರದ ಆದೇಶದ ಅನ್ವಯ ಎರಡು ಮಹತ್ವದ ಹೆಸರಿನಲ್ಲಿ ಪ್ರಶಸ್ತಿಯನ್ನು ಗುರುತಿಸಿ ಕೊಡಬೇಕೆಂದಿದ್ದುದರಿಂದ ಸರಕಾರದ ಆದೇಶದ ಪ್ರಕಾರ ಸರ್ವಸದಸ್ಯರ ಸಮ್ಮುಖದಲ್ಲಿ ಕೆಲವು ಹೆಸರುಗಳು ಬಂದವು. ಆದರೆ ಆಯ್ಕೆಯಾದದ್ದು ಒಂದು ಗದ್ದಗಿಮಠ ಮತ್ತೊಂದು ಜಿ. ಶಂಪ ಅವರದು. ಆ ಪ್ರಕಾರವಾಗಿ ಈಗಾಗಲೇ ಎರಡು ಸಂದರ್ಭದಲ್ಲಿ ಸಂಬಂಧಪಟ್ಟಂತಹ ಹೆಸರಿನಲ್ಲಿ ಪ್ರಶಸ್ತಿ ಕೊಟ್ಟಿದ್ದೇವೆ.

ಇತ್ತೀಚೆಗೆ ಒಂದು ಯೋಚನೆ ಮಾಡಿ ಅಕಾಡೆಮಿಯಿಂದ ಮಹತ್ವದ ವ್ಯಕ್ತಿಗಳ ಕುರಿತಾದ ವಿಚಾರ ಸಂಕಿರಣ ಮಾಡಬೇಕು. ನಮ್ಮ ವಿಚಾರ ಸಂಕಿರಣದ ಆಲೋಚನೆ ಬೇರೆ ಬೇರೆ ದೃಷ್ಟಿಕೋನದಿಂದ ತಿರುವು ಪಡೆಯಿತು. ಶತಮಾನಗಳನ್ನು ಕಂಡಂತಹ ದಿವಂಗತ ಅಥವಾ ಭುವಂಗತ ಕಲಾವಿದರನ್ನು ಕುರಿತು. ಹಾಗೇನೇ ನಾವು ಮಾಡುತ್ತಾ ಬಂದಿದ್ದೇವೆ. ನಮ್ಮ ಅಕಾಡೆಮಿ ಅದೃಷ್ಟವೋ ಏನೋ ಎನ್ನುವಂತೆ ನೂರು ದಾಟಿ ನೂರಾ ಒಂದನೇ ವರ್ಷದಲ್ಲಿ ಪಾದಾರ್ಪಣೆ ಮಾಡಿದ ಜೋಗಿ ಬೀರಣ್ಣ ಅಂಕೋಲಾ ಯಕ್ಷಗಾನ ಕಲಾವಿದ ಅವರನ್ನು ಅವರ ಸಮ್ಮುಖದಲ್ಲಿಯೇ ಗೌರವಿಸಿದ್ದೇವೆ. ಹೀಗೆ ಹಿರಿಯ ಚೇತನಗಳನ್ನು ನಾವು ಸ್ಮರಿಸುತ್ತ ಬಂದಾಗ ಏನಾಗಹುದು ?

ಯಾವ ಕ್ಷೇತ್ರ ಸಾಮಾಜಿಕ ಸಿದ್ಧ ಸಮೂಹದ ಮಧ್ಯದಲ್ಲಿ ಆಲಸ್ಯಕ್ಕೆ ಪಾತ್ರವಾಗಿತ್ತೋ ಅದಕ್ಕೆಲ್ಲ ಸಾಮಾಜಿಕ ಮನ್ನಣೆ ಬರಲಿಕ್ಕೆ ಸಾಧ್ಯವುಂಟು, ಸಾಮಾಜಿಕರ ಕಣ್ಣು ತೆರೆದು ಇದು ಕೇವಲ ಮೂಲೆಯಲ್ಲಿಡುವ ಸಂಗತಿಯಲ್ಲ ಮುಖ್ಯವಾಗಿ ನಾವದನ್ನು ಯೋಚಿಸಿಬೇಕು, ವಿವೇಚಿಸಬೇಕು ಅದರಲ್ಲಿರಬಹುದಾದ ಅಮೂಲ್ಯ ಅದು ತತ್ವವಾಗಿರಬಹುದು, ದರ್ಶನವಾಗಿರಬಹುದು, ರಂಜನೆಯಾಗಿರಬಹುದು, ಮಾರ್ಗದರ್ಶನವಾಗಿರಬಹುದು ಏನೇ ಇರಬಹುದು ಅದನ್ನು ಇವತ್ತಿನ ಸಮಾಜಕ್ಕೆ ಉಪಯೋಗಿಸುವ ರೀತಿಯಲ್ಲಿ ಹೇಗೆ ಬಳಸಬೇಕು ಈ ಪ್ರಶ್ನೆ ಒಂದು ಸಮೂಹದಲ್ಲಿ

ಜಾಗೃತವಾಗಬೇಕಿದ್ದರೆ, ಬಹುಶಃ ಇಂಥ ಮಹಾ ಚೇತನದ ವಿಷಯದಲ್ಲಿ ಅದನ್ನೇ ಮುಖ್ಯವಾಗಿಟ್ಟುಕೊಂಡು, ಮಹತ್ವದ್ದಾಗಿಟ್ಟುಕೊಂಡು ಚಿಂತಕರ ಅಥವಾ ವಿದ್ವಾಂಸರ ಅನೇಕ ಆಲೋಚನೆಗಳನ್ನು ಹಂಚುವುದರ ಮೂಲಕ ಸಮಾಜದಲ್ಲಿ ಒಂದು ತಾತ್ವಿಕ ಆಂದೋಲನ ಆಗಬಹುದು. ಮುಖ್ಯವಾಗಿ ಈ ಪ್ರಯತ್ನ ನಮ್ಮ ಜಾನಪದ ಕಲಾ ಪ್ರಕಾರಗಳ ಅಥವಾ ಈ ಕ್ಷೇತ್ರದಲ್ಲಿ ಆಗಬೇಕಾದಂಥ ಅಗತ್ಯ ಇದೆ.

ಇಂದಿನ ದಿನಗಳಲ್ಲಿ ಅನೇಕ ಅನುಮಾನಗಳು ಹುಟ್ಟುತ್ತಿವೆ. ನಮ್ಮ ಜಾನಪದ ಕಲಾ ಪ್ರಕಾರಗಳು. ಅದು ಶ್ರವ್ಯವಾಗಿರಬಹುದು, ದೃಶ್ಯವಾಗಿರಬಹುದು ಈ ಜಾಗತೀಕರಣದಲ್ಲಿ ಉಳಿಯುತ್ತೋ ಇಲ್ಲೋ ಅಥವಾ ಬದುಕಿನ ಆಘಾತ ಇವೆಲ್ಲವುಗಳ ಮಧ್ಯದಲ್ಲಿ ಅವುಗಳನ್ನು ಉಳಿಸಿಕೊಳ್ಳುವುದು ಹೇಗೆ? ಬೆಳೆಸಿ ಕೊಳ್ಳುವುದು ಹೇಗೆ ಈ ಯೋಚನೆ ಅನೇಕ ಜಾನಪದ ಹಿತಚಿಂತಕರಿಗೆ ಇವತ್ತು ಬರುವಂತಹ ಸಂದರ್ಭ ಇದೆ. ವಾಸ್ತವಿಕವಾಗಿ ಜಾನಪದ ಉಗಮ ಒಂದು ಜೀವನ ವಿಧಾನದ ಅವಿಭಾಜ್ಯ ಅಂಗ ಮತ್ತು ಸಂಬಂಧದಿಂದ ಅದು ಬಂದಿದೆ. ಹಾಗೆ ಜೀವನ ವ್ಯವಸ್ಥೆ, ಧೋರಣೆ, ವಿಧಾನಗಳು ಬದಲಾದಾಗ ಅವು ತಮ್ಮ ಅಸ್ತಿತ್ವ ಕಳೆದುಕೊಳ್ಳುವ ಭೀತಿ ಇದೆ. ಅದಕ್ಕೆ ಪರಿಹಾರವೇನು?

ಜಾನಪದ ಕಲಾ ಪ್ರಕಾರಗಳಲ್ಲಿ ಒಂದಲ್ಲ ಒಂದು ಜೀವನ ವಿಧಾನವಿದ್ದೇ ಇರುತ್ತದೆ. ಅದು ಹಬ್ಬ ಹರಿದಿನಗಳಾಗಿರಬಹುದು, ಭಾವುಕತೆಯಾಗಿರಬಹುದು, ಭಕ್ತಿ ಇರಬಹುದು, ಧರ್ಮವಾಗಿರಬಹುದು, ಜಾತಿ ಇರಬಹುದು. ಬೇರೆ ಬೇರೆ ಕುಲ ಕಸುಬುಗಳ ಸಂಬಂಧವಾಗಿರಬಹುದು. ಈ ಒಂದು ಹುಟ್ಟಿಗೆ ಸಂಬಂಧವಿಟ್ಟುಕೊಂಡೆ ಹುಟ್ಟಿವೆ, ಬೆಳೆದಿವೆ. ಆದರೆ, ಅವೆಲ್ಲವುಗಳು ಬದಲಾಗುವ ಪರಿಸ್ಥಿತಿ ಬಂದಾಗ ಅವಕ್ಕೆ ಮುಂದಿನ ಪರಿಹಾರವೇನು? ಅನೇಕ ಸಂದರ್ಭದಲ್ಲಿ ಯಾವ ಜೀವನ ಸಂಬಂಧಿ ಸಂಬಂಧದಿಂದ ಹುಟ್ಟಿದ ಕಲಾ ಪ್ರಕಾರಗಳು ಆ ಸಂಬಂಧವನ್ನು ಕಳೆದುಕೊಳ್ಳುತ್ತ ಬರಬೇಕಾಗಿದೆ. ಉದಾಹರಣೆ ನಮ್ಮ ಚೌಡಕಿ, ದೇವದಾಸಿ ಪದ್ಧತಿ ಮತ್ತು ಚೌಡಕಿ ಒಟ್ಟೊಟ್ಟಾಗಿ ಬಂದಿವೆ. ಈಗ ನಾವು ಚೌಡಕಿ ಇರಬೇಕೆಂದು ಹೇಳಿದರೆ, ದೇವದಾಸಿ ಪದ್ಧತಿಯೂ ಇರಬೇಕೆಂದು ಹೇಳಿದರೆ ಅದು ಮೂರ್ಖತನವಾಗುತ್ತೆ. ಆವಾಗ ಆ ಪದ್ಧತಿಯನ್ನು ಹೊರತುಪಡಿಸಿ ಅದರಲ್ಲಿಯ ಕಲಾತ್ಮಕ ಸತ್ವ ಇದೆಯಲ್ಲ ಅದನ್ನು ಕಲೆಯನ್ನಾಗಿ ಸ್ವೀಕರಿಸಿ, ಉಳಿಸಿ ಬೆಳಸಲಿಕ್ಕೆ ಪ್ರಯತ್ನಿಸಬೇಕು.

ಇವತ್ತು ನಾವು ಗುರುತಿಸುವಂತಹ ಭರತನಾಟ್ಯ ಒಂದು ಕಾಲದಲ್ಲಿ ಅದು ದೇವದಾಸಿಯರ ನಾಟ್ಯ. ಇಂದು ಭರತ ನಾಟ್ಯವನ್ನಾರಾದರೂ ಅಭ್ಯಸಿಸಬಹುದು. ಜಗತ್ತಿನ ಯಾವ ಮೂಲೆಯಲ್ಲಾದರೂ ಭರತ ನಾಟ್ಯ ಕಲಾವಿದರಿದ್ದಾರೆ. ದೇವದಾಸಿ ಪದ್ಧತಿಯನ್ನು ಅವರು ಉಳಿಸಲಿಲ್ಲ ಅದನ್ನು ಒಪ್ಪಿಕೊಂಡು ಉಗಮವಾದಂತಹ ಕಲಾ ಪ್ರಕಾರವನ್ನು ಉಳಿಸಲಿಕ್ಕೆ ಪ್ರಯತ್ನಿಸಿದ್ದಾರೆ.

ಇವತ್ತು ನಾವು ಜಾನಪದ ಕಲಾ ಪ್ರಕಾರಗಳಲ್ಲಿಯೂ ಹಾಗೆ ಅನೇಕ ಜಾತಿ ಪದ್ಧತಿಯಿಂದ ಹುಟ್ಟಿಕೊಂಡಂತ ಸಂಗತಿಗಳಿವೆ. ಇಂತಿಂತಹ ವಾದ್ಯಗಳನ್ನು ಇಂತಿಂತಹವರೇ ಬಾರಿಸಬೇಕು. ಅವುಗಳನ್ನೆಲ್ಲ ಬದಿಗೆ ಸರಿಸಿ ಆಧುನಿಕ ಕಾಲದ ಆಲೋಚನೆಗೆ ಒಳಗಾಗುತ್ತ ಅದರ ಕಲಾತ್ಮಕವಾದ ಸತ್ವಗಳನ್ನು ಮಾತ್ರ ಲಕ್ಷದಲ್ಲಿಟ್ಟುಕೊಂಡು ಅದನ್ನು ಬೆಳೆಸುವ ಪ್ರಯತ್ನ ಮಾಡಿದರೆ ಎಂತಹ ಪರಿವರ್ತಿತ ಕಾಲದಲ್ಲಿಯೂ ಈ ಕಲಾ ಪ್ರಕಾರಗಳು ಉಳಿಯಲು ಸಾಧ್ಯವಾಗಬಹುದು.

ಇವತ್ತು ಜಾನಪದ ಹಿತಚಿಂತಕರಾಗಿ ನಾವು ಆ ದೆಶೆಯಲ್ಲಿ ಯೋಚಿಸಬೇಕು. ಕಲೆ ಅದು ಹುಟ್ಟುವುದಕ್ಕೆ ಕಾರಣ ಮುಖ್ಯವಲ್ಲ. ಹುಟ್ಟಿದ ನಂತರ ಅದರ ಬೆಳವಣಿಗೆ ಮುಖ್ಯ. ಹೀಗಾದಾಗ ಜಾನಪದ ಕಲಾ ಪ್ರಕಾರಗಳನ್ನು ನಾವು ಉಳಿಸಿಕೊಳ್ಳಬಹುದು. ಕಾಲದ ವೇಗ ಆ ಕಲಾತ್ಮಕವಾದ ಸತ್ವ ಸಾಮರ್ಥ್ಯ ಅವು ಪರಸ್ಪರ ಸಮತೋಲ ತಪ್ಪಿದಾಗ ಉಳಿಸಿಕೊಳ್ಳಲಾಗದು. ಪ್ರಜ್ಞೆಯ ಸಮಾಜ ಇವತ್ತು ತನ್ನ ಪ್ರಜ್ಞೆಯ ಸ್ಥಲಕ್ಕೆ ಸರಿಗಟ್ಟುವ ಸಂಗೀತವನ್ನು, ನೃತ್ಯವನ್ನು, ಸಾಹಿತ್ಯವನ್ನು ಅಪೇಕ್ಷಿಸುತ್ತಿದೆ. ಅವೆಲ್ಲವೂ ಒಂದು ಪ್ರಜ್ಞಾಸ್ಥಲದ ತೀರ ಹಿಂದೆ ನಿಂತಾಗ ನಾವದನ್ನು ಬಿಟ್ಟು ಹೋಗುವುದು ಅನಿವಾರ್ಯ. ಹೀಗಾಗಿ ಆಧುನಿಕತೆ ಮತ್ತು ಪ್ರಾಚೀನತೆ ಮಧ್ಯದ ಗೊಂದಲ ನಾವು ನಿವಾರಿಸಿಕೊಳ್ಳಬೇಕಾದರೆ ಮುಖ್ಯವಾಗಿ ಕಲಾಸತ್ವ. ಯವುದೇ ಕಲಾ ಪ್ರಕಾರಗಳಿಗೆ ಅದು ಯಾವ ಕಾಲಕ್ಕೂ ಸಲ್ಲುವಂತಹ ಸಾಮರ್ಥ್ಯ ಇದೆ. ಯಾವ ದೇಶಕ್ಕೂ, ಯಾವುದೇ ಧರ್ಮಕ್ಕೂ ಯಾವುದೇ ಜನಾಂಗಕ್ಕೂ ಸಲ್ಲಬಹುದಾಂತಹ ಸಾಮರ್ಥ್ಯ ಅದಕ್ಕಿದೆ.

ಒಂದು ಸುಂದರವಾದಂತಹ ಶ್ರವ್ಯವಾದಂತಹ ಸಂಗೀತ ಅದಕ್ಕೆ ಇದೇ ದೇಶ ಆಗಬೇಕೆಂದಿಲ್ಲ. ಒಟ್ಟಾರೆ, ಆನಂದವನ್ನು ಅನುಭವಿಸುವಂತಹ ಸಂಸ್ಕಾರವುಳ್ಳ ಸಹೃದಯತೆ ಇದ್ದರೆ ಸಾಕು. ಆದರೆ ಅವುಗಳನ್ನೆಲ್ಲ ಒಂದು ನಿರ್ದಿಷ್ಟವಾದ ಭಾವುಕ ಆವರಣಕ್ಕೆ ಕಟ್ಟಿ ಹಾಕಿದರೆ ಅದರ ವ್ಯಾಪ್ತಿ; ಅದರ ಬೆಳವಣಿಗೆ ಮುಂದುವರೆಯಲು ಸಾಧ್ಯವಿಲ್ಲ. ಹೀಗಾಗಿ ಇವತ್ತು ಒಟ್ಟಾರೆ ಈ ಜಗತ್ತು ಜಾಗತೀಕರಣವೋ, ಆಧುನೀಕರಣವೋ ಅಥವಾ ಟಿ.ವಿ. ಸಿನಿಮಾಗಳ ಆಘಾತದ ಪರಿಣಾಮವೋ ಮುಂತಾದುವುಗಳ ಗೊಂದಲಮಯದಲ್ಲಿ ಅವುಗಳನ್ನು ಶಸಕ್ತವಾಗಿ ಜನ ಸಮೂದಾಯದ ಮನಸ್ಸಿನ ಮೇಲೆ ಅತ್ಯಂತ ತೀಕ್ಷ್ಣವಾದ ಪ್ರಭಾವವನ್ನು ಬೀರುವ ತಂತ್ರ ಯಾವುದು ? ಅದನ್ನು ಇವತ್ತು ಜಾನಪದ ಕಲಾವಿದರು ಯೋಚಿಸಬೇಕಾಗಿದೆ.

ಪರಂಪರೆ, ಪರಂಪರೆ ಎನ್ನುವ ಒಂದು ಮಾತಿಗೆ ಅಂಟಿಕೊಂಡು ನಾವು ಕಾಲೋಚಿತವಾದ ವೇಗವನ್ನು ಅರ್ಥ ಮಾಡಿಕೊಳ್ಳದಿದ್ದರೆ, ನಾವು ಹಿಂದೆ ಬೀಳುತ್ತೇವೆ. ಅದು ಮುಂದೆ ಹೋಗುತ್ತದೆ. ಈ ಸಂದರ್ಭದಲ್ಲಿ ಶಿಷ್ಟ ಕಲಾವಿದರನ್ನು ಎಚ್ಚರಿಸೋದು ಈ ಕಾರಣಕ್ಕೆ. ಕಾಲದ ವೇಗವನ್ನು ಅದರ ಎಲ್ಲ ಅರ್ಥ ಮಾಡಿಕೊಳ್ಳುತ್ತ ಆ ವೇಗಕ್ಕೆ

ಸಂವಾದವಾಗಿ ಅದು ಬೆಳವಣಿಗೆ ಪಡೆದುಕೊಳ್ಳುತ್ತದೆ. ಇದರ ಅರ್ಥ ಅದರ ಮೂಲಭೂತವಾದ ಆಕೃತಿಯನ್ನು ಬದಲಿಸಬೇಕು ಎಂದಲ್ಲ. ಅದರ ಸಾಮರ್ಥ್ಯ ಹೆಚ್ಚಿಸಬೇಕೆಂದರೆ, ನಾವು ಅನೇಕ ಕಲಾ ಪ್ರಕಾರಗಳ ವಿಷಯದಲ್ಲಿ ಕೇವಲ ಪಾರಂಪರಿಕವಾದಂತಹ ಅನೇಕ ಮೂಢನಂಬಿಕೆಗಳಿರಬಹುದು. ಯಾವುದೋ ಮೂಢನಂಬಿಕೆಗೆ ಅಂಟು ಬಿದ್ದು ಇದನ್ನು ಬಿಡಬಾರದು ಅನ್ನುವ ಜಾಡ್ಯಕ್ಕೆ ನಾವು ಹೋಗಬಾರದು. ಯಕ್ಷಗಾನದಲ್ಲಿಯೂ ಈ ಗೊಂದಲವಿದೆ. ಪರಂಪರೆ, ಸುಧಾರಣೆ, ಪ್ರಯೋಗಶೀಲತೆ ಮೊದಲಾದಂತಹ ಗೊಂದಲಗಳಿವೆ. ಇವೆಲ್ಲವುಗಳ ಮಧ್ಯದಲ್ಲಿ ಅದರ ಮೂಲಭೂತವಾದಂತಹ ಅಸ್ತಿತ್ವದ, ಸಾಮರ್ಥ್ಯದ ನೆಲಗಟ್ಟಿನ ಮೇಲೆ ಸುಧಾರಣೆಯ ಸೌಧವನ್ನು ಕಟ್ಟಿದಾಗ ಮಾತ್ರ ಅದು ಎಲ್ಲ ಕಾಲದ ಜನರಿಗೂ ಸಂತೋಷವನ್ನು ಕೊಡುತ್ತದೆ.

ಮುಖ್ಯವಾಗಿ ಈ ಕಲಾ ಪ್ರಕಾರಗಳೆಲ್ಲ ನಮ್ಮ ಸಮಾಜದ ಮಧ್ಯದಲ್ಲಿ ಬದುಕೋದು ಯಾವಾಗ ಅಂದರೆ ಸಮಾಜಕ್ಕೆ ಅದು ಬೇಕೇ ಬೇಕು ಅನ್ನಿಸಿದಾಗ ಮಾತ್ರ ಅದು ಬದುಕುತ್ತದೆ. ಇಡೀ ಸಮೂಹಕ್ಕೆ ಬೇಡವಾದುದನ್ನು ನೀವು ಹಾಗೆ ಉಳಿಸುವಿರಿ. ನಮ್ಮಲ್ಲಿ ಅನೇಕರು ಕೇಳುತ್ತಾರೆ, ಕಲಾ ಪ್ರಕಾರಗಳೆಲ್ಲ ಅಳಿವಿನ ಅಂಚಿನಲ್ಲಿವೆ. ಅವುಗಳನ್ನು ಅಕಾಡೆಮಿ ಉಳಿಸಬೇಕು, ಸಂಸ್ಕೃತಿ ಇಲಾಖೆ ಅವುಗಳನ್ನು ಬದುಕಿಸಬೇಕು. ಸರಕಾರ, ಸಂಸ್ಕೃತಿ ಇಲಾಖೆ, ಅಕಾಡೆಮಿ ಈ ಸಂಸ್ಕೃತಿಯ ಸಂಪತ್ತನ್ನು ಉಳಿಸಿಕೊಳ್ಳಲು ಅವುಗಳಿಗೊಂದು ಮಿತಿ ಇದೆ. ಅನಾವಶ್ಯಕವಾಗಿ ಅದಕ್ಕೊಂದು ಅಪಾಯವಿದ್ದಾಗ ಸಹಾಯ ಹಸ್ತ ನೀಡಬಹುದೇ ವಿನಃ ಬೇರೇನೂ ಮಾಡಲಿಕ್ಕಾಗದು. ಅದು ತನ್ನ ಕಾಲ ಮೇಲೆ ತಾನು ನಿಲ್ಲಬೇಕು. ಹಾಗೆ ನಿಲ್ಲಬೇಕಾದರೆ ಜನಜೀವನದ ಆಪ್ತವಾದ ಸಂಬಂಧವಿರಬೇಕು. ಅದು ಹಾರ್ದಿಕವಾಗಿರಬಹುದು, ಭೌತಿಕವಾಗಿರಬಹುದು. ಈ ನಿಟ್ಟಿನಲ್ಲಿ ಆ ಕಲಾಕ್ಷೇತ್ರದ ಕಲಾವಿದರ ಚಿಂತನೆ ವಿದ್ವಾಂಸರ ಸಹಕಾರ ಮಾರ್ಗದರ್ಶನ ಜೊತೆಗೆ ಸಾಂದರ್ಭಿಕವಾಗಿ ನಮ್ಮಂಥ ಅಕಾಡೆಮಿ ಸರಕಾರದ ಆಶ್ರಯ ಸೇರಿದಾಗ ಮಾತ್ರ ಸಾಧ್ಯ.

ಕಲಾ ಪ್ರಕಾರಗಳ ದೌರ್ಬಲ್ಯಗಳೇನು ಎಂಬುದನ್ನು ಅತ್ಯಂತ ವಸ್ತು ನಿಷ್ಠೆಯಿಂದ ನಾವು ಯೋಚನೆ ಮಾಡಬೇಕು. ಕಲಾ ಪ್ರಕಾರಗಳ ಉದ್ಧಾರ ಆಗೋದು ಕೇವಲ ಆರಾಧನಾ ಮನೋಭಾವನೆಯಿಂದಲ್ಲ, ಅಧ್ಯಯನಶೀಲ ಆಲೋಚನೆಗಳ ಹಿನ್ನೆಲೆಯಲ್ಲಿ. ಹೀಗಾದಾಗ ಮಾತ್ರ ಎಲ್ಲ ಕಲಾ ಪ್ರಕಾರಗಳು ಉಳಿಯಲು ಸಾಧ್ಯ.

ನಾವೆಲ್ಲ ನಂಬಿಕೊಂಡಿದ್ದೇವೆ ನಮ್ಮ ಕಲೆಗಳು ಜಗತ್ಪ್ರಸಿದ್ಧ. ನಮ್ಮದೇ ಅತಿ ಶ್ರೇಷ್ಠ ಎನ್ನುವ ಭ್ರಮೆಯಲ್ಲಿ ನಾವಿದ್ದೇವೆ. ನಮ್ಮದು ಶ್ರೇಷ್ಠ–ಕನಿಷ್ಟಗಳನ್ನು ನಿರ್ಣಯಿಸುವವರು ತಜ್ಞರು. ನಾವು ನಮ್ಮದೇ ಶ್ರೇಷ್ಠ, ನಾವೇ ತಜ್ಞರು ಎನ್ನುವಂತಹ ನೆಲೆಗೆ ಬಂದರೆ ಅದನ್ನು ಬೆಳೆಸೋದು ಕಷ್ಟವಾಗುತ್ತದೆ.

ಈ ಸಂದರ್ಭದಲ್ಲಿ ಈ ಎಲ್ಲ ಆಲೋಚನೆಗಳ ಹಿನ್ನೆಲೆಯಲ್ಲಿ ನಮ್ಮ ಅಕಾಡೆಮಿ ಇಂಥ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುತ್ತಿದೆ. ಕೆಲವರು ಕೇಳುತ್ತಿದ್ದಾರೆ ವಿಚಾರ ಸಂಕಿರಣಗಳಿಂದ ಕಲೆಯನ್ನು ಉಳಿಸಲಿಕ್ಕಾಗುತ್ತಿದೆಯೇ ? ಯಾವುದರಿಂದಲೂ ನೇರವಾಗಿ ಕಲೆ ಉಳಿಯೋದಿಲ್ಲ, ಅಳಿಯೋದಿಲ್ಲ. ಆದರೆ ಕಲೆ ಬೆಳಿಯಬೇಕಿದ್ದರೆ, ಅದರ ಹಿನ್ನೆಲೆಯಲ್ಲೊಂದು ತಾತ್ವಿಕ ಚಿಂತನೆಯ ಸಾಮರ್ಥ್ಯ ಬೇಕು. ಅದು ಈ ವಿಚಾರ ಸಂಕಿರಣ. ಅನೇಕರು ಹೇಳುತ್ತಾರೆ ಕಲೆ ಉಳಿಲಿಕ್ಕೆ ವಿದ್ವಾಂಸರು ಯಾಕೆ ? ಖಂಡಿತ ತಪ್ಪು. ವಿದ್ವಾಂಸರ ಸಮರ್ಪಕ, ಸಹಯೋಗ ಇಲ್ಲದೇ ಇರುವ ಕಲೆಗೆ ನಿರಂತರತೆ ಇರೋದಿಲ್ಲ. ಅದಕ್ಕೆ ಅತ್ಮ ತೇಜಸ್ಸೂ ಇರೋದಿಲ್ಲ. ನಾವು ಅಲ್ಲಲ್ಲಿ ಸಮತೋಲನವಾಗಿ ಜಾನಪದ ಉತ್ಸವ ಮಾಡಿದೆವೋ ಹಾಗೇ ವಿಚಾರ ಸಂಕಿರಣಗಳನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ ಇಡೀ ಕ್ಷೇತ್ರದ ಅತ್ಯಂತ ಅಮೂಲ್ಯವಾದಂತಹ ವ್ಯಕ್ತಿಯನ್ನು ಕುರಿತು ಆಲೋಚನೆ ಮಾಡುತ್ತೇವೆ. ಇಂತಹ ಮಹಾ ಚೇತನವನ್ನು ಸ್ಮರಿಸೋದರಿಂದ ಚಿಂತಿಸುವುದರಿಂದ ನಮ್ಮ ಕ್ಷೇತ್ರಕ್ಕೆ ಅನೇಕ ಮಾರ್ಗದರ್ಶನಗಳು ಸಿಗುತ್ತಿವೆ.

ಇತಿಹಾಸ ಮತ್ತು ವರ್ತಮಾನ ಅವಿಭಾಜ್ಯವಾದ ಸಂಬಂಧ ಹೊಂದಿರುತ್ತವೆ. ವರ್ತಮಾನದ ಶ್ರೇಷ್ಠತೆಗೆ ಇತಿಹಾಸದ ಗೊಬ್ಬರ ಬೇಕೇ ಬೇಕು. ಹಾಗಾಗಿ ನಮಗೆ ಇತಿಹಾಸ ಬೇಕು. ಇತಿಹಾಸವೆನ್ನುವುದು ನಮಗೆ ವರ್ತಮಾನ ಕಟ್ಟಲು ಬೇಕಾದಂತಹ ಒಂದು ಮಾರ್ಗಸೂಚಿ.

ಈ ದೃಷ್ಟಿಯಿಂದ ಜಾನಪದ ಕ್ಷೇತ್ರದ ಇತಿಹಾಸವಿರಬಹುದು, ಜಾನಪದ ಕಲಾವಿದರ ಇತಿಹಾಸವಿರಬಹುದು, ನಾವು ಯೋಚಿಸಬೇಕು. ವಿದೇಶಗಳಲ್ಲಿ ಕಲಾ ಪ್ರಕಾರಗಳ ಸಣ್ಣ ಪುಟ್ಟ ಏರಿಳಿತಗಳನ್ನು ದಾಖಲಿಸುತ್ತಾರೆ. ನಮ್ಮ ದೇಶದ ಸಂಗೀತಕ್ಕೆ, ನೃತ್ಯಕ್ಕೆ, ಸಾಹಿತ್ಯಕ್ಕೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ಆ ಇತಿಹಾಸ ಕಾಲ ತಳ್ಳುವುದಕ್ಕೆ ಓದುವುದಲ್ಲ. ಇತಿಹಾಸ ವರ್ತಮಾನದ ನಿರ್ಮಾಣಕ್ಕೆ ಎಷ್ಟು ಪ್ರಯೋಜನಕಾರಿ ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಬೇಕು. ಹೀಗಾಗಿ ಈ ಎಲ್ಲ ಉದ್ದೇಶಗಳ ವಿಚಾರ ಚರ್ಚೆಗೆ; ಚಿಂತನೆಗೆ ಗದ್ದಗಿಮಠರನ್ನು ಮುಖ್ಯವಾಗಿಟ್ಟುಕೊಂಡು ಈ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದ್ದೇವೆ.

ಇಲ್ಲಿ ಇಂದು ಎಲ್ಲಿ ಕಣ್ಣು ಹಾಯಿಸಿದರೂ ವಿದ್ವಾಂಸರೇ ಕಾಣುತ್ತಿದ್ದಾರೆ. ಜಾನಪದ ಕಲಾ ಕ್ಷೇತ್ರದ ಅದರ ಆಲೋಚನೆಗೆ ಕರ್ನಾಟಕದ ಇಂತಿಂತಹ ವಿದ್ವನ್ಮಣಿಗಳೆಲ್ಲ ನಮ್ಮ ಹಿಂದಿದ್ದಾಗ ಜಾನಪದ ಕಲೆ ಅಳಿದು ಹೋಗುವುದೆನ್ನುವ ಭಯವೇಕೆ? ಅದನ್ನು ಉಳಿಸಬೇಕಾದುದು ವಿದ್ವತ್ ಸಾಮರ್ಥ್ಯದಿಂದ ಬರೀ ದೈಹಿಕ ಸಾಮರ್ಥ್ಯದಿಂದ ಕಲೆ ಉಳಿಯದು. ಪ್ರಾಯ ಇರೋವರಿಗೂ ಕುಣಿಬಹುದು ಮುಂದೆ, ಆದರೆ ತಾತ್ವಿಕವಾದ ಸಂಗತಿಗಳ ನಿರಂತರತೆಗಳನ್ನು ಕಾಪಾಡಿಕೊಳ್ಳುವುದೇ ವಿದ್ವತ್ತಿನ ಒಂದು ಮಹತ್ತರವಾದ ಸಾಮರ್ಥ್ಯ. ಇವತ್ತು ಎಲ್ಲಿ ಕಣ್ಣು ಹಾಯಿಸಿದರೂ ಸೇರಿರುವ ವಿದ್ವಾಂಸರನ್ನು ಕಂಡಾಗ

ನಮ್ಮ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಭಯವಿಲ್ಲ. ಇಷ್ಟು ವಿದ್ವತ್ ಸಮುದಾಯವೇ ನಮ್ಮ ಹಿಂದಿದ್ದಾಗ ನಾವು ಆಲೋಚಿಸಬೇಕಾಗಿಲ್ಲ ಅನಿಸುತ್ತೆ.

ಈ ವಿಚಾರ ಸಂಕಿರಣ ಜಾನಪದ ಕಲಾ ಕ್ಷೇತ್ರಕ್ಕೆ ಪ್ರಯೋಜನವಾಗಲಿ ನಮ್ಮೆಲ್ಲರ ಆಲೋಚನೆ ಪ್ರಯೋಜನಕರವಾದರೆ, ಗದ್ದಗಿಮಠರ ಆತ್ಮ ಸಂತೋಷವನ್ನು ಅನುಭವಿಸುತ್ತದೆ. ಧನ್ಯತೆಯನ್ನು ಅನುಭವಿಸುತ್ತದೆ. ನಮ್ಮನ್ನಗಲಿದ ದಿವ್ಯ ಚೇತನ ಗದ್ದಗಿಮಠ ಅವ್ಯಕ್ತವಾಗಿ ನೋಡುತ್ತಿದ್ದಾರೆ. ಹೀಗಾಗಿ ಈ ವಿಚಾರ ಸಂಕಿರಣ ವಿದ್ವಾಂಸರ ಮೂಲಕವಾಗಿ ಅನೇಕ ಅಮೂಲ್ಯ ಆಲೋಚನೆಗಳು ಬರಲಿ ಅದರ ಪ್ರಯೋಜನ ಕೇವಲ ಕಿವಿಗೆ ಮಾತ್ರ ಆಗದೇ ಮನಸ್ಸಿಗೆ ಆಗಲಿ ಅದು ಪ್ರಯೋಗದಲ್ಲಿ ಬರಲಿ ಇವತ್ತು ಈ ಮಹಾ ಸಂಕಿರಣವನ್ನು ತಮ್ಮೆಲ್ಲರ ಸಮ್ಮುಖದಲ್ಲಿ ವಿನಯಪೂರ್ವಕ ಉದ್ಘಾಟಿಸಿದ್ದೇನೆ ಎಂದು ಘೋಷಿಸುತ್ತ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ ನಮಸ್ಕಾರ.

❖

# ಮುಖ್ಯ ಅತಿಥಿಗಳ ಆಶಯ ಭಾಷಣ

ಡಾ. ಬಸವರಾಜ ಮಲ್ಲಶೆಟ್ಟಿ

◆

ಮಹನೀಯರೇ,

ನಮ್ಮ ಜಾನಪದ ಅಧ್ಯಯನ ಪಥದ ಒಂದು ಮಹತ್ವದ ಮೈಲಿಗಲ್ಲು ದಿ. ಗದ್ದಗಿಮಠ ಅವರು. ಇಂದು ಗದ್ದಗಿಮಠ ಅವರ ಬಗ್ಗೆ ವಿಚಾರ ಮಾಡೋದು, ಆಲೋಚನೆ ಮಾಡೋದು ಅಂದ್ರೆ ಆ ಮೈಲುಗಲ್ಲಿನ ಜೊತೆ ಮಾತನಾಡಿದಂತೆ. ಆ ಮೈಲುಗಲ್ಲಿನಿಂದ ನಾವೆಷ್ಟು ಮುಂದೆ ಬಂದಿದ್ದೇವೆ ಯಾವ ಯಾವ ದಾರಿ ಹಿಡಿದಿದ್ದೇವೆ ಅನ್ನೋದನ್ನು ನಾವಿಂದು ತಿಳಿದುಕೊಳ್ಳಬೇಕಾಗಿದೆ.

ಗದ್ದಗಿಮಠ ಅವರನ್ನು ಕುರಿತು ಇದು ಮೊದಲನೇ ವಿಚಾರ ಸಂಕಿರಣವಲ್ಲ. ಹತ್ತು ವರ್ಷಗಳ ಹಿಂದೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಜಿ. ಶಂ.ಪ ಅವರು ಅಧ್ಯಕ್ಷರಿದ್ದಾಗ ಹೊಸಪೇಟೆಯ ನಮ್ಮ ಕಾಲೇಜಿನಲ್ಲಿ ಒಂದು ವಿಚಾರ ಸಂಕಿರಣ ನಡೆದಿತ್ತು. ಮತ್ತೆ ಈಗ್ಯಾಕ ಈ ಅಕಾಡೆಮಿಯರು ಪುನಃ ಮಾಡ್ತಾರ ಅಂತ ಕೇಳೊಹಂಗಿಲ್ಲ. ಇದು ಪುನಃ ಪುನಃ ನಡೀಬೇಕು. ನಮ್ಮನ್ನು ನಾವು ಪುನಾರಾವಲೋಕನ ಮಾಡಿಕೊಳ್ಳಲಿಕ್ಕೆ, ನಮ್ಮನ್ನು ಸಮೀಕ್ಷೆ ಮಾಡಿಕೊಳ್ಳಲಿಕ್ಕೆ, ನಮ್ಮ ಸ್ವರೂಪದ ದರ್ಶನಕ್ಕೆ ಇದು ಅತ್ಯವಶ್ಯವಾದದ್ದು.

ಗದ್ದಗಿಮಠರು ಈ ಕ್ಷೇತ್ರಕ್ಕೆ ಬಂದದ್ದು ಹಲಸಂಗಿ ಗೆಳೆಯರ ನಂತರ. ಆದರೆ ಗದ್ದಗಿಮಠರು ಅವರನ್ನು ಅನುಕರಣೆ ಮಾಡಲಿಲ್ಲ. ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋದವರು. ಹಲಸಂಗಿ ಗೆಳೆಯರು ಗರತಿ ಹಾಡು, ಮಲ್ಲಿಗೆ ದಂಡೆಯಂತಹ ಅತ್ಯುತ್ತಮ ಸಂಕಲನಗಳನ್ನು ; ಶ್ರೇಷ್ಠವಾದ ಜನಪದ ಸಾಹಿತ್ಯವನ್ನು ನಾಡಿಗೆ ನೀಡಿದರು. ಆ ಮಾದರಿಗಳು ಹ್ಯಾಂಗ ಅದಾವು ಅಂದ್ರ ಅವುಗಳ ಪ್ರಭಾವದಿಂದ ಇವತ್ತಿಗೂ ನಾವು ಹೊರಗಬರಲಿಕ್ಕಾಗದು. ಅನಂತರ ಎಷ್ಟೇ ಜನಪದ ಸಾಹಿತ್ಯ ಸಂಕಲನಗಳು ಬಂದ್ರು ಕೂಡ ಆ ಗುಂಗು ಹೋಗಿಲ್ಲ. ಅಂತಹ ಶ್ರೇಷ್ಠ ಸಂಕಲನಗಳನ್ನು ನಾಡಿಗೆ ನೀಡಿದ್ರು. ಆಗಿನ ಅವರ ಉದ್ದೇಶ ನಮ್ಮ ಶಿಷ್ಟ ಕವಿಗಳಿಗೂ, ಮಾರ್ಗ ಸಾಹಿತ್ಯ ಅಭ್ಯಾಸ ಮಾಡುವವರಿಗೂ ಅಕ್ಷರಸ್ಥರಿಗೂ ಒಂದು ತಿಳುವಳಿಕೆ ಕೊಡೋದು ಆಗಿತ್ತು.

ನವೋದಯ ಸಂದರ್ಭದಲ್ಲಿ ಹೊಸ ಕಾವ್ಯದ ರಚನೆಗೆ ಬೇಕಾಗಿದ್ದ ಜನಪದ ಕಾವ್ಯ ಸತ್ವವನ್ನು ಅವರು ಒದಗಿಸಿದರು.

ಗದ್ದಗಿಮಠರು ಹಲಸಂಗಿ ಗೆಳೆಯರ ಕೆಲಸವನ್ನು ಮುಂದುವರಿಸಿದ್ರು. ಅತ್ಯಂತ ಶ್ರೇಷ್ಠವಾದ ಕಾವ್ಯವನ್ನು, ಸಾಹಿತ್ಯವನ್ನು ಸಂಗ್ರಹ ಮಾಡಿದ್ರು. ಅದರ ಜೊತೆಗೆ ಆ ಸಾಹಿತ್ಯನನ್ನು ಕುರಿತು ವಿವರಣೆಯನ್ನು, ಪರಿಶೀಲನೆಯನ್ನು ಮಾಡಿಕೊಟ್ಟು ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋದವರು. ಗದ್ದಗಿಮಠ ಅವರು ಬಹಳ ವೈವಿಧ್ಯತೆಗೆ ಕೈಚಾಚಿದ್ರು. ಅಲ್ಲಿಯವರೆಗೆ ತ್ರಿಪದಿ ಮತ್ತು ಬಿಡಿಹಾಡುಗಳು ಮಾತ್ರ ಜನಪದ ಹಾಡುಗಳು ಅಂತ ತಿಳಿಕೊಂಡಂತಹ ಸಂದರ್ಭದಲ್ಲಿ ಇವರು ವೈವಿಧ್ಯತೆಯ ಕಡೆಗೆ ಗಮನ ಹರಿಸಿದ್ರು.

ಕಥನ ಕವಗಳನ್ನು ಸಂಗ್ರಹ ಮಾಡಿದ್ರು, ಆಚರಣೆ, ಹಂತಿ, ದುಂದುಮೆ, ಕಂಬಿ ಈ ಎಲ್ಲ ಗೀತ ಪ್ರಕಾರಗಳನ್ನು ಸಂಗ್ರಹ ಮಾಡಿ ಅವುಗಳನ್ನು ಕುರಿತು ಅರ್ಥಗರ್ಭಿತವಾದ ವಿಮರ್ಶೆ, ವಿವರಣೆ, ಟೀಕೆ ಟಿಪ್ಪಣಿಗಳನ್ನು ಬರೆದು ಹಲಸಂಗಿ ಗೆಳೆಯರಿಗಿಂತ ಇನ್ನು ಮುಂದೆ ಹೋದ್ರು, ಗದ್ದಗಿಮಠ ಅವರಿಗೆ ಇನ್ನೊಂದು ಏನು ಅವಶ್ಯ ಎನಿಸಿತ್ತಂದ್ರೆ ಜನಪದ ಸಾಹಿತ್ಯವನ್ನು ಕುರಿತು ಸಮರ್ಥನೆ ಮಾಡಿಕೊಳ್ಳಬೇಕಾಗಿತ್ತು. ಯಾಕೆಂದರೆ ಅದೇ ಆಗ ಜನಪದ ಸಾಹಿತ್ಯ, ಜನಪದ ಸಂಕಲನ ಬರುವ ಕಾಲಕ್ಕೆ ನಮ್ಮ ವಿದ್ಯಾವಂತ ವರ್ಗ ಇನ್ನೂ ಅವುಗಳ ಕಡೆಗೆ ಅಷ್ಟು ಗಮನ ಹರಿಸಿರಲಿಲ್ಲ, ಈ ನಾಡಿಗೆ, ಈ ಜನತೆಗೆ ಅದರ ಮಹತ್ವವನ್ನು, ಸಾಮರ್ಥ್ಯವನ್ನು ತಿಳಿಸುವಂತಹ, ಸಮರ್ಥಿಸುವಂತಹ, ವ್ಯಾಖ್ಯಾನಿಸುವಂತಹ ಒಂದು ಪ್ರಯತ್ನ ಗದ್ದಗಿಮಠ ಅವರು ಮಾಡಿದರು. ಅದರ ಒಂದು ಫಲ ಅವರ ಥೀಸಿಸ್. ಅವರ ಥೀಸಿಸ್ ನಮ್ಮ ಕೆಲವು ವಿದ್ವಾಂಸರಿಗೆ ಅಷ್ಟು ಮಹತ್ವದ್ದಾಗಿ ಕಂಡಿರಲಿಕ್ಕಿಲ್ಲ. ಹಿಂದೆ ಚರ್ಚೆಯಲ್ಲಿ ಕೆಲವರ ಮಾತು ಕೇಳಿದ್ದೇನೆ "ಏನೋ ಒಂದಿಷ್ಟು ಹಾಡು ಸಂಗ್ರಹಿಸಿ ಅದರ ವಿವರಣೆ ಕೊಟ್ಟಿದ್ದಾರೆ" ಈ ರೀತಿ ವಿಮರ್ಶೆ ಮಾಡೋದು ಭಾಳ ಸುಲಭ. ಆ ದಿನಗಳಲ್ಲಿ ಗದ್ದಗಿಮಠರು ಮಾಡಿದ ಕೆಲಸ ಬಹಳ ಹೆಚ್ಚಿನದು, ಬಹಳ ಎತ್ತರದ್ದು.

ಹಲಸಂಗಿ ಗೆಳೆಯರಾಗಲಿ, ಗದ್ದಗಿಮಠರಾಗಲಿ ಆ ಕಾಲದಲ್ಲಿ, ಆ ಪರಿಸರದಲ್ಲಿ, ಆ ಸಂದರ್ಭದಲ್ಲಿ ಏನು ಮಾಡಿದರು; ಹ್ಯಾಂಗ ಮಾಡಿದ್ರು ಅನ್ನೋದು ನೋಡಬೇಕೇ ವಿನಃ ಇಂದಿನ ಮಾನದಂಡ, ಇಂದಿನ ಲೆಕ್ಕಾಚಾರದಲ್ಲಿ ನೋಡಬಾರದು. ಒಂದು ವಿಚಾರ ಗೋಷ್ಠಿಯಲ್ಲಿ ಒಬ್ಬ ವಿದ್ವಾಂಸರು ಹೇಳಿದ್ರು ಹಲಸಂಗಿ ಗೆಳೆಯರಿಗೆ ಕ್ಷೇತ್ರ ಕಾರ್ಯದಲ್ಲಿ ಅನುಭವ ಇದ್ದಿಲ್ಲ. ಕ್ಷೇತ್ರ ಕಾರ್ಯದ ಪರಿಕಲ್ಪನೆ ಸಿದ್ಧಾಂತಗಳು ಇಂದು ಬಂದಿವೆ. ಪಾಶ್ಚಿಮಾತ್ಯರು ಬರೆದ ಕೆಲವು ಪುಸ್ತಕಗಳು ಕನ್ನಡದಲ್ಲಿಯೂ ಬಂದಿದ್ದುಂಟು. ಅವುಗಳಲ್ಲಿ ಕ್ಷೇತ್ರ ಕಾರ್ಯಕ್ಕೆ ಯಾವ ಊರಿಗೆ ಹೋಗಬೇಕಾಗಿದೆಯೋ ಆ ಊರಿನ ಬಗ್ಗೆ ಅಧ್ಯಯನ ಮಾಡಬೇಕು. ಅಲ್ಲಿನ ಭೌಗೋಲಿಕ ಪರಿಸರ ಎಂಥದ್ದು ಟೆಂಪ್ರೇಚರ್

ಎಷ್ಟಿರುತ್ತೆ, ಸ್ವೆಟರ್ ಒಯ್ಯಬೇಕೊ, ರಗ್ಗ ಒಯ್ಯಬೇಕೊ, ಕರೆಂಟು ಇರುತ್ತೊ ಇಲ್ಲೋ, ಕರೆಂಟ ಇರದಿದ್ರ ಮೇಣಬತ್ತಿ, ಕಡ್ಡಿಪೆಟ್ಟಿಗೆ ಒಯ್ಯ ಬೇಕೋ ಹ್ಯಾಗೆ. ಇಷ್ಟೆಲ್ಲ ತಯಾರಿ ಮಾಡಿಕೊಂಡು ಹೋಗಿ ಕ್ಷೇತ್ರ ಕಾರ್ಯ ಮಾಡೋ ವಿದ್ವಾಂಸರಿಗೂ, ಹಲಸಂಗಿ ಗೆಳೆಯರಿಗೂ, ಗದ್ದಗಿಮಠ ಅವರಿಗೂ ಬಹಳ ವ್ಯತ್ಯಾಸವಿದೆ. ಅಂತಹ ಒಂದು ಸಂದರ್ಭದಲ್ಲಿ ಪ್ರೋ. ಇಮ್ರಾಪುರ ಹೇಳಿದ ಮಾತು "ಇವರಿಬ್ಬರೂ ನಮ್ಮಂತ ಕ್ಷೇತ್ರ ಕಾರ್ಯ ಮಾಡಲಿಲ್ಲ, ಯಾಕಂದ್ರ ಅವರು ಕ್ಷೇತ್ರದ ಒಳಗನs ಇದ್ರು" ಇವತ್ತು ನಮ್ಮ ಕ್ಷೇತ್ರನೇ ಬೇರೆ ಅವರ ಕ್ಷೇತ್ರನೇ ಬೇರೆ. ಅವರು ಕ್ಷೇತ್ರದಲ್ಲಿಯೇ ತನ್ಮಯರಾಗುತ್ತಿದ್ದರು. ಗದ್ದಗಿಮಠ ಅವರು ಮಾಡಿದ್ದು ಅಂಥ ಕ್ಷೇತ್ರ ಕಾರ್ಯ. ಹಾಗಂತಲೇ ಅವರ ಥೀಸಿಸ್ ಒಂದು ಮೈಲುಗಲ್ಲು.

ಪ್ರಾಸ್ತಾವಿಕದಲ್ಲಿ ನಮ್ಮ ಡಾ. ನಾಗಯ್ಯ ಹೇಳಿದರು ಇಡೀ ದೇಶದಲ್ಲಿಯೇ ಜನಪದ ಸಾಹಿತ್ಯದಲ್ಲಿ ಪ್ರಬಂಧ ರಚಿಸಿ ಡಾಕ್ಟರೇಟ ತಗೊಂಡಿದ್ದು ಒಂದು ದಾಖಲೆ ಅಂತ. ನಾನು ಕರ್ನಾಟಕದಲ್ಲಷ್ಟೇ ಮೊದಲಿಗರು ಅಂತ ತಿಳಿಕೊಂಡಿದ್ದೆ. ಗದ್ದಗಿಮಠರ ಥೀಸಿಸ್ ನಲ್ಲಿ ಬಹಳ ಯಥಾವತ್ತಾದ ವಿವರಗಳಿವೆ. ಆಚರಣೆಗಳನ್ನು, ಹಬ್ಬಗಳನ್ನು ವಿವರವಾಗಿ ತಿಳಿಸಿದ್ದಾರೆ. ಬಹುಶಃ ಏನಿದು ನಮ್ಮೂರಲ್ಲಿ, ನಮ್ಮೋಣಿಗಳಲ್ಲಿ ನಡಿಯೋ ಹಬ್ಬಗಳನ್ನು ಅದರಲ್ಲಿ ಬರೆದಿದ್ದಾರೆ. ಇದರಲ್ಲೇನಿದೆ ಅಂತ ಆಗಿನ ಶ್ಯಾಣ್ಯಾ ಪಂಡಿತರು ವಿಚಾರ ಮಾಡಿರಬೇಕು.

ಯಥಾವತ್ತಾದ ಒಂದು ವಿವರ ವರ್ತಮಾನಕ್ಕೆ ಮಹತ್ವದ್ದು ಅನಿಸಿರಲಿಕ್ಕಿಲ್ಲ. ಆದರೆ, ಅದು ಭವಿಷ್ಯತ್ತಿಗೆ ಚಾರಿತ್ರಿಕ ದಾಖಲೆಯಾಗುತ್ತದೆ. ಯಾಕೆಂದರೆ, ಗದ್ದಗಿಮಠ ಅವರು ನೋಡಿದ ಹಬ್ಬದ ಸಂಭ್ರಮಗಳನ್ನು ನಾವಿಂದು ನೋಡಲಿಕ್ಕಾಗದು. ನಾವಿಂದು ಅಲ್ಪ ಸ್ವಲ್ಪ ನೋಡಿದ್ರು ಮುಂದಿನ ನಮ್ಮ ಪೀಳಿಗೆ ಅದನ್ನೂ ನೋಡಲಿಕ್ಕಾಗದೇ ಪುಸ್ತಕದಲ್ಲಿ ನೋಡಬೇಕಾಗುತ್ತೆ. ಕಾಲ ಹಿಂದಕ್ಕೆ ಸರಿದಾಗ ನಾವು ಗದ್ದಗಿಮಠ ಅವರಿಂದ ಮುಂದಕ್ಕ ಬಂದಾಗ ಅವರು ಕೊಟ್ಟ ಬರಹಗಳು, ವ್ಯಾಖ್ಯಾನಗಳು ಎಷ್ಟೊಂದು ಮಹತ್ವದ್ದು ಅನಿಸುತ್ತೆ. ಅವರು ತಮ್ಮ ಕಾಲದ ಹಬ್ಬ ; ಆಚರಣೆ ಬೇರೆ ಬೇರೆ ವೃತ್ತಿಗಳನ್ನು ವಿವರವಾಗಿ ಆತ್ಮೀಯತೆಯಿಂದ ಹಿಡಿದಿಟ್ಟಿದ್ದು ನೋಡತೀವಿ.

ಗದ್ದಗಿಮಠರ ಥೀಸಿಸ್‌ನ ಪೀಠಿಕೆ ಬಹಳ ವಿಸ್ತಾರವಾದಂತಹದ್ದು. ಇಂದಿಗೂ ಕೂಡ ಜನಪದ ಸಾಹಿತ್ಯ ಸಂಗ್ರಹ ಮಾಡೋರಿಗೆ ಮಾದರಿ. ಗದ್ದಗಿಮಠರ ನಂತರ ನಾವೆಲ್ಲಿಗೆ ಬಂದಿದ್ದೇವೆ ? ಯಾವ ಹಾದಿ ಹಿಡಿದ್ದೇವೆ ? ಗದ್ದಗಿಮಠರ ನಂತರ ಜನಪದ ಸಾಹಿತ್ಯ ಸಮೃದ್ಧಿಯಾಗಿ ಬೆಳೆದು ಬಂದಿದೆ. ಕರ್ನಾಟಕದ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳ ಪ್ರಕಟಣೆಗಳು, ಅಖಿಲ ಕರ್ನಾಟಕ ಜಾನಪದ ಸಮ್ಮೇಳನಗಳ ಪ್ರಬಂಧ ಸಂಕಲನಗಳು ದಾಖಲೆಯಾಗಿವೆ. ಇದೊಂದು ಚರಿತ್ರೆ ನೋಡಿದಾಗ ನಾವು ಎಷ್ಟೊಂದು

ವೈವಿಧ್ಯವಾಗಿ ಎಷ್ಟೊಂದು ಜಾನಪದ ವಿಷಯಗಳನ್ನು ಕುರಿತು ಅಧ್ಯಯನ ಮಾಡಿದ್ದೇವೆ ಎನಿಸುತ್ತೆ. ವಿಶ್ವವಿದ್ಯಾಲಯಗಳಿಂದ ಬರುವ ಎಂ. ಫಿಲ್., ಪಿಎಚ್. ಡಿ ಥೀಸಿಸ್‌ಗಳನ್ನು ನೋಡಿದಾಗ ಬಹಳ ವಿಸ್ತಾರವಾದ ಅಧ್ಯಯನಕ್ಕೆ ತೊಡಗಿಕೊಂಡಿದ್ದೇವೆ ಅಂತ ಅನಿಸುತ್ತೆ.

ನಮ್ಮ ಹಬ್ಬಗಳ ಆಚರಣೆಗಳು, ನಮ್ಮ ಗ್ರಾಮ ದೇವತೆಗಳು, ನಮ್ಮ ಪ್ರದರ್ಶನ ಬೇರೆ ಬೇರೆ ವೃತ್ತಿಗಳನ್ನು ಕುರಿತು ಕಲೆಗಳ ಬಗ್ಗೆ ಹೀಗೆ ಎಲ್ಲಾ ವಿಷಯ ಕುರಿತು ನಮ್ಮ ಜಾನಪದ ಅಧ್ಯಯನ ಇಂದು ಬಹಳ ವ್ಯಾಪಕವಾಗಿ ಬೆಳೆದಿದೆ. ಆದರೆ, ನನ್ನ ಅಳಿಲು ಅಂದರೆ ಈ ಜಾನಪದ ವ್ಯಾಪಕವಾಗಿ ಬೆಳೆಯೋ ಸಂದರ್ಭದಲ್ಲಿಯೇ ನಾವು ಈ ಕ್ಷೇತ್ರಕ್ಕೆ ಬಂದ್ಲೋರು. ಪಿಎಚ್. ಡಿ. ಮಾಡಿದ ಕೂಡ್ಲೆ ವಿದ್ವಾಂಸರು ಅನಿಸಿಕೊಂಡ ಭ್ರಮೆಯೊಳಗ ಬಿದ್ವಿ ಅನಿಸುತ್ತೆ. ವಿದ್ವಾಂಸರು ಅನಿಸಿಕೊಳ್ಳೋ ಹುರುಪಿನಲ್ಲಿ ಗದ್ದಗಿಮಠರು ಪ್ರಾರಂಭದಲ್ಲಿ ಮಾಡಿದ ಕೆಲಸನ ಮರತಿವಿ. ವಿದ್ವತ್ ಬೆಳೆದಂಗ, ವಿದ್ವತ್ ಪರಂಪರೆ ಬೆಳದಂಗ, ಸಂಗ್ರಹ ಕಾರ್ಯ ಬೆಳಿಲಿಲ್ಲ. ಆ ಕಡೆ ನಾವು ಅಲಕ್ಷ ಮಾಡಿದಿವಿ ಅನಿಸುತ್ತದೆ.

ನಾವು ನಮ್ಮ ಸಂಶೋಧನೆ, ವಿವರಣೆ ಕಡೆ ಗಮನ ಕೊಟ್ಟಷ್ಟು ಸಂಗ್ರಹ ಕಾರ್ಯಕ್ಕೆ ಗಮನ ಕೊಡಲಿಲ್ಲ. ಅದರ ದುಷ್ಪರಿಣಾಮ ಇಂದು ನಾವು ಅನುಭವಿಸ್ತೀವಿ. ನಮ್ಮ ಎಷ್ಟೋ ಕಾವ್ಯ ಪ್ರಕಾರಗಳು ನೋಡಲಿಕ್ಕೂ ಸಿಗೋದಿಲ್ಲ. ಅದಕ್ಕ ನಾವು ಗದ್ದಗಿಮಠರನ ಈ ವಿಷಯದಲ್ಲಿ ಕ್ಷಮೆ ಕೇಳಬೇಕು. ಅವರು ಕೊಟ್ಟಂತಹ ಕೆಲವು ಬೀಜಗಳನ್ನ ನಾವು ಬೆಳೆ ಮಾಡಿಕೊಳ್ಳಲಿಲ್ಲ. ಅಷ್ಟಕ್ಕ ಬಿಟ್ಟಬಿಟ್ಟವಿ. ಕಂಬಿ ಪದಗಳು ಅಂತ ಬಹಳ ಸಣ್ಣ ಪುಸ್ತಕ ಅವರದು. ಕಂಬಿ ಹೊತ್ತುಗೊಂಡ ಶ್ರೀಶೈಲಕ್ಕ ಹೋಗೋರು ಹಾಡೋ ಹಾಡುಗಳು. ನನ್ನ ತಿಳುವಳಿಕೆ ಪ್ರಕಾರ ಅಂಥ ಹಾಡುಗಳ ಸಂಗ್ರಹಗಳು ಮುಂದೆ ಬರಲಿಲ್ಲ.

'ಕುಮಾರ ರಾಮನ ದುಂದುಮೆ' ಅಂತ ಒಂದು ಪುಸ್ತಕ ತಂದ್ರು. ನಂತರ ದುಂದುಮೆ ಪದಗಳ ಸಂಗ್ರಹ ಬರಲೇ ಇಲ್ಲ. ದುಂದುಮೆ ಅನ್ನೋದು ಒಂದು ಹಾಡಿನ ಪ್ರಕಾರ ಹಾಡೋರಿದ್ರೂ ನಾವು ಅವುಗಳನ್ನು ಸಂಗ್ರಹಿಸಲಿಲ್ಲ. ಗದ್ದಗಿಮಠರು ಪ್ರಾರಂಭ ಮಾಡಿದಂತಹ ಕೆಲಸ ನಾವು ಮುಂದುವರಿಸಲಿಲ್ಲ ಅನ್ನೋದು ನನಗ ವ್ಯಥೆ ಅನಿಸುತ್ತೆ.

ಕ್ಷೇತ್ರ ಕಾರ್ಯದ ಕೊರತೆಯನ್ನು ನಾವಿಂದು ತುಂಬಿಕೊಳ್ಳಬೇಕಾಗಿದೆ. ಎಲ್ಲ ಪ್ರಕಾರಗಳ ಸಂಪೂರ್ಣ ಸಂಗ್ರಹ ಕಾರ್ಯ ನಡೀಲಿಲ್ಲ. ಕೆಲವು ಪ್ರಾತಿನಿಧಿಕ ಕಾರ್ಯಗಳು ನಡೆದವು ಹ್ಯಾಗಂದ್ರ, ಡೊಳ್ಳಿನ ಪದಗಳನ ಯಾರೋ ಸಂಗ್ರಹಿಸಿದಾಗ ಅದಕ್ಕ 'ಉತ್ತರ ಕರ್ನಾಟಕದ ಡೊಳ್ಳಿನ ಪದ'ನೋ 'ಕರ್ನಾಟಕದ ಡೊಳ್ಳಿನ ಪದ'ನೋ ಅಂತ ಅಂದ ಬಿಟ್ಟಿರ ಆ ಪ್ರಕಾರದ ಸಂಗ್ರಹ ಕಾರ್ಯ ಮುಗೀತು. ಚೌಡಕಿ ಪದಗಳ ಸಂಗ್ರಹ ಮಾಡಿದ ಕೂಡ್ಲೆ ಅದೊಂದು ಪ್ರಕಾರ ಮುಗೀತು ಅಂತ ತಿಳಕೊಂಡಬಿಡ್ತೀವಿ. ಆದರೆ,

ಎಷ್ಟೊಂದು ಸಮೃದ್ಧ ಸಾಹಿತ್ಯ ನಮ್ಮಲ್ಲಿದೆ. ಅದನ್ನು ಸಂಗ್ರಹಿಸುವಂತಹ ಕೆಲಸ ನಾವು ಮಾಡಲಿಲ್ಲ. ಗದ್ದಗಿಮಠರಿಗೆ ಕೃತಜ್ಞತೆ ಹೇಳಬೇಕಂದ್ರ ನಾವು ಆ ಕೆಲಸದ ಕಡೆ ಗಮನ ಕೊಡಬೇಕು.

ಗದ್ದಗಿಮಠರ ಕೆಲವು ಕೆಲಸಗಳು ಹೀಗೆ ಚಾರಿತ್ರಿಕವಾಗಿವೆ ಅನ್ನೋದು ಗಮನಾರ್ಹ. ಅವರು ತಮಗ ತಿಳಿದಷ್ಟನ್ನು ತಮ್ಮ ಮಿತಿಯೊಳಗ ಮಾಡಿದ್ರೂ ಕೂಡ ಅವು ಎಷ್ಟು ಚಾರಿತ್ರಿಕ ಮಹತ್ವ ಪಡಕೊಂಡಿವೆ ಅನ್ನೋದು ಮುಖ್ಯ. ಅವರ ಕೆಲವು ಹಸ್ತ ಪ್ರತಿ ನಮಗ ಸಿಕ್ಕಿಲ್ಲ. ಅವೆಲ್ಲೋ ಕಳದ ಹೋದವು ಅನ್ನೋದು ನೋವನ್ನುಂಟು ಮಾಡತ್ತದೆ. ಜಾನಪದ ರಾಮಾಯಣ, ಜಾನಪದ ಮಹಾಭಾರತ ಅವರು ಸಂಗ್ರಹಿಸಿದ್ದರು.

ಜಾನಪದ ಕಾವ್ಯ ಕುರಿತು ಅಧ್ಯಯನ ಮಾಡುವಾಗ ಬೇರೆ ಬೇರೆ ದೃಷ್ಟಿಕೋನಗಳು ಗೋಚರಿಸುತಾವ. ಕಾವ್ಯ ಬರೀ ಸಾಹಿತ್ಯಿಕ ಪ್ರಕಾರವಾಗಿ ಇವತ್ತು ಉಳಿದಿಲ್ಲ. ಸಂಸ್ಕೃತಿ ಅಧ್ಯಯನಕ್ಕ ನಮ್ಮ ಶಿಷ್ಟ ಕಾವ್ಯಕ್ಕಿಂತ ಜಾನಪದ ಕಾವ್ಯ ಮುಖ್ಯವಾದಂತಹ ಆಕರ. ಅವರ ಜಾನಪದ ರಾಮಾಯಣ ಒಂದು ಅದ್ಭುತವಾದಂತಹ ಪ್ರಾದೇಶಿಕ ಸಂಕಲನ ಆಗಿತ್ತೋ ಏನೋ. ಅದನ್ನ ನಾವಿಂದು ಕಳಕೊಂಡಿದ್ದೀವಿ.

ಇತ್ತೀಚೆಗೆ ಜನಪದ ಮಹಾಕಾವ್ಯಗಳ ಬಗ್ಗೆ ಜನಪದ ರಾಮಾಯಣ, ಮಹಾಭಾರತದ ಬಗ್ಗೆ ನಮ್ಮಲ್ಲಿ ಅಧ್ಯಯನ ನಡಿತಾ ಇದೆ. ಅವುಗಳನ್ನು ಸಾಂಸ್ಕೃತಿಕವಾಗಿ ನೋಡೋ ದೃಷ್ಟಿ ಬರತಾ ಇದೆ. ಈ ಕೆಲಸವನ್ನು ನಾವಿಂದು ಎಚ್ಚರಾಗಿ ಮಾಡಾತಾ ಇದ್ದೇವೆ. ಇದನ್ನ ಗದ್ದಗಿಮಠರು ಆವತ್ತೇ ಪೂರೈಸಿದರು. ಅವರ ಜಾನಪದ ರಾಮಾಯಣ, ಜಾನಪದ ಮಹಾಭಾರತ ಎರಡೂ ಸಂಕಲನಗಳು ನಮಗ ದೊರೆಯದಿದ್ದುದು ದುರ್ದೈವದ ಸಂಗತಿ.

ಎ.ಕೆ. ರಾಮಾನುಜನ್‌ರು ನಮ್ಮ ದೇಶದ ರಾಮಾಯಣ ಕುರಿತು ಬರೀತಾ ಸುಮಾರು ಮೂರು ನೂರು ರಾಮಾಯಣಗಳನ್ನು ಗುರುತಿಸಿದ್ದಾರೆ. ಹುಡುಕಿದರ ಇನ್ನೂ ಸಿಗಬಹುದು. ಈ ರಾಮಾಯಣಗಳು–ಅಂದರೆ ಸ್ಥಳೀಯವಾಗಿ ಸಿಗೋ ಜಾನಪದ ರಾಮಾಯಣಗಳು. ಶಿಷ್ಟ ರಾಮಾಯಣಗಳಿಗಿಂತ ತೀರ ಭಿನ್ನವಾಗಿರುವಂತಹವು. ಈ ನೆಲದ ಸಂಸ್ಕೃತಿಯನ್ನು ಬಿಂಬಿಸುವಂತಹವು. ಅಂದರೆ, ಜಾನಪದ ತನ್ನ ಕಣ್ಣಿನಿಂದ, ತನ್ನ ದೃಷ್ಟಿಯಿಂದ ರಾಮಾಯಣವನ್ನು ಹ್ಯಾಗ ನೋಡತು ಅನ್ನುವಂತಹದ್ದು ಮುಖ್ಯ. ಆ ಜನಪದ ಈ ನಾಡಿನ ಸಂಸ್ಕೃತಿಯ ಪ್ರತಿಬಿಂಬವಾದಂತಹದ್ದು.

ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಒಂದು ಹಾಡಿದೆ. ರಾಮಾಯಣಕ್ಕೆ ಸಂಬಂಧ ಪಟ್ಟಿರುವಂತಹದ್ದು, "ಕಾಗಿಕೊಂದವನ ಕಥೆ" ಅಂತ ಅದರ ಟೈಟಲ್. ರೈತನೊಬ್ಬ

ಹೊಲದಲ್ಲಿ ನಿತ್ಯ ಪೂಜೆ ಸಲ್ಲಿಸುವಾಗ ಕಾಗಿ ಬಂದು ಅವನು ತಂದ ನೈವೇದ್ಯ ತಿಂದು ಎಂಜಲ ಮಾಡುತ್ತಿತ್ತು. ಅವನು ಸಾಕಾಗಿ "ಈ ಕಾಗಿ ಕೊಂದವರಿಗೆ ನನ್ನ ಮಗಳ ಸೀತಾನ್ನ ಕೊಟ್ಟು ಲಗ್ನ ಮಾಡತೀನಿ" ಎಂದು ಡಂಗುರ ಸಾರಿದ. ರಾಮ-ಲಕ್ಷ್ಮಣ ಅದನ್ನ ಕೇಳಿಸಿಕೊಂಡು ಬಂದರು. ಲಕ್ಷ್ಮಣ ಬಾಣ ಬಿಟ್ಟು ಕಾಗಿ ಕೊಂದ. ಆಗ ಆ ರೈತ 'ನನ್ನ ಶರತ್‌ನಂತೆ ಮಗಳು ಸೀತಾನ್ನ ಕೊಟ್ಟು ಲಗ್ನ ಮಾಡತೀನಿ ಬಾ' ಅಂದಾಗ, ಲಕ್ಷ್ಮಣ 'ಇಲ್ಲ, ನನಗಿಂತ ದೊಡ್ಡ ಅಣ್ಣ ಇದ್ದಾಗ ನಾ ಆಗೋದಿಲ್ಲ. ನಿಮ್ಮ ಮಗಳನ್ನ ನನ್ನಣ್ಣಗ ಕೊಟ್ಟು ಮದಿವಿ ಮಾಡ್ರಿ' ಅಂದ. ಅವನ ಮಾತಿನಂತೆ ರಾಮಗ ಕೊಟ್ಟು ಮದ್ವಿ ಮಾಡಿ ಆ ರೈತ ಬಿಳ್ಕೊಟ್ಟ. ಮುಂದೆ ರಾಮ ನಂತರ ಸೀತೆ ಕೊನೆಗೆ ಲಕ್ಷ್ಮಣ ಹೀಗೆ ನಡಿತಾ ಹೊರಟರು ಬಿಸಲಲ್ಲಿ ಹೊರಟಾಗ ಸೀತೆ ಕಾಲಲ್ಲಿ ಬೊಬ್ಬೆಗಳೆದ್ದು ತ್ರಾಸ ಆಯ್ತು. ಲಕ್ಷ್ಮಣ "ಅತ್ತಿಗೆಮ್ಮ ನಿನಗ ನಡಿಲಿಕ್ಕಾಗದು ನನ್ನ ಹೆಗಲ ಮೇಲೆ ಕೂತ್ಕೊ" ಅಂದ. ಮುಂದೆ ಏನಾಯ್ತೊ, ಆ ಹಾಡು ಇಷ್ಟಕ್ಕೆ ಮುಗಿಯುತ್ತದೆ.

ಇದೇ ಸಂದರ್ಭ ನಮ್ಮ ವಾಲ್ಮೀಕಿ ರಾಮಾಯಣದಲ್ಲಿ ನಮ್ಮ ಶಿಷ್ಟ ಕೃತಿಗಳಲ್ಲಿ ಬೇರೆಯಾಗಿದೆ. ಇಲ್ಲಿ ಲಕ್ಷ್ಮಣ ಸೀತೆಯ ಪಾದಗಳನ್ನು ಬಿಟ್ಟರೆ ಮುಖವನ್ನೇ ನೋಡಿರಲಿಲ್ಲ. ಅಷ್ಟು ವರ್ಷ ವನವಾಸದಲ್ಲಿದ್ದುಕೊಂಡು, ಮೂವರೂ ಜೊತೆಗೇನೇ ಇದ್ರುಕೂಡ ಸೀತೆಯ ಮುಖವನ್ನೇ ನೋಡಿರಲಿಲ್ಲ. ಸೀತೆಯನ್ನು ರಾಮ ಲಕ್ಷ್ಮಣ ಹುಡಿಕಿಕೊಂಡು ಹೊರಟಾಗ ಸುಗ್ರೀವ ಅವಳ ಆಭರಣಗನ್ನೆಲ್ಲ ತಂದು ತೋರಿಸಿದಾಗ ಅವಳ ಪಾದದ ಆಭರಣಗಳನ್ನು ಮಾತ್ರ ಲಕ್ಷ್ಮಣ ಗುರುತಿಸ್ತಾನೆ. ಯಾಕಂದರೆ ನಿತ್ಯ ನಮಸ್ಕಾರ ಮಾಡುವಾಗ ಪಾದ ಮಾತ್ರ ನೋಡಿದ್ದನಂತೆ. ಲಕ್ಷ್ಮಣ ಅತ್ತಿಗೆ ಮುಖನ್ನೇ ನೋಡಿರಲಿಲ್ಲ ಅನ್ನೋದು ಎಷ್ಟು ಕೃತಕ, ಎಷ್ಟು ಅಮಾನವೀಯ.

ನಮ್ಮ ಜಾನಪದ ಹಾಡಿನ ರಾಮಾಯಣದಲ್ಲಿ ಬರುವದು ಅವಿಭಕ್ತ ಕುಟುಂಬ ಪರಸ್ಪರ ಸುಖ ದುಃಖ ಹಂಚಿಕೊಳ್ಳುತ್ತಾರೆ. 'ಅತ್ತಿಗೆಮ್ಮ ನಿನಗ ನಡಿಲಿಕ್ಕಾಗದು ಬಾ ನನ್ನ ಹೆಗಲ ಮೇಲೆ ಕೂಡು' ಅನ್ನೋದು ಎಷ್ಟು ಮಾನವೀಯವಾದದ್ದು. ಇದು ನಮ್ಮ ರಾಮಾಯಣ. ರಾಮಾಯಣಕ್ಕೆ ನಮ್ಮ ಜನಪದ ವ್ಯಾಖ್ಯಾನ. ರಾಮಾಯಣವನ್ನು ನಮ್ಮ ಜನ ನೋಡುವ ದೃಷ್ಟಿ. ಇದನ್ನು ನೋಡಿದಾಗ ಗದ್ದಗಿಮಠರು ಸಂಗ್ರಹಿಸಿದ ರಾಮಾಯಣ, ಮಹಾಭಾರತ ಹಾಡುಗಳಲ್ಲಿ ಏನೇನು ಇತ್ತೋ ಅವುಗಳನ್ನು ನಾವಿವತ್ತು ಕಳಕೊಂಡ ಕೂತೀವಿ.

ಜಾನಪದ ಶಬ್ದಕೋಶವನ್ನು ಅವರು ಸಂಗ್ರಹ ಮಾಡಿದ್ದರು. ನಮ್ಮಲ್ಲಿ ಕೆಲವು ಜಾನಪದ ಶಬ್ದಕೋಶಗಳು ಬಂದಿವೆ. ಕ್ಯಾತನಹಳ್ಳಿ ರಾಮಣ್ಣ ಒಂದು ಮಾಡಿದ್ರು ಎಚ್. ಎಲ್. ನಾಗೇಗೌಡರು ಒಂದು ಮಾಡಿದ್ರು ಇವೆಲ್ಲವುಗಳಿಗಿಂತ ವಿಶಿಷ್ಟವಾದದ್ದು, ಮುದೇನೂರು ಸಂಗಣ್ಣನವರು ಮಾಡಿದಂತಹ ಚಿಗಟೇರಿ ಪದಕೋಶ. ಜನಪದ ಶಬ್ದ

ಕೋಶ ಅಂದರೆ, ಜನಪದ ಕೃತಿಗಳನ್ನಿಟ್ಟುಕೊಂಡು ಬರೀಯೋದಲ್ಲ. ಅದು ಪ್ರಾದೇಶಿಕ ವಾಗಿರಬೇಕು, ಒಂದು ಊರು, ಒಂದು ತಾಲೂಕಾ ಆ ತಾಲೂಕಿನಲ್ಲಿರುವಂತಹ ಶಬ್ದಗಳು. ಜಾನಪದ ಪದಕೋಶದಲ್ಲಿರಬೇಕು. ನಮ್ಮಲ್ಲಿ ನಿಘಂಟು ತಯಾರು ಮಾಡುವಂತವರು ಅದನ್ನು ಪರಿಗಣಿಸಲೇ ಇಲ್ಲ. ಹೀಗಾಗಿ ನಮ್ಮಲ್ಲಿರುವಂತಹ ನಿಘಂಟು ಸಂಪೂರ್ಣವಲ್ಲ.

ಜನಪದ ಬದುಕಿನ ಸಮೀಪ ಹೋಗಿ ಆ ಪದಗಳನ್ನು, ಶಬ್ದಗಳನ್ನು ಸಂಗ್ರಹಿಸಿದಾಗ ಮಾತ್ರ ಇದು ಸಾಧ್ಯ. ಹಾಗೆ ಗದ್ದಗಿಮಠರು ಎಷ್ಟೋ ದಿನಗಳಿಂದ ಇಂಥ ಕನಸು ಕಂಡಿದ್ದರು. ಜೀವನ ಬದಲಾಗುತ್ತದೆ, ಜೀವನದ ಶೈಲಿ ಬದಲಾಗುತ್ತದೆ. ನಮ್ಮ ಜೀವನ ಬದಲಾದಂತೆ ಎಷ್ಟೋ ಶಬ್ದಗಳು ಹೋಗಿ ಬಿಡುತ್ತವೆ. ಗದ್ದಗಿಮಠರು ಅಂಥ ದಾಖಲೆ ಸಿದ್ಧಗೊಳಿಸಿದ್ದರು. ಆದ್ರ ಅವರು ಸಂಗ್ರಹಿಸಿದ ಅಂಥ ಶಬ್ದಕೋಶನೂ ನಾವಿಂದು ಕಳಕೊಂಡೀವಿ. ಅದು ಕೂಡಾ ಸಿಗ್ತಾ ಇಲ್ಲ.

ಗದ್ದಗಿಮಠರು ಕೇವಲ ಹಾಡುಗಳನ್ನು ಸಂಗ್ರಹ ಮಾಡಲಿಲ್ಲ. ಹಾಡುಗಳನ್ನ ಬರದ್ರು. ಹಾಡುಗಳನ್ನು ಹಾಡಿದ್ರು. ಅವರಿಗೆ ಇತಿಹಾಸದ ಬಗ್ಗೆ ಎಷ್ಟೊಂದು ಗಾಢವಾದ ಆಸಕ್ತಿ, ತಿಳುವಳಿಕೆ ಇತ್ತು ಅನ್ನೋದಕ್ಕೆ ಅವರು ಬಾದಾಮಿ ಚಾಲುಕ್ಯರನ್ನು ಕುರಿತು ಬರೆದ ಇನ್ನೂರು ಪುಟದ ಹಸ್ತ ಪ್ರತಿ ಸಾಕ್ಷಿ. ಅದು ಕೂಡ ಇಂದು ಎಲ್ಲಿ ಹೋತೋ ಗೊತ್ತಿಲ್ಲ. ಇನ್ನೂರು ಪುಟ ಬರೀಬೇಕಾದ್ರೆ ಎಷ್ಟೊಂದು ಆಸಕ್ತಿಯಿಂದ ಕ್ಷೇತ್ರ ಕಾರ್ಯ ಮಾಡಿರಬೇಕು. ಆ ದೇವಾಲಯಗಳ ಬಗ್ಗೆ, ಚರಿತ್ರೆಯ ಬಗ್ಗೆ ಹ್ಯಾಗೆ ವಿಷಯ ಸಂಗ್ರಹ ಮಾಡಿರಬೇಕು ಅನ್ನೋದು ಗಮನಿಸುವಂತಹದ್ದು. ಅವರ ಒಂದು ಲೇಖನ ಗಮನಿಸಿದಾಗ ಇತಿಹಾಸ ಅಧ್ಯಯನದಲ್ಲಿಯೂ ಜಾನಪದ ದೃಷ್ಟಿ ಹ್ಯಾಗಿತ್ತು ಅನ್ನೋದು ಗೊತ್ತಾಗುತ್ತ.

ಶಿಲಾಶಾಸನ, ಕಲ್ಲುಗಳ ಬಗ್ಗೆ ಅವರು ತಮ್ಮದೇ ಆದಂತಹ ಪರಿಭಾಷೆಯಲ್ಲಿ ಹೇಳಿದರು. ನದಿಗಲ್ಲು, ಹಿಡಗಲ್ಲು, ಒಂಟಿಗಲ್ಲು, ಗೋರಿಕಲ್ಲು, ಗ್ಯಾಡಿಕಲ್ಲು, ನಾಡಗಲ್ಲು, ಬೋರಗಲ್ಲು ಹೀಗೆ ತಮ್ಮದೇ ಆದ ಪರಿಭಾಷೆ ಬಳಸಿಕೊಂಡು ಇತಿಹಾಸ ಅಧ್ಯಯನ ಮಾಡಿದ್ರು ಅನ್ನೊದನ್ನ ನಾವು ನೋಡತೀವಿ.

ನಮ್ಮ ಅಧ್ಯಯನ ಪರಿಪೂರ್ಣ ಆಗಬೇಕಾದ್ರ, ಆಳವನ್ನು ಪಡಿಬೇಕಾದ್ರ ಆಕರಗಳು ಎಷ್ಟು ವಿಪುಲವಾಗಿ ನಮಗ ದೊರಿತಾವೋ ಅಷ್ಟು ನಮ್ಮ ಅಧ್ಯಯನ ಪರಿಪೂರ್ಣತೆಯತ್ತ ಸಾಗುತ್ತದೆ. ಆದಕಾರಣ ಜನಪದ ಅಧ್ಯಯನಕ್ಕ ಮೂಲ ಆಕರಗಳನ್ನ ನಾವು ಸಂಗ್ರಹಿಸುವ ಕೆಲಸ ಎಚ್ಚರದಿಂದ ಕೈಕೊಳ್ಳಬೇಕು ಅನಿಸುತ್ತದೆ. "ಜಾನಪದವನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಬೇಕು. ಮುಗ್ಧ ರೀತಿಯಿಂದ ವಿಮರ್ಶೆ ಮಾಡುತಾ ಬಂದಾಗಿದೆ" ಅನ್ನೋದು ಕೇಳಿ ಬರುತ್ತದೆ. ವೈಜ್ಞಾನಿಕ ದೃಷ್ಟಿಯ ಅಧ್ಯಯನ ನಮಗ ಬೇಕು. ಅದರ ಜೊತೆಗೆ ಮೂಲ ಆಕರಗಳನ್ನು ನಾವು ನಿರ್ಲಕ್ಷ್ಯ ಮಾಡಬಾರದು.

ಇಂದು ನಮ್ಮ ಜಾನಪದ ಅಧ್ಯಯನಕ್ಕ ದೇಶೀಯ ನೆಲಗಟ್ಟು ಬೇಕು ಅನ್ನೋ ಹಂಬಲ ತೀವ್ರವಾಗಿದೆ.

ನಮ್ಮ ವೀರಣ್ಣ ದಂಡೆಯವರು ಜನಪದ ಕಾವ್ಯಮಿಮಾಂಸೆ ಅಂತಲೇ ಇಪ್ಪತ್ತು ವರ್ಷಗಳಿಂದ ಬರಿತಾ ಇದ್ದಾರೆ. ಅದರ ಬಗ್ಗೆ ಪ್ರತಿಪಾದನೆ ಮಾಡ್ತಾನೇ ಇದ್ದಾರೆ. ಅದರ ಬಗ್ಗೆ ಹೆಚ್ಚು ಚರ್ಚೆನೇ ನಡೆದಿಲ್ಲ. ಜಾನಪದ ಕಾವ್ಯ ಮಿಮಾಂಸೆ ಅಂದರೆ ನಮಗೆ ಗೊತ್ತಿರೋ ಕಾವ್ಯ ಮಿಮಾಂಸೆಗಿಂತ ಭಿನ್ನವಾದದ್ದು. ಯಾಕಂದರ ಮಾರ್ಗ ಸಾಹಿತ್ಯ ಹುಟ್ಟಿದ, ಬೆಳೆದ, ರಚನೆಗೊಂಡ ಹಿನ್ನೆಲೆ ಅದಕ್ಕ ಇರುವಂತಹ ಸಾಂಸ್ಕೃತಿಕ ಬದುಕು ಬೇರೆ; ಜನಪದ ಸಾಹಿತ್ಯಕ್ಕ ಇರೋ ಬದುಕು ಬೇರೆ. ಮಾರ್ಗದ ಮಾನದಂಡ ಗಳನ್ನು, ಸಿದ್ಧಾಂತಗಳನ್ನು ಜಾನಪದಕ್ಕೆ ಏಕೆ ಅಪ್ಲೈ ಮಾಡಬೇಕು. ಇವೆಲ್ಲ ನೋಡಿದಾಗ ಈ ಆಕರಗಳನ್ನೆಲ್ಲ ಜಾಲಾಡಿಸಿದಾಗ, ವಿಶ್ಲೇಷಣೆ ಮಾಡಿದಾಗ ನಮ್ಮದೇ ಆದಂತಹ ಸಿದ್ಧಾಂತಗಳನ್ನು ಪ್ರತಿಪಾದನೆ ಮಾಡಿಕೊಳ್ಳುವಂತಹ ಒಂದು ಅವಶ್ಯಕತೆ ಇದೆ.

ನಾವಿಂದು ಗದ್ದಗಿಮಠರ ಪರಂಪರೆಯ ಮುಂದುವರೆದ ಭಾಗವಾಗಬೇಕಿದ್ರೆ ಜನಪದ ಸಾಹಿತ್ಯವನ್ನು ಇನ್ನೂ ವಿಮಲವಾಗಿ ಸಂಗ್ರಹ ಮಾಡಿ ವಿಶ್ಲೇಷಣೆ ಮಾಡಬೇಕು. ಅದಕ್ಕೆ ಇರತಕ್ಕಂತಹ ಸಾಂಸ್ಕೃತಿಕ ಹಿನ್ನೆಲೆ ಅರ್ಥಮಾಡಿಕೊಂಡು ನಮ್ಮದೇ ಆದಂತಹ ಸಿದ್ಧಾಂತಗಳನ್ನು ರೂಪಿಸಿಕೊಳ್ಳೋದು ಸಾಧ್ಯ ಇದೆ. ಅದು ಇವತ್ತು ಅವಶ್ಯ ಇದೆ ಅಂತ ನನಗನಿಸುತ್ತೆ.

ಗದ್ದಗಿಮಠರು ತಮ್ಮ ಥೀಸಿಸ್ ಕೊನೆಗೆ ಒಂದು ಮಾತು ಹೇಳಿದ್ದಾರೆ "ನಮಗೆ ಜೀವನ ವಿಕಾಸದ ಹೊಸ ಹುಮ್ಮಸ್ಸು ಬರಬೇಕಾದರೆ ನಮ್ಮ ಸಂಸ್ಕೃತಿ ಒಡಮೂಡಿದ, ಜಾನಪದ ಸಾಹಿತ್ಯದ ಅರಿವು ನಮಗ ಬೇಕೇ ಬೇಕು. ಅದು ನಮ್ಮ ಸಂಸ್ಕೃತಿಯನ್ನು ನಾಡಿ ನಾಡಿಯಲ್ಲಿ ಹರಿಸಿ ನಮ್ಮ ಜೀವನಕ್ಕೆ ಹೊಸ ಬೆಳಕು ತಂದು ಕೊಟ್ಟಿದ್ದಾದರೆ ಅಂದೇ ಭರತಖಂಡದ ಭಾಗ್ಯೋದಯ" !! ಸಂಸ್ಕೃತಿಯ ಪರಂಪರೆ, ಸಂಸ್ಕೃತಿಯ ಅಧ್ಯಯನ, ಸಂಸ್ಕೃತಿಯ ಆರಾಧನೆಯಿಂದ ಮಾತ್ರ ಒಂದು ದೇಶ ಗುರುತಿಸಲ್ಪಡುತ್ತೆ, ಒಂದು ದೇಶದ ಅಭಿವೃದ್ಧಿ ಅಂದ್ರ ಅಲ್ಲಿಯ ಸಂಸ್ಕೃತಿಯ ಬೆಳವಣಿಗೆ ಅಂತ ಹೇಳಿ ತಮ್ಮೆಲ್ಲರಿಗೂ ನಮಸ್ಕರಿಸಿ ನನ್ನ ಮಾತುಗಳನ್ನು ಮುಗಿಸ್ತೀನಿ.

❖

# ಪ್ರಾಸ್ತಾವಿಕ ಭಾಷಣ

ಡಾ. ಎ. ಮುರಿಗೆಪ್ಪ

◆

ಬಂಧುಗಳೇ,

ನಾನು ಭಾಷಣ ಮಾಡಲಿಕ್ಕೆ ಹೋಗೋದಿಲ್ಲ ಒಂದೆರಡು ಮಾತು ಮಾತ್ರ. ಈ ವೇದಿಕೆಯಲ್ಲಿ ಪ್ರತಿ ಸಂದರ್ಭದಲ್ಲಿರೋ ಸದಸ್ಯರಿಗೂ ಇವತ್ತಿರತಕ್ಕಂತಹ ಸದಸ್ಯರಿಗೂ ಬೇರೆ ಕಾಣತಾ ಇದೆ. ನಮ್ಮ ವಿದ್ಯಾರ್ಥಿಗಳು ಪರೀಕ್ಷಾ ಸಂದರ್ಭದಲ್ಲಿಯೂ ಬಂದಿರೋದು, ಹೊರಗಿನಿಂದ ಇಷ್ಟೊಂದು ವಿದ್ವಾಂಸರು ಬಂದಿರೋದು, ಸಭೆ ತುಂಬಿರೋದು ನೋಡಿದಾಗ ಗದ್ದಗಿಮಠರ ಬಗ್ಗೆ ಇರೋ ಗೌರವ ಎಷ್ಟೊಂದು ಅನ್ನೋದು ತಿಳಿದು ಬರುತ್ತೆ.

ಇದೇ ಗೌರವ ಭಾವನೆ ಹೊಂದಿದ ಗವೀಶ ಹಿರೇಮಠರು ನಾನು ಕನ್ನಡ ಅಧ್ಯಯ ಪೀಠದ ಅಧ್ಯಕ್ಷನಾಗಿದ್ದಾಗ ಈ ವಿಚಾರ ಸಂಕಿರಣ ನಡೆಸೋದರ ಬಗ್ಗೆ ಕೇಳಿದರು. ನಾನು ಕೂಡ ಅಷ್ಟೇ ಗೌರವ ಭಾವನೆಯಿಂದ, ಪ್ರೀತಿಯಿಂದ ಒಪ್ಪಿಕೊಂಡಿದ್ದೆ. ಇಷ್ಟೆಲ್ಲ ಜನರ ಪ್ರೀತಿ ಗೌರವ ಭಾವನೆಗಳಿಂದಲೇ ಈ ಕಾರ್ಯಕ್ರಮ ಇವತ್ತು ಇಷ್ಟೊಂದು ಯಶಸ್ವಿಯಾಗಿ ಮುಂದುವರೆದುಕೊಂಡು ಹೋಗ್ತಾ ಇದೆ ಅಂತ ನಾನು ಭಾವಿಸಿದ್ದೀನಿ.

ಇವತ್ತು ಆಧುನಿಕ ಜಗತ್ತು ಆವಿಷ್ಕಾರಗಳ ಪ್ರಭಾವದಿಂದಾಗಿ ನಾವು ಜನಪದವನ್ನು ಕಳೆದುಕೊಳ್ಳತಾ ಇದ್ದೀವಿ ಅದೇನಾದ್ರೂ ಉಳಕೊಂಡಿದ್ದರ ಗದ್ದಗಿಮಠ, ಹಲಸಂಗಿ ಗೆಳೆಯರ, ನಾಗೇಗೌಡರ, ಖಿರೀಮಖಾನರಂತಹ ಸಂಗ್ರಹ ಕಾರ್ಯದಿಂದ; ಅವರು ಕೊಟ್ಟ ಕೃತಿಗಳಿಂದ ಉಳಕೊಂಡು ಮುಂದುವರೆದುಕೊಂಡು ಹೋಗಲಿಕ್ಕೆ ಸಾಧ್ಯವಾಗಿದೆ.

ಖಿರೀಮಖಾನರು ಸಿನಿಮಾ ಮಾಧ್ಯಮದಲ್ಲಿಯೂ ಜಾನಪದ ಸಾಹಿತ್ಯ ಬಳಸಿಕೊಳ್ಳುವುದರ ಮೂಲಕ ಸೃಜನಾತ್ಮಕವಾಗಿ ಸಿನಿಮಾ ಮಾಡಿದರು. ಆದರೆ ಎಂದೂ ಜಾನಪದ ರಂಗವನ್ನು ಕಲಂಕಿತಗೊಳಿಸಲಿಲ್ಲ. ಅಂತಹ ಕೆಲಸ ಅವರು ಮಾಡಲಿಲ್ಲ. ಇದರಿಂದ ಜನಪದ ರಂಗದ ಮೇಲಿದ್ದ ಅವರ ಅಪಾರ ಗೌರವ ಸ್ಪಷ್ಟ ಆಗುತ್ತೆ. ಇವತ್ತಿನ

ದಿನಮಾನಗಳಲ್ಲಿ ನಾವು ಸಿನಿಮಾ ನೋಡತಾ ಬಂದಾಗ ಅಲ್ಲಿ ಜಾನಪದವನ್ನು ಬಳಸಿಕೊಳ್ಳೋ ರೀತಿ ನಿಜವಾಗಿಯೂ ಖೇದ ಅನಿಸುತ್ತೆ. ಎಲ್ಲೋ ಎಕ್ಸ್ಟ್ರಾ ಡಾನ್ಸ್ ಬಳಸಿಕೊಳ್ಳೋ ರೀತಿಯಲ್ಲಿ ಯಕ್ಷಗಾನ ವೇಷ ಹಾಕಿ ಕುಣಿಸೋದನ್ನ ನೋಡಿದಾಗ ಕೆಟ್ಟ ಅನಿಸುತ್ತೆ ಇದಕ್ಕೆ ಪ್ರತಿಭಟನೆ ಅವಶ್ಯ ಅಂತ ನಾ ತಿಳಕೊಂಡೀನಿ.

ಸಾಂಸ್ಕೃತಿಕವಾದ ಕಾಳಜಿ ನಮಗೆ ಬರಬೇಕು. ಒಂದು ಸಿನಿಮಾಕ್ಕೆ ಹುಬ್ಬಿ ಅಂತ ಹೆಸರಿಟ್ಟಾಗ ಅದು ಹುಬ್ಬಿ ಅಲ್ಲ ಹುಬ್ಬಳ್ಳಿ ಎನ್ನೋದನ್ನ ತಿಳಿಸಿ ಪ್ರತಿಭಟಿಸಿದಾಗ ಅದನ್ನ ಹುಬ್ಬಳ್ಳಿ ಅಂತ ಬದಲಾವಣೆ ಮಾಡಿಕೊಂಡರು. ಹಾಗೇನೇ ಇನ್ನುಳಿದ ಸಂದರ್ಭಗಳಲ್ಲಿ ನಾವು ಪ್ರತಿಭಟನೆ ತೋರಿಸಬೇಕಂತ ನಾನಿಲ್ಲಿ ಹೇಳಲಿಕ್ಕೆ ಇಚ್ಛೆ ಪಡತೀನಿ. ಇದರ ಜೊತೆಗೆ ನ್ಯಾಶನಲ್ ಲೇವಲ್ಲಿನಲ್ಲಿ ಯೋಚನೆ ಮಾಡಿದಾಗ ಕರ್ನಾಟಕಕ್ಕೆ ಯಾವುದೇ ರೀತಿಯ ಐಡೆಂಟಿಟಿ ಇದೆ ಅನ್ನೋದು ಇವತ್ತಿಗೂ ಕೂಡ ಕಂಡ ಬರತಾ ಇಲ್ಲ. ಇವತ್ತು ತಮಿಳನಾಡು ಅಂದ ಕೂಡಲೇ ಭರತ ನಾಟ್ಯ ಅಂತೀವಿ, ಕೇರಳ ಅಂದ ಕೂಡ್ಲೆ ಕಥಕ್ ಅಂತ ಹೇಳತೀವಿ ಆದರೆ, ಕರ್ನಾಟಕಕ್ಕೆ ಇಂಥ ಐಡೆಂಟಿಟಿ ಇಲ್ಲ.

ನ್ಯಾಶನಲ್ ಲೇವಲ್ಲಿನಲ್ಲಿ ಗುರುತಿಸಿಕೊಳ್ಳುವಂತಹ ಅನೇಕ ಪ್ರತಿಭೆಗಳಿವೆ. ಆದರೆ, ನಮ್ಮದೇ ಆದಂತಹ ಪ್ರಕಾರ ನಮಗಿಲ್ಲ ಅನ್ನೋದು ಖೇದದ ಸಂಗತಿ ಆಗುತ್ತೆ. ಇವತ್ತು ರಾಜಕೀಯ ಕಿತ್ತಾಟ, ಹಗರಣಗಳಿಂದ ನಾವು ಗುರುತಿಸಿಕೊಂಡಿದ್ದೇವೆಯೇ ಹೊರತು ಕಲಾ ಪ್ರಕಾರಗಳಿಂದ ಅಲ್ಲ. ಅದು ಆಗಬೇಕೆನ್ನುವ ಆಸೆಯನ್ನು ನಾನಿಲ್ಲಿ ವ್ಯಕ್ತ ಪಡಿಸುತ್ತ ಆ ದೃಷ್ಟಿಯಿಂದ ನಾವು ಜಾನಪದವನ್ನು ಪ್ರತಿಬಿಂಬಿಸುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕಾಗೇದ ಅಂಥ ಜಾಗ್ರತೆಯನ್ನು ಇನ್ನು ಮುಂದೆ ನಾವು ಹೊಂದಬೇಕಾಗಿದೆ ಅಂತ ಹೇಳಿ ನನ್ನನ್ನು ಅತಿಥಿಯಾಗಿ ಕರೆದು ಗೌರವಿಸಿದ್ದಕ್ಕೆ ಕೃತಜ್ಞತೆ ಹೇಳತಾ ನನ್ನೆರಡು ಮಾತು ಮುಗಿಸುತ್ತೇನೆ.

❖

# ನೆನಹು-ನಮನ

ಶ್ರೀಮತಿ ಉಷಾ ಗದ್ದಗಿಮಠ

◆

ಸರ್ವರಿಗೂ ಸಾದರಪೂರ್ವಕ ಪ್ರಣಾಮಗಳು. ನಾನು ಉಷಾ ಗದ್ದಗಿಮಠ, ಪೂಜ್ಯ ದಿ. ಡಾ. ಬಿ. ಎಸ್. ಗದ್ದಗಿಮಠರ ಹಿರಿಯ ಸೊಸೆ. ನನ್ನ ಪತಿ, ಶ್ರೀ ಬಾಬಣ್ಣ ಗದ್ದಗಿಮಠ, (ಸಾವಳಿಗೆಯ್ಯ ಗದ್ದಗಿಮಠ) ಡಾ. ಬಿ. ಎಸ್. ಗದ್ದಗಿಮಠರ ಹಿರಿಯ ಚಿರಂಜೀವಿ, ಕಾರಣಾಂತರಗಳಿಂದ ಈ ಸಮಾರಂಭದಲ್ಲಿ ಉಪಸ್ಥಿತರಿಲ್ಲ. ಆದರೆ ಪೂಜ್ಯರಾದ ನಮ್ಮ ಮಾವನವರ ಬಗ್ಗೆ ಒಂದೆರಡು ನುಡಿ ನಮನವನ್ನು ನಾನು ಸಲ್ಲಿಸಬೇಕೆಂಬುದು ಅವರ ಇಚ್ಛೆ. ನಮ್ಮ ಮಾವನವರನ್ನು ನೋಡುವ ಸುಯೋಗ ನನಗೆ ಒದಗಿ ಬರಲಿಲ್ಲ. ಆದರೆ ನನ್ನ ಪತಿಯ ಬಾಯಿಂದ ಅವರ ಬಗ್ಗೆ ಕೇಳುವಾಗಲೆಲ್ಲ ಅವರ ಭವ್ಯ ವ್ಯಕ್ತಿತ್ವ ಕಣ್ಣಿಗೆ ಕಟ್ಟುತ್ತೆ. ಅವರ ಸಾಹಿತ್ಯಾಭ್ಯಾಸ, ಸಂಶೋಧನೆ ಎಷ್ಟು ವಿಶಾಲವಾಗಿತ್ತೋ ಅವರ ವ್ಯಕ್ತಿತ್ವ ಕೂಡ ಅಷ್ಟೇ ಭವ್ಯವಾಗಿತ್ತು ಅಂತ ನಾನು ಭಾವಿಸಿದ್ದೇನೆ.

"A Sound mind in a Sound body", ಇದು ಸರ್ವವಿದಿತ; ಇದು ಕಂಡು ಬರುವುದು ಕೆಲವೇ ಜನರಲ್ಲಿ. ಸಾಹಿತ್ಯ ಸಮೃದ್ಧಿ ಹಾಗೂ ಶಾರೀರಿಕ ಸಂಪತ್ತು ಇವೆರಡೂ ಒಂದೇ ವ್ಯಕ್ತಿಯಲ್ಲಿ ಕಂಡು ಬರುವುದು ವಿರಳ. ಇವೆರಡನ್ನೂ ಮೇಳೈಸಿಕೊಂಡ ಅಪೂರ್ವ ಸಾಹಿತಿ, ಸಂಶೋಧಕ ನಮ್ಮ ಮಾವನವರು, 'ಖಾಂದೇವಾಲಿಯ ಪೈಲ್ವಾನ್'ರೆಂದು ಪ್ರಸಿದ್ಧರಾದವರು.

ಬಾಲಕರಿದ್ದಾಗಲೇ ಬೆಳುವಲದ ಹಳ್ಳಿಯ ಸ್ವಚ್ಛಂದ ಪರಿಸರದಲ್ಲಿ ತುಂಟತನ ಮಾಡುತ್ತಾ ಬೆಳೆದು ದೇಹದಾರ್ಢ್ಯವನ್ನು ಸಂಪಾದಿಸಿಕೊಂಡರು. ವಿಪುಲ ಸಾಹಿತ್ಯ ಸಮೃದ್ಧಿ ಹೊಂದಿದ ಮನೆಯ ವಾತಾವರಣದಲ್ಲಿ ಬೆಳೆದು ಜಾನಪದ ಸಾಹಿತ್ಯ ಸಂಶೋಧನೆಯನ್ನು ಹಮ್ಮಿಕೊಂಡರು. ಸಾರಿಗೆ ಸಂಪರ್ಕವಿರದ ಆ ದಿನಗಳಲ್ಲಿ ಹಗಲಿರುಳು ಎನ್ನದೇ ಹಳ್ಳಿ ಹಳ್ಳಿಗಳನ್ನು ಸುತ್ತಾಡಿ ಜಾನಪದ ಸಾಹಿತ್ಯ ಸಂಕಲನಕ್ಕೆ ಸ್ಪಂದಿಸಿದುದು ಅವರ ದೇಹ ಸಂಪತ್ತು. ಕಟ್ಟು ಮಸ್ತಾದ ದೇಹ, ದೃಢವಾದ ಮನಸ್ಸು,

ಸಾಧಿಸುವ ಛಲ, ಕಂಚಿನಂತಹ ಕಂಠ ಇವೆಲ್ಲವೂ ಅವರ ವ್ಯಕ್ತಿತ್ವದ ಹಿರಿಮೆ. ಅಚ್ಚುಕಟ್ಟಾದ ಶಿಸ್ತಿನ ಜೀವನ, ಖಂಡಿತವಾದ ಸ್ಪಷ್ಟ ನಿಲುವು, ಅಪೂರ್ವವಾದ ತೇಜಸ್ಸನ್ನು ಹೊಂದಿದ ಅವರ ವ್ಯಕ್ತಿತ್ವಕ್ಕೆ ಅವರ ದೇಹ ಸಂಪತ್ತು ಒಂದು ಮೆರುಗು.

ಉದಾತ್ತವಾದ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದ ಡಾ. ಬಿ. ಎಸ್. ಗದ್ದಗಿಮಠರು ನಿತ್ಯ ಜೀವನದಲ್ಲಿ ಸಿಕ್ಕ ಸ್ವಾತಂತ್ರ್ಯವನ್ನು ಸ್ವೇಚ್ಛಾ ವೃತ್ತಿಯೆಂದು ಪರಿಗಣಿಸಬಾರದೆಂದು ನಂಬಿದ್ದರು. ಇಲ್ಲಿ "ಸ್ವಾತಂತ್ರ್ಯ"ಎಂದ ಕೂಡಲೇ ಒಂದು ಘಟನೆಯನ್ನು ಉಲ್ಲೇಖಿಸಬೇಕು. ನಮ್ಮ ಮಾವನವರು ದೈವಾಧೀನರಾದಾಗ ನಮ್ಮ ಮನೆಯವರಿಗೆ ಕೇವಲ ಹತ್ತು ವರ್ಷ ಮುಗಿದು ಹನ್ನೊಂದನೇಯ ವರ್ಷ ನಡೆಯುತ್ತಿತ್ತು. ಶಾಲೆಯಲ್ಲಿ ಸ್ಪರ್ಧೆಯೊಂದರಲ್ಲಿ ಭಾಗವಹಿಸ ಬಯಸಿ ತಂದೆಯವರಲ್ಲಿಗೆ ಬಂದು "ಅಪ್ಪಾಜಿ, ನಮ್ಮ ಶಾಲೆಯಲ್ಲಿ "ಸ್ವಾತಂತ್ರ್ಯ ಕರ್ನಾಟಕ" ದ ಬಗ್ಗೆ ಭಾಷಣ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ನನಗೆ ಭಾಷಣ ಬರೆದುಕೊಡಿರಿ" ಎಂದು ಕೇಳಿಕೊಂಡಾಗ ಮಗನಿಗೆ ಈ ರೀತಿಯಾಗಿ ಸ್ವತಂತ್ರ ಕರ್ನಾಟಕದ ಬಗ್ಗೆ ಬರೆದು ಕೊಟ್ಟರು. ಸುವರ್ಣ ಕರ್ನಾಟಕದ ಈ ಸಂದರ್ಭದಲ್ಲಿ ಅಂದು ಅವರು ಸ್ವತಂತ್ರ ಕನ್ನಡಿಗರಿಗೆ ನೀಡಿದ ಸಂದೇಶವನ್ನು ಇಲ್ಲಿ ನಿಮ್ಮೆದುರಿಗೆ ಪ್ರಸ್ತುತ ಪಡಿಸ ಬಯಸುತ್ತೇನೆ.

"ಸ್ವಾತಂತ್ರ್ಯ ಕನ್ನಡಿಗರಿಗೆ, ಜನಾಂಗವನ್ನು ಬೆನ್ನಿಗೆ ಕಟ್ಟಿಕೊಂಡು ಬಾಳು ನಡೆಸಿದ ಮಾನವನಿಗೆ ಸ್ವಾತಂತ್ರ್ಯವು ಸ್ವೇಚ್ಛಾ ವೃತ್ತಿಯಲ್ಲ. ಅದು ಅವನ ಜೀವನದ ಮೂಲ ಸಾಧನ; ಮಾನವ ಪ್ರಗತಿಗೆ ಜೀವನ ಸೋಪಾನ, ಅದರಲ್ಲಿ ರೀತಿಯಿದೆ; ನೀತಿಯಿದೆ; ವಿಚಾರವಿದೆ; ಆಚಾರವಿದೆ ಇವನ್ನೆಲ್ಲನೊಳಗೊಂಡ ಕಾಯಕ–ದಾಸೋಹ–ಅನುಭಾವ–ಅರ್ಪಣೆಯ ಬಂಧುರವಾದ ಚೌಕಟ್ಟಿದೆ. ಈ ಎಂಟೂ ಸ್ವಾತಂತ್ರ್ಯವನ್ನು ಕಾಯುವ ಅಷ್ಟ ದಿಗ್ಗಜಗಳಿದ್ದಂತೆ ! ಇದರಲ್ಲಿ ಒಂದು ಪತನವಾದರೆ, ಸ್ವಾತಂತ್ರ್ಯದ ಕಟ್ಟೇ ಸಡಿಲಾಗಿ ಹಾಹಾಕಾರ ವೇಳುವುದು.

ನನ್ನತನವು ಸ್ವಾತಂತ್ರ್ಯದ ಉಸಿರಾದರೆ ವಿಶ್ವ ಬಂಧುತ್ವವು ಅದರ ಜೀವಾಳ. ಇಂದಿನ ನಮ್ಮ ಬಾಳು ನಿನ್ನಿನ ನಮ್ಮ ಜೀವನದ ಮೇಲೆ ನಿಂತಿದೆ. ನಾಳಿನ ಬಾಳು ಇಂದಿನ ನಮ್ಮ ಜೀವನವನ್ನು ಅವಲಂಬಿಸಿದೆಯೆಂಬುದನ್ನು ಯಾವ ಮಾನವನೂ ಮರೆಯಕೂಡದು. ಅದನ್ನು ಮರೆತರೆ ಸ್ವಾತಂತ್ರ್ಯ ಯುಗದಲ್ಲಿ ಅವನು ಮಾನವನಾಗಲಾರ.

ವಿಶ್ವ ಸೃಷ್ಟಿಯಲ್ಲಿ ಸ್ವಾತಂತ್ರ್ಯವು ಗಾಳಿಯಾಗಿ ಸದಾ ಬೀಸುತ್ತಿದೆ. ಅಂತೆಯೇ ಪಶು–ಪಕ್ಷಿ–ಜೀವನದಲ್ಲಿ ಸ್ವಾತಂತ್ರ್ಯವು ಮನೆಯಾಗಿ ನಿಂತಿದೆ. ಅಂದ ಮೇಲೆ ಸೃಷ್ಟಿಯ ಅಣುವಾದ ಮಾನವನಿಗೆ ಸ್ವಾತಂತ್ರ್ಯವು ಬೇಡವೇ?

ಸ್ವಾತಂತ್ರ್ಯವೇ ಬಾಳು; ಪರತಂತ್ರವೇ ಬೀಳು, ದಾಸ್ಯವೇ ದೇಶಕ್ಕೆ ಗೋಳು ಎಂಬುದೇ ಮಾನವ ಜನಾಂಗದ ಇತಿಹಾಸವು. ಸ್ವಾತಂತ್ರವು ಜೀವನದ ಉಸಿರಾಗಲಿ. ಜನಾಂಗದ ಸಂಸ್ಕೃತಿಯ ಬೆಳಕು ವಿಶ್ವದಲ್ಲಿ ತೇಲಲಿ. ಸ್ವಾತಂತ್ರ್ಯಕ್ಕೆ ಜಯವಾಗಲಿ."

ಈ ರೀತಿಯಾಗಿ ಡಾ. ಬಿ. ಎಸ್. ಗದ್ದಗಿಮಠ ಅವರು ತಮ್ಮ ಮಗನಿಗೆ ಭಾಷಣ ಬರೆದು ಕೊಟ್ಟಿದ್ದರು. ಇಂಥ ಪಾವನವಾದ ಆಚಾರ, ವಿಚಾರಗಳನ್ನು ಹೊಂದಿದ ಮಹಾನ್ ಚೇತನ ನಮ್ಮ ಮಾವನವರಿದ್ದರೆಂದು ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದೇನೆ. ಅವರೇ ಒಂದು ಕಡೆ ಹೇಳಿಕೊಂಡಿದ್ದಾರೆ, "ನನ್ನ ಆತ್ಮಾನಂದದ ಸ್ವಾರ್ಥಕ್ಕಾಗಿ ಸಾಹಿತ್ಯ-ಸಂಸ್ಕೃತಿ-ಸಂಶೋಧನೆಗೆ ಹಾತೊರೆಯುತ್ತಿದ್ದೇನೆ, ಉತ್ತಮವೆಂಬುದರಲ್ಲಿ ಜೀವನ ಹಂಗು ಬಿಟ್ಟು ಸಹಕರಿಸುವುದೇ ನನ್ನ ಉಸಿರಾಗಿದೆ." ಅಂತ.

ಹೀಗೆ ಇಂಥ ವಿಶಾಲ ಜೀವನ ದೃಷ್ಟಿಯನ್ನು ಹೊಂದಿದ, ಮಹಾನ್ ವ್ಯಕ್ತಿಯಾದ ಡಾ. ಬಿ. ಎಸ್. ಗದ್ದಗಿಮಠರನ್ನು (ನಮ್ಮ ಮಾವರನ್ನು) ಕೆಲವೇ ವಾಕ್ಯಗಳಲ್ಲಿ ತಮಗೆ ಪರಿಚಯಿಸಿ, ಆ ಅದ್ಭುತ ಚೇತನಕ್ಕೆ ನಮ್ಮ ಇಡೀ ಕುಟುಂಬದ ಪರವಾಗಿ ಅತ್ಯಂತ ಭಕ್ತಿ ಪೂರ್ವಕವಾಗಿ ; ಗೌರವ ಪೂರ್ವಕವಾಗಿ "ಶ್ರದ್ಧಾಂಜಲಿ"ಯನ್ನು ಅರ್ಪಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ. ಧನ್ಯವಾದಗಳು.

❖

# ಅಧ್ಯಕ್ಷೀಯ ಭಾಷಣ

ಡಾ. ಬಿ. ಆರ್. ಹಿರೇಮಠ

◆

ಈಗಾಗಲೇ ಸಮಯ ಬಹಳವಾಗಿದೆ. ೧೨.೩೦ಕ್ಕೆ ನಮ್ಮ ಮೊದಲನೇ ವಿಚಾರ ಗೋಷ್ಠಿ ಪ್ರಾರಂಭವಾಗಬೇಕಿತ್ತು. ಒಂದೂವರೆ ಘಂಟೆಯಾಗಿದೆ. ಹೀಗಾಗಿ ಹೆಚ್ಚಿಗೆ ಮಾತಾಡದೇ ಎರಡೇ ಎರಡು ಮಾತು ಹೇಳಲಿಕ್ಕಿಷ್ಟ ಪಡತೀನಿ.

ಸಮಾರಂಭದಲ್ಲಿ ದಿ. ಡಾ|| ಬಿ. ಎಸ್. ಗದ್ದಗಿಮಠ ಅವರನ್ನು ಕುರಿತು ಆಶಯ ಭಾಷಣ ಮಾಡತಾ ಡಾ|| ಬಸವರಾಜ ಮಲಶೆಟ್ಟಿಯವರು ಬಹಳ ಉಪಯುಕ್ತವಾದಂತಹ ಮಾತುಗಳನ್ನಾಡಿದ್ದಾರೆ. ಜನಪದ ಕ್ಷೇತ್ರದಲ್ಲಿ ಇವತ್ತು ಆಗಬೇಕಾದಂತಹ ಮೊಟ್ಟ ಮೊದಲಿನ ಕೆಲಸ ಅಂದರೆ, ಆಕರ ಶೋಧನೆ. ಈ ಆಕರ ಶೋಧನೆಯನ್ನು ಪ್ರಾರಂಭಿಸಿದವರು ಹಲಸಂಗಿ ಗೆಳೆಯರು, ನಂತರ ಡಾ|| ಗದ್ದಗಿಮಠರು. ನಾವು ಗ್ರಂಥ ಸಂಪಾದನೆಯಲ್ಲಿ ಕೂಡ ವಿವಿಧ ಘಟ್ಟಗಳನ್ನು ಶಿಷ್ಟ ಸಾಹಿತ್ಯದಲ್ಲಿ ಗುರುತಿಸುತ್ತೀವೆ. ಅದೇ ರೀತಿ ಜಾನಪದ ಸಾಹಿತ್ಯದ ಸಂಪಾದನೆಯಲ್ಲಿ ಕೂಡ ಹಲಸಂಗಿ ಗೆಳೆಯರಿಗೆ ಯಾವ ಸ್ಥಾನ ಇದೆಯೋ ಅದೇ ಸ್ಥಾನ ಗದ್ದಗಿಮಠರಿಗಿದೆ.

ಗದ್ದಗಿಮಠರು ಪ್ರಾರಂಭ ಮಾಡಿದ್ದು, ಆಕರ ಶೋಧನೆಯನ್ನು, ಆಕರಗಳನ್ನು ಸಂಗ್ರಹಿಸಿ ಅವುಗಳ ಅಧ್ಯಯನ ಮಾಡಿ, ವಿಶ್ಲೇಷಣೆ ಮಾಡಿ ನಮಗೆ ಕೊಟ್ಟರು. ಇದಕ್ಕೆ ನಾನೊಂದು ಹೋಲಿಕೆ ಕಂಡಕೊಂಡದ್ದೀನಿ. ಫ. ಗು. ಹಳಕಟ್ಟಿಯವರಿಗೂ ಗದ್ದಗಿಮಠರಿಗೂ ನಾನು ಭಾಳ ಸಾಮ್ಯವನ್ನು ಕಾಣತೀನಿ. ಹಳಕಟ್ಟಿಯವರು ಇದ್ದಾಗೇನೂ ಸುಖ–ಸಂತೋಷ ಕಾಣಲಿಲ್ಲ. ಯಾವ ಪ್ರಶಸ್ತಿ ಪುರಸ್ಕಾರ ಉಪೇಕ್ಷಿತ ವ್ಯಕ್ತಿಯಾಗಿ ನಂತರ ಅಷ್ಟೇ ದಿವ್ಯ ನಿರ್ಲಕ್ಷ್ಯದಿಂದ ಅವರನ್ನು ಕಂಡಿದ್ದು.

ಹಳಕಟ್ಟಿಯವರ ಬದುಕಿನಲ್ಲಿ, ಕಾರ್ಯ ವಿಧಾನದಲ್ಲಿಯೂ ಕೂಡ ಸಾಮ್ಯತೆ ಇದೆ. ಅವರು ವಚನ ಸಾಹಿತ್ಯ ಸಂಗ್ರಹ, ಅಧ್ಯಯನ, ಸಂಕಲನ, ಪ್ರಕಟಣೆ ಪ್ರಸಾರ ಇವೆಲ್ಲ ಮಾಡಿದರು. ಅದೇ ರೀತಿ ಗದ್ದಗಿಮಠರು ಕೂಡ. ಅಂದರೆ ಸಮಾನ ಮನಸ್ಸಿನ ಜನ ಯಾವ ರೀತಿ ಕೆಲಸ ಮಾಡತಾರೆ ಅನ್ನೋದು. ಅದು ಜನಪದ

ಸಾಹಿತ್ಯವಾಗಿರಬಹುದು ಶಿಷ್ಟ ಸಾಹಿತ್ಯ ಇರಬಹುದು ಅಥವಾ ವಚನ ಸಾಹಿತ್ಯವಾಗಿರಬಹುದು. ಹಳಕಟ್ಟಿಯವರು ಹೇಗೆ ವಚನ ಸಾಹಿತ್ಯ, ಸಂಸ್ಕೃತಿ ಸಂಶೋಧನೆ ಪ್ರಸಾರಕರಾಗಿದ್ದರೋ ಹಾಗೆನೇ ಗದ್ದಗಿಮಠರು ಕೂಡ ಜನಪದ ಸಾಹಿತ್ಯದ ಆಕರ ಶೋಧಕರಾಗಿ, ಸಂಶೋಧಕರಾಗಿ, ಸಂಗ್ರಹಕಾರರಾಗಿ ಕಾರ್ಯ ಮಾಡಿದರು. ಇವರಿಬ್ಬರು ಮಾಡಿದ್ದೇನೆಂದರೆ ವಚನ ಸಂಸ್ಕೃತಿಯನ್ನು ಹೇಗೆ ಹಳಕಟ್ಟಿಯವರು ಪ್ರಸಾರ ಮಾಡಿದ್ರೋ ಹಾಗೆ ಗದ್ದಗಿಮಠರು ಜನಪದ ಸಂಸ್ಕೃತಿಯನ್ನು ಪ್ರಸಾರಮಾಡಿ ಉಳಿಸಿದವರು.

ಇವರಿಬ್ಬರು ತಾವು ಕೈಗೊಂಡ ಸಾಹಿತ್ಯದ ಅಧ್ಯಯನ, ಅದರ ಸಂರಕ್ಷಣೆ, ಪ್ರಸಾರಗಳಿಗೆ ಭದ್ರ ಬುನಾದಿ ಹಾಕಿದಂತಹ ಎರಡು ಮುಖ್ಯ ಶಿಖರಗಳು ಅಂತಾ ನಾನು ಭಾವಿಸ್ತೀನಿ. ಹಳಕಟ್ಟಿಯವರ ಬಗ್ಗೆ ಕೆಲಸ ನಡೆದಿದೆ. ಆದರೆ ಗದ್ದಗಿಮಠ ಅವರ ಬಗ್ಗೆ ಗಂಭೀರವಾಗಿ ಚಿಂತನೆ ನಡದಿಲ್ಲ. ಅವರ ಬಗ್ಗೆ ಇದೊಂದೆ ಅಲ್ಲ ಇನ್ನೂ ಇಂಥ ಎಷ್ಟೋ ಗೋಷ್ಠಿಗಳಾಗಬೇಕು, ಚಿಂತನೆಗಳು ನಡೀಬೇಕು. ಅವು ನಡಿದಿದ್ದರೆ, ನಾವು ಅಪಚಾರ ಮಾಡಿದಂತೆ. ಅಪಚಾರ ಗದ್ದಗಿಮಠರಿಗಿಲ್ಲ ಜಾನಪದ ಕ್ಷೇತ್ರಕ್ಕೆ ಮಾಡಿದಂತೆ ಅನ್ನೋ ಎಚ್ಚರಿಕೆ ನಾವು ಗಮನದಲ್ಲಿಟ್ಟುಕೊಂಡಿರಬೇಕು.

ಗದ್ದಗಿಮಠರು ಬರೀ ಹಾಡುಗಳನ್ನಷ್ಟೇ ಸಂಗ್ರಹಿಸಲಿಲ್ಲ. ಜನಪದ ಲಯ, ಧಾಟಿಗಳನ್ನು ಕೂಡ ಸಂಗ್ರಹಿಸಿದರು. ಅವರ ಮಗಳು ಶ್ರೀಮತಿ ಅಕ್ಕಮಹಾದೇವಿ ಶಿವಕುಮಾರ ಹೇಳಿದಳು, ಅವೆಲ್ಲ ಇವತ್ತಿಲ್ಲ. ಇವತ್ತು ಲಯ, ಧಾಟಿಗಳ ಸಂಗ್ರಹ ಕೂಡ ಆಗಬೇಕು. ಹ್ಯಾಂಗ ಹಾಡತಿದ್ದರು ಅನ್ನೋದನ್ನು ತಿಳಿಯಲು ಇನ್ನೊಂದು ಹತ್ತು ವರ್ಷ ಬಿಟ್ಟರೆ ಆ ಕಲಾವಿದರೂ ಇರೋದಿಲ್ಲ.

ಇವತ್ತು ಪ್ರಮುಖವಾಗಿ ಆಗಬೇಕಾದಂತಹ ಒಂದೆರಡು ಕೆಲಸಗಳೆಂದರೆ, ಅವರ ಲೇಖನಗಳ ಸಮಗ್ರ ಸಂಪುಟ ಬರಬೇಕು. ಸಂಸ್ಕೃತಿ ಇಲಾಖೆಯವರು, ಸಾಹಿತ್ಯ ಅಕಾಡೆಮಿ ಅವರು ಈಗ ತರುತ್ತಿರುವ ಹಿರಿಯ ಲೇಖಕರ ಕೃತಿಗಳ ಸಂಪುಟಗಳಂತೆ ಇವರ ಸಂಪುಟಗಳೂ ಬರಬೇಕು. ಇವರ ಸಮಗ್ರ ಲೇಖನಗಳು, ಕೃತಿಗಳು ಹೊರ ಬಂದಾಗ ಜಾನಪದ ಸಾಹಿತ್ಯ ಕುರಿತು ಅಭ್ಯಸಿಸುವವರಿಗೆ ಅವು ಉಪಯುಕ್ತವಾಗುತ್ತವೆ. ಜೊತೆಗೆ ಅವುಗಳನ್ನು ವೆಬ್‌ಸೈಟ್‌ನಲ್ಲಿ ಹಾಕಬೇಕು ಅವರ ಅಪಾರ ಕೊಡುಗೆ ಜಗತ್ತಿಗೇನೇ ಗೊತ್ತಾಗಬೇಕು.

ಇನ್ನೊಂದು ಅವಶ್ಯವಾಗಿ ಆಗಬೇಕಾದದ್ದು, ಧಾರವಾಡದಲ್ಲಿ ಪ್ರತಿಷ್ಠಾನ. ಈಗಾಗಲೇ ಬೇರೆ ಬೇರೆ ಪ್ರತಿಷ್ಠಾನಗಳಿರುವಂತೆ ಇವರ ಹೆಸರಿನಿಂದ ಒಂದು ಶ್ರೇಷ್ಠವಾದಂತಹ ಪ್ರತಿಷ್ಠಾನ ಆಗಬೇಕು. ಅದನ್ನು ಅವರ ಕುಟುಂಬದವರೇ ಮಾಡಬಹುದು. ಅದರ ಮೂಲಕ ಒಂದು ಮೌಲಿಕ ಕೃತಿಗೆ, ಒಬ್ಬ ಕಲಾವಿದನಿಗೆ, ಹಾಗೂ ಒಬ್ಬ ವಿದ್ವಾಂಸನಿಗೆ ಈಗ ಜಾನಪದ ಅಕಾಡೆಮಿ ಕೊಡುವಂತಹ ಪ್ರಶಸ್ತಿ

ಕೊಡಬೇಕು. ಪ್ರತಿಷ್ಠಾನದ ಹೆಸರಿನಲ್ಲಿ ಉಪನ್ಯಾಸ – ವಿಚಾರ ಸಂಕಿರಣಗಳು ನಡಿಬೇಕು. ಅದು ಇವತ್ತಿನ ವಿಚಾರ ಸಂಕಿರಣದ ಮೂಲಕ ಪ್ರೇರಣೆಯಾಗಲೀ ಅಂತ ನಾನು ಹಾರೈಸ್ತೀನಿ.

ಇಂಥ ವಿಚಾರ ಸಂಕಿರಣಗಳು, ಅಕಾಡೆಮಿಗಳು, ವಿದ್ವಾಂಸರು, ನಾವೆಲ್ಲರೂ ಗದ್ದಗಿಮಠರಿಗೆ ಸಾಹತ್ಯಿಕ ನ್ಯಾಯ ದೊರಕಿಸಿ ಕೊಡಬೇಕು. ನಾನಿದನ್ನ ಒತ್ತಿ ಹೇಳತಾ ಇದ್ದೀನಿ. ಸಾಹಿತ್ಯಿಕ ನ್ಯಾಯ ದೊರಕಿಸಿಕೊಡುವಲ್ಲಿ ನಾವು ಪ್ರಯತ್ನ ಮಾಡಬೇಕು. ಒಳ್ಳೆಯದಿದ್ದರೆ ಒಳ್ಳೆಯದು. ಚಿಂತನೆಗೆ ಒಳಪಡಿಸಿದಾಗ ಇದು ಒಳ್ಳೆಯದಲ್ಲ, ಇಂತಹ ಕೊರತೆ ಇದೆಯೆಂದರೆ ಅದನ್ನೂ ಎತ್ತಿ ಹೇಳಬಹುದು. ಈ ರೀತಿಯಲ್ಲಿ ವಿಮರ್ಶೆ ಮರು ವಿಮರ್ಶೆಗಳು ನಡಿಬೇಕು ಅಂದಾಗ ಮಾತ್ರ ಗದ್ದಗಿಮಠರ ಸಾಹಿತ್ಯದ ಮೌಲ್ಯ ಏನು ಅನ್ನೋದು ಗೊತ್ತಾಗುತ್ತೆ. ಗದ್ದಗಿಮಠ ಒಂದು ಪರಂಪರೆ ಅನ್ನೋದು ಹ್ಯಾಗಿತ್ತು ಅಂತ ತಿಳಿಯುತ್ತೆ.

ಇಂಥ ಒಂದು ದೇಶೀ ಸಂಸ್ಕೃತಿಯಲ್ಲಿ ಬೆಳದಂತಹ ದೇಶೀ ಸಂಸ್ಕೃತಿಗಾಗಿನೇ ತಮ್ಮ ಇಡೀ ಬದುಕನ್ನು ಸಮರ್ಪಿಸಿಕೊಂಡಂತಹ ಗದ್ದಗಿಮಠರು ದೇಶೀ ಸಂಸ್ಕೃತಿಯನ್ನು ನಂದಾ ದೀವಿಗೆಯಾಗಿ ಬೆಳಗಿಸಿದರು. ತಾವು ತಮ್ಮ ಬದುಕಿನಲ್ಲಿ ಬೆಳಕಪಡಿಲಿಲ್ಲ. ಮಂದಿಗೆ ಬೆಳಕು ನೀಡಿ ತಾವು ಕತ್ತಲಲ್ಲಿಯೇ ಬದುಕಿದ್ರು. ಅವರು ನೀಡಿದಂಥ ಬೆಳಕು ಇವತ್ತು ನಮ್ಮೆಲ್ಲರ ದಾರಿಗೂ ಬೆಳಕಾಗಿ ನಿಲ್ಲಲಿ ಅಂತ ಆಶಿಸಿ ನನ್ನೆರಡು ಮಾತುಗಳನ್ನು ಮುಗಿಸ್ತೀನಿ, ನಮಸ್ಕಾರ.

❖

# ಗೋಷ್ಠಿ : ೧

# ಡಾ. ಬಿ. ಎಸ್. ಗದ್ದಗಿಮಠ ಅವರ

# ಬದುಕು - ಬರಹ - ಸಾಧನೆ

ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ

◆

## ಬದುಕು

### ಹಿನ್ನೆಲೆ :

ಕರ್ನಾಟಕದ ಜಾನಪದ ಕ್ಷೇತ್ರದಲ್ಲಿ ಡಾ. ಬಿ. ಎಸ್. ಗದ್ದಗಿಮಠ ಅವರ ಹೆಸರು ಅಗ್ರಸ್ಥಾನದಲ್ಲಿರಬೇಕಾದದ್ದು. ಜನಪದ ಸಾಹಿತ್ಯದಲ್ಲಿ ಆಳವಾದ ಸಂಶೋಧನೆ ನಡೆಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಭಾರತದಲ್ಲಿಯೇ ಪ್ರಪ್ರಥಮ ಡಾಕ್ಟರೇಟ್ ಪದವಿ ಪಡೆದವರಾಗಿದ್ದಾರೆ.

ಇವರು ಮೂಲತಃ ಕರ್ನಾಟಕದ ಬಾಗಲಕೋಟ ಜಿಲ್ಲೆಯ ಬದಾಮಿ ತಾಲೂಕಿನ ಕೆರೂರು ಗ್ರಾಮದವರು. ಈ ಗ್ರಾಮದ ವೀರಶೈವ ಸುಸಂಸ್ಕೃತ, ಶ್ರೀಮಂತ ಗದ್ದಗಿಮಠ ಮನೆತನದಲ್ಲಿ ಜನಿಸಿದವರಾಗಿದ್ದಾರೆ. ರಾಚಮ್ಮ ಗದ್ದಗಿಮಠರ ಮಗ ಸಾವಳಿಗೇಶ ಎಂಬುವರೇ ಡಾ. ಬಿ. ಎಸ್. ಗದ್ದಗಿಮಠರ ತಂದೆಯಾಗಿದ್ದಾರೆ.

ರಾಚಯ್ಯ ನಿನಮಗ ಊಚ ಸಾವಳಿಗೇಶ
ಕೋಚೆತ್ತಿ ಕಣಕ ಹಾಡಿದರ । ನಾಚಿ
ಬೆಳಗಾತ ಜಗದಾಗ

### ಜನನ :

ಸಾವಳಿಗೇಶ ಗದ್ದಗಿಮಠರು ಜನಪದ ಹಾಡುಗಳನ್ನು ಹಾಡುವಲ್ಲಿ ಖ್ಯಾತರಾಗಿದ್ದರು. ಅವರ ಧರ್ಮಪತ್ನಿ ಶಿವಗಂಗಾದೇವಿ ಕೂಡ ಸೋಬಾನದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅವರೊಂದಿಗೆ ಹಲವಾರು ಗೆಳತಿಯರೂ

ಜನಪದ ಹಾಡುಗಳನ್ನು ಹಾಡುತ್ತಲಿದ್ದರು. ಶಿವಗಂಗಾ ತಾಯಿಯವರ ಸಹೋದರಿ ಸಾವಂತ್ರೆವ್ವ ಬಾಲ ವಿಧವೆಯಾಗಿದ್ದಳು. ಅವಳೂ ಜಾನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಗದ್ದಗಿಮಠರ ಮನೆ ಜನಪದ ಹಾಡುಗಾರರ ತವನಿಧಿಯಂತೆ ಕಂಗೊಳಿಸುತ್ತಿತ್ತು. ಈ ಮನೆತನದ ಸಾವಳಿಗೇಶ ಅವರ ಪತ್ನಿ ಶಿವಗಂಗಾದೇವಿ ಅವರ ಹೊಟ್ಟೆಯಿಂದ ದಿ. ೧೫.೦೩.೧೯೧೭ರಲ್ಲಿ ಜನಿಸಿರುವ ಮಗುವೇ ನಮ್ಮ ಬಸಯ್ಯ ಜಾನಪದ ವಿದ್ವಾಂಸ ಡಾ. ಬಿ. ಎಸ್. ಗದ್ದಗಿಮಠರು.

## ವಿದ್ಯಾಭ್ಯಾಸ :

ಸಾವಳಿಗೇಶ ಮತ್ತು ಶಿವಗಂಗಾದೇವಿಯವರು ಪ್ರಾಮಾಣಿಕರಾಗಿದ್ದರು. ತಾವೂ ಬದುಕಿ, ಇತರರನ್ನು ಬದುಕಿಸುವ ವಿಶಾಲ ಹೃದಯಿಗಳಾಗಿದ್ದರು. ಶ್ರೀಮಂತರು, ಜಹಾಗೀರದಾರರು ಇವರ ಮನೆಯಲ್ಲಿ ತಮ್ಮ ವಸ್ತು ಒಡವೆಗಳನ್ನು ಬಡ್ಡಿ ಇಲ್ಲದೆ ಜತನದಿಂದ ಇಟ್ಟುಕೊಂಡು, ಅವರು ಬೇಡಿದಾಗ ವಾಪಸ ಕೊಡುತ್ತಿದ್ದರಂತೆ. ಇಂದಿನ ಬ್ಯಾಂಕ್ ಲಾಕರ್‌ಗಳಂತಿತ್ತು ಅವರ ಮನೆ. ತಾಯಿಯ ತೊಡೆಯ ಮೇಲೆ ಜನಪದ ಹಾಡುಗಳನ್ನು ಕೇಳಿದ ಮಗ ಬಸಯ್ಯ ತಂದೆಯವರಿಂದ ಚಿಕ್ಕಮ್ಮಳಿಂದ ಜನಪದ ಹಾಡುಗಳನ್ನು ಕಲಿತ. ಜನಪದ ಹಾಡುಗಳ ಕಣಜದಂತಿದ್ದ ಚಿಕ್ಕಮ್ಮ ಸಾವಂತ್ರೆವ್ವಳಂತೂ ತನ್ನ ಮಗನಿಗಿಂತ ಹೆಚ್ಚಿನ ವಾತ್ಸಲ್ಯದಿಂದ ಬಸಯ್ಯನವರನ್ನು ನೋಡಿಕೊಳ್ಳುವುದಲ್ಲದೆ ಅವರಿಗೆ ತಾನು ಕಲಿತ ಹಾಡುಗಳನ್ನೆಲ್ಲ ಕಲಿಸಿದ್ದಳು. ತಂದೆಯವರು ಹಾಡುತ್ತಿದ್ದ ಶಿವ ಶರಣರ ಹಂತಿಯ ಹಾಡುಗಳನ್ನು ಹಾಡಲು ಕಲಿತುಕೊಂಡರು. ಬೆಳೆಬೆಳೆದು ದೊಡ್ಡವರಾದಂತೆ ಜನಪದ ಹಾಡುಗಳನ್ನು ಹಾಡಿಯೇ ಹಾಡಿದರು. ಅಮರಕೋಶ ಕಂಠ ಮಾಡುವಂತೆ ಎಳೆತನದಲ್ಲಿಯೇ ಬಸಯ್ಯ ಸಾವಿರಾರು ಹಾಡುಗಳನ್ನು ಕಲಿತು ಹಾಡತೊಡಗಿದರು – ಅದೂ ಸುಶ್ರಾವ್ಯವಾಗಿ. ಐದು ವರ್ಷ ತುಂಬಿದಾಗ ಬಸಯ್ಯನವರನ್ನು ಕೆರೂರಿನಲ್ಲಿರುವ ಪ್ರಾಥಮಿಕ ಶಾಲೆಗೆ ಹೆಸರು ಹಚ್ಚಿದರು. ಚಿಕ್ಕಂದಿನಿಂದಲೂ ಓದು ಬರಹದಲ್ಲಿಯೂ ಮುಂದಿದ್ದ ಬಸಯ್ಯ ಕ್ರೀಡೆಗಳಲ್ಲಿ ವಿಶೇಷ ಒಲುವು ಮೂಡಿಸಿಕೊಂಡಿದ್ದರು. ಮನೆಯಲ್ಲಿ ಮಗನನ್ನು ತಂದೆ ತಾಯಿಗಳು ಪ್ರೀತಿಯಿಂದಲೇ ಬೆಳೆಸಿದ್ದರು. ಮಗನಿಗೆ ಆಸನ ಹಾಕಲು ಕಲಿಸಿದ್ದರು. ತಂದೆಯವರೊಂದಿಗೆ ಪ್ರತಿನಿತ್ಯ ಬಸಯ್ಯ ಬೆಳಗಿನ ಜಾವದಲ್ಲಿ ಎದ್ದು ವಾಯುವಿಹಾರಕ್ಕೆ ಹೋಗಿ ಬರುತ್ತಿದ್ದರು. ಸ್ನಾನ ಪೂಜೆ ತೀರಿಸಿಕೊಂಡು ಶಾಲೆಗೆ ಹೋಗಿ ಬರುತ್ತಿದ್ದರು. ಹೊತ್ತಿಗೆ ಸರಿಯಾಗಿ ಊಟೋಪಚಾರದಿಂದ ಬಸಯ್ಯನವರು ಸದೃಢ ಕಾಯ ಹೊಂದಿದವರಾಗಿದ್ದರು. ಖೋ ಖೋ, ಫುಟ್ ಬಾಲ್, ಹಾಕಿ ಆಟಗಳನ್ನು ಸಾಯಂಕಾಲ ಆಡುತ್ತಿದ್ದರು. ಹೀಗಾಗಿ ಆ ಪಂದ್ಯಾಟಗಳಲ್ಲಿ ಸ್ಪರ್ಧಿಗಿಳಿದಾಗ ಇವರೇ ಶಾಲೆಯಲ್ಲಿ ಪ್ರಥಮ ರ್‍ಯಾಂಕ್ ಗಿಟ್ಟಿಸಿಕೊಳ್ಳುತ್ತಿದ್ದರು. ಪಠ್ಯೇತರ ಚಟುವಟಿಕೆಗಳಲ್ಲಿಯೂ

ಬಸಯ್ಯನವರು ಮುಂದಿರುತ್ತಿದ್ದರು. ಏಳನೇ ಈಯತ್ತೆ ಪಾಸಾದ ಮೇಲೆ ಹೆಚ್ಚಿನ ಅಭ್ಯಾಸಕ್ಕಾಗಿ ಬದಾಮಿಗೆ ಹೋದರು. ಅಲ್ಲಿಯೂ ಚೆನ್ನಾಗಿ ಅಭ್ಯಾಸ ಮಾಡಿ ಮ್ಯಾಟ್ರಿಕ್ ಪರೀಕ್ಷೆ ಪಾಸಾದರು. ಕಾಲೇಜು ಅಭ್ಯಾಸಕ್ಕಾಗಿ ಬಾಗಲಕೋಟಿಗೆ ಹೋದರು. ಅಲ್ಲಿಯೂ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಒಳ್ಳೇ ಹೆಸರು ಗಳಿಸಿ ಕ್ರಿ. ಶ. ೧೯೪೩ ರಲ್ಲಿ ಬಿ. ಎ. ಪರೀಕ್ಷೆ ಪಾಸಾದರು. ಆಗ ಬಸಯ್ಯನವರು ೨೨ ವರ್ಷದವರಿದ್ದರು.

## ಮದುವೆ :

ಮಗ ಬಸಯ್ಯ ವಯಸ್ಸಿಗೆ ಬಂದರು, ಪದವೀಧರರೂ ಆದರು ಎಂದು ಅವರ ಲಗ್ನ ಮಾಡಲು ಯೋಚಿಸ ತೊಡಗಿದರು. ತಮ್ಮ ಅಂತಸ್ತಿಗೆ ತಕ್ಕ ಮನೆತನವೊಂದು ಬೆಳಗಾವಿ ಜಿಲ್ಲೆಯ ಕಟಕೋಳದಲ್ಲಿ ಇದ್ದುದನ್ನು ಗುರುತಿಸಿದರು. ಅಲ್ಲಿಯ ಎಲ್.ಎಲ್.ಬಿ ಪದವೀಧರರೂ ತೋರಗಲ್ಲ ಸಂಸ್ಥಾನದ ದಿವಾನರೂ ಆಗಿದ್ದ ಚರಂತಿಮಠ ಅವರ ಮಗಳು ಅನುಸೂಯಾ ಅವರೊಂದಿಗೆ ಬಸಯ್ಯನವರ ಲಗ್ನ ಮಾಡಲು ಬಯಸಿದರು. ನೋಡಿಯೂ ಬಂದರು. ಎರಡೂ ಮನೆತನದವರಿಗೆ ಒಪ್ಪಿಗೆಯಾದುದರಿಂದ ಬಸಯ್ಯ ಮತ್ತು ಅನುಸೂಯಾ ಅವರ ಲಗ್ನ ಕ್ರಿ.ಶ. ೧೯೪೪ ರಲ್ಲಿ ಆಯಿತು. ಸತಿಪತಿಗಳೊಂದಾಗಿ ಜೀವನ ನಡೆಸಿದರು. ಬಸಯ್ಯ ಅವರಿಗೆ ಇನ್ನೂ ಕಲಿಯುವ ಆಸೆ, ಕ್ರೀಡಾ ಪಟುವಾಗಿದ್ದ ಅವರು B.Ed ಪರೀಕ್ಷೆ ಪಾಸು ಆಗಬೇಕೆಂದು ಹಿರಿಯಾಸೆ ತಾಳಿದ್ದರು. ಅದಕ್ಕೆಂದು ಮುಂಬೈ ಮಹಾ ನಗರದ ಕಾಂದೆವಾಲಿಗೆ ಹೋಗಿ ಬಿ.ಪಿಎಡ್‌ಕ್ಕೆ ಹೆಸರು ಹಚ್ಚಿ ಬಂದರು. ಅಲ್ಲಿ ಆ ಪರೀಕ್ಷೆಯನ್ನು ಚೆನ್ನಾಗಿ ಪಾಸು ಮಾಡಿದರು. ಬಿ.ಪಿಎಡ್. ಅಧ್ಯಯನದಲ್ಲಿ ತೊಡಗಿದಾಗ ಸತಿಯ ನೆನಪಾಗಿ ಪ್ರೇಮ ಪತ್ರಗಳನ್ನು ಬರೆಯುತ್ತಿದ್ದರು. ಆ ಪತ್ರದಲ್ಲಿ ಅವರೊಂದು ಕವನವನ್ನು ಬರೆದು ಕಳಿಸುತ್ತಿದ್ದರು. ಅತ್ತೆ–ಮಾವ–ಪತಿಯಂದಿರಂತೆ ಸತಿ ಅನುಸೂಯಾ ಕೂಡ ಒಳ್ಳೆಯ ಹಾಡುಗಾರ್ತಿ. ಅವರು ಬರೆದು ಕಳಿಸಿದ ಕವನವನ್ನು ಪತಿ ಬಂದಾಗ ಹಾಡಿ ತೋರಿಸಿದ್ದರು. ಹೀಗೆ ಬಸಯ್ಯನವರ ಸ್ವಂತ ಬರವಣಿಗೆ ಪ್ರಾರಂಭವಾಯಿತು. ತಾಯಿ ಹಾಡುವ ಕವನಗಳನ್ನು ಅವರ ಮಕ್ಕಳಾದ ಶ್ರೀ ಪುಲಿಕೇಶಿ ಮತ್ತು ಅಕ್ಕಮಹಾದೇವಿ ಇಂದು ಸುಮಧುರವಾಗಿ ಹಾಡುವುದನ್ನು ಕೇಳಬಹುದಾಗಿದೆ.

## ಉದ್ಯೋಗ :

ಶ್ರೀ ಬಸಯ್ಯನವರು ಬಿ.ಪಿಎಡ್. ಪರೀಕ್ಷೆ ಪಾಸಾದ ಮೇಲೆ ಬಾಗಲಕೋಟಿ ಬಸವೇಶ್ವರ ಕಾಲೇಜಿನಲ್ಲಿ ದೈಹಿಕ ಶಿಕ್ಷಕರಾಗಿ ಸೇರಿಕೊಂಡರು. ಉದ್ಯೋಗ ಮಾಡುತ್ತ ಮುಂದೆ ಎಂ.ಎ.ಮಾಡಿಕೊಳ್ಳಬೇಕೆಂದರು. ಬಾಗಲಕೋಟ ಬಿಟ್ಟು ಬೆಳಗಾವಿಯ ಕೆ.ಎಲ್. ಇ. ಸಂಸ್ಥೆಯ ಲಿಂಗರಾಜ ಕಾಲೇಜಿನಲ್ಲಿ ದೈಹಿಕ ಶಿಕ್ಷಕರಾಗಿ ಸೇರಿಕೊಂಡರು. ಬೆಳಗಾವಿಯಲ್ಲಿ ಮನೆಮಾಡಿ ತಮ್ಮ ಸತಿ ಅನುಸೂಯಾ ಅವರನ್ನು ಕರೆದುಕೊಂಡು

ಬಂದರು. ಕ್ರಿ.ಶ. ೧೯೫೭ ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಎಂ. ಎ. ಪರೀಕ್ಷೆಯನ್ನು ಪಾಸಾದರು.

ಎಂ. ಎ. ಪರೀಕ್ಷೆ ಪಾಸಾದ ಮೇಲೆ ಮತ್ತೆ ಪಿಎಚ್‌ಡಿ ಪದವಿಗಾಗಿ ಅಭ್ಯಾಸ ಮಾಡಬೇಕೆಂದರು. ಬೆಳಗಾವಿಯಲ್ಲಿಯೇ ಇದ್ದ ಪ್ರೊ. ಕೆ. ಜಿ ಕುಂದಣಗಾರ ಅವರ ಸಮರ್ಥ ಮಾರ್ಗದರ್ಶನದಲ್ಲಿ ಪಿಎಚ್‌ಡಿ ರಜಿಸ್ಟ್ರೇಶನ್ ಮಾಡಿಸಿದರು. ಚಿಕ್ಕಂದಿನಿಂದಲೂ ಜನಪದ ಸಾಹಿತ್ಯದಲ್ಲಿ ವಿಶೇಷವಾದ ಆಸಕ್ತಿ ತಾಳಿದ್ದ ಗದ್ದಗಿಮಠರು 'ಕನ್ನಡ ಜಾನಪದ ಗೀತೆಗಳು' ವಿಷಯದ ಮೇಲೆ ಆಳವಾದ ಸಂಶೋಧನೆ ನಡೆಸಿ, ಮಹಾಪ್ರಬಂಧ ಸಿದ್ಧಪಡಿಸಿ ಕ್ರಿ. ಶ. ೧೯೫೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿಯನ್ನು ಪಡೆದರು.

ಡಾ. ಗದ್ದಗಿಮಠರ ಪಿಎಚ್.ಡಿ ಮಹಾಪ್ರಬಂಧದ ಶುದ್ಧ ಪ್ರತಿ ತಯಾರಿಸಿದವರಲ್ಲಿ ನಾನೂ ಒಬ್ಬನು. ಆಗ ನಾನು ಅದೇ ಪ್ರಾಂಗಣದಲ್ಲಿರುವ ಜಿ. ಎ. ಹೈಸ್ಕೂಲಿನಲ್ಲಿ ಓದುತ್ತಿದ್ದೆ. ಯಾವ ದೋಷ ಇಲ್ಲದೆ ದುಂಡಗಾಗಿ ಬರೆಯುತ್ತಿದ್ದ ನನಗೂ ನನ್ನ ಸ್ನೇಹಿತ ಚಂದ್ರ ಶೇಖರ ಜವಳಗಿ ಅವರಿಗೂ ಕರಡಿ ಗುರುಗಳ ಮುಖಾಂತರ ಈ ಕೆಲಸ ಒಪ್ಪಿಸಿದ್ದರು. ಜನಪದ ಹಾಡುಗಳ ಮೇಲೆಯೂ ಪಿಎಚ್. ಡಿ. ಮಾಡಬಹುದಲ್ಲ ಎಂದು ಯೋಚಿಸುತ್ತಲೇ ಇದ್ದೆವು.

ನಾನು S.S.L.C. ಪರೀಕ್ಷೆ ಪಾಸಾಗಿ ಮುಂದಿನ ಅಭ್ಯಾಸಕ್ಕೆಂದು ಲಿಂಗರಾಜ ಕಾಲೇಜಿನಲ್ಲಿ ಪ್ರವೇಶ ಪಡೆದೆ. ಡಾ. ಬಿ. ಎಸ್. ಗದ್ದಗೀಮಠರು ಆಗ ಅದೇ ಕಾಲೇಜಿನಲ್ಲಿ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಲಿದ್ದರು. ನಮ್ಮನ್ನು ಗುರುತಿಸಿದ ಡಾ. ಗದ್ದಗಿಮಠರು ನಮ್ಮನ್ನು ಪ್ರೀತಿಯಿಂದ ಕಾಣುತ್ತಿದ್ದರು. ಆಗಾಗ ನಮ್ಮನ್ನು ಕರೆದು, ಕ್ಷೇಮ ಸಮಾಚಾರ ಕೇಳಿ, ಚೆನ್ನಾಗಿ ಅಭ್ಯಾಸ ಮಾಡಲು ಹೇಳುತ್ತಲಿದ್ದರು. ಹಬ್ಬ ಹುಣ್ಣಿಮೆಗಳಂದು ಶ್ರೀ ಕರಡಿ ಗುರುಗಳೊಂದಿಗೆ ನಮ್ಮನ್ನೂ ತಮ್ಮ ಮನೆಗೆ ಆಮಂತ್ರಿಸಿ ಉಪಚರಿಸುತ್ತಿದ್ದರು. ತಮ್ಮ ಸುಮಧುರ ಕಂಠದಿಂದ ಹಾಡು ಹೇಳಿ ನಮ್ಮನ್ನು ಸಂತೋಷಗೊಳಿಸುತ್ತಿದ್ದರು. ಅವರ ಶ್ರೀಮತಿ ಅನುಸೂಯಾ ಕೂಡ ಚೆನ್ನಾಗಿ ಹಾಡುತ್ತಿದ್ದುದನ್ನು ಕೇಳಿದ್ದೆವು. ಲಿಂಗರಾಜ ಕಾಲೇಜಿನಲ್ಲಿ ದೈಹಿಕ ಶಿಕ್ಷಣದ ನಿರ್ದೇಶಕರಾಗಿದ್ದಾಗ, ಅಂದು ಶ್ರೀ ಹಸಬಿ, ಕು.ಮುದಲಿಯಾರ ಎಂಬುವರು ಕ್ರೀಡಾಪಟುಗಳಾಗಿದ್ದರು. ಯುವಜನ ಕ್ರೀಡಾ ಮಹೋತ್ಸವದಲ್ಲಿ ಕ್ರೀಡಾ ಸ್ಪರ್ಧಿಗಳೊಂದಿಗೆ ಆಶು ಭಾಷಣ ಸ್ಪರ್ಧೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ನಾನು ಹೋಗುತ್ತಿದ್ದೆ. ಹೀಗಾಗಿ ಡಾ. ಬಿ. ಎಸ್. ಗದ್ದಗಿಮಠ ಗುರುಗಳ ಸಂಪರ್ಕ ಹೆಚ್ಚಿತು. ಯಾವುದೋ ಕಾರಣದಿಂದ ಡಾ. ಗದ್ದಗಿಮಠರು ಲಿಂಗರಾಜ ಕಾಲೇಜ ಬಿಟ್ಟು ಬಹುಶಃ ಲಕ್ಷ್ಮೇಶ್ವರಕ್ಕೆ ಹೋದರು. ಡಾಕ್ಟರೇಟ್ ಪಡೆದ ಮೇಲೂ ತಮ್ಮ ಜಾನಪದ ಹಾಡುಗಳ ಸಂಗ್ರಹ ಮುಂದುವರಿಸಿದ್ದರು. ಒಂದೇ ಪದ್ಯವನ್ನು ಹಲವಾರು ಧಾಟಿಗಳಲ್ಲಿ ಹಾಡುತ್ತಿದ್ದುದು ವಿಶೇಷವಾಗಿತ್ತು.

ಡಾ. ಬಿ. ಎಸ್. ಗದ್ದಗಿಮಠರು ಒಮ್ಮೆ ರೇಲ್ವೆಯಲ್ಲಿ ಪ್ರಯಾಣ ಮಾಡುತ್ತಿದ್ದರು. ಯೋಗಾಯೋಗವೆನ್ನಬೇಕು, ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಡಿ. ಸಿ. ಪಾವಟೆ ಅವರೂ ಪ್ರಯಾಣಿಸುತ್ತಿದ್ದರು. ಅಲ್ಲಿ ಗ್ರಾಮೀಣ ಜನರೊಂದಿಗೆ ಹಾಡುತ್ತ ಕುಳಿತಿದ್ದ ಡಾ. ಬಿ. ಎಸ್. ಗದ್ದಗಿಮಠರ ಹಾಡು ಕೇಳಿ ಪಾವಟೆಯವರು ಹರ್ಷಚಿತ್ತಗೊಂಡರು. ಮತ್ತೂ ಹಾಡು ಕೇಳಿ ಅವರನ್ನು ಹತ್ತಿರ ಕರೆದು ಪರಿಚಯಿಸಿಕೊಂಡರು. ಇವರು ಎಂ. ಎ., ಬಿ. ಪಿ. ಎಡ್, ಪಿಎಚ್. ಡಿ ಹೀಗೆ ಮೂರು ಪದವಿಗಳನ್ನು ಪಡೆದುಕೊಂಡಿರುವ ಗದ್ದಗಿಮಠರನ್ನು ತಮ್ಮ ವಿಶ್ವವಿದ್ಯಾಲಯಕ್ಕೆ ಸೇರಿಸಿಕೊಳ್ಳಬೇಕೆಂದು ವಿಚಾರ ಮಾಡತೊಡಗಿದರು. ಧಾರವಾಡಕ್ಕೆ ಬಂದಾಗ, ವಿಶ್ವವಿದ್ಯಾಲಯಕ್ಕೆ ಬಂದು ಭೆಟ್ಟಿಯಾಗಿರಿ ಎಂದೂ ಹೇಳಿದರು. ಇದನ್ನು ಕೇಳಿದ ಡಾ. ಗದ್ದಗಿಮಠರಿಗೆ ಸಂತೋಷವಾಯಿತು. ಮುಂದೊಂದು ವಾರದಲ್ಲಿ ಮೊದಲೇ ಕುಲಪತಿಗಳ ಭೆಟ್ಟಿಯ ದಿನ, ವೇಳೆ ಗೊತ್ತುಪಡಿಸಿ ಆ ಪ್ರಕಾರ ಹೋಗಿ ಭೆಟ್ಟಿಯಾದರು.

ಡಾ. ಗದ್ದಗಿಮಠರು ಡಾ. ಡಿ. ಸಿ. ಪಾವಟೆಯವರನ್ನು ಕಂಡು ತಮ್ಮ ಕಿರು ಪರಿಚಯ ಪತ್ರ ನೀಡಿದರು. ಅವರ ಪದವಿ, ಸಂಶೋಧನೆ ಗುರುತಿಸಿದ ಡಾ. ಪಾವಟೆ ಸಾಹೇಬರು ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣಾ ಮತ್ತು ಪ್ರಸರಣಾ ವಿಭಾಗದಲ್ಲಿ (ಪ್ರಸಾರಾಂಗ) ಅಸಿಸ್ಟಂಟ್ ಡೈರೆಕ್ಟರ್‌ರೆಂದು ಆಯ್ಕೆ ಮಾಡಿದರು. ಸಂತೋಷದಿಂದ ಕೆಲಸ ನಿರ್ವಹಿಸುತ್ತ ಎಂದಿನಂತೆ ತಮ್ಮ ಕಾಯಕದೊಂದಿಗೆ ಜನಪದ ಹಾಡುಗಳ ಸಂಶೋಧನೆ ಮತ್ತು ಬರವಣಿಗೆಯನ್ನು ಮುಂದುವರಿಸಿದರು. ಡಾ. ಗದ್ದಗಿಮಠರು 'ಮಲ್ಲ ಮಲ್ಲಾಣಿ' ಹಾಡುಗಬ್ಬವನ್ನು ಕೇಳುಗರ ಮನ ಸೂರೆಗೊಳ್ಳುವಂತೆ ಹಾಡುತ್ತಿದ್ದ ಅವರನ್ನು ಹಲವಾರು ಜನರು ಆಮಂತ್ರಿಸಿ ಅವರ ಕಂಠ ಮಾಧುರ್ಯ ಮತ್ತು ಧಾಟಿಗಳಿಗೆ ಮೆಚ್ಚಿಕೊಳ್ಳುತ್ತಿದ್ದರು. 'ಧಾರವಾಡದ ಈ ಜನಪದ ಕೋಗಿಲೆ ಶರಣರ ಪ್ರದೇಶದಲ್ಲಿ ಹಾಡುವ ಕಾಲ ಕೂಡಿ ಬಂದರೆ ಅದೆಷ್ಟು ಚೆಂದ' ಎಂದು ಡಾ. ದೇವೇಂದ್ರ ಕುಮಾರ ಹಕಾರಿಯವರು ಉದ್ಗರಿಸಿ, ಅವರನ್ನು ಕ್ರಿ.ಶ. ೧೯೫೮ ರಲ್ಲಿ ಕಲಬುರ್ಗಿ ಶರಣಬಸವೇಶ್ವರ ಕಾಲೇಜಿನ ಕರ್ನಾಟಕ ಸಂಘಕ್ಕೆ ಆಮಂತ್ರಿಸಿದ್ದರು. ಆಗ ಅವರು ಪ್ರಸಾರಾಂಗದ ಕಾರ್ಯಕ್ರಮಕ್ಕಾಗಿ ಈ ಕಡೆಗೆ ಬಂದಾಗ ಹಾಡಿದ್ದನ್ನು ಕೇಳಿದ ಜನ ಇನ್ನೂ ಕಲಬುರ್ಗಿಯಲ್ಲಿ ನೆನೆಸಿಕೊಂಡು ಸಂತೋಷ ಪಡುತ್ತಿರುತ್ತಾರೆ. ತಮ್ಮ ಸುಮಧುರ ಕಂಠದಿಂದ ಎರಡು ಘಂಟೆ ಕಾಲ ಹಾಡಿ ಜನರನ್ನು ಮಂತ್ರ ಮುಗ್ಧಗೊಳಿಸಿದರು. ಆಗ ಕಾಲೇಜ ಪರವಾಗಿ ಡಾ. ಗದ್ದಗಿಮಠರನ್ನು ಹೃದಯ ತುಂಬಿ ಸನ್ಮಾನಿಸಿದರು. 'ಜಾನಪದಕ್ಕೆ ಇದುವರೆಗೆ ದೊರೆಯಬೇಕಾದ ಮನ್ನಣೆ ದೊರೆಯಲಿಲ್ಲ ಎಂದು ನನಗೆ ದುಃಖವಾಗಿತ್ತು. ಆದರೆ, ಇಂದು ಈ ಪುಣ್ಯ ಪರಿಸರದ ಕಾಲೇಜಿನಲ್ಲಿ ನನಗೆ ದೊರೆತ ಈ ಸನ್ಮಾನ ಜಾನಪದಕ್ಕೆ ದೊರೆತ ಗೌರವ ಎನ್ನುವುದು ಖಾತ್ರಿಯಾಗಿದೆ. ನಮಗೆ ನಿಜವಾಗಿ ಸಂತೋಷವಾಗಿದೆ ಎಂದು ಹೇಳುತ್ತ ನನಗೆ ಜೀವನಪರ್ಯಂತ ಕೇವಲ ಜನಪದ ಕಾರ್ಯ ಮಾಡುವ

ಹರಕೆಯನ್ನು ಕನ್ನಡ ತಾಯಿ ನಿಮ್ಮ ಮೂಲಕ ಕರುಣಿಸಲಿ' ಎಂದು ತಮಗಾದ ಹರ್ಷವನ್ನು ಎಲ್ಲರೊಂದಿಗೆ ಹಂಚಿಕೊಂಡು ವಿನಯ ಮೆರೆದಿದ್ದನ್ನು ಡಾ. ಹಕಾರಿಯವರು ಸ್ಮರಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. (೨೬-೧೯೯೨ ವಿಚಾರ ಸಂಕೀರ್ಣದ ಅಧ್ಯಕ್ಷರ ಭಾಷಣ – ಜಾನಪದ ಗಂಗೋತ್ರಿ –೧೯೯೩. ರ ಸಂ. ೬ ಸಂ. ೩. ಡಿಸೆಂಬರ್)

ಡಾ. ಬಿ. ಎಸ್. ಗದ್ದಗಿಮಠ ಅವರು ತಮ್ಮ ಕಾಯಕದೊಂದಿಗೆ ಹಳ್ಳಿ ಹಳ್ಳಿಗೂ ಪ್ರಸಾರಾಂಗದ ಪ್ರಚಾರೋಪನ್ಯಾಸಗಳನ್ನು ಅಚ್ಚುಕಟ್ಟಾಗಿ ಏರ್ಪಡಿಸುತ್ತಿದ್ದರು. ಜೊತೆಗೆ ಆ ಗ್ರಾಮದ, ಪ್ರದೇಶದ ಹಿಂದು ಹಾಡುಗಾರರಿಂದ ಜನಪದ ಹಾಡುಗಳನ್ನು ಸಂಗ್ರಹಿಸುತ್ತಲ್ಲಿದ್ದರು.

**ಮಕ್ಕಳ ಸಂಪತ್ತು :**

ಡಾ. ಬಿ. ಎಸ್. ಗದ್ದಗಿಮಠ ಮತ್ತು ಶ್ರೀಮತಿ ಅನುಸೂಯಾ ದಂಪತಿಗಳು ಅನ್ಯೋನ್ಯ ಪ್ರೀತಿಯಿಂದ ಬದುಕು ಸಾಗಿಸುತ್ತಿದ್ದರು. ಎಷ್ಟೋ ಕಷ್ಟ-ತಾಪತ್ರಯಗಳು ಬಂದರೂ ಸಮಾಧಾನದಿಂದ ಅವುಗಳನ್ನು ನುಂಗಿಕೊಂಡು ವಿಧಿಯದರ ಸಾಹೇಬ ಎಂದುಕೊಂಡು ತಮ್ಮ ಜಟಕಾ ಬಂಡಿಯನ್ನು ನಡೆಸಿಕೊಂಡು ಹೋಗುತ್ತಿದ್ದರು. ಲಗ್ನವಾಗಿ ಹಲವಾರು ವರುಷಗಳು ಕಳೆದರೂ ಮಕ್ಕಳಾಗಲಿಲ್ಲವೆಂದು ಚಿಂತಿಸುತ್ತಲಿದ್ದರು. ಬೆಳಗಾವಿ ಜಿಲ್ಲೆಯ ಹಟ್ಟಿಹೊಳಿ ಗ್ರಾಮದ ರುದ್ರಪ್ಪ ಹಟ್ಟಿಹೊಳಿ ಎಂಬುವರನ್ನು ತಮ್ಮ ಬೆಳಗಾವಿ ಮನೆಯಲ್ಲಿರಿಸಿಕೊಂಡು ಓದಿಸುತ್ತಿದ್ದರು. ಅವರಿಂದು ಎಸ್. ಪಿ. ಆಗಿ ನಿವೃತ್ತರಾಗಿರುವರು.

**ಸಾವಳಿಗೇಶ : (ಬಾಬಣ್ಣ)**

ಲಗ್ನವಾದ ಐದು ವರುಷಕ್ಕೆ ದಿ. ೨೮.೦೪.೧೯೪೪ ರಂದು ತಾಯಿ ಅನುಸೂಯಾ ಗಂಡು ಮಗುವಿಗೆ ಜನ್ಮ ನೀಡಿದರು, ಸಂತೋಷಪಟ್ಟರು. ಹುಟ್ಟಿದ ಮಗುವಿಗೆ ಅಜ್ಜ ಸಾವಳಿಗೇಶನ ಹೆಸರಿಟ್ಟರು. ಬಾಬಣ್ಣ ಎಂದೂ ಕರೆಯತೊಡಗಿದರು. ಬಾಬಣ್ಣ ಬೆಳೆದು ದೊಡ್ಡವರಾದರು. ಓದು ಬರಹದಲ್ಲಿ ಜಾಣರಿದ್ದರು. ತಂದೆ ತಾಯಿಗಳಿಗೆ ಪ್ರೀತಿಯ ಮಗನಾಗಿ ಬೆಳೆದರು. ತಂದೆಯವರು ಬೆಳಗಾವಿ ಬಿಟ್ಟು ಧಾರವಾಡಕ್ಕೆ ಹೋದರು. ಅಲ್ಲಿಯೇ ಬಾಬಣ್ಣ ಅವರ ಶಿಕ್ಷಣ ನಡೆಯಿತು. ಇವರಿಗೆ ಓದುವುದರಲ್ಲಿ ವಿಶೇಷ ಆಸಕ್ತಿ. ಹನ್ನೊಂದು ವರುಷದವರಿದ್ದಾಗ ತಂದೆಯವರು ಕ್ರಿ. ಶ. ೧೯೬೦ ರಲ್ಲಿ ನಿಧನ ಹೊಂದಿದರು. ಮನೆಯ ಹಿರಿಯ ಮಗನಾಗಿ, ತಾಯಿಯೂ ಇನ್ನೂ ಚಿಕ್ಕವಳು, ಎಲ್ಲರ ಯೋಗಕ್ಷೇಮ ನೋಡಿಕೊಳ್ಳುವಷ್ಟು ದೊಡ್ಡವರಾಗಿದ್ದಕ್ಕೆ ಬಾಬಣ್ಣ ಮತ್ತು ತಾಯಿ ನೊಂದುಕೊಳ್ಳುತ್ತಾರೆ. ಅಂತೂ ವಯಸ್ಸಿಗೆ ಬಂದಾಗ ಫ್ಲೈವುಡ್ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರುತ್ತಾರೆ. ವಿಶ್ವವಿದ್ಯಾಲಯದವರು

ಸಹಾನುಭೂತಿಯಿಂದ ಕರಣಿಕ ಹುದ್ದೆಗೆ ನೇಮಿಸಿಕೊಳ್ಳುತ್ತಾರೆ. ಇದರಿಂದಾಗಿ ಬಾಬಣ್ಣ ಪಿ. ಯು. ಸಿ ವರೆಗೆ ಮಾತ್ರ ಓದಲು ಸಾಧ್ಯವಾಯಿತು. ಮೂವರು ಸಹೋದರರ ಒಬ್ಬ ಸಹೋದರಿಯ ಪಾಲನೆ, ಪೋಷಣೆ, ಶಿಕ್ಷಣ ಹೀಗೆ ಎಲ್ಲ ಜವಾಬ್ದಾರಿಯನ್ನು ಬಾಬಣ್ಣ ತಾಯಿಯವರ ಮಾರ್ಗದರ್ಶನದಲ್ಲಿ ಹೊತ್ತುಕೊಂಡು ಹೋದರು. ಮೂರು ವರುಷ ಕ್ವಾರ್ಟರ್ಸದಲ್ಲಿಯೇ ಇದ್ದರು. ಮಾಳಮಡ್ಡಿ ಭಾಡಿಗೆ ಮನೆಯಲ್ಲಿ ಕೆಲವು ವರುಷ ಇದ್ದು ಮುಂದೆ ಕಲ್ಯಾಣ ನಗರದಲ್ಲಿ ವಾಸ ಮಾಡಿಕೊಂಡಿರುತ್ತಿರುವರು.

ಬಾಬಣ್ಣ ಎಲ್ಲರ ಲಗ್ನ ಮಾಡಿಯಾದ ಮೇಲೆ ತಮ್ಮ ಲಗ್ನ ಮಾಡಿಕೊಂಡರು. ಎಂ. ಎ. ಪದವೀಧರೆ ಉಷಾ ಅವರೊಂದಿಗೆ ಕ್ರಿ. ಶ. ೧೯೭೨ ರಲ್ಲಿ ಲಗ್ನ ಮಾಡಿಕೊಂಡಿರುವರು. ಈ ದಂಪತಿಗಳಿಗೆ ಸಮತ್ ಮತ್ತು ಶಿವಾನಿ ಹೆಸರಿನ ಇಬ್ಬರು ಮಕ್ಕಳಾಗಿರುವರು. ಬಾಬಣ್ಣಾ ಅವರು ವಿಶ್ವವಿದ್ಯಾಲಯದ ನವಕರಿ ಬಿಟ್ಟು ತಮ್ಮ ನಿಜಗುಣ ದೇವ ಅವರೊಂದಿಗೆ ಧಾರವಾಡದಲ್ಲಿ ಹನ್ನೊಂದು ಎಕರೆ ಜಮೀನು ಖರೀದಿಸಿ ಅಲ್ಲಿ 'SARPAN' ಹೆಸರಿನಲ್ಲಿ ಕೃಷಿ ತೋಟಗಾರಿಕೆ ಸಂಶೋಧನಾ ಕೇಂದ್ರವೊಂದನ್ನು ಪ್ರಾರಂಭಿಸಿರುವರು. ಈ 'SARPAN' ಹೆಸರಿಗೆ ತನ್ನದೇ ಆದ ವೈಶಿಷ್ಟ್ಯ ಒಂದಿರುವುದು. **S** ಎಂದರೆ ಸಾವಳಿಗೇಶ, **A** ಅನುಸೂಯಾ , **R** ಎಂದರೆ ರವಿ (ರಾಚಯ್ಯ), **P** ಎಂದರೆ ಪುಲಕೇಶಿ, **A** ಎಂದರೆ ಅಕ್ಕಮಹಾದೇವಿ ಹಾಗೂ **N** ಎಂದರೆ ನಿಜಗುಣಪ್ಪ ಎಂಬ ಔಚಿತ್ಯವಿರುವುದನ್ನು ವರ್ಮಾರ್ಮಿಕವಾಗಿ ವಿವರಿಸಿದರು– ಔಚಿತ್ಯಪೂರ್ಣವಾದುದಾಗಿದೆ.

**ಎರಡನೆಯ ಮಗ ರವಿ (ರುದ್ರಯ್ಯ) :**

ಡಾ. ಬಿ. ಎಸ್. ಗದ್ದಗಿಮಠ ಅವರ ೨ನೇ ಮಗ ರುದ್ರಯ್ಯ ಎಂಬುವರು. ಇವರು ತಾಯಿಯ ತವರುಮನೆ ಕಟಕೋಳದಲ್ಲಿ ದಿ. ೨೪.೧೧.೧೯೫೩ ರಂದು ಜನಿಸಿದವರಾಗಿದ್ದಾರೆ. ಇವರು ಚಿಕ್ಕಂದಿನಿಂದಲೂ ಜಾಣ ವಿದ್ಯಾರ್ಥಿಯಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ. ಎ. ಪದವಿಯನ್ನು (ಸೋಶಿಯಾಲಜಿ), ೧೯೭೮ ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಎಂ. ಬಿ. ಎ. ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೯೬ ರಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದುಕೊಂಡಿರುವರು. ಕ್ರಿ. ಶ. ೧೯೬೯ ರಿಂದ ೧೯೭೭ ರವರೆಗೆ ನಗರ ಕೇಂದ್ರ ಗ್ರಂಥಾಲಯದಲ್ಲಿ ನವಕರಿ ಮಾಡುತ್ತ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ ೦೩.೧೧.೧೯೮೪ ರಿಂದ ಗುಲಬರ್ಗಾ ವಿಶ್ವವಿದ್ಯಾಲಯದ ಲೈಬ್ರೇರಿಯನ್ನರಾಗಿ ಅತ್ಯುತ್ತಮ ಸೇವೆ ಸಲ್ಲಿಸುತ್ತಲಿರುವರು. ಅಮೇರಿಕಾದ ಇಲಿನಾಯಿಸ್ ವಿಶ್ವವಿದ್ಯಾಲಯದಲ್ಲಿ ಎಡ್ವಾನ್ಸ್ ಟ್ರೇನಿಂಗ್ ಪಡೆದಿರುವರು. ಧಾರವಾಡ, ಕೊಯಿಮತ್ತೂರು, ಹೈದ್ರಾಬಾದಗಳಲ್ಲಿಯೂ ಸೇವೆ ಸಲ್ಲಿಸಿದವರಾಗಿದ್ದಾರೆ. ಶಿಸ್ತು – ಸಂಘಟನೆಗೆ ಇನ್ನೊಂದು ಹೆಸರೇ ಡಾ. ರವಿ ಗದ್ದಗಿಮಠ ಎನಿಸಿರುವರು.

ಡಾ. ರವಿ ಗದ್ದಗಿಮಠರು ಬೆಂಗಳೂರಿನ ನ್ಯಾಯವಾದಿ ಶ್ರೀ ಆರ್.ಪಿ. ಹಿರೇಮಠ ಅವರ ಮಗಳು ಬಿ. ಎ. ಪದವೀಧರೆ ಶ್ರೀಮತಿ ಪುಷ್ಪಾ ಅವರೊಂದಿಗೆ ಲಗ್ನವಾಗಿರುವರು. ಈ ದಂಪತಿಗಳಿಗೆ ಅನುಪಮಾ (ಸಾಫ್ಟವೇರ್ ಇಂಜನೀಯರ್), ಅಪೂರ್ವ ಗುಲಬರ್ಗಾ S.B.R. ದಲ್ಲಿ ೨ ನೇ ವರುಷದಲ್ಲಿ ಓದುತ್ತಲಿರುವರು.

## ಮೂರನೇ ಮಗ ಪುಲಕೇಶಿ :

ಶ್ರೀ ಪುಲಕೇಶಿಯವರು ಎಂ. ಎಸ್‌ಸಿ. ಮತ್ತು ಎಂ. ಎ. ಪದವೀಧರರಾಗಿದ್ದಾರೆ. ಬೆಂಗಳೂರಿನ ತೋಟಗಾರಿಕೆ ಇಲಾಖಾ ರಿಸರ್ಚ್ ಸೆಂಟರ್ ನಲ್ಲಿ ಆಫೀಸರ್ ರಾಗಿರುವರು. ಇವರ ಲಗ್ನವು ಸೆರಿಕಲ್ಚರ್ ಇಲಾಖೆಯ(ಬೆಂಗಳೂರು) ಡೆಪ್ಯೂಟಿ ಡೈರೆಕ್ಟರಾಗಿರುವ ಶ್ರೀಮತಿ ಗೀತಾ (ಬಿ. ಎ. ಎಲ್.ಎಲ್.ಬಿ) ರಾಣೆಬೆನ್ನೂರಿನ ಮಾಜಿ ಎಂ.ಎಲ್.ಎ ಬೆಲ್ಲದ ನಾಗಪ್ಪ ಅವರ ಮಗಳು) ಅವರೊಂದಿಗೆ ಲಗ್ನವಾಗಿರುವರು. ಈ ದಂಪತಿಗಳಿಗೆ ರೂಪಾ ಮತ್ತು ಪ್ರಿಯಾ ಇಬ್ಬರು ಮಕ್ಕಳಿರುವರು. ರೂಪಾ M.D.S. ಪದವೀಧರೆಯಿದ್ದರೆ ಪ್ರಿಯಾ ಫೈನಲ್ ಎಂ.ಬಿ.ಬಿ.ಎಸ್.ನಲ್ಲಿ ಓದುತ್ತಲಿರುವರು. ಪುಲಕೇಶಿಯವರು ತಂದೆ ತಾಯಿಗಳಂತೆ ಸುಮಧುರವಾಗಿ ಹಾಡಬಲ್ಲವರಾಗಿದ್ದಾರೆ.

## ಮಗಳು ಅಕ್ಕಮಹಾದೇವಿ :

ಡಾ. ಗದ್ದಗಿಮಠರಿಗೆ ಒಬ್ಬಳೇ ಮಗಳು, ತೀರ ಚಿಕ್ಕವಯಸ್ಸಿನಲ್ಲಿಯೇ ತಂದೆಯವರನ್ನು ಕಳೆದುಕೊಂಡು ಅಕ್ಕಮಹಾದೇವಿ ತಾಯಿಯವರ ಆಶ್ರಯದಲ್ಲಿಯೇ ಬೆಳೆದು ಬಂದವರಾಗಿದ್ದಾರೆ. ತಂದೆ ತಾಯಿಗಳ ಹಾಡುಗಾರಿಕೆಯನ್ನು ರಕ್ತಗತವಾಗಿಸಿಕೊಂಡಿದ್ದಾರೆ. ತಾಯಿಯೊಂದಿಗೆ ಚಿಕ್ಕಂದಿನಿಂದಲೂ ಹಾಡುತ್ತಲಿದ್ದರು. ತಂದೆಯವರು ರಚಿಸಿರುವ ಕವನಗಳನ್ನು ಸಂಗ್ರಹಿಸಿದ ಜನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಲಿರುವರು. ಇವರು ಎಂ. ಎ. (ಸಾಯ್ಕೋಲಜಿ) ಪದವೀಧರೆಯಿದ್ದು ಗುಲಬರ್ಗಾದ ಶ್ರೀ ಶಿವಕುಮಾರ ಸ್ವಾಮಿ ಅವರೊಂದಿಗೆ ಲಗ್ನವಾಗಿರುವರು. ಗುಲಬರ್ಗಾದಲ್ಲಿ ವುಮೆನ್ಸ್ ಡಿಗ್ರಿ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿರುವರು. ಪಿಎಚ್‌ಡಿ ಅಭ್ಯಾಸವನ್ನು ಮಾಡುತ್ತಲಿರುವರು. ಇವರಿಗೆ ಅಭಿಷೇಕ ಹೆಸರಿನ ಒಬ್ಬ ಮಗನಿದ್ದು ಕಾಲೇಜಿನಲ್ಲಿ ಓದುತ್ತಲಿರುವನು. ತಂದೆಯವರ ಕವನಗಳನ್ನು ಪ್ರಕಟಿಸುವ ಸಿದ್ಧತೆಯಲ್ಲಿದ್ದಾರೆ – ಪ್ರೊ. ಅಕ್ಕಮಹಾದೇವಿಯವರು ಆಕಾಶವಾಣಿಯ ಕಲಾಕಾರರೂ ಆಗಿದ್ದಾರೆ.

## ಕೊನೆಯ ಮಗ ನಿಜಗುಣದೇವ :

ಡಾ. ಗದ್ದಗಿಮಠರ ಕೊನೆಯ ಪುತ್ರ ನಿಜಗುಣದೇವರು ಎಂ.ಎಸ್‌ಸಿ.(ಅಗ್ರಿ) ಪದವೀಧರರು. ಪಿಎಚ್ ಡಿ ಪದವಿಯನ್ನು ಪಡೆದವರಾಗಿದ್ದಾರೆ. ಧಾರವಾಡ ಕೃಷಿ

ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕೆಲ ವರುಷ ಸೇವೆ ಸಲ್ಲಿಸಿರುವರು. ಅಣ್ಣ ಬಾಬಣ್ಣ ಅವರೊಂದಿಗೆ ಸೇರಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಮೀಪ ಹನ್ನೊಂದು ಎಕರೆ ಭೂಮಿ ಖರೀದಿಸಿ. SARPAN ಹೆಸರಿನ ತೋಟಗಾರಿಕೆ ಸಂಶೋಧನಾ ಕೇಂದ್ರ ಒಂದನ್ನು ಪ್ರಾರಂಭಿಸಿ ಉದ್ಯಮಿದಾರರೆನಿಸಿರುವರು.

ಡಾ. ನಿಜಗುಣರ ಲಗ್ನವು ಬೆಂಗಳೂರಿನ ನ್ಯಾಯವಾದಿ ಶ್ರೀ ಆರ್. ಸಿ. ಹಿರೇಮಠ ಅವರ ಮಗಳು ಶ್ರೀಮತಿ ಲತಾ ಎಂ. ಕಾಂ. ಅವರೊಂದಿಗೆ ಲಗ್ನವಾಗಿದ್ದು ಇವರಿಗೆ ಕ್ಷಿತಿಪ ಮತ್ತು ಸೌರಭ ಇಬ್ಬರು ಮಕ್ಕಳಾಗಿದ್ದು ಧಾರವಾಡದಲ್ಲಿ ಓದುತ್ತಲಿರುವರು. ಕಲ್ಯಾಣ ನಗರದ ಮನೆಯಲ್ಲಿ ಅಣ್ಣ ಬಾಬಣ್ಣ ಅವರೊಂದಿಗೆ ವಾಸ ಮಾಡಿಕೊಂಡಿರುವರು.

ಡಾ. ಬಿ. ಎಸ್. ಗದ್ದಗಿಮಠರ ಎಲ್ಲ ಮಕ್ಕಳೂ ಪ್ರತಿಭಾವಂತರೂ ಪ್ರಯತ್ನವಾದಿಗಳೂ ಸಚ್ಚಾರಿತ್ರಶೀಲರೂ ಆಗಿದ್ದು ತಮ್ಮ ಕಾಲ ಮೇಲೆ ತಾವು ನಿಂತುಕೊಂಡು ಹಿರಿಯ ಅಣ್ಣ ಬಾಬಣ್ಣ ಅವರ ಮಾರ್ಗದರ್ಶನದಲ್ಲಿ ಒಂದಾಗಿ-ಚೆಂದಾಗಿ ಬಾಳು ಸಾಗಿಸುತ್ತಲಿರುವರು.

## ಡಾ. ಬಿ. ಎಸ್. ಗದ್ದಗಿಮಠರವರ ನಿಧನ :

ಡಾ. ಬಿ. ಎಸ್. ಗದ್ದಗಿಮಠರು ವಿಶ್ವವಿದ್ಯಾಲಯದಲ್ಲಿ ದೊರೆತ ನವಕರಿಯನ್ನು ಸಂತೋಷದಿಂದ, ಅಷ್ಟೇ ನಿಷ್ಠೆಯಿಂದ ಮಾಡುತ್ತ ನೆಮ್ಮದಿಯ ಬಾಳನ್ನು ಧಾರವಾಡದಲ್ಲಿ ಬಾಳುತ್ತಲಿದ್ದರು. ವಿಶ್ವವಿದ್ಯಾಲಯದ ಕ್ವಾರ್ಟರ್ಸ್ ಒಂದರಲ್ಲಿ ಇರುತ್ತಿದ್ದರು. ತಮ್ಮ ಉದ್ಯೋಗದ ಜೊತೆಗೆ ಒಲವಿನ ಜಾನಪದ ಸಂಗ್ರಹ, ಸಂಪಾದನೆ, ಪ್ರಕಟನೆಯ ಕಾರ್ಯವನ್ನು ಚೆನ್ನಾಗಿ ಮಾಡುತ್ತಲಿದ್ದರು. ಕನ್ನಡ ಸಂಸ್ಕೃತಿ ಇಲಾಖೆಗೆ ಮುದ್ರಣಕ್ಕೆ ಹಲವಾರು ಹಸ್ತ ಪ್ರತಿಗಳನ್ನು ಸಿದ್ಧಪಡಿಸಿ ಕಳಿಸಿಕೊಟ್ಟಿದ್ದರು. ಆ ಹಸ್ತಪ್ರತಿಗಳು ಹನ್ನೆರಡು ಇದ್ದವಂತೆ. ಬಸವ ಪುರಾಣ, ಜನಪದ ಮಹಾ ಭಾರತ ಕೃತಿಗಳೂ ಅದರಲ್ಲಿದ್ದವು ಎಂದು ಕೇಳ ಬರುತ್ತದೆ. ಇವುಗಳನ್ನು ಮುದ್ರಣಕ್ಕೆ ಕಳಿಸಿದ ಕೆಲವೇ ದಿನಗಳಲ್ಲಿ ಡಾ. ಬಿ. ಎಸ್. ಗದ್ದಗಿಮಠರು ೨ ನವ್ಹೆಂಬರ್ ೧೯೭೦ ರಂದು ಇಹಲೋಕ ತ್ಯಜಿಸಿದರು. ಅವರ ಪ್ರಾಣ ಪಕ್ಷಿ ಹಾರಿ ಹೋಯಿತು. ಅವರ ಜೊತೆಗೆ ಅವರು ಸಂಗ್ರಹಿಸುತ್ತಿದ್ದ ಜನಪದ ಸಂಪತ್ತು ಮಾಯವಾಗಿ ಬಿಟ್ಟಿತು. ಇದರಿಂದ ವ್ಯೆಯಕ್ತಿಕವಾಗಿ ಅವರ ಕುಟುಂಬ ವರ್ಗಕ್ಕೂ ಕರ್ನಾಟಕ ಜಾನಪದ ಲೋಕಕ್ಕೂ ತುಂಬಬಾರದ ನಷ್ಟವಾಯಿತು. ಅವರ ಧರ್ಮಪತ್ನಿ ಅನುಸೂಯಾ ಇನ್ನೂ ಚಿಕ್ಕ ವಯಸ್ಸು, ಇವರ ಮಕ್ಕಳು ಬಹಳೇ ಚಿಕ್ಕವರು. ಆದರೂ ತಾಯಿ ಧೈರ್ಯವಂತೆ, ಪತಿಯನ್ನು ಕಳೆದುಕೊಂಡ ದುಃಖವನ್ನು ನುಂಗಿಕೊಂಡು ಮಕ್ಕಳ ಪಾಲನೆ-ಪೋಷಣೆಯಲ್ಲಿ ನಗು ನಗುತ್ತ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳ ತೊಡಗಿದರು. ಇವರ ಹಿರಿಯ ಮಗ ಸಾವಳಗೇಶ (ಬಾಬಣ್ಣ) ಅವರು

ಕೇವಲ ಹನ್ನೊಂದು ವರುಷದವರಿದ್ದರು. ತಾಯಿ ಕಷ್ಟಪಟ್ಟು ಎಲ್ಲರನ್ನು ಓದಿಸಿದರು, ಲಗ್ನ ಮಾಡಿದರು. ತನ್ನ ಕೆಲಸ ಮುಗಿಯಿತೆಂದು ಕ್ರಿ. ಶ. ೧೯೮೩ ರಲ್ಲಿ ಅವರೂ ಸ್ವರ್ಗಸ್ಥರಾದರು. ತಂದೆ ತಾಯಿಗಳನ್ನು ಕಳೆದುಕೊಳ್ಳುವುದರೊಂದಿಗೆ ತಂದೆಯವರು ಗಳಿಸಿದ್ದ, ಸಂಗ್ರಹಿಸಿದ್ದ ಜಾನಪದ ಸಂಪತ್ತನ್ನೂ ಕಳೆದುಕೊಂಡರು. ಎಲ್ಲ ಭಾರವೂ ಬಾಬಣ್ಣಾ ಅವರ ಮೇಲೆ ಬಿತ್ತು. ಅವರೂ ಧೀರರಾಗಿ ಮನೆತನ ಮುಂದೆ ತಂದವರಾಗಿದ್ದಾರೆ.

## ಬರಹ

ಡಾ. ಬಿ. ಎಸ್. ಗದ್ದಗಿಮಠರು ಬಿ.ಪಿಎಡ್ ಅಭ್ಯಾಸ ಮಾಡುವಾಗ ಮುಂಬೈಯಲ್ಲಿ ಇದ್ದರು. ಆಗಲೇ ಅವರ ಲಗ್ನವೂ ಆಗಿತ್ತು. ಪತ್ನಿಯನ್ನು ತವರು ಮನೆಗೆ ಕಳಿಸಿದ್ದರು. ಆಗಾಗ ಹೋಗಿ ಬಂದು ಮಾಡುತ್ತಿದ್ದರು. ಮುಂಬೈಯಲ್ಲಿದ್ದಾಗ ವಾರಕ್ಕೆ ಒಂದೆರಡಾದರೂ ಪತ್ರಗಳನ್ನು ಪತ್ನಿ ಅನುಸೂಯಾ ಅವರಿಗೂ ಬರೆಯಲು ತಪ್ಪುತ್ತಿರಲಿಲ್ಲ. ನಿತ್ಯವೂ ಒಂದೊಂದು ಪ್ರೇಮ ಗೀತೆಗಳನ್ನು ಬರೆಯುವ ರೂಢಿ ಮಾಡಿಕೊಂಡರು. ಒಮ್ಮೊಮ್ಮೆ ಸೂಟಿಯ ವೇಳೆಯಲ್ಲಿ ಬೀಚ್‌ಗೆ ಹೋಗಿ ಅಲ್ಲಿ ಕುಳಿತುಕೊಂಡು ಅನುಸೂಯಾಳನ್ನು ನೆನೆಸಿಕೊಂಡು ಕಣ್ಣೀರು ಸುರಿಸಿದ್ದೂ ಉಂಟು. ಪತ್ರದಲ್ಲಿ ತಾವು ಬರೆದ ಕವನಗಳನ್ನು ಬರೆದೂ ಕಳಿಸುತ್ತಿದ್ದರು. ಮರಾಠಿ ಕಲಿತಿದ್ದ ಅನುಸೂಯಾ ಕನ್ನಡ ಓದು ಬರಹ ರೂಢಿಸಿಕೊಂಡಿದ್ದರು. ಪತಿ ಬರೆದ ಕವನಗಳನ್ನು ಕಂಠಪಾಠ ಮಾಡುತ್ತಿದ್ದರು. ಅವುಗಳನ್ನು ಸುಂದರವಾಗಿ ಹಾಡುತ್ತಲಿದ್ದರು. ಪತಿ ಬಂದಾಗ ಅವುಗಳನ್ನು ಹಾಡಿ ತೋರಿಸಿ, ಪ್ರೀತಿಯಿಂದ ಅಲಂಗಿಸಿಕೊಳ್ಳುತ್ತಿದ್ದರು. ಅವರು ಬರೆದ ಹಾಡುಗಳ ಸಂಗ್ರಹ ಆಗಲೇ ಪ್ರಕಟವಾಗಬೇಕಾಗಿತ್ತು. ಯಾಕೋ ನಿಂತು ಹೋದದ್ದು ಗೊತ್ತಾಗಲಿಲ್ಲ. ಇಷ್ಟರಲ್ಲಿ ಅವರ ಮಗಳು ಪ್ರೊ. ಅಕ್ಕಮಹಾದೇವಿ ಆ ಕವನ ಸಂಗ್ರಹವನ್ನು ಪ್ರಕಟಿಸಲಿರುವರೆಂದೂ ಕೇಳಿರುವೆ.

ಡಾ. ಗದ್ದಗಿಮಠರು ಸರಾಗವಾಗಿ ಹಾಡುತ್ತಿದ್ದರು. ಜನಪದ ಹಾಡುಗಳ ಎಲ್ಲ ಬಗೆಯ ಧಾಟಿಗಳನ್ನು ಅವರು ಕಲಿತುಕೊಂಡಿದ್ದರು. ಅವುಗಳನ್ನು ಹಾಡುತ್ತಿದ್ದರು. ಬೆಳಗಾವಿಯಲ್ಲಿ ನಡೆಯುತ್ತಿದ್ದ ಕವಿಗೋಷ್ಠಿಗಳಲ್ಲಿ, ಸ್ವರಚಿತ ಕವನಗಳನ್ನು, ಹಾಡುತ್ತಿದ್ದುದ್ದನ್ನು ನಾನು ಹಲವಾರು ಬಾರಿ ಕೇಳಿದ ನೆನಪು ನನಗಿನ್ನೂ ಮಾಸಿಲ್ಲ. ಅವರ ಬರಹ ಪ್ರಾರಂಭವಾದದ್ದು ಮೊದಲು ಈ ಕವನಗಳಿಂದ

**ಸೃಜನ ಕವಿ**

ಇಬ್ಬರಿಗೂ ಗೊತ್ತೇ ಇಲ್ಲ, ಈ ಬಾಳಿನ ಬಿಂಬವ ನೋಡಾ ।<br>
ನಾನು ನೀನು, ನೀನೆ ನಾನು, ಹ್ಯಾಂಗೋ ಹ್ಯಾಂಗೋ ಬಂದೀವಿ ।

ಹಾದಿ ಮ್ಯಾಲಿನ ಭೆಟ್ಟಿ ಹ್ಯಾಂಗ, ಇಬ್ಬರಿಗೂ ಗೊತ್ತೇ ಇಲ್ಲ।
ಹೊಳೆಯು ಹುಟ್ಟೋರು ಬೆಟ್ಟದ ಮೇಲೆ।
ತುಂಬಿ ನಗಿಸೋದು ಬೈಲನಾಡ।
ಯಮುನಾ ಗಂಗಾ ಕೂಡಿದ್ಹಾಂಗ।
ನಗುವೆ ಬಾಳು ಅಳುವೆ ಗೋಳು
ಬಹಳ ನಗುತ್ತ ಬಾಳೋಣ
ಈ ಬಾಳಿನ ಅಳಲನು ಅಳಿಯೋಣ.................... ॥ ೧ ॥

ಉಸುರೇಕೆ ಮನದಣಿಯೆ ಆನಂದದಲಿ ಬಾಳು
ಆನಂದವೇ ನಮ್ಮ ಜೀವನ–ಜೇನು
ನಲಿನಲಿದಾಡುವ ನಿನ್ನಾಟ ನಾ ನೋಡಿ
ಪ್ರೇಮದಿ ಮರೆಯುವೆ ಕಲಕ ಬಾಳು
ನವಿಲಿನ ಗರಿಬಿಚ್ಚಿ ಕೋಗಿಲೆಯ ದನಿಯೆತ್ತಿ
ತಾಳವ ಹಾಕುತ ಕೂಗಿ ಕೂಗಿ ಕುಣಿದ
ಮೂದಿನದ ಸಂತೆಯು ಚಿಂತೆಯ ತವರ್‍ಯಾಕೆ ॥ ೨ ॥

ಚಿಂತೆ ಮಾಡುದಕೆ ಏನೇನೆ
ನೆನೆ ನೆನೆದು ಮನವ ಬಲು ಹಳಿದು
ಹುಟ್ಟಬಾರದೆಂಬ ತಲೆಗೆ ಬಲು ಗುಂಗಿನಲಿ
ಏನಾದರೇನದು ಆದದ್ದು ಬರಬಹುದೇ
ಏನೊಂದು ಲೆಕ್ಕಿಸದೇ ಭಯವಳಿದು ಬಾಳು
ಹೊಸದಲ್ಲ ಮರಣವು ಹುಟ್ಟಿದ ಜೀವಿಗೆ
ಸಾವು ಕಟ್ಟಿಟ್ಟ ಬುತ್ತಿ ತಾನೆಲ್ಲ ಮಾಡುವನು
ಸಾವಳಿಗೇಶ ಕಣ್ಣೀರ ಸುರಸುರಿಸಿ ಕೊರಗಿ ಸಾಯುವೆಯೆ ॥ ೩ ॥

ಹಣ್ಣಿನ ಗೊನೆಯೆತ್ತಿ ಜೀವಜಂಗುಳಿಗಿತ್ತು
ಹಸಿವಿನುರಿಯ ನಾ ಹಿಂಗಿಸುವೆ
ಹೂವಿನ ಹರಳಿಂದ ಹೃದಯವನರಳಿಸಿ
ರಸಿಕ ಕುಲವನ ರಂಜಿಸುವೆ
ಬಾಳಿಯ ತೋಟಕ್ಕೆ ಬರಲಿದೆ ಹೊಸ ಸುಗ್ಗಿ
ನಲಿ ನಲಿಸುವುದೊಂದು ತಳಿರು
ಹಣ್ಣ ಹೊರುವೆ ನಾನು ಹೂವ ಬೀರುವೆ ನೀನು
ದಿಟ ದಿಟ ನಂಬು ಈ ಮಾತು

ನೀ ನಕ್ಕೊ ನಲಿಯಲು ನಾನೊಲಿದು ಕೊಡುವೆನು
ನಸುಕಿಲಿ ಚಕ್ರಾಂಗ ಜೋಡು ಕೂಡಿದಂತೆ
ಅದು ತೊರೆದ ನೊರೆ ಹಾಲು ಪ್ರೇಮದಿ ಹೆಪ್ಪ್ಟಾಕಿ
ಮನೆ ಬೆಳಗು ಮಗನ ಹೆತ್ತು ಮಂಗಳ ಬೆಳಗುವ ॥ ೪ ॥

'ಹದ್ದು ಹಾಲಕ್ಕಿಯು ಹಾಡುತಿಹವೇನೆ
ಕೂಗುತಿಹವು ಕಾಗೆ – ಗೂಗೆ
ಹೆದರಿಕೆ ಬಿಡು ಬಿಡು ಅವುಗಳಾಟವ ನೋಡು
ಹುದುಗಿಹುದಲ್ಲಿಯೇ ಸೊಬಗೆ ॥ ೫ ॥

ಭಾರತದ ಸ್ವಾತಂತ್ರ್ಯದ ಮುನ್ನಾ ದಿನ ಅಂದರೆ ೧೯೪೭ ಆಗಸ್ಟ್ ೧೪ ರ ರಾತ್ರಿ ಬರೆದು ಹಾಡಿದ್ದು.

"ಬರುತಿದೆ ಬರುತಿದೆ ಬೆಳಗಾಗಲು
ಸ್ವಾತಂತ್ರ್ಯ ಭಾರತ ।
ಉದಯ ದಿನ ಜನರರಳಿದ ಮನ
ಸಾರಲಿ ಭಾರತ ಸ್ವಾತಂತ್ರ್ಯ

ಒಮ್ಮನ ಜೀವನ ದ್ವಿಮನರೇರಣ
ಮೈಮನವೆ ಪ್ರಾಣ ಹರಣ
ಚಕ್ರ ಬಾವುಟ ಗಾಳಿಯಲಿ ಪಟ ಪಟಾ
ಸಾರಲೆ ಭಾರತ ಸ್ವಾತಂತ್ರ್ಯ
ಹಿರಿಯ ಮಗ ಬಾಬಣ್ಣ ಹುಟ್ಟಿ, ಆಡಲು ಹೋದ ಮಗನ ನಿರೀಕ್ಷೆಯಲ್ಲಿ
'ಛೈ ಛೈ ಛೈ !!! ಚರಗುಬ್ಬಿ
ಪುಟ್ಟಿ ನನ್ನ ಬಾಬೂನ ಕಂಡಿರೇನ
ಕಂಡವರ್‍ಯಾತಕ ಬಿಟ್ಟು ಬಂದಿರೆ
ನಸುಕಿಲೆದ್ದು ಹೋದಾಂವಿನ್ನೂ ಮನೆಗೆ ಬಂದಿಲ್ಲ

## ಸಂಶೋಧನ ಬರಹ :

ಚಿಕ್ಕಂದಿನಿಂದಲೂ ಡಾ. ಗದ್ದಗಿಮಠರ ಒಲವೆಲ್ಲ ಜಾನಪದ ಹಾಡುಗಳ ಕಡೆಗೆ. ತಿಳುವಳಿಕೆ ಹೆಚ್ಚಿದಂತೆಲ್ಲ ಪದವೀಧರರಾದ ಮೇಲೆ ಆ ಹಾಡುಗಳ ಸಂಗ್ರಹ ಸಂಪಾದನೆ, ಸಂಶೋಧನೆ ಹಾಗೂ ಪ್ರಕಟನೆಯ ಕಡೆಗೆ ವಾಲಿದರು. ಅಂತೆಯೇ ಅವರ ಹಲವಾರು ಜಾನಪದ ಹಾಡುಗಳ ಸಂಗ್ರಹ–ಸಂಪಾದನೆ, ಸಂಶೋಧನೆ ಮಹಾ ಪ್ರಬಂಧ, ಬರಹಗಳ ಹಲವಾರು ಕೃತಿಗಳನ್ನು ಕಾಣುತ್ತಿದ್ದೇವೆ. ಅವು ಹೀಗಿವೆ:

## ೧. ನಾಲ್ಕು ನಾಡಪದಗಳು :

ಕ್ರಿ. ಶ. ೧೯೫೨ ರಲ್ಲಿ ಪ್ರಕಟವಾದ 'ನಾಲ್ಕು ನಾಡಪದಗಳು' ಕೃತಿಯಲ್ಲಿ ನಾಲ್ಕೂ ಜನ ಶಿವ ಭಕ್ತರ ಕುರಿತಾದ ಕಥಾ ಪ್ರಸಂಗದ ಹಾಡುಗಳಿರುವುವು.

**೧. ಬಿಜ್ಜಮಹಾದೇವಿ ೨. ಬೇಡರ ಕನ್ನಯ್ಯ ೩. ಕೋಳೂರ ಕೊಡಗೂಸು ಹಾಗೂ ೪. ಗೊಲ್ಲಾಳ**

ಇವು ಕಥನ ಕವನಗಳಾಗಿದ್ದು, ಬಿಜ್ಜ ಮಹಾದೇವಿಯಲ್ಲಿ ೯೦ ನುಡಿಗಳಿವೆ. ಬೇಡರ ಕನ್ನಯ್ಯನ ಕಥೆಯಲ್ಲಿ ೯೦ ಹಾಗೂ ಕೋಳೂರು ಕೊಡಗೂಸ ಹಾಡಿನಲ್ಲಿ ೮೯ ನುಡಿಗಳಿದ್ದು ಕೊನೆಯ ಗೊಲ್ಲಾಳ ಕಥೆಯಲ್ಲಿ ೭೭ ನುಡಿಗಳ ಸಂಗ್ರಹ ಕೃತಿಯಿದು.

## ೨. ಕಂಬಿಯ ಹಾಡುಗಳು :

ಕಂಬಿಯ ಹಾಡುಗಳ ಈ ಚಿಕ್ಕ ಜನಪದ ಹಾಡುಗಳ ಸಂಗ್ರಹವು ಕ್ರಿ. ಶ. ೧೯೫೫ ರಲ್ಲಿ ಪ್ರಕಟವಾಗಿರುವುದು. ಶ್ರೀಶೈಲ ಮಲ್ಲಯ್ಯನನ್ನು ಕುರಿತ ಕಂಬಿಯ ಹಾಡುಗಳ ಸಂಪ್ರದಾಯಕ್ಕೆ ಸಂಬಂಧಿಸಿದ ಬಿರುದಾವಳಿಯ ಹಾಗೂ ಮಂಗಳಾರತಿಯ ಜನಪದ ಹಾಡುಗಳ ಸಂಗ್ರಹ ಕೃತಿಯಿದಾಗಿದೆ.

## ೩. ಜನತಾ ಗೀತೆಗಳು :

ಧಾರವಾಡದ ಕರ್ನಾಟಕ ಸಹಕಾರಿ ಸಾಹಿತ್ಯ ಸಂಘದಿಂದ ಜನತಾ ಗೀತೆಗಳು ಈ ಕೃತಿಯು ಕ್ರಿ.ಶ. ೧೯೫೬ ರಲ್ಲಿ ಪ್ರಕಟವಾಗಿರುವುದು. ಜನತಾ ಗೀತೆಗಳ ಈ ಗ್ರಂಥದ ಪ್ರಕಾಶಕರ ಪರವಾಗಿ ಬರೆದ ನುಡಿಯಲ್ಲಿ 'ಡಾ. ಗದ್ದಗಿಮಠರು ಸಂಗ್ರಹಿಸಿರುವ ಲಕ್ಷಗಟ್ಟಲೆ ಹಾಡುಗಳಲ್ಲಿ ಅಲ್ಲಲ್ಲಿ ಆಯ್ದು ಕೆಲವೇ ಗೀತೆಗಳನ್ನು ಇಲ್ಲಿ ಸಂಗ್ರಹಿಸಿರುವೆವು' ಎಂದು ಬರೆದಿರುವುದನ್ನು ಗಮನಿಸಬಹುದಾಗಿದೆ. ಇದರಲ್ಲಿ ೧. ಸಂಪ್ರದಾಯದ ಹಾಡುಗಳು ೨. ಹಂತಿಯ ಹಾಡುಗಳು ೩. ಹೋಳಿಯ ಹಾಡುಗಳು ೪. ಬೀಸುವ ಹಾಡುಗಳು ೫. ಇತರೇ ಹಾಡುಗಳು ಇರುವವು.

## ೪. ಲೋಕ ಗೀತೆಗಳು :

'ಲೋಕ ಗೀತೆಗಳು' ಸಂಕಲನವು ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ ಬೆಂಗಳೂರು ಅವರಿಂದ ಕ್ರಿ. ಶ. ೧೯೬೦ ರಲ್ಲಿ ಪ್ರಕಟವಾಗಿರುವುದು. ಸೋಬಾನದ ಹಾಡು ಮತ್ತು ಕೋಲು ಪದಗಳಿವೆ. ಸೋಬಾನದ ಹಾಡುಗಳಲ್ಲಿ ಮತ್ತೆ ಮದುವೆ ಸೋಬಾನ ಹಾಗೂ ಮಂಗಲ ಸೋಬಾನ – ಎರಡು ಪ್ರಕಾರದವಿವೆ.

ಕೋಲು ಪದಗಳಲ್ಲಿ ಗೌರಿಸೀಗೆಯ ಪದಗಳೆಂದೂ ನಾಡ ಕೋಲು ಪದಗಳೆಂದೂ ಕಿತ್ತೂರ ಕೋಲ ಪದಗಳೆಂದೂ ವಿಭಾಗ ಮಾಡಿಕೊಂಡಿರುವರು.

## ೫. ಮಲ್ಲ ಮಲ್ಲಾಣಿ :

ಮಲ್ಲ ಮಲ್ಲಾಣಿ ಕ್ರಿ. ಶ. ೧೯೫೬ ರಲ್ಲಿ ಪ್ರಕಟವಾಗಿರುವುದು. ಇದನ್ನು ಮಹಾ ಶೃಂಗಾರ ಹಾಡುಗಬ್ಬ ಎಂದೂ ಕರೆದಿರುವರು. ಡಾ. ಗದ್ದಗಿಮಠರು ಬಹಳೇ ಸೊಗಸಾಗಿ ಹಾಡುತ್ತಿದ್ದನ್ನು ನಾನೂ ಬೆಳಗಾವಿಯ ಜಿ. ಎ. ಹೈಸ್ಕೂಲಿನಲ್ಲಿ ಕೇಳಿ ಸಂತೋಷಪಟ್ಟಿದ್ದೆ.

## ೬. ಕುಮಾರರಾಮನ ದುಂದುಮೆ :

'ಕುಮಾರರಾಮನ ದುಂದುಮೆ' ಕ್ರಿ. ಶ. ೧೯೫೬ ರಲ್ಲಿ ಪ್ರಕಟವಾಗಿದೆ. ಕುಮಾರರಾಮನ ಚರಿತ್ರೆಗೆ ಸಂಬಂಧಿಸಿದ ಚಾರಿತ್ರಿಕ ೧೫೧ ನುಡಿಗಳ ಸಂಕಲನ ಕೃತಿಯಿದಾಗಿದೆ. ಚಾರಿತ್ರಿಕ ಘಟನೆಗಳನ್ನಾಧರಿಸಿದ ಹಾಡುಗಳಿವಾಗಿವೆ.

## ೭. ಕನ್ನಡ ಜಾನಪದ ಗೀತೆಗಳು :

ಇದು ಡಾ. ಬಿ. ಎಸ್. ಗದ್ದಗಿಮಠರು ಪಿ.ಎಚ್. ಡಿ. ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಮರ್ಪಿಸಿದ ಮಹಾ ಪ್ರಬಂಧವಾಗಿರುವುದು. ಇದನ್ನು ಕರ್ನಾಟಕ ವಿಶ್ವವಿದ್ಯಾಲಯವು ಕ್ರಿ. ಶ. ೧೯೬೫ರಲ್ಲಿ ಮುದ್ರಿಸಿ ಪ್ರಕಟಿಸಿರುವದು. ಜನಪದ ಸಾಹಿತ್ಯವೂ ಉನ್ನತ ಸಂಶೋಧನೆ ಕೈಕೊಳ್ಳಲು ಯೋಗ್ಯ ವಿಷಯ ಎಂಬುದನ್ನು ಪ್ರಥಮ ಬಾರಿಗೆ ತೋರಿಸಿಕೊಟ್ಟ ಹೆಮ್ಮೆ ಇವರದಾಗಿದೆ.

## ೮. ಗದ್ದಗಿಮಠರ ಬರಹಗಳು :

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಜಾನಪದ ಮಾಲೆಯ ಪ್ರಕಟನೆಗಳಲ್ಲಿ ೬೭ನೆಯ ಕೃತಿಯಾಗಿದ್ದು, ಕ್ರಿ. ಶ. ೧೯೮೮ ರಲ್ಲಿ ಪ್ರಕಟವಾದ ಗ್ರಂಥ ಇದಾಗಿರುವುದು. ಇದರಲ್ಲಿ ಜಾನಪದದ ಸಂಪ್ರದಾಯಗಳು, ಜನಪದ ಸಾಹಿತ್ಯಾವಲೋಕನ, ಕಲಾರಾಶಿಗಳಿಗೆ ಸಂಬಂಧಿಸಿದ ವಿಶ್ಲೇಷಣಾತ್ಮಕ ಬರಹಗಳು ಇದರಲ್ಲಿರುವುವು. ಇದರ ಸಂಪಾದಕರು ಈ ಗ್ರಂಥವನ್ನು ಕುರಿತು ಬರೆದ ಮಾತುಗಳನ್ನಿಲ್ಲಿ ಮೆಲುಕು ಹಾಕಬಹುದಾಗಿದೆ. (ಪುಟ Vii-Viii )

"ಕನ್ನಡ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಆ ಕಾಲಕ್ಕೆ (೧೯೫೦-೧೯೬೦) ಡಾ. ಗದ್ದಗಿಮಠ ಅವರಷ್ಟು ವ್ಯಾಪಕ ಕ್ಷೇತ್ರ ಕಾರ್ಯ ಮಾಡಿದವರು ಇನ್ನೊಬ್ಬರಿಲ್ಲ. ತಮ್ಮ ಸಮಸ್ತವನ್ನು ಜಾನಪದಕ್ಕಾಗಿ ಅರ್ಪಿಸಿ, ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿ ಉತ್ತರ ಕರ್ನಾಟಕ ಹಾಗೂ ಉತ್ತರ ಕನ್ನಡ ಜಿಲ್ಲೆಯ ಭಾಗಗಳಲ್ಲಿ ವಿಪುಲವಾದ ಸಾಹಿತ್ಯವನ್ನು ಅವರು ಕಲೆ ಹಾಕಿದರು. ಕಲೆ ಹಾಕಿದ ಸಾಹಿತ್ಯವನ್ನು ವಿಶ್ಲೇಷಿಸುವ ಸಾಮರ್ಥ್ಯವನ್ನು ಬೆಳೆಸಿಕೊಂಡರು. ಜೊತೆಗೆ ತಮ್ಮ ಶ್ರೀಮತಿಯವರನ್ನು ಕಟ್ಟಿಕೊಂಡು ಎತ್ತಿನ ಬಂಡಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿ ಗೀತೆಗಳನ್ನು ಹಾಡಿ ವ್ಯಾಖ್ಯಾನಿಸಿ, ಜಾನಪದ

ಪ್ರಸಾರ ಕಾರ್ಯವನ್ನು ಕೈಗೊಂಡರು. ನಡು ವಯಸ್ಸಿನಲ್ಲಿಯೇ ಅವರು ತೀರಿಕೊಂಡದ್ದು ಕನ್ನಡ ಜಾನಪದ ಕ್ಷೇತ್ರಕ್ಕೆ ತುಂಬಲಾರದ ನಷ್ಟ"

"ಉತ್ತರ ಕರ್ನಾಟಕದ ಬಹುಭಾಗವನ್ನೆಲ್ಲ ಸುತ್ತಿ, ಜನಸಾಮಾನ್ಯರು ಸಂಪ್ರದಾಯ ಸಂಸ್ಕೃತಿಗಳಲ್ಲಿ ಒಂದಾಗಿ ಹಳ್ಳಿ ಹಳ್ಳಿಗಳಲ್ಲಿ ಹೇಳ ಹೆಸರಿಲ್ಲದೆ ಅಡಗಿ ಹೋಗಿದ್ದು ಜಾನಪದ ಗೀತ ರತ್ನಗಳನ್ನು ಅಚ್ಚಳಿಯದಂತೆ ಸಂಗ್ರಹಿಸಿಕೊಂಡು ಶ್ರೇಯಸ್ಸಿನ ಬಹುಪಾಲು ದಿವಂಗತ ಗದ್ದಗಿಮಠ ಅವರಿಗೆ ಸಲ್ಲುತ್ತದೆ. ಇವರ ಮನೆತನವೇ ಇಂಥ ಜಾನಪದ ಗೀತೆಗಳ ಮಹಾ ಕೋಶವಾಗಿದ್ದುದು ಇವರಿಗೆ ಈ ಕಾರ್ಯಕ್ಕಾಗಿ ಸಹಜ ಸ್ಫೂರ್ತಿಯನ್ನಿತ್ತುದ್ದಲ್ಲದೆ ಅದನ್ನವರು ತಮ್ಮ ಜೀವನದ ಧ್ಯೇಯವನ್ನಾಗಿ ಮಾಡಿಕೊಳ್ಳುವಂತೆ ಅಣಿಗೊಳಿಸಿತು."

ಡಾ. ಬಿ. ಎಸ್. ಗದ್ದಗಿಮಠರೇ ಹೇಳಿಕೊಂಡಂತೆ ಅವರಿಗೆ ಜಾನಪದ ಸಾಹಿತ್ಯದ ಕಡೆಗೆ ಒಲವು ಮೂಡಿಸಿದ್ದು ಅವರ ತಂದೆ ತಾಯಿಗಳೇ ಆಗಿದ್ದಾರೆಂಬುದನ್ನು ಮರೆಯಲಿಕ್ಕಾಗದು. ಅದನ್ನು ಇಲ್ಲಿ ನೆನೆಯಬೇಕಾದದ್ದೇ.

- "ಜಾನಪದ ಸಾಹಿತ್ಯದಲ್ಲಿ ನನಗೆ ಅಭಿರುಚಿ ಹುಟ್ಟಲು ನನ್ನ ತಾಯಿ ತಂದೆಗಳೇ ಮೂಲಕಾರಣ. ನನ್ನ ತೀರ್ಥರೂಪರೂ ನೂರೊಂದು ಶಿವಶರಣರ ಅಮೂಲ್ಯವಾದ ಹಂತಿಯ ಕಥನ-ಕವನಗಳನ್ನು ಸುಗ್ಗಿಯ ಕಾಲದಲ್ಲಿ ಬೆಳಗು ಹರಿಯುವವರೆಗೂ ಬಲು ಹುಮ್ಮಸದಿಂದ ಕೋಚೆತ್ತಿ ಹಾಡುತ್ತಿದ್ದರು. ಅವುಗಳ ನಿರರ್ಗಳ ಶೈಲಿ, ಕಥೆಯ ಬೆಡಗು, ರಸಪಾಕ, ಮಾರ್ದವತೆ, ನವೀನತೆ ಮೊದಲಾದವು ನನ್ನ ಮನವನ್ನು ಸೆಳೆಯಲು ಕಾರಣವಾದವು. ಅಂದಿನಿಂದ ಅವುಗಳ ಮಹತ್ವವನ್ನು ಅರಿತು, ಬಿಡುವು ದೊರೆತಾಗ ಕಲೆ ಹಾಕುತ್ತ ಬಂದೆ."

  **– ಪಿಎಚ್‌ಡಿ ಪ್ರಬಂಧ ಲೇಖಕರ ನುಡಿ.**

- "ಬಿ. ಎಸ್. ಗದ್ದಗಿಮಠರು ಜಾನಪದ ಸಂಗ್ರಹ, ಸಂಪಾದನೆ, ಅಧ್ಯಯನಗಳನ್ನು ಜೀವನ ಧ್ಯೇಯವಾಗಿರಿಸಿಕೊಂಡು ಅದಕ್ಕಾಗಿ ಹಗಲಿರುಳು ಶ್ರಮಿಸಿದ ಚೇತನ......... ಆಕಾಲಕ್ಕೆ ಒಂದು ವಿಶ್ವವಿದ್ಯಾಲಯ ಮಾಡಲಾರದ ಕೆಲಸವನ್ನು ಡಾ. ಬಿ. ಎಸ್. ಗದ್ದಗಿಮಠರು ಮಾಡಿದರು."

**– ಜಾನಪದ ಕೈಪಿಡಿ ಪುಟ – ೯೫ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರ–೨೦೦೦**

- ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨,೦೦೦ ಉತ್ತರ ಕರ್ನಾಟಕದ ಎಲ್ಲ ಬಗೆಯ ಜನಪದ ಗೀತ ಸಂಪ್ರದಾಯಗಳನ್ನು ವಿಸ್ತಾರವಾಗಿ ಪರಿಚಯ ಮಾಡಿಕೊಡುವ ಈ ಕೃತಿ ಕನ್ನಡ ಜನಪದ ಗೀತೆಗಳ ವಿಶ್ಲೇಷಣೆಯನ್ನು ಕುರಿತ ಒಂದು ಶ್ರೇಷ್ಠ ಗ್ರಂಥ ............ ಅತ್ಯಂತ ವ್ಯಾಪಕವಾಗಿ ಈ ಕೃತಿಯಲ್ಲಿ ಜನಪದ

ಗೀತೆಗಳ ಒಂದು ದೊಡ್ಡ ವಿಶ್ವವನ್ನೇ ಗದ್ದಗಿಮಠರು ತೆರೆದು ತೋರಿಸಿದ್ದಾರೆ.

– ಕನ್ನಡ ವಿಶ್ವಕೋಶ ಸಂ – ೩. ಕ. ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ – ೧೯೩೦ ಪು. ೬೦೮

- ಮೈಸೂರು ವಿಶ್ವವಿದ್ಯಾನಿಲಯ – ೧೯೭೦ ಸು ಜಾನಪದ ಪರಿಸರದಲ್ಲಿಯೇ ಹುಟ್ಟಿ ಬೆಳೆದು ಬಂದ ಅವರು ಜಾನಪದ ಕ್ಷೇತ್ರದ ಬಗೆಗೆ ಅಪಾರ ಕಾಳಜಿ, ಅಭಿಮಾನ ಹೊಂದಿದ್ದರು. ಅವರ ತಂದೆ ತಾಯಿಗಳು ಜನಪದ ಕವಿಗಳಾಗಿದ್ದರು. ಅವರ ಪ್ರಭಾವ ಹಾಗೂ ಸಂಸ್ಕಾರದ ಬಲದಿಂದ ಮಗ ಡಾ. ಗದ್ದಗಿಮಠರು ಉತ್ತಮ ಜಾನಪದ ಹಾಡಗಾರರೂ ಆಗಿದ್ದರು. ಡಾ. ಗದ್ದಗಿಮಠರು 'ಜಾನಪದ ಮಹಾ ಸಾಗರದಲ್ಲಿ ಈಜುವ ಮಹಾ ಮುತ್ಸದ್ದಿಯಾಗಿದ್ದರು' ಎಂದು ನುಡಿದ ಡಾ. ಡಿ. ಎಲ್. ನರಸಿಂಹಾಚಾರ್ಯರ ಉಕ್ತಿ ಸತ್ಯವಾದುದು.

–ಡಾ. ಮೃತ್ಯುಂಜಯ ಹೊರಕೇರಿ 'ಜಾನಪದ ಗಂಗೋತ್ರಿ' ೧೯೬೪ ಸಂ ೬ ಸಂ ೩.
ಪುಟ ೪೭ (೧೯೬೪)

- 'ವೈಜ್ಞಾನಿಕ ದೃಷ್ಟಿಕೋನದ ಕೊರತೆಯೆನಿಸಿದರೂ ಅಂದಿನ ಪರಿಮಿತಿಯಲ್ಲಿ ಪರಿಭಾವಿಸಿದಾಗ ಅವರ ಸಾಧನೆ ಗಮನಾರ್ಹವೆನಿಸುತ್ತದೆ.

– ಡಾ. ಶಾಂತಾ ಇಮ್ರಾಪುರ

## ಸಾಧನೆ :

೧. ಡಾ. ಬಿ. ಎಸ್. ಗದ್ದಗಿಮಠ ಅವರ ಜೀವನ, ಹೋರಾಟದ ಜೀವನ. ಇದ್ದುಳ್ಳವರ ಸುಸಂಸ್ಕೃತ ಮನೆತನದಲ್ಲಿ ಜನ್ಮ ತಾಳಿದ ಡಾ. ಗದ್ದಗಿಮಠರ ತಂದೆ ತಾಯಿಗಳು ಜನಪದ ಕಲಾಕಾರರು. ಶ್ರೀ ಗದ್ದಗಿಮಠರು ಆ ಕಲೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದರು.

೨. ಗ್ರಾಮೀಣ ಪರಿಸರದಲ್ಲಿ ಬೆಳೆದುಬಂದ ಗದ್ದಗಿಮಠರು ಚಿಕ್ಕಂದಿನಿಂದಲೂ ಕೋಣೆಯ ಕೂಸಾಗದೆ, ಓಣಿಯ ಕೂಸಾಗಿ ಬೆಳೆದು ಬಂದರು. ಆಟ ಪಾಠಗಳಲ್ಲಿ ಆಟವಾಡುತ್ತಲಿದ್ದರು. ಊಟ–ಭೈಠ ತೆಗೆಯುತ್ತಿದ್ದರು. ಸದೃಢ ಕಾಯ ಹೊಂದಿದ್ದರು. ಅಂತೆಯೇ ಪದವೀಧರರಾದ ಮೇಲೆ ಮುಂಬೈಗೆ ತೆರಳಿ ಕಾಂದೆವಾಲಿ ಟ್ರೇನಿಂಗ್ ಪಡೆದುಕೊಂಡು ದೈಹಿಕ ಶಿಕ್ಷಣದ ನಿರ್ದೇಶಕರಾದರು.

೩. ಕನ್ನಡದಲ್ಲಿ ಸ್ನಾತಕೋತ್ತರ ಅಭ್ಯಾಸ ಮುಂದುವರಿಸಿ ಮುಂಬೈ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಗಳಿಸಿದರು. ಸಂಶೋಧನೆ ಮುಂದುವರಿಸಿದರು. ಜಾನಪದ ವಿಷಯದಲ್ಲಿ ಆಳವಾದ ಸಂಶೋಧನೆ

ನಡೆಸಿ ಪಿಎಚ್ ಡಿ ಪದವಿ ಗಳಿಸಿದರು.

೪. ಹಲವಾರು ಜಾನಪದ ಕೃತಿಗಳನ್ನು ಸಂಪಾದಿಸಿ ಪ್ರಕಟಪಡಿಸಿದರು.

೫. ಬದುಕುವುದಕ್ಕೆ ಜೋಡಿ ಬೇಕು ಎಂಬ ಹಿರಿಯರ ಮಾತಿಗೆ ಹೂಂ ಗೊಟ್ಟು ಲಗ್ನ ಮಾಡಿಕೊಂಡರು. ಐವರು ಮಕ್ಕಳ ತಂದೆಯಾದರು. (ನಾಲ್ವರು ಗಂಡು, ಒಂದು ಹೆಣ್ಣು ಮಗಳು) ಸತಿಗೆ ಆದರ್ಶ ಪತಿಯಾಗಿ, ಸತಿಪತಿಗಳೊಂದಾಗಿ ಜೀವನ ನಡೆಸಿದರು.

೬. ಬಾಗಿಲಕೋಟೆ, ಬೆಳಗಾವಿ, ಲಕ್ಷ್ಮೇಶ್ವರ ಹಾಗೂ ಧಾರವಾಡಗಳಲ್ಲಿ ಕೆಲಸ ಮಾಡುತ್ತಲಿದ್ದಾಗ ನಡುವಯಸ್ಸಿನಲ್ಲಿಯೇ ಸ್ವರ್ಗಸ್ಥರಾದರು. ಇನ್ನೂ ಏನೇನೊ ಸಾಧಿಸಲು ಕನಸು ಕಂಡಿದ್ದ ಡಾ. ಬಿ. ಎಸ್. ಗದ್ದಗಿಮಠರ ಯೋಜನೆಗಳೆಲ್ಲ ಮಾಯವಾದವು.

ಡಾ. ಬಿ. ಎಸ್. ಗದ್ದಗಿಮಠರ ಕುರಿತಾದ ಈ ವಿಚಾರ ಸಂಕೀರ್ಣವೊಂದನ್ನು ಕರ್ನಾಟಕ ಜಾನಪದ ಅಕಾಡೆಮಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ ಸಂಯುಕ್ತವಾಗಿ ಆಚರಿಸಿದುದು ಸ್ತುತ್ಯವಾದುದಾಗಿದೆ. ಈ ಎರಡೂ ಸಂಸ್ಥೆಯ ಪದಾಧಿಕಾರಿಗಳಿಗೂ ನಾನು ಉಪಕೃತನಿರುವೆ. ನನ್ನ ಗುರುಗಳ ಬದುಕು–ಬರಹ–ಸಾಧನೆ ಕುರಿತಾದ ಈ ಪ್ರಬಂಧ ಮಂಡಿಸಲು ಎಲ್ಲ ರೀತಿಯ ಅನುವು ಮಾಡಿಕೊಟ್ಟ ಅಕಾಡೆಮಿಯ ಸದಸ್ಯರಾದ ಸ್ನೇಹಿತ ಶ್ರೀ ಗವೀಶ ಹಿರೇಮಠರಿಗೂ ನನ್ನ ಉಪ ಪದಾಧಿಕಾರಿಗಳಿಗೂ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕ ಮಿತ್ರರಿಗೂ ಅನಂತ ಪ್ರಣಾಮಗಳನ್ನು ಸಲ್ಲಿಸಿ, ಡಾ. ಗದ್ದಗಿಮಠರ ಚಿ. ಡಾ. ರವಿ ಗದ್ದಗಿಮಠ, ಪ್ರೊ. ಅಕ್ಕಮಹಾದೇವಿ ಸ್ವಾಮಿ ಹಾಗೂ ಉಳಿದ ಮಕ್ಕಳಿಗೂ ಮಾಹಿತಿ ನೀಡಿದ್ದಕ್ಕಾಗಿ, ಹಾಗೂ ಶಾಂತ ರೀತಿಯಿಂದ ನನ್ನ ಪ್ರಬಂಧ ಆಲಿಸಿದ ತಮಗೆಲ್ಲರಿಗೂ ವಂದಿಸುವೆ.

❖

# ಡಾ. ಬಿ. ಎಸ್. ಗದ್ದಗಿಮಠ ಅವರ
# ಬಿಡಿ ಬರಹಗಳು

ಡಾ ವೀರಣ್ಣ ದಂಡೆ

◆

ಕಥೆ ಕವನ ನಾಟಕ ಕಾದಂಬರಿಗಳ ನಿರ್ಮಾಣ ಮಾತ್ರ ಪ್ರತಿಭೆಯ ಕೆಲಸವೆಂದು, ಹಳಗನ್ನಡವನ್ನು ಓದುವುದೇ ಒಂದು ವಿದ್ವತ್ತು, ಶಾಸನಗಳನ್ನು ಉಲ್ಲೇಖಿಸುವುದೇ ಸಂಶೋಧನೆಗಳೆಂಬ ವಿಪರೀತ ಭ್ರಮೆಗಳನ್ನು ಹೊತ್ತ ಲಿಖಿತ ಮೂಲದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ವೀರಗಲ್ಲನ್ನು ಬಗೆದವನು, ಒಂದು ಶಾಸನವನ್ನು ಓದಿದವನು, ಒಂದು ತಾಡೋಲೆಯನ್ನು ಸಂಗ್ರಹಿಸಿದವನು ಸಂಶೋಧಕನೆನಿಸುತ್ತಾನೆ.

'ಲಿಖಿತಧಾರೆ'ಯ ಬಗೆಗಿನ ಇಂತಹ ಅನಾವಶ್ಯಕ ಭ್ರಮೆಗಳು ಕರಗದ ಹೊರತು ಡಾ. ಬಿ. ಎಸ್. ಗದ್ದಗಿಮಠ ಮತ್ತು ಡಾ. ಜಿ. ಶಂ. ಪ. ಅಂಥವರ ಬರಹಗಳ ಮಹತ್ವ ನಮಗೆ ಗೊತ್ತಾಗುವುದಿಲ್ಲ. ಅವುಗಳ ಸಂಶೋಧನಾತ್ಮಕ ಗುಣಮಟ್ಟ ನಮಗೆ ಅರ್ಥವಾಗುವುದಿಲ್ಲ. ಇಂದಿಗೂ ಮೌಖಿಕ ಪರಂಪರೆಯಲ್ಲಿ ದುಡಿದಿರುವವರ, ದುಡಿಯುತ್ತಿರುವವರ ಗತಿ ಭಿನ್ನವಾಗೇನೂ ಇಲ್ಲ. ಆದಷ್ಟು ಬೇಗ ಈ ಮನೋಭಾವ ದೂರವಾಗದಿದ್ದರೆ, ಕನ್ನಡ ಸಾಹಿತ್ಯದ ಬೆಳವಣಿಗೆ ಸರಿಯಾದ ದಿಕ್ಕಿನಲ್ಲಿ ಸಾಗಲು ಸಾಧ್ಯವಿಲ್ಲ. ಏಕೆಂದರೆ, ಯಾವುದೇ ಭಾಷೆಯಲ್ಲಿ ಎರಡು ಮುಖ್ಯವಾದ ಧಾರೆಗಳಿರುತ್ತವೆ. ಒಂದು ಮೌಖಿಕ ಧಾರೆಯಾದರೆ ಇನ್ನೊಂದು ಲಿಖಿತ ಧಾರೆಯಾಗಿದೆ. ಈ ಎರಡೂ ಕೂಡಿಯೇ ಒಂದು ಭಾಷೆಯ ಸಾಹಿತ್ಯ ಎಂದು ನಾವು ಗುರುತಿಸಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಕನ್ನಡದ ಮೌಖಿಕ ಮತ್ತು ಲಿಖಿತ ಎರಡೂ ಧಾರೆಗಳನ್ನು ಸಮಾನ ದೃಷ್ಟಿಯಿಂದ ನೋಡುವ, ಅಧ್ಯಯನ ಮಾಡುವ ಮನಸ್ಸನ್ನು ಬೆಳೆಸಿಕೊಳ್ಳಬೇಕಾಗಿದೆ. ಹೀಗಾದರೆ ಮಾತ್ರ ಕನ್ನಡ ಸಾಹಿತ್ಯದ ಸರಿಯಾದ ಅಧ್ಯಯನ ನಡೆಯಲು ಸಾಧ್ಯವಾಗುತ್ತದೆ.

ಡಾ. ಗದ್ದಗಿಮಠ ಅವರ ಬಗ್ಗೆ ಜಾನಪದಶಾಸ್ತ್ರದ ಪ್ರಸಿದ್ಧ ಪ್ರಾಧ್ಯಾಪಕರಾದ ಡಾ। ಜಿ. ಶಂ. ಪ. ಅವರು ಆಡಿದ ಕೆಲ ಮಾತುಗಳ ಉಲ್ಲೇಖದೊಂದಿಗೆ ನನ್ನ ಮಾತುಗಳನ್ನು ಪ್ರಾರಂಭಿಸುತ್ತೇನೆ:

"ಸ್ವಾತಂತ್ರೋತ್ತರ ದಿನಗಳ ಜಾನಪದ ಅಧ್ಯಯನಕ್ಕೆ ಒಳ್ಳೆಯ ಆರಂಭವನ್ನು ಒದಗಿಸಿದ ಶ್ರೇಷ್ಠ ವಿದ್ವಾಂಸರು ಡಾ. ಬಿ. ಎಸ್. ಗದ್ದಗಿಮಠ ಅವರು. ಜಾನಪದ ಕ್ಷೇತ್ರದಲ್ಲಿ ಸಂಶೋಧನೆಗೆ ನಾಂದಿ ಹಾಡಿದ ಆದ್ಯ ವಿದ್ವಾಂಸರು ಇವರು. ವ್ಯಾಪಕವಾದ ಕ್ಷೇತ್ರಕಾರ್ಯ ಹಾಗೂ ಉತ್ತಮ ಸಂಶೋದನೆಗಳ ಮೂಲಕ ನಮ್ಮ ಜಾನಪದ ಕ್ಷೇತ್ರಕ್ಕೆ ವಿದ್ವತ್ತಿನ ಹೊಂಬಳೆಯನ್ನು ತೊಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಡಾ. ಬಿ. ಎಸ್. ಗದ್ದಗಿಮಠ ಅವರು ೧೯೫೦ ರ ಸುಮಾರಿನಲ್ಲಿ ಜಾನಪದ ಸಂಶೋಧನೆಯನ್ನು ಕೈಗೊಂಡು ಕರ್ನಾಟಕ ವಿಶ್ವವಿದ್ಯಾನಿಯದ ಮೂಲಕ ಪಿ.ಎಚ್.ಡಿ. ಪದವಿಯನ್ನು ಪಡೆದರು. ಜಾನಪದಕ್ಕೆ ಸಂಬಂಧಿಸಿದಂತೆ ಡಾಕ್ಟರೇಟ್ ಪದವಿಯನ್ನು ಪಡೆದ ಭಾರತೀಯ ವಿದ್ವಾಂಸರ ಶ್ರೇಣಿಯಲ್ಲಿ ಇವರು ಮೊದಲ ಶ್ರೇಣಿಗೆ ಸೇರುತ್ತಾರೆ. ಡಾ. ಬಿ. ಎಸ್. ಗದ್ದಗಿಮಠ ಅವರ ಪ್ರಯತ್ನದಿಂದ ವಿಶ್ವವಿದ್ಯಾನಿಲಯ ಕರ್ನಾಟಕ ಜಾನಪದವನ್ನು ಒಂದು ಮೌಲಿಕವಾದ ಅಧ್ಯಯನ ವಿಷಯವೆಂದು ಮೊದಲು ಗುರುತಿಸಲು ಸಾಧ್ಯವಾಯಿತು. ಈವರೆಗೆ ಕನ್ನಡದಲ್ಲಿ ಕೆಲಸಮಾಡಿದ ವಿದ್ವಾಂಸರಾರೂ ಈ ನಿಟ್ಟಿನಲ್ಲಿ ಯೋಚಿಸಿರಲಿಲ್ಲ.

ಕನ್ನಡ ಜನಪದ ಸಾಹಿತ್ಯದಲ್ಲಿ ಆ ಕಾಲಕ್ಕೆ (೧೯೫೦-೬೦) ಡಾ. ಬಿ. ಎಸ್. ಗದ್ದಗಿಮಠ ಅವರಷ್ಟು ವ್ಯಾಪಕವಾಗಿ ಕ್ಷೇತ್ರಕಾರ್ಯ ಮಾಡಿದವರು ಇನ್ನೊಬ್ಬರಿಲ್ಲ. ...... ವಿಪುಲವಾದ ಸಾಹಿತ್ಯವನ್ನು ಅವರು ಕಲೆಹಾಕಿದರು. ಕಲೆಹಾಕಿದ ಸಾಹಿತ್ಯವನ್ನು ವಿಶ್ಲೇಷಿಸುವ ಸಾಮರ್ಥ್ಯವನ್ನು ಬೆಳೆಸಿಕೊಂಡರು. ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿ ಗೀತೆಗಳನ್ನು ಹಾಡಿ ವ್ಯಾಖ್ಯಾನಿಸಿ ಜಾನಪದ ಪ್ರಸಾರ ಕಾರ್ಯವನ್ನು ಕೈಗೊಂಡರು." (ಗ.ಬ. VII, VIII)

ಡಾ. ಜಿ.ಶಂ.ಪ. ಅವರ ಈ ಅಭಿಪ್ರಾಯ ನಮಗೆ ಗದ್ದಗಿಮಠರ ಕೆಲಸದ ಮತ್ತು ಅವರ ಬರಹಗಳ ಮಹತ್ವವನ್ನು ಹೇಳಿಕೊಡುತ್ತದೆ. ಸಂಗ್ರಹ, ಸಂಪಾದನೆ, ಪ್ರಕಟನೆ, ಪ್ರಚಾರ, ಅಧ್ಯಯನ, ವಿಶ್ಲೇಷಣೆ ಇವೆಲ್ಲವನ್ನು ಒಟ್ಟೊಟ್ಟಿಗೆ ಮಾಡಿದ ಜಾನಪದ ಜಂಗಮರವರು. ಅವರ ವಿದ್ವತ್ತು ಲಿಖಿತ ಪರಂಪರೆಯಿಂದ ಬಂದುದಲ್ಲ. ಈಗ ದೊರೆಯುವ ಅವರ ಸಂಪೂರ್ಣ ಬರಹಗಳನ್ನು ಗಮನಿಸಿದರೆ, ಅವರ ವಿದ್ವತ್ತಿಗೆ ಮೂಲ ಅವರ ಕ್ಷೇತ್ರಕಾರ್ಯದಿಂದ ಪ್ರಾಪ್ತವಾದ ಅನುಭವ ಮೂಲವಾದುದು. ಅದಕ್ಕಾಗಿ ಅವರ ಬರಹಗಳಿಗೆ ಒಂದು ತಾಜಾತನವಿದೆ, ಸ್ವಂತಿಕೆ ಇದೆ. ಅಲ್ಲಿ ಅಭಿವ್ಯಕ್ತಗೊಂಡ ಅವರ ಅಭಿಪ್ರಾಯಗಳು ಸೃಜನಾತ್ಮಕ ಚಿಂತನೆಗಳೆನಿಸುತ್ತವೆ.

ಡಾ. ಗದ್ದಗಿಮಠರದು ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಅನೇಕ ದೃಷ್ಟಿಯಿಂದ ಮೊದಲು ನೆನೆಯಬೇಕಾದ ಹೆಸರು. ಅವರು ಜಾನಪದ ಸಾಹಿತ್ಯದ ವಿಷಯವನ್ನು ಗಂಭೀರ ಅಧ್ಯಯನಕ್ಕೆ ಯೋಗ್ಯವೆನ್ನುವುದನ್ನು ಸಾಬೀತು ಪಡಿಸಿದ ವಿದ್ವಾಂಸರು.

ಇಂದು ಜನಪದ ಸಾಮಗ್ರಿಯನ್ನು ಸಂಗ್ರಹಿಸುವಾಗ ಬಳಸುವ ಯಂತ್ರೋಪಕರಣಗಳನ್ನು ಬಳಸಿ ಅವರು ಸಂಗ್ರಹ ಮಾಡಲಿಲ್ಲ. ಕಾರಣ ಸ್ಪಷ್ಟವಾಗಿದೆ. ಆಗ ಭಾರತೀಯರಲ್ಲಿ ಅವುಗಳನ್ನು ಬಳಸಬೇಕೆಂಬ ಅರಿವು ಇರಲಿಲ್ಲ. ಜೊತೆಗೆ ಸಾಮರ್ಥ್ಯವೂ ಇರಲಿಲ್ಲ. ವಕ್ತಾರರ ಮಾಹಿತಿಗಳನ್ನು ಕೊಡುವ ಗೋಜಿಗೂ ಅವರು ಹೋಗಿಲ್ಲ. ಆದರೆ ಅವರು ಸಂಗ್ರಹಿಸಿದ ಜನಪದ ಗೀತಪ್ರಕಾರಗಳನ್ನು ಗಮನಿಸಿದರೆ ನಮಗೆ ಗಾಬರಿಯಾಗುತ್ತದೆ. ಇಂದು ಒಬ್ಬ ಜಾನಪದ ವಿದ್ವಾಂಸ ಅಷ್ಟೊಂದು ನಮೂನೆಯ ಬೃಹತ್ತಾದ ಸಂಗ್ರಹ ಮಾಡಿದ ಉದಾಹರಣೆಗಳು ನಮ್ಮ ಮುಂದಿಲ್ಲ.

ಇಂದು ಜನಪದ ಮಹಾಕಾವ್ಯಗಳ ಬಗ್ಗೆ ಚರ್ಚೆ ನಡೆದಿದೆ. ಗದ್ದಗಿಮಠರ ಪಿಎಚ್.ಡಿ. ಗ್ರಂಥದಲ್ಲಿ ಪ್ರಕಟಿಸಿದ, ಡಾ. ಗದ್ದಗಿಮಠರು ಸಂಗ್ರಹಿಸಿದ ಶರಣರಿಗೆ ಸಂಬಂಧಿಸಿದ ಹಾಡುಗಳನ್ನು ಪ್ರತ್ಯೇಕವಾಗಿ ಪ್ರಕಟಮಾಡಿದರೆ ಖಂಡಿತ ಅದು 'ಜನಪದ ಬಸವ ಪುರಾಣ' ಮಹಾಕಾವ್ಯವೆನಿಸುತ್ತದೆ. ಅವರ ಪ್ರಬಂಧ ಮೊದಲುಬಾರಿ ಪ್ರಕಾಶನಗೊಂಡುದು ೧೯೬೩ರಲ್ಲಿ. ಈ ಇಸ್ವಿಯನ್ನು ಹಿಡಿದರೂ ಕರ್ನಾಟಕದಲ್ಲಿ ಮೊದಲು ಜನಪದ ಮಹಾಕಾವ್ಯವೊಂದು ಬೆಳಕು ಕಂಡುದು ಗದ್ದಗಿಮಠರ ಹೆಸರಿನ ಮೇಲೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಶರಣರ ಆ ಹಾಡುಗಳು ಅವರ ತಂದೆಯಾದ ಸಾವಳಿಗೆಯ್ಯ ಅವರ ನಿರ್ಮಿತಿಗಳು ಎಂಬುದು ನಿರ್ವಿವಾದ ಸಂಗತಿ. ಆ ಶರಣರ ಹಾಡುಗಳನ್ನು ಒಂದೇ ಕಾವ್ಯದ ಭಾಗಗಳು ಎನ್ನುವ ಬದಲಾಗಿ ಬಿಡಿಬಿಡಿಯಾಗಿಯೇ ನಾವು ಗಣಿಸಿದರೆ, ಹರಿಹರನ ನಂತರ ಶರಣರ ಚರಿತ್ರೆಗಳನ್ನು ಸೃಷ್ಟಿಸಿದ ಮೊದಲ ಕವಿಯಾಗಿ ಸಾವಳಿಗೆಯ್ಯ ನಿಲ್ಲುತ್ತಾನೆ. ಇದರ ಜೊತೆಗೆ ಗದ್ದಗಿಮಠರು ಸುದೀರ್ಘವಾದ ಮಹಾಭಾರತವನ್ನೂ ರಾಮಾಯಣವನ್ನೂ ಸಂಗ್ರಹಿಸಿದ್ದರೆಂಬ ದಾಖಲೆಗಳು ನಮಗೆ ದೊರೆಯುತ್ತವೆ. ಹೀಗಾಗಿ ಒಂದು ಮಹಾಕಾವ್ಯವಲ್ಲ ಮೂರು ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿದ ಕೀರ್ತಿ ಗದ್ದಗಿಮಠರಿಗೆ ಸಲ್ಲುತ್ತದೆ.

ಜೊತೆಗೆ ಅವರು 'ಜನಪದ ಶಬ್ದಕೋಶ' ಒಂದನ್ನು ತಯಾರಿಸಿದ್ದರು ಎಂದು ಗೊತ್ತಾಗುತ್ತದೆ. ಈ ಶಬ್ದಕೋಶ, ಮಹಾಭಾರತ ಮತ್ತು ರಾಮಾಯಣ ಹಾಡುಗಳ ಸಂಗ್ರಹಗಳು ಅಂದು ಪ್ರಕಟಣೆಗಾಗಿ ಸರ್ಕಾರಕ್ಕೆ ಸಲ್ಲಿಸಿದ್ದವು. ಇಂದು ಅವುಗಳ ಪತ್ತೆಯಾಗಿಲ್ಲ. ಹೀಗಾಗಿ ಇದೊಂದು ದೃಷ್ಟಿಯಿಂದ ಡಾ. ಗದ್ದಗಿಮಠ ಅವರಿಗೆ ಅನ್ಯಾಯವಾದಂತೆ, ಕನ್ನಡ ಜಾನಪದ ಲೋಕಕ್ಕೆ ದೊಡ್ಡ ಹಾನಿ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ.

ಡಾ. ಗದ್ದಗಿಮಠರ ಸಂಗ್ರಹಗಳನ್ನು, ಅವರ ಪಿಎಚ್.ಡಿ. ಪ್ರಬಂಧಗಳನ್ನು ಗಮನಿಸಿದ ಜನ ಅವರ ಅಧ್ಯಯನವು ಕೇವಲ ಜನಪದ ಗೀತೆಗಳಿಗೆ ಸೀಮಿತವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಅವರು ತಮ್ಮ ಶಿಕ್ಷಣ ಮುಗಿದ ನಂತರ ೧೯೪೩

ರಿಂದ ತಮ್ಮ ತಂದೆಯವರು ರಚಿಸಿದ ಮತ್ತು ತಮ್ಮ ತಾಯಿ ಮತ್ತು ಚಿಕ್ಕಮ್ಮ ಹಾಡುತ್ತಿದ್ದ ಶಿವಶರಣ ಹಾಡುಗಳನ್ನು ಸಂಗ್ರಹಿಸಲು ತೊಡಗಿದರು. ಅಂದಿನಿಂದ ೧೯೬೦ ರಲ್ಲಿ ಅವರು ಶಿವಾಧೀನರಾಗುವವರೆಗೆ ಅವರ ಸಂಗ್ರಹ ಮತ್ತು ಬರವಣಿಗೆಗಳು ನಿರಂತರವಾಗಿ ನಡೆದಿವೆ. ಅವರ ಪ್ರಕಟವಾದ ಮತ್ತು ಪ್ರಕಟವಾಗಬೇಕಿದ್ದ ಸಂಗ್ರಹಗಳನ್ನು ಗಮನಿಸಿದರೆ ಅವೆಲ್ಲ ಹಾಡಿನ ಸಂಗ್ರಹಗಳೇ ಆಗಿವೆ. ಕ್ಷೇತ್ರಕಾರ್ಯದ ಅನುಭವದಿಂದ ಹಾಡುಗಳಿಗೆ ಸಂಬಂಧಿಸಿದ ಸಂದರ್ಭಗಳನ್ನು ಅವರಷ್ಟು ಸರಿಯಾಗಿ ಮತ್ತು ವಿವರವಾಗಿ ವಿಶ್ಲೇಷಿಸಿದವರು ಬೇರೊಬ್ಬರಿಲ್ಲ. ಜನಪದ ಹಾಡುಗಳ ಬಗ್ಗೆ ಬರೆಯುವಾಗ ಅವರ ವಿವರಣೆಗಳನ್ನೇ ಇಂದಿನ ವಿದ್ವಾಂಸರು ಅನುಸರಿಸಿರುವುದನ್ನು ಕಾಣುತ್ತೇವೆ.

ಅವರು ಸಂಗ್ರಹಿಸಿದ ಸಾಹಿತ್ಯ ಹಾಡುಗಳಿಗೆ ಸೀಮಿತವಾದರೂ ಅವರ ಬಿಡಿ ಬರಹಗಳು ಮಾತ್ರ ಹಾಡುಗಳಿಗೇ ಸೀಮಿತವಾಗಿಲ್ಲ. ಆದರೆ ಇಲ್ಲಿಯವರೆಗೆ ಎಲ್ಲರೂ ಹೆಚ್ಚಾಗಿ ಗಮನಿಸಿದ್ದು ಗದ್ದಗಿಮಠರ ಪಿಎಚ್.ಡಿ. ಪ್ರಬಂಧವೊಂದನ್ನೇ. ಆದರೆ ೧೯೮೮ ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾದ 'ಗದ್ದಗಿಮಠರ ಬರಹಗಳು' ಎಂಬ ಸಂಗ್ರಹವನ್ನು ನೋಡಿದರೆ ಅಲ್ಲಿ ಹಾಡುಗಳ ಜೊತೆಗೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಅತ್ಯುತ್ತಮ ಲೇಖನಗಳಿರುವುದು ಕಂಡುಬರುತ್ತದೆ.

ಧಾರವಾಡದಿಂದ ಆಗಿನ ಕಾಲದಲ್ಲಿ ಪ್ರಕಟವಾಗುತ್ತಿದ್ದ 'ಕನ್ನಡ ಪ್ರಾಥಮಿಕ ಶಿಕ್ಷಣ' (ಅದೇ ಮುಂದೆ 'ಕನ್ನಡ ಜೀವನ ಶಿಕ್ಷಣ' ಎಂದು ಪ್ರಕಟವಾಗಿದೆ) ಎಂಬ ಪತ್ರಿಕೆಯಲ್ಲಿ ಸುಮಾರು ಇಪ್ಪತ್ತು ಲೇಖನಗಳು ಪ್ರಕಟವಾಗಿವೆ. ಅವೆಲ್ಲ ಪ್ರಕಟವಾಗಿರುವ ವರ್ಷಗಳನ್ನು ಗಮನಿಸಿದರೆ ೧೯೫೫ ರಿಂದ ೧೯೫೯ರ ಐದು ವರ್ಷಗಳ ಅವಧಿಯಲ್ಲಿ ಎಂದು ಕಂಡು ಬರುತ್ತದೆ. ಅಂದರೆ ತಮ್ಮ ಸಂಶೋಧನಾ ಪ್ರಬಂಧದ ಬರವಣಿಗೆ ಮುಗಿಸಿ (೧೯೫೪) ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರಬಂಧವನ್ನು ಸಲ್ಲಿಸಿದ ನಂತರ ಪ್ರಕಟಗೊಂಡ ಲೇಖನಗಳಾಗಿವೆ. ಅವೆಲ್ಲ ಸಂಶೋಧನಾ ದೃಷ್ಟಿಯಿಂದ ಗಮನಾರ್ಹ ಲೇಖನಗಳೇ ಎನಿಸುತ್ತವೆ. ಅಲ್ಲೆಲ್ಲ ಅವರ ಕ್ಷೇತ್ರಕಾರ್ಯದ ಅನುಭವ ದಟ್ಟವಾಗಿ ನಮಗೆ ಕಂಡುಬರುತ್ತದೆ.

'ಕನ್ನಡ ಪ್ರಾಥಮಿಕ ಶಿಕ್ಷಣ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿ, ಜನಪದ ಹಾಡುಗಳಿಗೆ ಸಂಬಂಧಿಸಿದ ಹಲವಾರು ಲೇಖನಗಳಿದ್ದು ಅವೆಲ್ಲ ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿ ವಿವರಿಸಿದ ಬರಹಗಳನ್ನು ಇನ್ನಷ್ಟು ವಿಸ್ತರಿಸಿ ಬರೆಯಲು ಪ್ರಯತ್ನಿಸಿದ ಫಲಗಳಾಗಿವೆ ಎನಿಸುತ್ತವೆ. ಆದರೆ ಸುಮಾರು ಎಂಟ್ಟತ್ತು ಲೇಖನಗಳು ತೀರ ಭಿನ್ನವಾದ ಮತ್ತು ಪಿಎಚ್.ಡಿ. ಪ್ರಬಂಧದಲ್ಲಿ ಸೇರದ ವಿಷಯಗಳಿಗೆ ಸಂಬಂಧಿಸಿವೆ. ನನ್ನ ಪ್ರಬಂಧವು ಈ ಭಿನ್ನ ವಿಷಯಗಳಿಗೆ ಸಂಬಂಧಿಸಿದ ಸಂಶೋಧನಾ ಬರಹಗಳಿಗೆ ಮಾತ್ರ ಸೀಮಿತವಾಗಿದೆ. ಅವೆಂದರೆ :

'ಕರ್ನಾಟಕದ ಜನಪದ ಕಲೆ' ಮತ್ತು 'ಕನ್ನಡ ಬಯಲಾಟ' ಎಂಬ ಎರಡು ಲೇಖನಗಳು ಜನಪದ ಕಲೆಗಳಿಗೆ ಸಂಬಂಧಪಟ್ಟಿವೆ. 'ಗೊಂದಲಿಗರು' ಮತ್ತು 'ದುರುಗಮುರಗಿಯವರು' ಎಂಬ ಜನಪದ ಅಲೆಮಾರಿ ವೃತ್ತಿಕಲಾವಿದರಿಗೆ ಸಂಬಂಧಿಸಿದ ಎರಡು ಲೇಖನಗಳಿವೆ. 'ಕನ್ನಡಿಗರ ಕೀರ್ತಿಯ ನೆಟಗಲ್ಲುಗಳು', 'ವೃಷಭ ಶಿಲಾಮೂರ್ತಿಗಳು' ಮತ್ತು 'ಅಳಿದುಳಿದ ಪುಲಿಗೆರೆ' ಎಂಬ ಮೂರು ಲೇಖನಗಳು ಶಿಲಾಶಾಸನಗಳಿಗೆ ಸಂಬಂಧಿಸಿವೆ. ಇವೆಲ್ಲ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾದ ಕೃತಿಯಲ್ಲಿ ಸೇರಿಕೊಂಡಿವೆ.

ಈ ಕೃತಿಯಲ್ಲಿ ಸೇರಿಕೊಳ್ಳದ, ಧಾರವಾಡದ 'ಕನ್ನಡ ಪ್ರಾಥಮಿಕ ಶಿಕ್ಷಣ' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಗದ್ದಗಿಮಠರ ಸಂಶೋಧನಾ ಮತ್ತು ವಿಶ್ಲೇಷಣಾ ಸಾಮರ್ಥ್ಯವನ್ನು ಹೊತ್ತ ಮೂರು ಲೇಖನಗಳು ನಮಗೆ ದೊರೆಯುತ್ತವೆ. ಅವೆಂದರೆ: 'ಕಾಯಕ ಶಿಕ್ಷಣ', 'ಕಾಯಕ ಶಿಕ್ಷಣದ ಆಡಳತೆ' ಮತ್ತು 'ಕಾಯಕ ಶಿಕ್ಷಣದಲ್ಲಿ ಅನುಭಾವ ಪದ್ಧತಿ' ಎಂಬ ಲೇಖಗಳು. ಇವು ಲೆಕ್ಕಕ್ಕೆ ಮೂರು ಲೇಖನಗಳಾದರೂ ಇವೆಲ್ಲ ಡಾ. ಗದ್ದಗಿಮಠ ಅವರ 'ಕಾಯಕ ಶಿಕ್ಷಣ' ಎಂಬ ಪರಿಕಲ್ಪನೆಯನ್ನು ವಿವರಿಸುವ ಮುಂದುವರೆದ ಬರಹಗಳೇ ಆಗಿವೆ. ಹೀಗೆ ಜನಪದ ಹಾಡುಗಳಿಗೆ ಹೊರತಾದ ಸುಮಾರು ಹತ್ತು ಲೇಖನಗಳನ್ನು ಮುಖ್ಯವಾಗಿ ಈ ಪ್ರಬಂಧದಲ್ಲಿ ಅಳವಡಿಸಿಕೊಳ್ಳಲಾಗಿದೆ.

**ಜನಪದ ಕಲೆಗಳು :**

'ಕರ್ನಾಟಕದ ಜನಪದ ಕಲೆ'ಗಳನ್ನು ಕುರಿತು ೧೯೫೫ರ ಸುಮಾರಿಗೆ ಲೇಖನ ಬರೆದವರು ಡಾ. ಗದ್ದಗೀಮಠರು. ಲಲಿತ ಕಲೆಗಳಲ್ಲಿ ಪ್ರಸಿದ್ಧವಾದ ಏಳು ಕಲೆಗಳಲ್ಲಿ ಸಂಗೀತ, ನೃತ್ಯ, ನಾಟಕ ಈ ಗುಂಪಿಗೆ ಸೇರುವ ಜನಪದ ಪ್ರದರ್ಶನ ಕಲೆಗಳನ್ನೇ ಗಮನಿಸಿ ಚರ್ಚೆಗಳು ನಡೆದಿವೆ. ಜನಪದ ಕಲೆಗಳಿಗೆ ಸಂಬಂಧಿಸಿ ಎರಡು ಕೋಶಗಳು ಪ್ರಕಟವಾಗಿವೆ. ೧. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಕರ್ನಾಟಕದ ಜನಪದ ಕಲೆಗಳು' (೧೯೭೭), ೨. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ 'ಕರ್ನಾಟಕದ ಜನಪದ ಕಲೆಗಳ ಕೋಶ' (೧೯೯೭). ಈ ಕೃತಿಗಳನ್ನು ಗಮನಿಸಿದರೆ ಅಲ್ಲೆಲ್ಲ ಜನಪದ ಕಲೆಗಳೆಂದರೆ ಕೇವಲ ಪ್ರದರ್ಶನ ಕಲೆಗಳಿಗೆ ಮಾತ್ರ ಸೀಮಿತವಾಗಿರುವುದು ಕಂಡುಬರುತ್ತದೆ.

ಆದರೆ ಡಾ. ಗದ್ದಗಿಮಠರು ಜಗತ್ಪ್ರಸಿದ್ಧವಾದ ಏಳೂ ಲಲಿತ ಕಲೆಗಳ ಹಿನ್ನೆಲೆಯಲ್ಲಿ ಜನಪದ ಕಲೆಗಳನ್ನು ಗುರುತಿಸುವ ; ಚರ್ಚೆ ಮಾಡುವ ಅಪರೂಪದ ಕೆಲಸ ಮಾಡಿದ್ದಾರೆ ಎಂಬುದು ವಿಶೇಷ ಸಂಗತಿಯಾಗಿದೆ. ಇದು ಅವರಲ್ಲಿರುವ ಸಂಶೋಧಕನ ಗುಣವನ್ನು ಎತ್ತಿ ತೋರಿಸುತ್ತದೆ. ಚಿತ್ರ, ಶಿಲ್ಪ, ವಾಸ್ತುಶಿಲ್ಪ ಈ ದೃಶ್ಯಕಲೆಗಳನ್ನು ಮೊದಲನೆಯದಾಗಿ ಜನಪದ ಕಲೆಗಳ ಗುಂಪಿಗೆ ಸೇರಿಸಿ ಚರ್ಚೆಮಾಡುತ್ತಾರೆ. ಈ

ದೃಷ್ಟಿಯಿಂದ ಗದ್ದಗಿಮಠರ ಈ ಲೇಖನ ಗಮನಾರ್ಹವೆನಿಸುತ್ತದೆ. ಜನಪದ ದೃಶ್ಯಕಲೆಗಳು ಮಾನವನ ಶಿಲಾಯುಗದಿಂದಲೂ ಹೇಗೆ ಬಳಕೆಯಾಗಿವೆ ಎಂಬುದನ್ನು ಚರ್ಚಿಸುತ್ತಾರೆ. ಜನಪದ ಕಲೆಗಳ ಮೂಲ ಗುಣಗಳನ್ನು ಗ್ರಹಿಸುವ ಅವರು ಮಾನವನ ನಿತ್ಯ ಜೀವನದ ಭಾಗಗಳಾಗಿ, ಅವನಿಗೆ ನಿತ್ಯೋಪಯೋಗಿಗಳಾಗಿ ಈ ಕಲೆಗಳೆಲ್ಲ ಸೃಷ್ಟಿಯಾಗುತ್ತ ; ಬಳಕೆಯಾಗುತ್ತ ಬಂದುದನ್ನು ಗುರುತಿಸುತ್ತಾರೆ. "ಶಿಲಾಯುಗದ ಮಾನವನ ಮೂಲ ಬೇಡಿಕೆಗಳೆಂದರೆ ಹೊಟ್ಟೆ ಬಟ್ಟೆ ಚಾಟು... ಅವನ ಅಂದಿನ ಕಲೆಗಳು ಅವನ ಮೂರು ಮೂಲ ಬೇಡಿಕೆಗಳಿಗೆ ಸಂಬಂಧಿಸಿದವುಗಳಾಗಿದ್ದವು. ಬೇಟೆಯ ಹತೋಟಿಗಾಗಿ ಬಟ್ಟೆಯ ಹೊದಿಕೆಗಾಗಿ ಚಾಟಿನಲ್ಲಿರುವುದಕ್ಕಾಗಿ ವಿಚಾರ ವಿನಿಮಯ ನಡೆದು ಭಾವಮೂಡಲು ಅವನು ಕೆಲಕೆಲವು ಉಪಕರಣಗಳನ್ನು ಅನುಕೂಲಮಾಡಿಕೊಂಡ. ಈ ಉಪಕರಣಗಳು ಕೈಕೊಡಲಿ, ಕೊಡಗತ್ತಿ(ಚೂರಿ), ಕೋತ, ಸಲಕಿ ಮೊದಲಾದವು – ಕೇವಲ ಅವನ ಶಸ್ತ್ರಗಳಾಗಿದ್ದು ಅವನು ಅವುಗಳನ್ನು ಬಿರಸು ಬೆಣಚುಗಲ್ಲಿನಲ್ಲಿ ಒಡೆದು, ತಿಕ್ಕಿ, ಮಸೆದು ತನಗೆ ಬೇಕಾದಂತೆ ಮಾಡಿಕೊಂಡಿದ್ದಾನೆ. ಈ ಉಪಕರಣಗಳಲ್ಲಿ ನಾವು ಶಿಲಾಯುಗದ ಮಾನವನ ಕಲಾಪ್ರದರ್ಶನವನ್ನು ಸೂಕ್ಷ್ಮವಾಗಿ ಕಾಣಬಹುದಾಗಿದೆ" (ಗ. ಬ. ೨೩೧– ೨೩೨) ಎಂದು ಚರ್ಚೆಯನ್ನು ಪ್ರಾರಂಭಿಸುತ್ತಾರೆ.

ತನಗೆ ದಿನನಿತ್ಯವೂ ಉಪಯೋಗಕ್ಕಾಗಿ ಬೇಕಾದ ವಸ್ತುಗಳನ್ನು ಕಲಾತ್ಮಕವಾಗಿ ನಿರ್ಮಿಸಿಕೊಳ್ಳುವ ಮಾನವನ ಈ ಗುಣವನ್ನು ಗದ್ದಗಿಮಠರು ಗುರುತಿಸುತ್ತಾರೆ. ಜೊತೆಗೆ ಇಂದು ಈ ಉಪಕರಣಗಳನ್ನು ತಯಾರಿಸುವ ಜನಪದರಲ್ಲಿ ಕೆಲವರ ಉದ್ಯೋಗವೇ ಆಗಿದೆ ಎಂದು ಹೇಳಿ ಬಡಿಗ ಕಂಬಾರ ಕುಂಬಾರ ಕಲ್ಲುಕುಟಿಗ ಉಪ್ಪಾರ ಬಣಗಾರ ಇವರೆಲ್ಲರನ್ನೂ ಕಲಾವಿದರೆಂದೂ ಇವರ ಕೃತಿಗಳನ್ನು ಕಲೆಗಳೆಂದೂ ಹೇಳುತ್ತಾರೆ.

ಅಭಿಜಾತ ಕಲಾವಿಮರ್ಶಕರು ಕಸಬುದಾರಿಕೆ ಮತ್ತು ಕಲೆಗಾರಿಕೆ ಎಂಬ ಎರಡು ಮಾತುಗಳನ್ನು ಬಳಸಿ, ಜನಪದ ಕಲೆಗಳನ್ನು ಕಸಬುಗಳು ಎಂದು, ಜನಪದ ಕಲಾವಿದರನ್ನು ಕಾರ್ಮಿಕರೆಂದು ಗುರುತಿಸುತ್ತಾರೆ. 'ಸೌಂದರ್ಯಕಲೆ'ಗಳನ್ನು ಮಾತ್ರ ಕಲೆಗಳೆಂದು, ಅವನ್ನು ತಯಾರಿಸುವವರು ಮಾತ್ರ ಕಲಾವಿದರೆಂದು ಕರೆಯುತ್ತಾರೆ. ಜನಪದ ಕಲೆಗಳ ಗುಣ ಉಪಯೋಗ ಎಂದು, ಸೌಂದರ್ಯ ಕಲಾಕೃತಿಗಳ ಗುಣ ಆನಂದವೆಂದು ಹೇಳಿ ಇವನ್ನು 'ಕಸುಬಿ ಕೆಲಸಗಳು' ಎಂದು ಗುರುತಿಸುತ್ತಾರೆ. ಸಾಹಿತ್ಯವೂ ಸೇರಿದಂತೆ ಜನಪದ ಕಲೆಗಳ ಮುಖ್ಯಗುಣವೆಂದರೆ, ಜೀವನಕ್ಕೆ ಉಪಕಾರಕಗಳಾಗಿರುವುದು. ಅನುಪಯೋಗವಾದ ಕೃತಿಗಳೇ ಕಲೆಗಳೆಂದು, ಉಪಕಾರಕ ಕಲೆಗಳು ಶ್ರೇಷ್ಠಮಟ್ಟದ ಕಲೆಗಳಲ್ಲವೆಂದು ಹೇಳುವ ಹುನ್ನಾರದಲ್ಲಿ ಜನಪದ ಕಲೆಗಳನ್ನು ಕೇವಲ ಕಸಬುಗಳೆಂದು, ಜನಪದ ಕಲಾವಿದರನ್ನು ಕೇವಲ ಕಸಬುದಾರರೆಂದು ಗುರುತಿಸುವುದನ್ನು ಕಾಣುತ್ತೇವೆ. ಈ ಬಗೆಗೆ ಚರ್ಚೆ ನಡೆಯಬೇಕಾದ ಅವಶ್ಯಕತೆ ಇದೆ.

ಆದರೆ ಗದ್ದಗಿಮಠರಿಗೆ ಇವರು ಕಲಾವಿದರೇ ಅಲ್ಲವೇ, ಇವರ ಕೃತಿಗಳು ಕಲೆಗಳೇ ಅಲ್ಲವೇ ಎಂಬ ಯಾವ ಅನುಮಾನವೇ ಇಲ್ಲ. ಜನಪದರಾದ ಕಂಬಾರ, ಕುಂಬಾರ, ಬಡಿಗ, ಉಪ್ಪಾರ, ಬಣಗಾರ, ಶಿಲ್ಪಿ ಇವರೆಲ್ಲರನ್ನು ಅವರು ಕಲಾವಿದರೆಂದು ಕರೆಯುತ್ತಾರೆ. ಮತ್ತು ಇವರ ಕೃತಿಗಳನ್ನು ಕಲೆಗಳೆಂದು ಗ್ರಹಿಸಿಯೇ ಚರ್ಚಿಸುತ್ತಾರೆ. ಇಲ್ಲಿ ಒಂದು ಮಾತನ್ನು ಸೇರಿಸಬಹುದೆಂದು ಕಾಣಿಸುತ್ತದೆ. ಪ್ರತಿಭಾವಂತನಾದ ಜನಪದ ಕಲಾವಿದನ ಕೃತಿ ಕಲೆಂಯೇ ಆಗಿರುತ್ತದೆ. ಹಾಗೆಯೇ ಪ್ರತಿಭಾವಂತನಲ್ಲದ ಶಿಷ್ಟದೃಶ್ಯಕಲಾವಿದನ ಕೃತಿಯೂ ಕಲೆ ಎನಿಸಲಾರದು. ಈ ಸಂಗತಿಯ ಕಡೆ ಅಭಿಜಾತ ಕಲಾಮೀಮಾಂಸಕರ ಲಕ್ಷ್ಯಹರಿಯಬೇಕಾದುದು ಅವಶ್ಯವಿದೆ.

"ಜನಪದ ಕಲೆಯಲ್ಲಿ ಶಿಲ್ಪಕಲೆಯು ಒಂದು ಅತಿ ದಿವ್ಯ ಕಲೆ. ಅದು ವಾಸ್ತುಶಿಲ್ಪ ಮೂರ್ತಿ ಶಿಲ್ಪಗಳೆರಡನ್ನೂ ಒಳಗೊಂಡಿದೆ" (ಗ.ಬ. ೨೩೩) ಎನ್ನುವ ಗದ್ದಗಿಮಠರು ಬಾದಾಮಿಯ ಗುಹೆಗಳನ್ನೂ ಐಹೊಳೆ ಪಟ್ಟದಕಲ್ಲುಗಳಲ್ಲಿಯ ದೇಗುಲ-ದೇವಾಲಯಗಳನ್ನೂ ಮೇಣಬಸ್ತಿನ ಛತ್ತಿಗಳಲ್ಲಿ ಗೋಡೆಯಲ್ಲಿ ವಿವಿಧ ಬಣ್ಣಗಳನ್ನು ಉಪಯೋಗಿಸಿ ಬರೆದ ಚಿತ್ರಗಳನ್ನು ಜನಪದ ಕಲೆಗಳೆಂದು ಗುರುತಿಸುತ್ತಾರೆ. ಅವರ ಈ ದೃಷ್ಟಿ ಶೋಧದ ದೃಷ್ಟಿ ಎನಿಸುತ್ತದೆ.

ಶಿಲ್ಪ ಮತ್ತು ವಾಸ್ತು ಶಿಲ್ಪಗಳು ಜನಪದ ಕಲೆಗಳು ಎಂಬುದರ ಬಗ್ಗೆ ಗದ್ದಗಿಮಠರಿಗೆ ಸ್ವಲ್ಪವೂ ಅನುಮಾನವಿಲ್ಲ. ಅವರ ಬರಹವನ್ನು ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ, ಅವನ್ನೆಲ್ಲ ಸೃಷ್ಟಿಸಿದವರು ಜನಪದ ಕಲಾವಿದರು ಎಂಬ ಭಾವನೆ ದಟ್ಟವಾಗಿದೆ. ಅವೆಲ್ಲ ಶಿಲ್ಪಿ, ಉಪ್ಪಾರ, ಬಣಗಾರ ಇವರ ಕಲಾಕೃತಿಗಳು ಎಂಬುದರಲ್ಲಿ ಅವರಿಗೆ ವಿಶ್ವಾಸವಿದೆ. ಈ ಬಗೆಗೆ ಆಧುನಿಕ ವಿಚಾರಗಳೇನು ಎಂಬುದರ ಬಗ್ಗೆ ಚರ್ಚೆಯಾಗಬೇಕಾದ ಅವಶ್ಯಕತೆ ಇದೆ ಎಂದು ತೋರುತ್ತದೆ. ಶಿಲ್ಪ ; ವಾಸ್ತುಶಿಲ್ಪ ಮತ್ತು ಚಿತ್ರಗಾರರನ್ನು ಅವರು ಜನಪದ ಕಲಾವಿದರೆಂದು ಕರೆಯುವಲ್ಲಿ ಯಾವುದೇ ಹಿಂಜರಿಕೆಯನ್ನು ತೋರದೆ, ಕಲ್ಲಿನಲ್ಲಿ ಕೆಲಸ ಮಾಡಿದ ಇವರ ಸಾಲಿನಲ್ಲಿಯೇ ಕಟ್ಟಿಗೆ ಮತ್ತು ಕಬ್ಬಿಣದ ಕೆಲಸಮಾಡುವ ಬಡಿಗ ಮತ್ತು ಕಂಬಾರರನ್ನೂ ಸೇರಿಸಿ ವಿವರಿಸುತ್ತಾರೆ. ಇವೆಲ್ಲ ಗಮನಾರ್ಹವಾದ ಚಿಂತನೆಗಳೇ ಆಗಿವೆ. ಮುಂದೆ ಇವರ ಜೊತೆ ಅವರು ಅಕ್ಕಸಾಲಿ, ನೇಕಾರ, ಕುಂಬಾರ ಇವರನ್ನೂ ಸೇರಿಸುತ್ತಾರೆ. ಅಂದರೆ ಮನುಷ್ಯನಿಗೆ ಅವಶ್ಯವಾದ ವಸ್ತುಗಳನ್ನು ಕಲಾತ್ಮಕವಾಗಿ ತಯಾರಿಸುವ ಕಲಾವಿದರನ್ನು ಅವರು ಒಂದೆಡೆ ಸೇರಿಸುತ್ತಾರೆ.

೧೯೭೦ರ ನಂತರ ಜನಪದ ಕಲೆಗಳನ್ನು ಗುರುತಿಸುವ ದೃಷ್ಟಿ ಭಿನ್ನವಾಗಿದ್ದು, ಅಲ್ಲೆಲ್ಲ ಹಾಡು ಅಭಿನಯ ಕುಣಿತ ವಾದನ ಇಂತಹ ಮಾನವನು ಸ್ವತಃ ಭಾಗವಹಿಸಿ ಜೀವಂತವಾಗಿ ಪ್ರದರ್ಶನಗೊಳಿಸುವ ಕಲೆಗಳನ್ನು ಮಾತ್ರ ಜನಪದ ಕಲೆಗಳೆಂದು ಗುರುತಿಸುವುದಕ್ಕೆ ಸೀಮಿತವಾಗಿದೆ. ಅಂದರೆ ಸಂಗೀತ ನೃತ್ಯ ಮತ್ತು ನಾಟಕ ಎಂಬ

ಲಲಿತ ಕಲೆಗಳ ಗುಂಪಿಗೆ ಈ ದೃಷ್ಟಿ ಸೀಮಿತವಾಗಿದೆ. ಆದರೆ ಇಡೀ ಏಳೂ ಲಲಿತಕಲೆಗಳ ಹಿನ್ನೆಲೆಯಲ್ಲಿ ಜನಪದ ಕಲೆಗಳನ್ನು ಗ್ರಹಿಸುವ ಡಾ. ಗದ್ದಗಿಮಠರ ಬರಹ ಹೊಸದೃಷ್ಟಿಯಿಂದ ಕೂಡಿದೆ. ಸಂಗೀತ ನಾಟಕ ನೃತ್ಯ ವಾದ್ಯಾದಿಗಳನ್ನು ಕುರಿತು ಹೀಗೆ ಬರೆಯುತ್ತಾರೆ. "ಹೊಟ್ಟೆ, ಬಟ್ಟೆ, ಚಾಟುಗಳ ಪ್ರಶ್ನೆ ಬಗೆಹರಿದು ಸಂಪತ್ತು ಸಮೃದ್ಧಿಯಾಗಿ ಗುಂಪಿನೊಡನೆ ಮಾನವನು ಇರಹತ್ತಿದ ಮೇಲೆ ಅವನು ಮನರಂಜನ ಕಲೆಗಳಲ್ಲಿ ತೊಡಗಿರಬಹುದು" ಎಂದು ಹೇಳಿ ಸಂಗೀತ ನಾಟಕ ನೃತ್ಯ ಈ ಗುಂಪನ್ನು ಅವರು ಶುದ್ಧ ಮನರಂಜನಾ ಕಲೆಗಳಾಗಿ ಗುರುತಿಸುತ್ತಾರೆ.

ಡಾ. ಗದ್ದಗಿಮಠ ಅವರ ಶೋಧದ ಕಣ್ಣು ಯಾವಾಗಲೂ ಮೂಲವನ್ನು ಹುಡುಕುತ್ತಿರುತ್ತದೆ ಎಂಬುದಕ್ಕೆ ವಾದ್ಯದ ಕಲ್ಪನೆಯ ವಿವರವನ್ನು ಗಮನಿಸಬಹುದಾಗಿದೆ. ಇಂಥಲ್ಲೆಲ್ಲ ತಮ್ಮ ಓದಿನ ಬಲ ಮತ್ತು ಕ್ಷೇತ್ರಕಾರ್ಯದ ಅನುಭವದ ಬಲ ಎರಡನ್ನೂ ಸಮ್ಮಿಳಿತಗೊಳಿಸುವ ಕೆಲಸವನ್ನು ಅವರು ಮಾಡುತ್ತಾರೆ. ವಾದ್ಯದ ಮೂಲವನ್ನು ಗುರುತಿಸುವಲ್ಲಿ ಜನಪದರಲ್ಲಿರುವ ಪದಗಳನ್ನೆ ಗಮನಿಸಿ ಅವರು ಈ ವಿವರಣೆಯನ್ನು ಕೊಡುತ್ತಾರೆ.

"ವಾದ್ಯದ ಕಲ್ಪನೆಯನ್ನು ಮೊಟ್ಟಮೊದಲು ಮಾನವನು ಕಲ್ಲಲ್ಲಿ ಕಂಡು ಹಿಡಿದಂತೆ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಗವಿ–ಗಂವರ (ಗಹ್ವರ) ಗುಡಿಗೋಪುರಗಳಲ್ಲಿ ಇಂತಹ ಅನೇಕ ಕಲ್ಲುಗಳು ದೃಷ್ಟಿಗೆ ಬೀಳುವುವು. ಈ ಕಲ್ಲುಗಳಿಗೆ ಜನಪದದಲ್ಲಿ 'ನಾದಗಲ್ಲು' ಗಳೆಂದು ಕರೆಯುತ್ತಾರೆ. ಪೆಟ್ಟಿನಿಂದ ನುಡಿಸಲು ನಾದಗಲ್ಲಿನಿಂದ ಸುಸ್ವರ ಹೊರಡುವುದು ಅದರ ಗುಣಧರ್ಮವಾಗಿದೆ. ಅದರಲ್ಲಿ ಏಕಸ್ವರ ಕಂಪನವಾಗಲು 'ಗಂಟೆಗಲ್ಲು' ಎಂದೂ ಏಕಸ್ವರದಿಂದ ಕಂಪನವು 'ಧರು' ಹಿಡಿಯಲು 'ನಗಾರಿಗಲ್ಲು' ಎಂದೂ ಅಪಸ್ವರದಿಂದ ಸುಸ್ವರದ ಸಪ್ತಸ್ವರಗಳು ಹೊರಡಲು 'ಸ್ವರಗಲ್ಲು' ಎಂದೂ ಜನಪದವು ಕರೆಯುತ್ತ ಬಂದಿದೆ" (ಗ.ಬ. ೨೪೫).

ಹೀಗೆ ಕಲ್ಲಿನಲ್ಲಿ ಹೊರಡುವ ನಾನಾ ಬಗೆಯ ಸ್ವರಗಳನ್ನು ಗಮನಿಸಿ ಜನಪದರಲ್ಲಿ ಬಳಕೆಯಿರುವ ಪದಗಳಿಂದಲೇ ಅವನ್ನು ಗುರುತಿಸುವ ಕೆಲಸ ಮಾಡುತ್ತಾರೆ. ಮತ್ತು ಮುಂದುವರೆದು ಇಂತಹ ನಾದಗಳಿಗೆ ಕರ್ನಾಟಕದಲ್ಲಿ ಯಾವ ಯಾವ ವಾಸ್ತು ಶಿಲ್ಪಗಳಲ್ಲಿ ನಿದರ್ಶನಗಳು ದೊರೆಯುತ್ತವೆ ಎಂಬುದನ್ನು ಸ್ವತಃ ಕ್ಷೇತ್ರದಲ್ಲಿ ತಮ್ಮ ಅನುಭವಕ್ಕೆ ಬಂದುವನ್ನು ಉದಾಹರಣೆಯಾಗಿ ಕೊಡುತ್ತಾರೆ. ಉಳವಿಯ ರುದ್ರಾಕ್ಷಿ ಮಂಟಪದ ಒಳಗವಿಯಲ್ಲಿ, ಹಾನಗಲ್ಲ ತಾರಕೇಶ್ವರ ದೇಗುಲದ ಒಳ ಆವಾರದ ಬಾಗಲದಲ್ಲಿ, ಬೇಲೂರಿನ ಚೆನ್ನಕೇಶ್ವರ ದೇವಾಲಯದಲ್ಲಿ, ಪಟ್ಟದಕಲ್ಲಿನ ಸಂಗಮೇಶ್ವರ ದೇಗುಲದ ಮುಂದಿರುವ ಶಿವಲಿಂಗದ ಪೀಟದಕಲ್ಲಿನಲ್ಲಿ, ವಿಜಯನಗರದ ವಿಜಯ ವಿಠಲನ ಗುಡಿಯಲ್ಲಿಯ ಸಭಾಮಂಟಪದ ಸಪ್ತಸ್ತಂಭಗಳಲ್ಲಿ, ವಿಜಾಪುರ ರಾಗಮಹಲಿನಲ್ಲಿ

ಇಂತಹ ಕಲ್ಲುಗಳಲ್ಲಿ ಸ್ವರಹೊರಡುವುದನ್ನು ಉದಾಹರಣೆಗಳೊಂದಿಗೆ ಮಂಡಿಸುತ್ತಾರೆ. ಈ ಎಲ್ಲ ಉದಾಹರಣೆಗಳು ಕೇವಲ ಓದಿ ತಿಳಿದುಕೊಂಡವಲ್ಲ, ಸ್ವತಃ ಕ್ಷೇತ್ರಕಾರ್ಯದ ಅನುಭವದಿಂದ ಆಡಿದ ಮಾತುಗಳು ಎಂಬ ಸಂಗತಿ ಅವರ ಸಂಶೋಧನಾ ಸಾಮರ್ಥ್ಯವನ್ನು ಎತ್ತಿತೋರಿಸುತ್ತವೆ.

ಈ ಮೇಲೆ ಅವರು ಕೊಟ್ಟುದು ನಾದದ ಉದಾಹರಣೆಗಳನ್ನು. ಮುಂದೆ ಚರ್ಮವಾದ್ಯಗಳ ವಿಕಾಸವನ್ನು ಶಿಲ್ಪ ಕಲೆಗಳಲ್ಲಿ ತಾವು ಎಲ್ಲೆಲ್ಲಿ ಕಂಡುದು ಎಂಬುದನ್ನು ಬರೆಯುತ್ತಾರೆ. "ಐಹೊಳೆಯ ಲಾಡಖಾನ ದೇಗುಲದಿಂದ ವಿಜಯನಗರದ ಕೃಷ್ಣದೇವರಾಯನ (ಕ್ರಿ. ಶ. ೧೫೧೩) ಹಜಾರಾ ರಾಮನ ದೇಗುಲದವರೆಗೆ ಮೂರ್ತಿಶಿಲ್ಪದ ನಾನಾ ವಿಧ ಭಂಗಿಗಳನ್ನು ಅಭ್ಯಸಿಸಿದಾಗ 'ಡಮರುಗ' ಹಿಡಿದು 'ಮೃದಂಗ'ದವರೆಗೆ ತೊಗಲಿನ ವಾದ್ಯಗಳೂ 'ಕಂಕರಿ'ಯಿಂದ 'ತಾಳಚೆಳ್ಳಂಕ'ಗಳ ವರೆಗೆ ಲೋಹ ವಾದ್ಯಗಳೂ 'ಏಕತಾರಿ' ಹಿಡಿದು 'ವೀಣಾ' ವಾದ್ಯದವರೆಗೆ ತಂತಿಯ ವಾದ್ಯಗಳೂ 'ಶಂಖು' ಹಿಡಿದು 'ಕೊಂಬು–ಕಹಳೆ'ಯವರೆಗೆ ಊದುವ ವಾದ್ಯಗಳೂ ನೃತ್ಯ ಭಂಗಿಗೆ ಸಂಗಜೋಡನೆ **(Orchestra)** ಯಾಗಿ ಶಿಲಾಶಿಲ್ಪದಲ್ಲಿ ಕೆತ್ತಲ್ಪಟ್ಟಿವೆ. ಇವುಗಳ ವೈಖರಿಯ ಉನ್ನತಿಯನ್ನು ಡಂಬಳ ದೊಡ್ಡಬಸವನ ದೇಗುಲದಲ್ಲಿಯೂ ಗದುಗಿನ ತ್ರಿಕೂಟೇಶ್ವರನ ದೇಗುಲದಲ್ಲಿಯೂ ಕಾಣಬಹುದಾಗಿದೆ. ಭರತ ನಾಟ್ಯದ ನಾನಾ ವಿಧ ಭಂಗಿಗಳನ್ನು ವಾದ್ಯ ಸಮೇತವಾಗಿ ಕೆತ್ತಿದ್ದಾನೆ. ಶಿಲ್ಪಿ ಡಂಬಳದ ದೊಡ್ಡ ಬಸವನ ದೇಗುಲದಲ್ಲಿ. ಗದುಗಿನ ತ್ರಿಕೂಟೇಶ್ವರ ದೇಗುಲದಲ್ಲಿ ರಾವಣನು 'ತದ್ಧಿತ್ತೋನಮ್' ಅಭಿನಯಗೂಡಿ ರೌದ್ರ ಭಂಗಿಯಲ್ಲಿ ನಿಂತಿದ್ದಾನೆ. ಜಡದೇಹಿಯಾದ ಗಣಪತಿಯು ವೇಷಭೂಷಣದಲ್ಲಿ 'ತಕ್ಕಿಟತಕನದ್ಧಿಗಿಣ್ಣತೋವನ್' ಎಂಬ ಅಭಿನಯಗೂಡಿ ಭಾವ ಭಂಗಿಯಲ್ಲಿ ಮಗ್ನನಾಗಿದ್ದಾನೆ" (ಗ.ಬ.೨೪೫–೨೪೬). ಈ ವಿವರಣೆಯನ್ನು ಗಮನಿಸಿದರೆ, ಇಲ್ಲೆಲ್ಲ ವಾಸ್ತುಶಿಲ್ಪದಲ್ಲಿ ಕಂಡು ಬರುವ ನೃತ್ಯ, ವಾದ್ಯ ಇವುಗಳ ವಿಕಾಸವು ಹೇಗೆ ಕಂಡು ಬರುತ್ತಿದೆ ಎಂಬುದನ್ನು ವಿವರಿಸಿದ್ದಾರೆ.

**ಬಯಲಾಟ :**

ಇನ್ನು ಜನಪದ ಬಯಲಾಟಗಳನ್ನು ಕುರಿತ ಅವರ ಸಮೀಕ್ಷೆ ಬಹು ಮಹತ್ವದ ಬರಹ ಎನಿಸುತ್ತದೆ. 'ಕರ್ನಾಟಕದ ಜನಪದ ಕಲೆಗಳು' ಎಂಬ ಲೇಖನದಲ್ಲಿ ಅಷ್ಟೇ ಅಲ್ಲದೇ 'ಕನ್ನಡ ಬಯಲಾಟಗಳು' ಎಂಬ ಒಂದು ಮಹತ್ವದ ಲೇಖನವನ್ನೂ ಅವರು ಬರೆಯುತ್ತಾರೆ. ಬಯಲಾಟಗಳನ್ನು ಆಟಗಳೆಂದು ಕರೆಯುವ ಅವರು ಅವುಗಳನ್ನು ವಿಶ್ಲೇಷಣೆಯಲ್ಲಿ ಆಧುನಿಕರೂ ಗಾಬರಿಯಾಗುವಂಥ ಸಂಗತಿಗಳಿವೆ.

ಆಟಗಳಲ್ಲಿ ಮೂಡಲಪಾಯ ಮತ್ತು ಯಕ್ಷಗಾನ "....ಬಯಲಾಟಗಳಲ್ಲಿ ಲೋಹವಾದ್ಯ ತಾಳದ ಪ್ರಾಧಾನ್ಯವು ಚರ್ಮವಾದ್ಯ ಮದ್ದಲೆಯಕ್ಕಿಂತಲೂ ಹೆಚ್ಚು. ರಾಗ

ನೃತ್ಯಾದಿಗಳು ಪಾತ್ರಗಳ ಅಭಿನಯದೊಡನೆ ಈ ವಾದ್ಯಗಳನ್ನು ಅವಲಂಬಿಸಿವೆ. ಚರ್ಮವಾದ್ಯ ಪ್ರಧಾನವುಳ್ಳ ಆಟಗಳು, ದಪ್ಪಿನಾಟಗಳು ದಿಮ್ಮಡಾಟಗಳೂ ಆಗಿವೆ" ಎಂದು ಬಯಲಾಟಗಳ ವಿಧಗಳ ವಿಕಾಸವನ್ನು ಹೇಳುತ್ತಾರೆ. ಹೀಗೆ ಬಯಲಾಟಗಳ ಪ್ರಕಾರಗಳಲ್ಲಿ ಅನೇಕರು 'ಜಾಂಗುಟೆಯಾಟದ ಹೆಸರನ್ನು ಸಹ ಕೇಳಿರಲಿಕ್ಕಿಲ್ಲ. ..... ತಾಳದ ಆಟಗಳು ಕನ್ನಡಿಗರಲ್ಲಿ ಬರುವ ಮುನ್ನ ಜಾಂಗುಟಿ ಆಟಗಳೇ ಪರಿಪಾಠದಲ್ಲಿದ್ದವು. ನಟ್ಟುವಿಗನು (ಕಥೆಗಾರ) ಜಾಂಗುಟಿಯನ್ನು ನುಡಿಸಿ ತಾನು ಹಿಡಿದು ಹಾಡಿ, ಮದ್ದಲಿಯವನಿಗೆ ತಾಳಲಯದ ಕಲ್ಪನೆಯನ್ನು ಕೊಡಲು, ಮದ್ದಲಿಯವನು ಗತ್ತು ಹಿಡಿದು ಅಟ್ಟದ ಮೇಲೆ ಬಂದ ಸೋಗುಗಳನ್ನು ಕುಣಿಸಿ ತಾಳ ಮುರಿದು ಮುಕ್ತಾಯ ಮಾಡುವನು. ಜಾಂಗುಟೆ ಆಟಗಳು ವಿಶೇಷವಾಗಿ ಆದಿಶಕ್ತಿಯ ಕಥೆಗಳು......... ಈ ಆಟಗಳನ್ನು ಆಡುವ ಜನರು – ಅಕ್ಕಸಾಲಿಗರು, ಬಡಿಗರು, ಕಂಬಾರ ಮೊದಲಾದ ಶಕ್ತಿಶಿವೋಪಾಸಕರು. ಈ ಆಟಗಳನ್ನು ನೋಡಿದ ಹಲ ಕೆಲವು ಹಿರಿಯರು ಹಳ್ಳಿಗಳಲ್ಲಿ ಈಗಲೂ ಜೀವಂತರಿದ್ದಾರೆ. ಜಾಂಗುಟೆ ಆಟದ ಕಥೆಯ ಪುಸ್ತಕಗಳು ಹಲಕೆಲವು ಹಳ್ಳಿಗಳಲ್ಲಿ ಈಗಲೂ ಓದಲಿಕ್ಕೆ ದೊರೆಯುವುವು." (ಗ.ಬ.೧೬೨) ಹೀಗೆ ಗದ್ದಗಿಮಠರು ತಮ್ಮ ಕಾಲಕ್ಕೆ ಇದ್ದು, ಬಳಕೆಯಿಂದ ತಪ್ಪಿ ಹೋಗುತ್ತಲಿದ್ದ ಬಯಲಾಟದ ಒಂದು ಪ್ರಕಾರವನ್ನು ಗುರುತಿಸಿಕೊಡುವುದು ಸಂಶೋಧನೆ ದೃಷ್ಟಿಯಿಂದ ಮಹತ್ವದ ಕೊಡುಗೆ ಎನಿಸುತ್ತದೆ.

ಈ ಲೇಖನದಲ್ಲಿ ಕಾಣುವ ಇನ್ನೊಂದು ಮಹತ್ವದ ಸಂಗತಿಯೆಂದರೆ ಮೂಡಲಪಾಯ ಅಥವಾ ದೊಡ್ಡಾಟಗಳು ಹುಟ್ಟಿದ ಮತ್ತು ಪ್ರಚಾರದಲ್ಲಿರುವ ಒಂದು ಪ್ರದೇಶವನ್ನು ಗುರುತಿಸಿ ಹೇಳಿರುವುದು. ಈ ಕುರಿತು ಗದ್ದಗಿಮಠರು ಹೀಗೆ ಬರೆಯುತ್ತಾರೆ: "ಮೂಡಲಪಾಯ ಸಮಾಸ ಪದದಲ್ಲಿ ಎರಡು ಶಬ್ದಗಳಿವೆ ಮೂಡಲ+ಪಾಯ. ಮೂಡಲವು ಪೂರ್ವದಿಕ್ಕಿನ ಬಯಲಾಟ ಪದ್ಧತಿಯು. ಬೆಟ್ಟದ ಕೆಳಗೆ, ಪಶ್ಚಿಮ ದಿಕ್ಕಿನಲ್ಲಿ ಯಕ್ಷಗಾನವಿದ್ದಂತೆ ಬೆಟ್ಟದ ಮೇಲೆ ಪೂರ್ವ ದಿಕ್ಕಿನ ಕರ್ನಾಟಕದಲ್ಲಿ ಚಿರಪರಿಚಯವಿದ್ದ ಪದ್ಧತಿ. ... ಈ ಕಥೆಗಳನ್ನು ಬರೆದ ಜನರು ಹಂಪಿ ಕಂಪಲ ಕುಡತಣ ಮೊದಲಾದ ಪೂರ್ವ ದಿಕ್ಕಿನಲ್ಲಿರುವ ಪುರದ ವಾಸಿಗಳಾಗಿದ್ದಾರೆ. ಬಾಣಾಸುರ ಕಥೆಯ ನಾಂದಿಯಲ್ಲಿ ... 'ಲೋಯಿಗುಂಡಿಯ ವಾಸ ಶ್ರೀ ವಿರೂಪಾಕ್ಷ' ಹೀಗೆ ಪಂಪಾಪತಿಯ ಸ್ತುತಿಯು ಬರುವುದು. ..... ಈ ಲೋಯಿಗುಂಡಿಯೇ ಈಗಿನ ಹಂಪೆಯೆಂದು ಅನೇಕ ಮೂಡಲಪಾಯ ಕಥೆಗಾರರ ನಂಬುಗೆ. ...... ಈ ನಾಂದಿಪದ್ಯಗಳು ಪೂರ್ವದಿಕ್ಕಿನ ದೇವರಿಗೂ ನಗರಗಳಿಗೂ ಸಂಬಂಧವಿರುವುದರಿಂದ ಮೂಡಲಪಾಯ ಬಯಲಾಟವು ವಿಜಯನಗರದ ಸುತ್ತ ಮುತ್ತಲಿನ ಪ್ರದೇಶದಲ್ಲಿ ಹುಟ್ಟಿರಬೇಕೆಂದು ಸಂಶೋಧಕರಿಗೆ ಅನಿಸದಿರದು" (ಗ.ಬ. ೧೬೨) ಎಂದು ಅಭಿಪ್ರಾಯ ಪಡುತ್ತಾರೆ. ಅವರ ಈ ಮಾತಿನಲ್ಲಿ ದೊಡ್ಡಾಟವು ಪ್ರಚಾರದಲ್ಲಿರುವ ಪ್ರದೇಶವಲ್ಲದೆ, ದೊಡ್ಡಾಟ ಪೂರ್ವದಿಕ್ಕಿನಿಂದ ಬೆಳೆದು

ಬಂದುದು ಎಂಬ ಗ್ರಹಿಕೆಗಳಿವೆ. ಇವು ಬಯಲಾಟದ ಸಂಶೋಧಕರು ಗಮನಿಸಬೇಕಾದ ಸಂಗತಿಗಳೆನಿಸುತ್ತವೆ.

ಡಾ. ಗದ್ದಗಿಮಠರ ಇನ್ನೊಂದು ಅಭಿಪ್ರಾಯ ಬಹು ಕುತೂಹಲಕರವಾಗಿದೆ. ಅದು ಸಣ್ಣಾಟ ಮತ್ತು ದೊಡ್ಡಾಟ ಇವುಗಳಲ್ಲಿ ಯಾವುದು ಮೊದಲು ಹುಟ್ಟಿತು ಎಂಬ ಸಂಗತಿ. ಈ ಬಗೆಗೆ ವಿಚಾರ ಮಾಡುತ್ತ ಗದ್ದಗಿಮಠರು ಹೀಗೆ ಬರೆಯುತ್ತಾರೆ: "ದೊಡ್ಡಾಟದಲ್ಲಿ ಲೋಹ ವಾದ್ಯಗಳು ಎದ್ದು ಕಂಡರೆ ಸಣ್ಣಾಟದಲ್ಲಿ ಚರ್ಮವಾದ್ಯಗಳು ಒಡೆದು ಕಂಡು ಬರುವುವು. ಸಣ್ಣಾಟದ ವಿವಿಧ ರೂಪಗಳನ್ನು ನೋಡಿದರೆ ಸಣ್ಣಾಟವೇ ಮೊದಲು ಭಾಜನೆಗಬ್ಬಗಳಿಂದ ರೂಪ ಹೊಂದಿರಬಹುದೆಂದು ಸಂಶಯ ಬರುವುದು. ಭಾಜನೆಗಳ ಭಾಜನಮೇಳಗಳೇ ರೂಪ ಹೊಂದಿ ಸಣ್ಣಾಟಗಳಾದುವು. ಮುಂದೆ ಸಣ್ಣಾಟವು ಬೆಳೆದು ಹಿರೆಯಾಟವಾಗಿ ಮೂಡಲಪಾಯ ಯಕ್ಷಗಾನವಾಗಿ ಇಂದೆಮಗೆ ಬಂದಿದೆ" (ಗ.ಬ.೧೬೬). ಗದ್ದಗಿಮಠರ ಈ ಅಭಿಪ್ರಾಯದಲ್ಲಿ ಸಣ್ಣಾಟ ಮೊದಲು ನಂತರ ದೊಡ್ಡಾಟ ಬೆಳೆದು ಬಂದಿದೆ ಎಂಬ ಕುತೂಹಲಕರವಾದ ಸಂಗತಿ ಇದೆ. ಅನೇಕ ವಿದ್ವಾಂಸರು ದೊಡ್ಡಾಟವೇ ಮೊದಲು ಹುಟ್ಟಿ ಅದರ ಸಣ್ಣ ರೂಪವೇ ದೊಡ್ಡಾಟವೆಂದು ಹೇಳುತ್ತಾರೆ. ಗದ್ದಗಿಮಠರ ಈ ಊಹೆಗೆ ಅಲ್ಲಿ ಬಳಕೆಯಾಗುವ ವಾದ್ಯಗಳು ಎಂದು ತೋರುತ್ತದೆ. ಜೊತೆಗೆ ಭಾಜನಗಬ್ಬಗಳ ಬೆಳವಣಿಗೆಯ ರೂಪವೇ ಸಣ್ಣಾಟವೆಂದು ಹೇಳುವಲ್ಲಿ ಒಂದು ಸಮಂಜಸವಾದ ತರ್ಕವಿದೆ ಎನಿಸುತ್ತದೆ. 'ಭಾಜನೆಗಬ್ಬ (ವಾದನಕಾವ್ಯ)- ಎಂದರೆ ಹಿಮ್ಮೇಳದೊಂದುಗೆ ಹಾಡುವ ಕಾವ್ಯ' (ಕವಿರಾಜಮಾರ್ಗ ವಿವೇಕ, ೧೦೬) ಎಂದು ಅರ್ಥವಾಗುವುದರಿಂದ ಇಂತಹ ಹಾಡುವ ಕಾವ್ಯದ ಪದ್ಧತಿಯೊಂದು ಕರ್ನಾಟಕದಲ್ಲಿದ್ದುದು ಕವಿರಾಜಮಾರ್ಗ ಮತ್ತು ಕಾವ್ಯಾವಲೋಕನಗಳು ಉಲ್ಲೇಖಿಸುತ್ತವೆ. ಈ ಹಿನ್ನೆಲೆಯಲ್ಲಿ ಗದ್ದಗಿಮಠರ ಊಹೆಗೆ ಒಂದು ಸಮಂಜಸ ತರ್ಕವಿದೆ ಎನಿಸುತ್ತದೆ.

ಕಲಬುರ್ಗಿ ಮತ್ತು ಬೀದರ ಜಿಲ್ಲೆಯಲ್ಲಿ 'ಬೀದಿ ಬಯಲಾಟಗಳು' ದೊರೆಯುವುದನ್ನು ನಾನು ೧೯೮೬ರಲ್ಲಿ ಗುರುತಿಸಿದ್ದೇನೆ. ಈ ಬೀದಿ ಬಯಲಾಟಗಳು ಗೀತ ರೂಪಕಗಳಾಗಿದ್ದು, ಅವುಗಳ ಮುಂದುವರೆದ ಬೆಳವಣಿಗೆಯ ಮೊದಲ ರೂಪವೇ ಸಣ್ಣಾಟವಾಗಿರಬೇಕು. ನಂತರದಲ್ಲಿ ಲಿಖಿತ ರೂಪದ ದೊಡ್ಡಾಟಗಳು ಬೆಳೆದಿರಬೇಕು ಎಂಬ ಪ್ರಮೇಯವನ್ನು ನಾನು ಮಂಡಿಸಿದ್ದೆ (ಕ.ಜಾ.ಪ್ರ. ೨೭೯–೨೮೦). ಈಗ ಗದ್ದಗಿಮಠರ ಅಭಿಪ್ರಾಯವೂ ಹಾಗೆಯೇ ಇದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಇದು ಗದ್ದಗಿಮಠರ ಕ್ಷೇತ್ರ ಕಾರ್ಯದ ಅನುಭವ, ಗ್ರಹಿಕೆಯ ಗುಣ ಮತ್ತು ವಿಶ್ಲೇಷಣೆಯ ಸಾಮರ್ಥ್ಯಗಳನ್ನು ಸಾರಿಹೇಳುತ್ತದೆ.

ಇನ್ನು ಜನಪದ ಕುಣಿತಗಳನ್ನು ಗಮನಿಸುತ್ತ – "ಹೋಳಿಯ ಕುಣಿತ, ಸುಗ್ಗಿಯ ಕುಣಿತ, ಬೆಳದಿಂಗಳ ಕುಣಿತ ಮೊದಲಾದವು ಇಂದು ಕನ್ನಡ ಜನಪದ

ಕುಣಿತಗಳಾಗಿವೆ......... ಅಲ್ಲದೇ ಲಮಾಣಿ ಹೆಣ್ಣುಮಕ್ಕಳ ಮಳೆರಾಜನ ಹಾಗೂ ಗೌರಿಯ ಹಾಡುಗುಣಿತಗಳು ಗಮನಾರ್ಹವಾಗಿವೆ." (ಗ.ಬ. ೨೪೭) ಎನ್ನುತ್ತಾರೆ. ಹೋಳಿಯನ್ನು ಹಾಡುತ್ತ ಕುಣಿಯುತ್ತ ಆಚರಿಸುವುದನ್ನು ದಾಖಲಿಸುತ್ತಾರೆ. ಒಕ್ಕಲಿಗನಿಗೆ ಸಂಬಂಧಿಸಿದ ಕುಣಿತಗಳನ್ನು ಸುಗ್ಗಿಯ ಕುಣಿತಗಳೆಂದು ಕರೆಯುತ್ತಾರೆ. 'ಬೆಳದಿಂಗಳ ಕುಣಿತಗಳು ಸಂಪ್ರದಾಯ ಹಾಡುಗಳ ಹಾಗೂ ಗೌರಿಸೀಗೆಯ ಕೋಲು ಪದಗಳ ಕುಣಿತಗಳಾಗಿವೆ' ಎಂದು ಬರೆಯುತ್ತಾರೆ.

ಜನಪದ ಕಲೆಗಳನ್ನು ಗುರುತಿಸುವಲ್ಲಿ ಉಳಿದೆಡೆ ಕಾಣುವ ಗದ್ದಗಿಮಠರ ಕ್ಷೇತ್ರ ಕಾರ್ಯದ ಅನುಭವ ಕುಣಿತಗಳನ್ನು ಗುರುತಿಸುವಲ್ಲಿ ಕಾಣುವುದಿಲ್ಲ. ಆದರೆ ಅವರು ಗುರುತಿಸಿದಷ್ಟು ಮಾತ್ರ ಸರಿಯಾಗಿಯೇ ಇದೆ. ಇಂದು ಗುರುತಿಸಲಾಗುವ ನೂರಾರು ಬಗೆಯ ಜನಪದ ಕುಣಿತಗಳನ್ನು ಆ ಕಾಲಕ್ಕೆ ಗುರುತಿಸಲು ಸಾಧ್ಯವಾಗಿಲ್ಲವೆಂದೇ ಹೇಳಬೇಕಾಗುತ್ತದೆ.

## ವೃತ್ತಿ ಕಲಾವಿದರು :

ಜನಪದ ವೃತ್ತಿ ಕಲಾವಿದರನ್ನು ಕುರಿತು ಡಾ. ಗದ್ದಗಿಮಠರು ಎರಡು ಲೇಖನಗಳನ್ನು ಬರೆದಿದ್ದಾರೆ. ಇಲ್ಲಿ ಲೇಖನಗಳು ಪ್ರಕಟವಾದ ಕಾಲವೂ ಮುಖ್ಯವೆನಿಸುತ್ತದೆ. ೧೯೫೫ ರ ಸುಮಾರಿನಲ್ಲಿ ಪ್ರಕಟವಾದ ಲೇಖನಗಳಿವು. ಗೊಂದಲಿಗರನ್ನು, ದುರುಗಮುರಗಿಯವರನ್ನು ಕಲಾವಿದರೆಂದು ಗುರುತಿಸುವ ಆಲೋಚನೆಯೇ ಇಲ್ಲದ ಕಾಲ ಅದು. ಅಂತಹದರಲ್ಲಿ ಅವರು ಗೊಂದಲಿಗ ಮತ್ತು ದುರುಗಮುರುಗಿ ಇವರ ಪ್ರದರ್ಶನಗಳನ್ನು ಕುರಿತು ಬರೆದ ಎರಡು ಲೇಖನಗಳು ಅವರ ಅಗಾಧವಾದ ಗ್ರಹಿಕೆಗೆ ಉದಾಹರಣೆಗಳಾಗಿವೆ.

'ಕರ್ನಾಟಕದ ಗೊಂದಲಿಗರು' ಎಂಬ ಲೇಖನವಂತೂ ಅವರ ಲಿಖಿತ ಮತ್ತು ಮೌಖಿಕ ಜ್ಞಾನಗಳಿಗೆ ಮತ್ತು ವಿಶ್ಲೇಷಣಾ ವಿಧಾನಗಳಿಗೆ ಸಮರ್ಥವಾದ ಪುರಾವೆಯಾಗಿದೆ. ಗೊಂದಲಿಗರು ಎಂದರೆ – ಸಾಮಾನ್ಯವಾಗಿ ಮಹಾರಾಷ್ಟ್ರದಿಂದ ಬಂದ ಜನಾಂಗ ಮತ್ತು ಅಂಬಾಭವಾನಿ ಭಕ್ತರು ಎಂಬ ಸಾಮಾನ್ಯ ತಿಳುವಳಿಕೆಗಳು ಇರುವ ಕಾಲದಲ್ಲಿ, ಗೊಂದಲಿಗರು ಕರ್ನಾಟಕದವರು ಮತ್ತು ಅವರು ಮೂಲತಃ ಶಿವೋಪಾಸಕರು ಎಂಬುದನ್ನು ವಿದ್ವತ್ಪೂರ್ಣವಾಗಿ ಮಂಡಿಸುವ ಅವರ ರೀತಿ, ಸಂಶೋಧನಾ ವಿಧಾನ ಯಾರಿಗಾದರೂ ಆಶ್ಚರ್ಯವನ್ನುಂಟು ಮಾಡುತ್ತವೆ. ಮೇಲಾಗಿ ಅವರು ಮಂಡಿಸುವ– ಗೊಂದಲಿಗರು ಅಲೆಮಾರಿ ವೃತ್ತಿಗಾಯಕರು, ಅವರು ಕನ್ನಡಿಗರು ಮತ್ತು ಶಿವೋಪಾಸಕರು ಎಂಬ ಮೂರು ಸಂಗತಿಗಳನ್ನು ಇಂದಿನ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ ಎಂಬುದು ಗಮನಾರ್ಹವಾದುದು.

"ಗೊಂದಲವು (ಒಂದು ಬಗೆಯ ನಾಟಕ) ಗೊಂದಲಿಗರ ಕಾಯಕವಾಗಿತ್ತು" (ಗ.ಬ.೭೪) ಎಂಬುದು ಗದ್ದಗಿಮಠರ ಸ್ಪಷ್ಟ ಗ್ರಹಿಕೆ. "ಸುಮಾರು ಏಳು ಅಥವಾ ಎಂಟನೇಯ ಶತಮಾನದಿಂದ ಜನಪದಕೆ ಹಾಡಿ ಕಥೆ ಹೇಳಿ, ಜನರ ಮನವನ್ನು ತಣಿಸಿ ಮೆಚ್ಚುಗೆಯನ್ನು ಪಡೆದ ಇನ್ನೊಂದು ದೊಡ್ಡ ಪಂಗಡವು ಈಗಲೂ ಕರ್ನಾಟಕದಲ್ಲಿದೆ. ಈ ಪಂಗಡದ ಜನರೇ ಈಗಿನ ಗೊಂದಲಿಗರು" (ಗ.ಬ.೭೧) ಎಂದು ಸ್ಪಷ್ಟಪಡಿಸುತ್ತಾರೆ. ಇವರು ಮೂಲತಃ ಶಿವೋಪಾಸಕರೇ ಆಗಿದ್ದು, ಇವರು ಹಾಡುವ ಕಥನಗಳು ಅದನ್ನು ಸ್ಪಷ್ಟಪಡಿಸುವುದನ್ನು ಗುರುತಿಸುವ ಡಾ. ಗದ್ದಗಿಮಠರು ಗೊಂದಲಿಗರ ಬಿಡಿ ಹಾಡುಗಳು ಮಾತ್ರ ಶಕ್ತಿ, ಭೈರವಿ, ಕಾಳಿ, ಅಂಬಾಭವಾನಿ ಮುಂತಾದ ಹೆಣ್ಣುದೇವತೆಗಳ ಸ್ತೋತ್ರಗಳಾಗಿರುವುದನ್ನು ಗುರುತಿಸುತ್ತಾರೆ. "ದಕ್ಷಿಣದಲ್ಲಿ ಮಹಾರಾಷ್ಟ್ರರು ಪ್ರಬಲರಾಗಲು ಅನೇಕ ಕನ್ನಡ ಸಂಸ್ಥಾನಗಳು ಮಹಾರಾಷ್ಟ್ರರ ವಶವಾದವು. ಈ ಸಂಸ್ಥಾನಗಳಲ್ಲಿ ವಾಸಮಾಡಿಕೊಂಡಿದ್ದ ಅನೇಕ ಗೊಂದಲಿಗರು ಮಹಾರಾಷ್ಟ್ರರ ಕೈವಶವಾದರು. .......... ಕರ್ನಾಟಕದ ಗೊಂದಲಿಗರು ಮಹಾರಾಷ್ಟ್ರದಲ್ಲಿ ಸೇರಿಕೊಂಡ ತಮ್ಮ ಬೀಗ ಬಿಜ್ಜರ ಧರ್ಮಾಚರಣೆಗಳನ್ನೊಪ್ಪಿಕೊಂಡು ಅಂಬಾಭವಾನಿ ತುಳಜಾ ಭವಾನಿಯ ಭಕ್ತರಾದುದಲ್ಲದೆ ಅನೇಕರು ಮರಾಠಿ ಭಾಷೆಗೆ ಮನಸೋತು ಮರಾಠಿಯನ್ನೇ ತಮ್ಮ ಮಾತೃ ಭಾಷೆಯನ್ನಾಗಿ ಮಾಡಿಕೊಂಡರು. ಹೀಗಾಗಿ ಮರಾಠಿಗರ ಪ್ರಭಾವವು ಈ ಸಂಚಾರ ಮಾಡುವ ಜನರ ಮೇಲ ವಿಶೇಷ ಪರಿಣಾಮ ಮಾಡಿತು" (ಗ.ಬ.೭೧) ಎಂದು ಗೊಂದಲಿಗರಿಗೂ ಮರಾಠಿಗರಿಗೂ ಹೇಗೆ ಸಂಬಂಧ ಬಂದಿತು ಎಂಬುದನ್ನು ವಿವರಿಸುತ್ತಾರೆ.

ಗೊಂದಲ ಶಬ್ದವು ಅಚ್ಚಗನ್ನಡ ಶಬ್ದವಾಗಿದ್ದು, ಅದು ಸಮೂಹ ಮತ್ತು ಒಂದು ಬಗೆಯ ನಾಟಕ ಎಂದು ಕನ್ನಡ ಕವಿಗಳು ಬಳಸಿದ್ದನ್ನು ಪ್ರಯೋಗ ಸಹಿತ ಉಲ್ಲೇಖಿಸುತ್ತಾರೆ. ಇವುಗಳ ಸಹಾಯದಿಂದ ಗೊಂದಲಿಗರು "ರಾಜಾಸ್ಥಾನಗಳಲ್ಲಿ ಒಂದು ಬಗೆಯ ನಾಟಕ ವಿನೋದಾವಳಿಗಳನ್ನು ಮಾಡುವ ದೇಸಿಗ (ಹಳ್ಳಿಗ)ರೆಂದೂ (ಗ.ಬ.೭೩.) ಸ್ಪಷ್ಟಪಡಿಸುತ್ತಾರೆ. ೧೧ನೇ ಶತಮಾನದ ನಾಗಚಂದ್ರನ 'ಪಂಪರಾಮಾಯಣ' ದಲ್ಲಿ 'ಗೊಂದಳ' ಎಂಬ ಪದ ಪ್ರಯೋಗವಾಗಿದ್ದುದನ್ನು ಗೊಂದಲಿಗರು ರಾಜಸ್ಥಾನಗಳಲ್ಲಿ ದೇಶೀ ಕಲಾವಿದರಾಗಿರುವ ಸಾಧ್ಯತೆಯನ್ನು ಒತ್ತಿ ಹೇಳುವ ಅವರು, "ಕವಿರಾಜಮಾರ್ಗ ದಲ್ಲಿ ಹೇಳುವ ಚತ್ತಾಣ, ಬೆದಂಡೆ, ಭಾಜನೆಗಬ್ಬ ಮೊದಲಾದ ಹಾಡುಗಬ್ಬಗಳನ್ನು ಹಾಡುವ ಜನರು ಇವರೇ ಏಕೆ ಆಗಿರಲಿಕ್ಕಿಲ್ಲ" ಎಂಬ ಊಹೆಯನ್ನೂ ಮಾಡುತ್ತಾರೆ.

"ಕರ್ನಾಟಕದಲ್ಲಿ ನಾಟಕ ವಿನೋದಾವಳಿಗಳನ್ನು ಆಡಿ ತೋರಿಸಿ ಜನರನ್ನು ತಣಿಸುವ ಮೂಲ ಜಾತಿಗರೂ (ಬಹುರೂಪಗಳು) ಕಿಳ್ಳಿಕೇತರೂ. ಈ ಗೊಂದಲಿಗರ ವರ್ಗಕ್ಕೆ ಸೇರಿದವರು. ಶಿವಶರಣರಲ್ಲಿ ಜಾತಗರ ಚೌಡಯ್ಯನೆಂಬ ಶಿವಭಕ್ತನು........

ಶಿವನ ಲೀಲೆಗಳನ್ನೊಳಗೊಂಡ 'ಶಿವಪಾರಿಜಾತ'ವೆಂಬ ಒಂದು ಹಾಡುಗಬ್ಬದ ಅತೀ ಜೀರ್ಣವಾದ ಒಂದು ಕೈಬರಹದ ಪ್ರತಿಯು ಬೈಲಹೊಂಗಲದ ಶ್ರೀ ದೊಡ್ಡಭಾವೆಪ್ಪ ಮೂಗಿ ಅವರಲ್ಲಿ ನನ್ನ ನಿದರ್ಶನಕ್ಕೆ ಬಂತು. ಅದರಲ್ಲಿ ಬರುವ ಹಲಕೆಲವು ಸಂಕೇತಗಳ ಮೇಲಿಂದ ಅದು ಶಿವಶರಣ ಚೌಡಯ್ಯನ ಶಿವಪಾರಿಜಾತವಿರಬಹುದೆಂದು ಶಂಕಿಸಲಾಗಿದೆ." (ಗ.ಬ.೭೪). ಈ ಜನ ಗೊಂದಲಿಗರು, ಜಾತಿಗರು, ಬುಡಬುಡಕಿಗಳು ಗೂಢಚಾರರಾಗಿ ಗುಪ್ತ ರಾಜದೂತರಾಗಿ ದಂಡಿನಲ್ಲಿ ಮನರಂಜಕರಾಗಿ ಕೆಲಸ ಮಾಡಿದ್ದನ್ನು ಗದ್ದಗಿಮಠರು ಬರೆಯುತ್ತಾರೆ. ಇದಕ್ಕೆಲ್ಲ ಇವರಿಗೆ ದೇಣಿಗೆಯಾಗಿ ಬಂದ 'ಜಾತ ಇನಾಮು' ಭೂಮಿಗಳಿಂದ ತಿಳಿದು ಬರುತ್ತದೆ ಎನ್ನುತ್ತಾರೆ.

ಗೊಂದಲಿಗರ ಮೂಲವನ್ನು ಗುರುತಿಸುವ ಕೆಲಸವನ್ನೂ ಮಾಡಿದ ಗದ್ದಗಿಮಠರು ಹೀಗೆ ವಿವರಿಸುತ್ತಾರೆ: "ಹುನಗುಂದ ತಾಲೂಕಿನಲ್ಲಿರುವ ಅನೇಕ ಗೊಂದಲಿಗರು ಕಪ್ಪಡಿ ಸಂಗಮದ ಸಾರಂಗಮಠದ ಭಕ್ತರಾಗಿರುವರಲ್ಲದೆ ಮೂಲಸಾರಂಗದೇವನ ಪರಮಶಿಷ್ಯರಾಗಿದ್ದರೆಂಬುದು ಕೆರೂರಲ್ಲಿಯ ಅನೇಕ ಗೊಂದಲಿಗರ ಮನೆತನದ ಇತಿಹಾಸದಿಂದ ತಿಳಿದು ಬರುವುದು" (ಗ.ಬ. ೭೬).

ಹಾಡುವ ಪದ್ಧತಿಯನ್ನು ಬಳಕೆಯಾಗುವ ವಾದ್ಯಗಳನ್ನು ಸ್ತುತಿ-ಮಂಗಳ ಮುಂತಾದ ಹಾಡುಗಳನ್ನು ಪರಿಚಯ ಮಾಡುವುದಲ್ಲದೆ ಉದಾಹರಣೆಗಳನ್ನೂ ಕೊಡುತ್ತಾರೆ. ಗೊಂದಲಿಗರು ಹೇಳುವ ೧೪ ಕಥೆಗಳನ್ನು ಉಲ್ಲೇಖಿಸುತ್ತಾರೆ.

ದುರುಗಮುರಗಿ ಅವರ ಬಗ್ಗೆ ಬರೆದ ಲೇಖನ ಕೂಡ ಪ್ರಮುಖವಾದುದೆ. ೧೯೫೮ ರಲ್ಲಿ ಪ್ರಕಟವಾದ ಈ ಲೇಖನ ಶುದ್ಧವಾಗಿ ಕ್ಷೇತ್ರಕಾರ್ಯದ ಸಹಾಯದಿಂದಲೇ ಬರೆದುದಾಗಿದೆ. ಒಂದು ಹೊಸ ವಿಷಯವನ್ನು ಕ್ಷೇತ್ರಕಾರ್ಯದ ಸಹಾಯದಿಂದ ಹೇಗೆ ಹಿಡಿದಿಡಬಹುದು ಎಂಬುದಕ್ಕೆ ಇದೊಂದು ಮಾದರಿ ಲೇಖನವೂ ಹೌದು.

ದುರುಗಮುರಗಿಯವರು ಕೂಡ ಗೊಂದಲಿಗರಂತೆ ಅಲೆಮಾರಿ ವೃತ್ತಿ ಕಲಾವಿದರೆಂದು ಗುರುತಿಸುತ್ತಾರೆ. "ದುರುಗಮುರಗಿಯವರ ಮೂಲಸ್ಥಾನವು ಕನ್ನಡ ತೆಲುಗು ನಾಡಗಳ ಗಡಿಸೀಮೆಯಾಗಿದೆ. ಕಿನ್ನಾಳ, ಕೊಪ್ಪಳ, ಬಳ್ಳಾರಿ, ಹೊಸಪೇಟೆ, ಸುರಪುರಗಳಲ್ಲಿ ಈ ಜನರು ಹೆಚ್ಚಾಗಿರುವರು.... ಇವರ ಜಾತಿ ಬೇಡರದು" (ಗ.ಬ.೮೮-೮೯) ಎಂದು ಬರೆಯುತ್ತಾರೆ. ಇವರ ಮಾತೃಭಾಷೆ ಕನ್ನಡವಾಗಿರುವುದನ್ನು ಎಚ್ಚರದಿಂದ ದಾಖಲಿಸುತ್ತಾರೆ.

ದುರುಗಮುರಗಿಯರ ಪ್ರದರ್ಶನವನ್ನು ತೀರ ಅಚ್ಚುಕಟ್ಟಾಗಿ, ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ಈ ಲೇಖನ ಬಂದನಂತರ ಇಷ್ಟೊಂದು ವಿವರವಾದ ಮಾಹಿತಿ ಗಳನ್ನೊಳಗೊಂಡು, ಕ್ರಮಬದ್ಧವಾಗಿ ಅವರ ಪ್ರದರ್ಶನ ಪದ್ಧತಿಯನ್ನು, ಪ್ರದರ್ಶನ

ಸಂದರ್ಭದಲ್ಲಿ ಅವರು ಬಳಸುವ ಭಾಷಿಕ ಪ್ರಯೋಗಗಳನ್ನು ಉಲ್ಲೇಖಿಸಿ ಬರೆದ ಇನ್ನೊಂದು ಸಂಶೋಧನಾತ್ಮಕ ಬರಹ ನಮ್ಮ ಗಮನಕ್ಕೆ ಬರುವುದಿಲ್ಲ. ನಂತರ ದುರುಗಮುರಗಿ ಅವರ ಬಗ್ಗೆ ಬರೆದವರು ಗದ್ದಗಿಮಠರ ಲೇಖವನ್ನು ಗಮನಿಸಿಲ್ಲ.

ಕರ್ನಾಟಕದಲ್ಲಿಯ ದುರುಗಮುರಗಿಯರು ದುರಗಮ್ಮನ ಭಕ್ತರು. ಆಕೆಯನ್ನು ಮರಗಮ್ಮ, ಮಾರಿ, ತಾಯಿ ಎಂದು ನಾನಾ ಹೆಸರುಗಳಿಂದ ಕರೆಯುತ್ತಾರೆ. ಹೈದ್ರಾಬಾದ ಕರ್ನಾಟಕದಲ್ಲಿ ಮರಗಮ್ಮನನ್ನು ಹೊತ್ತು ಬರುವವನನ್ನು ಪೋತರಾಜ ಎಂದು ಕರೆಯುತ್ತಾರೆ. ಪೋತರಾಜನು ನಾನಾ ಬಣ್ಣದ ವೇಷಗಳನ್ನು ತೊಟ್ಟು, ಮರಗಮ್ಮನನ್ನು ಹೊತ್ತು, ಒಂದು ಕಡೆ ಮರಗಮ್ಮನ ಪೆಟ್ಟಿಗೆಯನ್ನು ಇಳುಹಿ, ಪ್ರದರ್ಶಿಸುವ ಪ್ರದರ್ಶನದ ರೀತಿಯನ್ನು ಗದ್ದಗಿಮಠರು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ಮಾಯಗಾರತಿ ದುರುಗಮ್ಮನ ಗುಣಗಾನ ಮಾಡುವ ಮೂರು ವಚನಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

ಸಾವಿರ ವರುಷ ಬಾಳಿದರೂ ಸಾವು ತಪ್ಪಲಿಲ್ಲ
ನೂರು ವರುಷವಿದ್ದರೂ ಅಣ್ಣ ತಮ್ಮರ ಪಾಲು ತಪ್ಪಲಿಲ್ಲ
ಮಣ್ಣಿನ ಕಾಯ ಮಣ್ಣಿಗೆ
ಏಸುದಿನ ಬಿಟ್ಟರು ಕುಂಬಾರ ಸ್ವಾರಿ ಒಡಿಯಲೇಬೇಕು
ಬೇಡ್ಕ್ಯಂಡ ಬಾಯಿ ನಾಡು ಕಂಡಿತು
ನಿನ್ನೊತ್ತು ನಾನು ಬೇಡಿ ಉಣ್ಣುವೆನಮ್ಮ ಮಾಯಕಾರತಿ ದುರಗಮ್ಮ.........

ಅಲ್ಲದೇ ಮರಗಮ್ಮನ ಪೆಟ್ಟಿಗೆಯಲ್ಲಿ ಬಸವಣ್ಣನ ಜೋಡು ಗೊಂಬೆ ಗಳಿರುವುದನ್ನು, ಅವನ ಪ್ರದರ್ಶನದಲ್ಲಿ ಈ ಜೋಡು ಬಸವಣ್ಣನನ್ನು ಹೊರ ತೆಗೆದು ಅವನ ವರ್ಣನೆ ಮಾಡುವುದನ್ನು ಗಮನಿಸುತ್ತಾರೆ. ಬಹುಶಃ ಇದು ತನ್ನ ಪ್ರೇಕ್ಷಕರೆಲ್ಲ ಒಕ್ಕಲುಮಕ್ಕಳೇ ಆಗಿದ್ದು, ಅವರನ್ನು ಭಾವನಾತ್ಮಕ್ಕವಾಗಿ ಗೆಲಿಯುವ ರೀತಿ ಇರಬೇಕೆ ನಿಸುತ್ತದೆ. ಅಲ್ಲದೇ ಅವನು ಕಾಲಜ್ಞಾನದ ರೀತಿಯಲ್ಲಿ ವರುಷದ ಮಳೆ ಬೆಳೆ ಇತ್ಯಾದಿ ಗಳನ್ನು ಕುರಿತು ಹೇಳುವ ರೀತಿಯನ್ನು ವಿವರಿಸುತ್ತಾರೆ. ದುರುಗಮುರುಗಿಯವರು ಕಾಲಜ್ಞಾನಕ್ಕೆ ಪ್ರಸಿದ್ಧವಾದ ಮಠಗಳಿಗೆ ನಡೆದುಕೊಳ್ಳುವುದನ್ನು ಶೋಧಿಸಿ ದಾಖಲಿಸುತ್ತಾರೆ. "ಕರ್ನಾಟಕದ ಸುಪ್ರಸಿದ್ಧ ಶಕ್ತಿ ಶಿವಾಚಾರ್ಯರ ಕಾಲಜ್ಞಾನ ಮಠಗಳಾದ ಬಬಲಾದಿ, ಸೀತಿಮನಿ, ಕೊಡೆಕಲ್ಲು ಮೊದಲಾದ ಮಠಗಳಿಗೆ ಭಕ್ತಿಯಿಂದ ನಡೆದುಕೊಳ್ಳುವುದಲ್ಲದೇ, ಆ ಮಠಗಳಿಗೆ ಕೊಡತಕ್ಕ ಮಾಮೂಲು (ಗುರುದಕ್ಷಿಣೆ)ವನ್ನು ಪ್ರತಿವರ್ಷ ತಪ್ಪದೇ ಸಲ್ಲಿಸುತ್ತಾರೆಂದು ಹೇಳುತ್ತಾರೆ" (ಗ.ಬ.೬೦) ಹೀಗಾಗಿ ಕಾಲಜ್ಞಾನವನ್ನು ಸಾರುವ ಕೆಲಸವೂ ಇವರದಾಗಿದೆ ಎಂದು ಬರೆಯುತ್ತಾರೆ.

## ಕಾಯಕ ಶಿಕ್ಷಣ :

ಡಾ. ಗದ್ದಗಿಮಠ ಅವರ ವಿಶೇಷ ಲೇಖನಗಳಲ್ಲಿ ಕಾಯಕಕ್ಕೆ ಸಂಬಂಧಿಸಿದ ಮೂರು ಲೇಖನಗಳು ಗಮನಾರ್ಹವಾಗಿವೆ. ಕಾಯಕ ಶಿಕ್ಷಣ, ಕಾಯಕ ಶಿಕ್ಷಣದ ಆಡಳಿತೆ ಮತ್ತು ಕಾಯಕ ಶಿಕ್ಷಣದಲ್ಲಿ ಅನುಭಾವ ಪದ್ಧತಿ – ಎಂಬ ಮೂರು ಲೇಖನಗಳು ಒಂದೇ ಆಲೋಚನೆಯನ್ನು ಬೆಳೆಸುವ ಲೇಖನಗಳಾಗಿವೆ. ಕಾಯಕ ಎನ್ನುವುದು, ಕೇವಲ ದುಡಿಮೆ, ಶ್ರಮ ಎಂಬುದಕ್ಕೆ ಶರಣರು ಬಳಸಿದ ಪಾರಿಭಾಷಿಕ ಪದ ಅಷ್ಟೇ ಅಲ್ಲ, ಕಾಯಕ ಎಂಬುದು ಒಂದು ಶಿಕ್ಷಣದ ಪದ್ಧತಿ, ಅದುವೇ 'ಜೀವನ ಶಿಕ್ಷಣ' ಎಂದು ವಿವರಿಸುವ ಹೊಸ ದೃಷ್ಟಿಯನ್ನು ಇಲ್ಲಿ ಕಾಣುತ್ತೇವೆ. "ಶಿವಶರಣರು ಕಾಯಕವು ಶಿಕ್ಷಣವೆಂದು ಬಹಿರಂಗವಾಗಿ ಕರೆಯದಿದ್ದರೂ ಈಗಿನ ಶಿಕ್ಷಣದ ವಿವಿಧಾಂಗಗಳು ಕಾಯಕದಲ್ಲಿ ಸಮಾವೇಶವಾಗಿರುವುದನ್ನು ನಾವು ಆಳವಾದ ಅಭ್ಯಾಸದಿಂದ ಮನಗಾಣಬಹುದು. ಆದುದರಿಂದ, ನಾನು ಕಾಯಕವು ಒಂದು ಶಿಕ್ಷಣವೆಂದು ಕರೆದಿದ್ದೇನೆ" (ಕಾ.ಶಿ.೩೦) ಎಂದು ಸ್ಪಷ್ಟನೆ ನೀಡುತ್ತಾರೆ.

ಶಿವ ಶರಣರು ಎಂದರೆ 'ಸಮಾಜ ಸೇವಕರು' (ಸೋಸಿಯಲ್ ವರ್ಕರ್ಸ್) ಎಂದೂ ಇವರ ಕಾಲವೇ ಕರ್ನಾಟಕದಲ್ಲಿ ಶಿಕ್ಷಣ ಪುನರುಜ್ಜೀವನ ಕಾಲ ಎಂದೂ ಬಸವನು ಶಿಕ್ಷಣ ತಜ್ಞನೂ ಕಾಯಕವಾದಿಯೂ ಆಗಿದ್ದನೆಂದೂ, ಅನುಭವ ಮಂಟಪವನ್ನು 'ಸಾಂಸ್ಕೃತಿಕ ಶಿಕ್ಷಣ ಪ್ರಸರಣ ಮಹಾಕೇಂದ್ರ' ಎಂದೂ ವ್ಯಾಖ್ಯಾನಿಸುತ್ತಾರೆ. 'ಅನುಭವ ಮಂಟಪವು .......... ನಿರಕ್ಷರಿಗಳಾಗಿ ತೊಳಲುವ, ವರ್ಣಾಶ್ರಮ ಬಂಧನದಲ್ಲಿ ಸಿಲುಕಿ ಬಳಲುವ ಜನತೆಯನೆತ್ತಿ ಮಾರ್ಗ ತೋರಿಸಲು ನಿರ್ಮಿತವಾದ ಅನುಭಾವಿಗಳ ಸಂಘಟನೆ' ಎಂಬುದು ಅವರ ವಿವರಣೆಯಾಗಿದೆ.

ಕಾಯಕ ಶಿಕ್ಷಣದ ಒಟ್ಟು ಸ್ವರೂಪವನ್ನು ಅವರು ಅನೇಕ ಹಂತಗಳಲ್ಲಿ ವಿವರಿಸುವ ರೀತಿ ಹೊಸ ಬಗೆಯ ಚಿಂತನೆಗಳಿಂದ ಕೂಡಿದೆ:

೧. **ಕಾಯಕ ಶಿಕ್ಷಣದ ಉದ್ದೇಶ :** ನಿರಕ್ಷರತೆಯ ನಿರ್ಮೂಲನೆ, ಆರ್ಥಿಕ ಸಮಾನತೆಯ ಭರವಸೆ, ಬದುಕುವ ಹಕ್ಕು, ಧಾರ್ಮಿಕವಾಗಿ, ಸಾಮಾಜಿಕವಾಗಿ ಎಲ್ಲ ಕಸುಬುಗಳಿಗೆ ಸಮಾನ ಗೌರವ, ಭಿಕ್ಷಾಟನೆಯ ನಿರ್ಮೂಲನೆ – ಈ ಐದು ಪ್ರಮುಖ ಉದ್ದೇಶಗಳನ್ನು ಕಾಯಕ ಶಿಕ್ಷಣ ಹೊಂದಿತ್ತು.

೨. **ಕಾಯಕ ರೀತಿ :** (ವರ್ಕಿಂಗ್): ಈ ಶಿಕ್ಷಣ ನೀತಿ ಜಾರಿಗೆ ಮಠಗಳನ್ನು ಕೇಂದ್ರ ಸ್ಥಾನಗಳನ್ನಾಗಿ, ಶಿಕ್ಷಣದ ಮಾಧ್ಯಮ ಕನ್ನಡವಾಗಿ, ಕಲಿಯುವುದು ಆಯಾ ಕಸುಬುಗಳ ಮುಖಾಂತರವಾಗಿ, ಹೆಣ್ಣು–ಗಂಡು ಸಹ ಶಿಕ್ಷಣ ಪದ್ಧತಿ ಮತ್ತು ಜೀವನ ಶಿಕ್ಷಣದೊಂದಿಗೆ ಧರ್ಮಬೋಧನೆ.

೭. ಪರಿಣಾಮ : ಸಾಕ್ಷರತೆ, ಹೆಣ್ಣು–ಗಂಡುಗಳಲ್ಲಿ ಸಮಾಂತರ, ಕಸಬುಗಳ ಮೂಲಕ ಶಿಕ್ಷಣವಾದ್ದರಿಂದ ಸ್ವಾವಲಂಬನೆ, ಇದರಿಂದ ಭಿಕ್ಷಾಟನೆಯ ನಿರ್ಮೂಲನೆ. ಈ ಶಿಕ್ಷಣ ಪದ್ಧತಿಯಿಂದ ಅನೇಕ ಶಿವಶರಣರು ತಯಾರಾದರು, ದೇಶ ಸಮೃದ್ಧತೆಯೆಡೆ ಸಾಗಿತು, ದಾಸೋಹ ಭಾವನೆ ಬೆಳೆಯಿತು, ಪೌರನೀತಿ ಬೆಳೆದು ನಾಡು ಶಿವಮಯವಾಯಿತು.

೮. ಕಾಯಕ ಶಿಕ್ಷಣ ಕೇಂದ್ರಗಳು : ವಿರಕ್ತ ಮಠಗಳು, ಓದಿಸುವ ಮಠಗಳು, ಸಾಲಿ ಮಠಗಳು – ಶಿಕ್ಷಣ ಕೇಂದ್ರಗಳಾಗಿ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ದೊರೆಯಿತು.

೯. ಪತ್ಯದಲ್ಲಿದ್ದ ಕಸುಬುಗಳು : ಕಾರ್ಡಬೋರ್ಡ, ಕಾಗದ ತಯಾರಿಕೆ, ಕಡತ ಒಳಪಗಳ ತಯಾರಿಕೆ, ನೂಲುವುದು, ಹೊಸೆಯುವುದು, ವಿಭೂತಿ ತಯಾರಿಕೆ, ಕರಡಿಗೆ ಬುಟ್ಟಿ ಚಾಪಿ ತಟ್ಟೆ ಹೆಣೆಯುವುದು, ಬಡಿಗೆ ಕಂಬಾರಿಕೆ ಒಕ್ಕಲುತನದ ಶಿಕ್ಷಣ – ಇವೆಲ್ಲ ಕಾಯಕಗಳನ್ನು ಕಲಿಸುವ ಪರಿಪಾಠ ಇತ್ತೆಂದು ಮಠಗಳ ಇತಿಹಾಸದಿಂದ, ಅಲ್ಲಿ ದೊರೆಯುವ ಪಳೆಯುಳಿಕೆಗಳಿಂದ ಖಚಿತವಾಗುತ್ತದೆಂದು ಬರೆಯುತ್ತಾರೆ.

ಈ ಎಲ್ಲವುಗಳ ಮೂಲಕ "ಕನ್ನಡ ಹಳ್ಳಿಗಳಿಗೆ ಮೊದಲು ಓದು ಬರಹವನ್ನು ತಂದು ಕೊಟ್ಟವರೆಂದರೆ ಈ ಶಿವಶರಣರು" (ಕಾ.ಶಿ.೩೦) ಎಂದು ಅಭಿಪ್ರಾಯ ಪಡುತ್ತಾರೆ.

'ಕಾಯಕ ಶಿಕ್ಷಣದ ಆಡಳಿತ' ಎಂಬ ಲೇಖನದಲ್ಲಿ ಕಾಯಕ ಒಂದು ಶಿಕ್ಷಣ, ಶ್ರಮ ವಿಭಾಗ, ಅನುಭಾವ ಮಾರ್ಗವಾಗಿದ್ದು; ಶಿವಶರಣರು ಕಾಯಕವನ್ನು ಸಾಧಿಸಿ, ಆಚರಿಸಿ, ಜಗವನ್ನು ಗೆದ್ದವರು ಎನ್ನುತ್ತಾರೆ. ಮಠಗಳಲ್ಲಿ ನಡೆಯುವ ಕಾಯಕ ಶಿಕ್ಷಣದ ಮೇಲ್ವಿಚಾರಣೆ ಹೇಗೆ ನಡೆಯುತ್ತಿತ್ತು ಎಂಬುದನ್ನು ವಿವರಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. "ಮಠದಯ್ಯ, ಮಠಪತಿ, ಗಣಾಚಾರಿ, ಗಣಕುಮಾರ, ಸ್ಥಾವರ ..... ಈ ಜನರು ಇಂದಿನ ಶಿಕ್ಷಣ ಪದ್ಧತಿಯಲ್ಲಿ ಪ್ರಚಾರ ಮಾಡುವ ಸಣ್ಣ ಪುಟ್ಟ ಅಧಿಕಾರಿಗಳಂತೆಯೂ ಗುರು ವರ್ಗದವರಂತೆಯೂ ಕೆಲಸ ಮಾಡುತ್ತಿದ್ದರು. ಇವುಗಳನ್ನು ಉಲ್ಲಂಘಿಸಿದವರಿಗೆ ಈಗಿನ ಶಿಕ್ಷಣಾಧಿಕಾರಿಗಳು ಶಿಕ್ಷೆಯನ್ನು ವಿಧಿಸುತ್ತಿದ್ದರೆ ಮೇಲೆ ವಿವರಿಸಿದ ಈ ವ್ಯಕ್ತ್ಯಾಚಾರ್ಯರ ಕೆಲಸವನ್ನು ಪರೀಕ್ಷಿಸಲು ಇವರ ಮೇಲೆ ಪೀಠಾಚಾರ್ಯರು (ಇನ್ಸ್ಪೆಕ್ಟಿಂಗ್ ಆಫೀಸರ್ಸ್) ಇರುತ್ತಿದ್ದರು. ಇಂದಿಗೂ ಈ ಪೀಠಾಚಾರ್ಯರ ಸಂಪ್ರದಾಯವು ಲಿಂಗಾಯತರಲ್ಲಿ ಉಳಿದು ಬಂದಿದೆ"

ಇವರೆಲ್ಲರ ಉಪಜೀವನ ಹೇಗೆ ನಡೆಯುತ್ತಿತ್ತು ಎಂಬುದನ್ನು ವಿಚಾರಿಸುತ್ತ ಒಕ್ಕಲಿಗರಂತೂ ಮಠಗಳಿಗೆ ರಾಶಿ ಕೊಡುತ್ತಿದ್ದರು. ಇವರೆಲ್ಲರೂ ದಿನನಿತ್ಯ ಕೋರಾನ್ನ (ದವಸ ಧಾನ್ಯ–ಕಾಯಕದಯ್ಯಗಳಿಗೆ), ಕಂತಿಭಿಕ್ಷೆ (ವಿದ್ಯಾರ್ಥಿಗಳಿಗೆ ಪ್ರಸಾದ ನಿಲಯ),

ಸ್ವಯಂಪಾಕ (ಹಿಟ್ಟಿಕ್ಕಿಯಿಂದ ಪಾಕ) – ಇವುಗಳಿಂದ ಉಪಜೀವನ ಸಾಗಿಸುತ್ತಿದ್ದರು ಎಂಬ ವಿವರಣೆಯನ್ನು ಕೊಡುತ್ತಾರೆ.

'ಕಾಯಕ ಶಿಕ್ಷಣದಲ್ಲಿ ಅನುಭಾವ ಪದ್ಧತಿ' ಎಂಬ ಮೂರನೆಯ ಲೇಖನದಲ್ಲಿ ಕಾಯಕ ಶಿಕ್ಷಣವನ್ನು ಕೊಡಲು ಅನುಸರಿಸುವ ಮಾರ್ಗ 'ಅನುಭವ ಪದ್ಧತಿ' ಎಂಬುದನ್ನು ವಿವರಿಸುತ್ತಾರೆ. ಈ ಪದ್ಧತಿಯಲ್ಲಿ ಕುಲ ಜಾತಿಗಳು ಕರಗಿ ಹೋಗಿ, ಎಲ್ಲ ಕಸುಬುಗಳಿಗೂ ಸ್ವಾಗತವಾಯಿತು. ಇದರಿಂದ ಆತ್ಮಗಳು ವಿಕಾಸವಾದವು. ಆತ್ಮವಿಕಾಸವೇ ಅನುಭಾವ ಪದ್ಧತಿಯ ಮುಖ್ಯ ಗುರಿ ಎಂಬುದು ಡಾ. ಗದ್ದಗಿಮಠ ಅವರ ವಿವರಣೆಯಾಗಿದೆ.

ಗದ್ದಗಿಮಠರು ಬರೆದ ಇನ್ನೂ ಮೂರು ಲೇಖನಗಳು ನಾನಾ ಬಗೆಯ ಶಿಲಾ ಪ್ರಕಾರಗಳಿಗೆ ಸಂಬಂಧಿಸಿವೆ. ಇಲ್ಲಿ ಹೇಳಲೇಬೇಕಾದ ಒಂದು ಸಂಗತಿ ಎಂದರೆ, ಗದ್ದಗಿಮಠರ ಬರಹದ ರೀತಿಯದು. ನಾವಿಂದು ಕಥೆ ಕಾದಂಬರಿಗಳನ್ನು ಎಷ್ಟು ಸರಳವಾಗಿ ಸಮೀಕ್ಷಿಸಬಹುದೋ ಅಂತಹ ಸಹಜವಾದ ರೀತಿಯಲ್ಲಿ ಅವರು ಶಿಲಾಶಾಸನ, ವೀರಗಲ್ಲು, ಮಾಸ್ತಿಗಲ್ಲು ಅಲ್ಲದೇ ಅನೇಕ ಬಗೆಯ ವಿಶೇಷ ಶಿಲಾ ಪ್ರಕಾರಗಳನ್ನು ಬಹು ಸರಳವಾಗಿ ಸರಾಗವಾಗಿ ಸಮೀಕ್ಷಿಸುತ್ತಾರೆ. ಇದು ಬಿ. ಎಸ್. ಗದ್ದಗಿಮಠ ಅವರ ವಿದ್ವತ್ತಿನ ಬಗ್ಗೆ ನಮ್ಮಲ್ಲಿ ಅಪಾರವಾದ ಗೌರವವನ್ನು ಮೂಡಿಸುವ ಸಂಗತಿಯಾಗಿದೆ.

ಶಿಲಾರಾಶಿಯನ್ನು ಕುರಿತಂತೆ ಅವರ ಮೂರು ಮುಖ್ಯ ಲೇಖನಗಳಿವೆ: ೧. ಕನ್ನಡಿಗರ ಕೀರ್ತಿಯ ನೆಟಗಲ್ಲುಗಳು, ೨. ವೃಷಭ ಶಿಲಾ ಮೂರ್ತಿಗಳು, ೩. ಅಳಿದುಳಿದ ಪುಲಿಗೆರೆ ಎಂಬ ಲೇಖನಗಳು ಕರ್ನಾಟಕದ ಸಂಸ್ಕೃತಿಯನ್ನು ಹೊತ್ತ ಶಿಲಾರಾಶಿಗಳಾಗಿವೆ ಎಂದು ಗದ್ದಗಿಮಠರು ಭಾವಿಸುತ್ತಾರೆ. ಈ ಮೂರೂ ಲೇಖನಗಳನ್ನು ಬರೆಯುವಲ್ಲಿ ಅವರಿಗೆ ಬರಹಮೂಲದ ಸಾಹಿತ್ಯದ ಸಹಾಯವಾದುದು ತೀರ ಅತ್ಯಲ್ಪ. ಮತ್ತೆ ಅವರು ತಮ್ಮ ಕ್ಷೇತ್ರಕಾರ್ಯದ ಕಾಲಕ್ಕೆ ತಾವು ಸ್ವತಃ ನೋಡಿದ, ಕೇಳಿದ ವಿಚಾರಿಸಿದ ಸಂಗತಿಗಳನ್ನು ಮುಖ್ಯವಾಗಿ ದಾಖಲಿಸುತ್ತಾರೆ. ಜೊತೆಗೆ ಆಯಾ ವಿಷಯಗಳಿಗೆ ಸಂಬಂಧಿಸಿದ ಜನಪದ ಹಾಡುಗಳನ್ನು ಉಲ್ಲೇಖಿಸುತ್ತಾರೆ. ಈ ದೃಷ್ಟಿಯಿಂದ ಅವರ ಈ ಲೇಖನಗಳು ಮೌಖಿಕ ಸಾಕ್ಷಿಗಳನ್ನು ಹೊತ್ತ ಜನಪದ ದೃಷ್ಟಿಯ ಸಂಶೋಧನಾತ್ಮಕ ಬರಹಗಳೇ ಎನಿಸುತ್ತವೆ. ಡಾ. ಗದ್ದಗಿಮಠರು ಒಂದು ಕಡೆ ಹೀಗೆ ಬರೆಯುತ್ತಾರೆ: "ಉತ್ತರ ಕರ್ನಾಟಕದ ನನ್ನ ಅಲೆದಾಟದಲ್ಲಿ ಕಣ್ಣಿಗೆ ಬಿದ್ದ ಈ ಎಲ್ಲ ಕಲ್ಲುಗಳ ಪರಿಚಯುವನ್ನು ವಿಷಯ ವಿಸ್ತಾರವಾಗುವುದೆಂಬ ಹೆದರಿಕೆಯಿಂದ ಸಂಕ್ಷಿಪ್ತವಾಗಿ ಕೊಡುವ ಪ್ರಯತ್ನ ಮಾಡಲಾಗಿದೆ. ಇನ್ನೂ ಹೆಸರು ಗೊತ್ತಿಲ್ಲದ ಅನೇಕ ಕಲ್ಲುಗಳನ್ನು ಮುಂಬರುವ ಸಂಶೋಧಕರಿಗೆ ಬಿಟ್ಟು ಕೊಟ್ಟಿದ್ದೇನೆ" (ಗ.ಬ.೨೧೮). ಗದ್ದಗಿಮಠರ ಈ ಮಾತುಗಳನ್ನು ಗಮನಿಸಿದರೆ ಅವರ ಈ ಲೇಖನಗಳಿಗೆ ಕ್ಷೇತ್ರಕಾರ್ಯದ ಮಾಹಿತಿಯೇ ಆಧಾರವೆಂದೂ, ಉತ್ತರ ಕರ್ನಾಟಕ ಭಾಗದ ಅದರಲ್ಲೂ ಬಾಂಬೇ ಕರ್ನಾಟಕ ಭಾಗಕ್ಕೆ ಸೀಮಿತವೆಂದೂ ಮತ್ತು

ಈಗ ನಾವು ಗುರುತಿಸುವ ಶಿಲೆಗಳಿಗಿಂತ ವಿಶೇಷವಾದ ಇನ್ನೂ ಅನೇಕ ಶಿಲೆಗಳು ದೊರೆಯುವವೆಂದೂ ತಿಳಿದು ಬರುತ್ತದೆ.

'ಕನ್ನಡಿಗರ ಕೀರ್ತಿಯ ನೆಟಗಲ್ಲುಗಳು' ಎಂಬುದು ಒಂದು ಪ್ರಮುಖ ಲೇಖನ. ನಾವು ಶಿಲೆಗಳಿಗೆ ಬಂದರೆ ಇತಿಹಾಸ ಸಂಸ್ಕೃತಿಗಳ ಸಂಬಂಧದಲ್ಲಿ ನಮಗೆ ಹೆಚ್ಚು ಮಹತ್ವದ ದಾಖಲೆಗಳಾಗಿ ಕಂಡುದು ಶಿಲಾಶಾಸನಗಳು, ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು. ಆದರೆ ಗದ್ದಗಿಮಠರು ಇವುಗಳ ಜೊತೆ ಸಾಮಾನ್ಯರ ಸಂಬಂಧ ಹೊಂದಿದ ಅನೇಕ ಬಗೆಯ ಕಲ್ಲುಗಳನ್ನು ಗಮನಿಸುತ್ತಾರೆ. ಅವುಗಳ ಮಹತ್ವದ ಬಗ್ಗೆ ವಿವರಿಸುತ್ತಾರೆ. ಅವುಗಳ ಕಥೆಗಳನ್ನು ಹೇಳುತ್ತಾರೆ. ಅವುಗಳ ಹೆಸರಿನ ಹಿಂದೆ ಅಡಗಿರುವ ಸಂಸ್ಕೃತಿಯ ಸಂಗತಿಗಳನ್ನು ಬಿಚ್ಚಿಡಲು ಪ್ರಯತ್ನಿಸುತ್ತಾರೆ. ಹೀಗಾಗಿ ಈ ಲೇಖನ ಒಂದು ವಿಶೇಷತೆಯನ್ನು ಪಡೆಯುತ್ತದೆ.

ಅವರು ಗಮನಿಸಿದ ಶಿಲಾರಾಶಿಯನ್ನು ಅವರು 'ನೆಟಗಲ್ಲುಗಳು' ಎಂದು ಕರೆಯುತ್ತಾರೆ. ಅವುಗಳ ವಿವಿಧ ರೂಪಗಳ ಒಂದು ದೊಡ್ಡ ಪಟ್ಟಿಯೇ ನಮಗೆ ದೊರೆಯುತ್ತದೆ. ೧. ಗವಿ–ಗಂವರ–ಕಲ್ಮನೆ–ಗುಡಿ–ಗೋಪುರಗಳು, ೨. ರೇಖಾ ಚಿತ್ರಗಳ ಬಂಡಿಗಲ್ಲುಗಳು, ೩. ಲಿಪಿಗಲ್ಲುಗಳು(ಶಿಲಾಶಾಸನಗಳು), ೪. ಬಂಟ(ವೀರ)ಗಲ್ಲುಗಳು, ೫. ಮಾಸತಿಗಲ್ಲು, ೬. ಗಡಿಗಲ್ಲುಗಳು, ೭. ಕಂಬಗಲ್ಲುಗಳು, ೮. ಅಡಗಲ್ಲುಗಳು, ೯. ಸಿಡಿಬಂಡಿ–ಸಿಡಿಗಂಬಗಳು, ೧೦. ಬೋರಗಲ್ಲು, ೧೧. ತಂಟೆಯಕಲ್ಲು, ೧೨. ಸಾಕ್ಷಿಗಲ್ಲು, ೧೩. ಕೂಗುಗಲ್ಲು, ೧೪. ತಕ್ಕಡಿ–ಕೋಲುಗಲ್ಲು, ೧೫. ಮದಗಗಲ್ಲು, ೧೬. ಪುಷ್ಪಗಲ್ಲು, ೧೭. ಕೋಟೆಗಲ್ಲು, ೧೮. ನಾದಗಲ್ಲು–ಸ್ವರಗಲ್ಲು, ೧೯. ಮಂತ್ರದ ಕಲ್ಲು–ಉಸರುಗಲ್ಲು, ೨೦. ವಿಷದ ಕಲ್ಲು(ಗಾರಗಲ್ಲು). ಹೀಗೆ ಇಪ್ಪತ್ತು ನಮೂನೆಯ ಶಿಲಾ ಪ್ರಕಾರಗಳು ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುತ್ತಿವೆ ಎಂದು ಹೇಳುತ್ತಾರೆ. ಇದನ್ನು ಗಮನಿಸಿದರೆ ಜನಪದ ಸಂಸ್ಕೃತಿಯನ್ನು ವಿವರಿಸುವಾಗ ಇವೆಲ್ಲವನ್ನೂ ಗಮನಿಸ ಬೇಕಾಗುತ್ತದೆ ಎಂಬ ಸಂಗತಿ ಮುಖ್ಯವೆನಿಸುತ್ತದೆ. ಈ ಇಪ್ಪತ್ತು ಶಿಲಾ ಪ್ರಕಾರಗಳಲ್ಲಿ ಹೆಚ್ಚು ಚರ್ಚೆ ನಡೆದುದು ಐದೋ ಆರೋ ಪ್ರಕಾರಗಳನ್ನು ಕುರಿತು. ಉಳಿದ ಹೆಚ್ಚಿನ ಪ್ರಕಾರಗಳನ್ನು ಗುರುತಿಸುವ ಗದ್ದಗಿಮಠರು ಸಂಶೋಧಕರ ಗಮನ ಸೆಳೆಯುವ ಪ್ರಯತ್ನವನ್ನು ಮಾಡಿದ್ದಾರೆ.

ಸ್ಥಳೀಯವಾಗಿ ಈ ನೆಟಗಲ್ಲುಗಳಿಗೆ ಇರುವ ಹೆಸರುಗಳು, ಪ್ರಚಾರದಲ್ಲಿರುವ ಸಂಗತಿಗಳು ಅವರಿಗೆ ಆಕರ್ಷಕವಾಗಿ ಕಾಣುತ್ತವೆ. ಅವು ಸಂಶೋಧನ ದೃಷ್ಟಿಯಿಂದ ಮಹತ್ವದ ಸಂಗತಿಗಳೆನಿಸುತ್ತವೆ. ಹೀಗೆ ಸಾಂಸ್ಕೃತಿಕವಾಗಿ ಗಮನ ಸೆಳೆಯುವ ಈ ಕಲ್ಲುಗಳನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಆಧಾರವೆಂದರೆ ಸ್ಥಳೀಯವಾಗಿ ಪ್ರಚಾರದಲ್ಲಿರುವ ಸಂಗತಿಗಳೇ. ಉದಾಹರಣೆಗೆ, ಹೋರಾಡಿ ಮಡಿದ ತೊರಗಲ್ಲಿನ

ತಳಾರ ಭರಮ ಎನ್ನುವವನ ವೀರಗಲ್ಲನ್ನು ಉಲ್ಲೇಖಿಸುವ ಅವರು, ಆ ವೀರನ ಮನೆತನದವರಿಗೆ ಅಲ್ಲಿಯ ದೊರೆ ಇಟ್ಟಪ್ಪನು ಉಂಬಳಿ ಹಾಕಿ ಕೊಟ್ಟ ಬಗ್ಗೆ ಇರುವ ಒಂದು ಜನಪದ ಹಾಡನ್ನು ಅವರು ಉಲ್ಲೇಖಿಸುತ್ತಾರೆ:

ಇಟ್ಟಪ್ಪ ದೇಸಾಯಿ ತೊರಗಲ್ಲ ದೊರೆಯರಸು
ನೆತ್ತರಮಾನೆ ಹಾಕಿಕೊಟ್ಟ ಭರಮಗ ಜಾಣಿ ।
ಸಿರಸಂಗಿ ತಳಾರಬಂಟ ಒರೆಗತ್ತಿ ಧೀರ ಭರಮಾ
ಅರಸನ ಮಗಳು ಭಾಗವ್ವ ಮಾನ ಕಾದ ಜಾಣಿ।
ಭೂಮಿಗೆ ನೆತ್ತರ ಸುರಿಸಿ ಬಾಗವ್ವ ಉಳಿಸ್ಯಾನ
ತೊರಗಲ್ಲ ದೊರೆ ಮೆಚ್ಚಿ ಉಡುಗರೆ ಜಾಣಿ ।
ನೆತ್ತರ ಸುರಿಸಿದ ಭರಮನ ಉತ್ತಿಕರಿಗೆ ಉಂಬಳಿ
ನೆತ್ತರ ಮಾನೆ ಹೆಸರಾಗಿ ಹಳಬಗ ಜಾಣಿ ।

ತಮಗೆ ಅವಕಾಶ ಸಿಕ್ಕಾಗ ಜನಪದದಲ್ಲಿಯ ಸಾಮಾನ್ಯ ಸಂಗತಿಗಳನ್ನು ವಿವರಿಸಲು ಮುಂದಾಗುತ್ತಾರೆ. ಆಗ ಅವರ ಜಾನಪದ ಸಂಗತಿಗಳ ತಿಳುವಳಿಕೆ ಮತ್ತು ಸಂಶೋಧನೆ ಗುಣಗಳು ಎಂತಹವು ಎಂಬುದು ನಮಗೆ ತಿಳಿದುಬರುತ್ತದೆ. ಉದಾಹರಣೆಗೆ: 'ಬೋರಗಲ್ಲು'– ಎಂಬುದರ ಬಗ್ಗೆ ವಿವರಣೆ ಕೊಡುತ್ತ, "ಬೋರಗಲ್ಲು ಅಗಸೆಯ ಹೆಬ್ಬಾಗಿಲದ ಎದೆಗಲ್ಲು ಇದ್ದಂತೆ. ಅಗಸಿಯನ್ನು ಮುಚ್ಚಲು ಎರಡೂ ಕದಗಳ ತೋಳಗಳು ಈ ಬೋರಗಲ್ಲಿಗೆ ಆಣೆಸಿ ನಿಂತ ಮೇಲೆ ಹಿಂದಿನ ಕಾಲದಲ್ಲಿ ಅಗಸಿಯ ಒಳ ಅಗಳಿಯನ್ನು ಜಡಿದು ಹಾಕುತ್ತಿದ್ದರು" (ಗ.ಬ.೨೧೧). ಹೀಗೆ ಬೋರಗಲ್ಲಿನ ವಿಷಯ ಹೇಳಿ, ನಂತರ ಬೋರಗಲ್ಲಿಗೆ ಊರಲ್ಲಿ ಯಾರದೇ ಮನೆಯಲ್ಲಿ ಎಮ್ಮೆ ಆಕಳು ಈದರೆ ಅದರ ಮೊದಲ ದಿನದ ಗಿಣ್ಣದ ಹಾಲನ್ನು ಬೋರಗಲ್ಲಿಗೆ ಸುರಿದು ಬರುವರು. ಇದರಿಂದ ಅದಕ್ಕೆ ನೀರು ಹತ್ತದಂತೆ ಆಗುವುದು. ಸರ್ವಜ್ಞನು 'ಬೋರ್ಗಲ್ಲ ಮೇಲೆ ಮಳೆಗರೆದರಾಕಲ್ಲು' ಎಂಬ ಸಾಲಿನಲ್ಲಿ ಬೋರಗಲ್ಲಿನ ಉಲ್ಲೇಖ ಬರುತ್ತದೆ. ಬೋರ್ಯಾ, ಬೋರ ಎಂದರೆ ಎದೆಗಾರ ಎಂಬ ಅರ್ಥವಿರುವುದು. ಇದಕ್ಕೆ ಸಾಕ್ಷಿಯಾಗಿ ಬೋರಲ ಬೀಳು ಎಂಬುದು ಎದೆ ಮೇಲೆ ಬೀಳುವುದು ಎಂದಾಗುತ್ತದೆ. ಅದಕ್ಕಾಗಿ ಬೋರಗಲ್ಲು ಎಂದರೆ 'ಅಗಸೆಯ ಎದೆಗಲ್ಲು' ಎಂದು ಅರ್ಥವಿದೆ. ಬೋರ್ ಎಂದರೆ ತೆಲುಗಿನಲ್ಲಿ ಎದೆ ಎಂಬ ಅರ್ಥವಿದೆ. ಕನ್ನಡದಲ್ಲೂ ಆ ಅರ್ಥ ಮೊದಲು ಇರಬೇಕು. ಹೀಗೆ ಮುಂತಾಗಿ ವಿವರಣೆಯನ್ನು ಕೊಡುತ್ತಾರೆ. ಇಂತಹ ಸಂಶೋಧನಾ ದೃಷ್ಟಿಯ ವಿಶ್ಲೇಷಣಾ ವಿಧಾನವೆನಿಸುತ್ತದೆ.

ಅವರ ಈ ಸಾಲಿನಲ್ಲಿಯ ಎರಡನೇ ಲೇಖನ "ವೃಷಭ ಶಿಲಾಮೂರ್ತಿಗಳು" ಎಂಬುದು. ಭಾರತದ ತುಂಬ ಕಂಡು ಬರುವ ವೃಷಭ ಶಿಲಾಮೂರ್ತಿಗಳನ್ನು ಅವಲೋಕಿಸಿ, ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಿಸುವ ಕುತೂಹಲವನ್ನು ಲೇಖಕರು ವ್ಯಕ್ತಪಡಿಸುತ್ತಾರೆ. ಈ ವಿಗ್ರಹಗಳನ್ನು ನಂದಿ ಮತ್ತು ವೃಷಭ ಎಂಬ ಎರಡು ಬಗೆಯಿಂದ

ವಿಂಗಡಿಸುತ್ತಾರೆ. ವೃಷ+ಭ =ವೃಷಭ ಆಗಿದ್ದು, ವೃಷ ಶಬ್ದವು ಧರ್ಮ ಎಂಬ ಹೆಸರನ್ನು ಕೊಡುತ್ತದೆ. ಭ ಇದು ಭೃ ಧಾತುನಿಷ್ಪನ್ನವಾಗಿದ್ದು ಪರಿಪೂರ್ಣವಾದುದು ಎಂಬ ಅರ್ಥ ಕೊಡುತ್ತದೆ. ಹೀಗಾಗಿ "ವೃಷಭ ಮೂರ್ತಿಯು ಧರ್ಮಪೂರಿತ ಮೂರ್ತಿ ಯಾಗಿರಬಹುದೆ" (ಗ.ಬ.೨೧೯) ಎಂಬ ಊಹೆಯನ್ನು ತಾಳುತ್ತಾರೆ. ನಂದಿ ಹೆಸರಿನ ಅನೇಕ ಮನೆತನಗಳು ಇವೆ. ನಂದಿಕೋಲಾಟವನ್ನು ಆಡುವವರು ನಂದಿ ಸಂಬಾಳದಯ್ಯಗಳು, ಕೌಲೆತ್ತಿನಯ್ಯಗಳು – ನಂದಿಯ ಪ್ರಸಾರಕ್ಕಾಗಿಯೇ ಹುಟ್ಟಿಕೊಂಡ ಆಟಗಳು ಎನ್ನುತ್ತಾರೆ. ಹೆಳವರಲ್ಲಿ ಎರಡು ಬಣಗಳಿದ್ದು, ೧. ನಂದಿಬಣ, ೨. ಗರುಡ ಬಣ. "ಈ ನಂದಿ ಬಣದವರೇ ಮನೆಮನೆಗೆ ಅಲೆದಾಡಿ ವಂಶಾವಳಿಯನ್ನು ಸಾರಿ ಹೇಳುವ ಹೆಳವಯ್ಯಗಳಾಗಿದ್ದಾರೆ" (ಗ.ಬ.೨೨೦) ಎಂದು ವಿವರಿಸುತ್ತಾರೆ.

ಭರತ ಖಂಡದ ತುಂಬ ಸಿಗುವ ವೃಷಭ ವಿಗ್ರಹಗಳನ್ನು ನಾಲ್ಕು ವಿಧವಾಗಿ ವಿಂಗಡಿಸಿ ಅರ್ಥೈಸಲು ಪ್ರಯತ್ನಿಸಿದ್ದಾರೆ. ೧. ಮುಂಗಾಲುಗಳನ್ನು ಮಡಿಚಿ ಕುಳಿತ ಬಸವನ ಮುಂದೆ ಚಿಕ್ಕದಾದ ಲಿಂಗವಿದ್ದು, ಇವು ಗರ್ಭಗುಡಿಯಲ್ಲಿ ಸ್ಥಾಪಿತವಾಗಿವೆ. ಇದು ಶಿವನಿಗಿಂತ ಬಸವನೇ ದೊಡ್ಡವನೆಂಬ ಪ್ರಾಚೀನ ಕಾಲದ ತಿಳುವಳಿಕೆಯ ದ್ಯೋತಕವಾಗಿದೆ. ೨. ವೃಷಭ ಮತ್ತು ಲಿಂಗಗಳು ಬೇರ್ಪಟ್ಟು, ಲಿಂಗವು ಗರ್ಭಸಭಾ ಮಂಟಪದಲ್ಲಿ ಇಲ್ಲವೇ ಪಾದಗಟ್ಟೆಯಲ್ಲಿ ಕುಳಿತಿದೆ. ಇದು ಶಿವನು ದೊಡ್ಡವನೆಂಬ ನಂತರದ ತಿಳುವಳಿಕೆಯಾಗಿದೆ. ೩. ಕುಳಿತ ಬಸವನು ಎಡಗಾಲನ್ನೆತ್ತಿ ಮುಂದೆ ಇಟ್ಟಿದ್ದಾನೆ. ಇದು ಕಲ್ಯಾಣದ ಕ್ರಾಂತಿಯ ನಂತರ ಭಕ್ತಿ ಭಂಡಾರಿ ಬಸವಣ್ಣನವರನ್ನು ಪ್ರತಿನಿಧಿಸುತ್ತದೆ. ೪. ಕುಳಿತ ಬಸವನು ಬಲಗಾಲನ್ನು ಮುಂದೆ ಇಟ್ಟಿದ್ದರೆ, ಇದು ಜ್ಞಾನಮೂರ್ತಿ ಚೆನ್ನಬಸವಣ್ಣನನ್ನು ಪ್ರತಿನಿಧಿಸುತ್ತದೆ.

ಹೀಗೆ ನಾಲ್ಕು ನಮೂನೆಯ ವಿವರಣೆಗಳನ್ನು ಗಮನಿಸಿದರೆ, ಇವೆಲ್ಲ ಗದ್ದಗಿಮಠರು ವಿವರಿಸುವ ಅರ್ಥಗಳಾಗಿವೆ ಎನಿಸುತ್ತದೆ. ಒಟ್ಟು ಗದ್ದಗಿಮಠರ ವಿಶ್ಲೇಷಣೆಗಳನ್ನು ಗಮನಿಸಿದರೆ ಅವರ ಮೇಲೆ ೧೨ನೇ ಶತಮಾನದ ಶಿವಶರಣರ ಪ್ರಭಾವ ಪ್ರಬಲವಾಗಿ ಆದಂತೆ ತೋರುತ್ತದೆ. ಹಾಡುಗಳ ವಿಶ್ಲೇಷಣೆಯಲ್ಲೂ ಹೆಚ್ಚಿನ ಕಡೆ ಶರಣರ ಪ್ರಬಾವ ಜನಪದದ ಮೇಲಾದ ಬಗೆಯನ್ನು ವಿವರಿಸುತ್ತಾರೆ. ಇದಕ್ಕೆ ಕಾರಣ, ಅವರ ಮನೆಯ ವಾತಾವರಣ ಎಂಬುದರಲ್ಲಿ ಎರಡು ಮಾತಿಲ್ಲ.

ಈ ಬಗೆಯ ಲೇಖನದ ಕೊನೆಯ ಲೇಖನವೆಂದೆ 'ಅಳಿದುಳಿದ ಪುಲಿಗೆರೆ' ಎಂಬುದು. ಇದರಲ್ಲಿ ಶಾಸನಗಳಲ್ಲಿ ಪುಲಿಗೆರೆಯ ಉಲ್ಲೇಖಗಳನ್ನು ಗಮನಿಸುತ್ತ, ಈಗಿನ ತಾವು ಕಂಡ ಪುಲಿಗೆರೆಯ ಸ್ಥಿತಿಯನ್ನು ವರ್ಣಿಸಲು ಪ್ರಯತ್ನ ಪಟ್ಟಿದ್ದಾರೆ. "ಪುಲಿಗೆರೆಯ ಗತ ವೈಭವವನ್ನು ಪುಲಿಗೆರೆಯ ಅಂತರ್ದರ್ಶನದಲ್ಲಿ ಕಾಣಬಹುದು" (ಗ.ಬ. ೨೨೩) ಎಂದು, ಒಂದೇ ಸವನೆ ಪುಲಿಗೆರೆಯ ಸಂಗತಿಗಳನ್ನು ನೆನೆಪಿಸಿ ಕೊಳ್ಳುತ್ತಾರೆ. ಅಲ್ಲಿಯ ದೇವಾಲಯಗಳು, ಬಸದಿಗಳು, ಅವುಗಳ ಕುಸುರಿ ಕೆಲಸ,

ಅಲ್ಲಿ ದೊರೆಯುವ ಶಿಲಾಶಾಸನಗಳು, ಪಂಪನ ಸಾಜದ ಪುಲಿಗೆರೆಯ ತಿರುಳ್ ಗನ್ನಡ, ವಚನಕಾರರಾದ ಆದಿಶೆಟ್ಟಿ, ಸೋಮೇಶ, ಕುಮಾರ ಬಂಕನಾಥ, ಶಿವಶರಣ ಏಕಾಂತ ರಾಮಯ್ಯ, ಕವಿ ಮಹಾಲಿಂಗದೇವ – ಹೀಗೆ ಪುಲಿಗೆರೆಯ ಸ್ಮಾರಕಗಳನ್ನು, ಪುಲಿಗೆರೆಯ ಪ್ರತಿಭಾವಂತರನ್ನು ಒಂದೇ ಸಮನೆ ಉಲ್ಲೇಖಿಸುತ್ತ ಹೋಗುತ್ತಾರೆ.

ತಾವು ಖುದ್ದಾಗಿ ನೋಡಿದ ೪೦ ಮಠಗಳನ್ನು ಉಲ್ಲೇಖಿಸುತ್ತ – 'ನಿಂಬಿಯ್ಯನ ಮಠಕ್ಕೆ ಶಿರಸಪವಾಡ ಮಠವೆಂದು ಕರೆಯುತ್ತಾರೆ. ಇಲ್ಲಿ ಗಂಡುಗತ್ತರಿ (ಚಂದ್ರಾಯುಧ), ಬ್ರಹ್ಮಕಪಾಲದಲ್ಲಿ ಸಿರಸಪವಾಡ ಕಾಯಕದ ಮಾರ್ಮಿಕವಾದ ಉಲ್ಲೇಖವಿದೆ' (ಗ.ಬ.೨೩೦) ಎಂದು ಬರೆಯುತ್ತಾರೆ. ಈ ಎಲ್ಲ ಮಠಗಳ್ಲಿಯು ಶಿವಲಿಂಗವಿರುವ ಬಗ್ಗೆ ಉಲ್ಲೇಖಿಸುತ್ತಾರೆ. ಅದಕ್ಕಾಗಿ ಪುಲಿಗೆರೆಯ ಇತಿಹಾಸ ಅಚ್ಚಳಿಯದೆ ಉಳಿಯಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

❖


ಸಹಾಯಕ ಗ್ರಂಥಗಳು :

೧. ಕನ್ನಡ ಜಾನಪದ ಗೀತಗಳು, ಡಾ. ಬಿ. ಎಸ್. ಗದ್ದಗಿಮಠ – ಕ. ವಿ. ವಿ. ಧಾರವಾಡ, ೧೯೭೬.

೨. (ಗ.ಬ.) ಗದ್ದಗಿಮಠರ ಬರಹಗಳು. ಡಾ. ಬಿ. ಎಸ್. ಗದ್ದಗಿಮಠ, ಮೈಸೂರು ವಿಶ್ವವಿದ್ಯಾಲಯ, ೧೯೮೮.

೩. ಪ್ರಾಥಮಿಕ ಶಿಕ್ಷಣ (ಜೀವನ ಶಿಕ್ಷಣ) – (ಪತ್ರಿಕೆ)–ಧಾರವಾಡ.

೪. (ಕ.ಜಾ.ಪ್ರ.) ಕನ್ನಡ ಜಾನಪದ ಪ್ರಜ್ಞೆ, – ವೀರಣ್ಣ ದಂಡೆ, ಕವಿಮಾರ್ಗ ಪ್ರಕಾಶನ, ಕಲಬುರ್ಗಿ, ೧೯೮೩.

# ಮೊದಲನೆ ಗೋಷ್ಠಿಯ ಅಧ್ಯಕ್ಷೀಯ ಭಾಷಣ

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

◆

ಗದ್ದಗಿಮಠರನ್ನು ಕುರಿತಾದಂತಹ ಈ ವಿಚಾರ ಸಂಕಿರಣದಲ್ಲಿ ಇದುವರೆಗೆ ಮಾತನಾಡಿದ ವಿದ್ವಾಂಸರೆಲ್ಲರ ಮಾತು ಕೇಳಿದಾಗ ನನಗೊಂದು ಅದ್ಭುತವಾದಂತಹ ಹೊಸ ಪ್ರಪಂಚದ ಅನುಭವವಾಯಿತು. ನಿಜವಾಗಲೂ ಅವರು ಇಷ್ಟೊಂದು ಅದ್ಭುತವಾದ ಅನುಭವಶಾಲಿಯಾಗಿದ್ದವರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಡೈನಾಮಿಕ್ ಇದ್ದಂತಹ ಪರಸ್ನಾಲಿಟಿ ಅವರದು. ಇಂಥ ಗದ್ದಗಿಮಠರಿಗೆ ದೇವರು ಆಯುಷ್ಯ ಜಾಸ್ತಿ ಕೊಡಲಿಲ್ಲ. ಆದರೆ ಇದ್ದಷ್ಟು ಆಯುಷ್ಯವನ್ನು ಸಮಗ್ರವಾಗಿ ಬಳಸಿಕೊಂಡು ಕಾರ್ಯ ಮಾಡಿ, ಜೀವನ ಸಾರ್ಥಕ ಮಾಡಿಕೊಂಡರು. ನಾವಿಂದು ಅವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳಬೇಕು.

ನಾನಿಲ್ಲಿ ಒಂದು ಮಾತನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆ ಪಡತೀನಿ. ನಿನ್ನೆ ರಾತ್ರಿ ಗದ್ದಗಿಮಠರ ಪುಸ್ತಕಗಳನ್ನೆಲ್ಲ ಓದುತ್ತಾ ಇದ್ದಾಗ, ಕನ್ನಡದ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಜಾನಪದ ಸಾಹಿತ್ಯದ ವಿಶ್ವಕೋಶದ ಪುಟಗಳನ್ನು ತಿರುಗಿಸಿದೆ. ಗದ್ದಗಿಮಠರ ಬಗ್ಗೆ ಅವರಲ್ಲಿ ಏನಿದೆ ಅಂತ ನೋಡಿದೆ, ಅವರ ಬಗ್ಗೆ ಓದಿದ ಮೇಲೆ ರಾತ್ರಿ ನಿದ್ರೆ ಬಾರದಷ್ಟು ಆಘಾತ ಆಯ್ತು.

ಇವತ್ತು ಜಾನಪದ ಹೆಸರು ಹೇಳೋರೆಲ್ಲ ಅವರ ಮಕ್ಕಳು ಇದ್ದಾಂಗ. ಅಂಥ ಅದ್ಭುತ ಸೇವಾಕಾರ್ಯ ಮಾಡಿದ ಗದ್ದಗಿಮಠರ ಬಗ್ಗೆ ೧೮೦ ಪುಟದ ಪುಸ್ತಕದಲ್ಲಿ ತೀರ ಕಡಿಮೆ ವಿಷಯ. ಅದು ಅಪೂರ್ಣ ಪರಿಚಯ ಪ್ರಕಟವಾಗಿದ್ದು ನೋವನ್ನುಂಟು ಮಾಡಿತು. ಬಿ.ಎಸ್. ಗದ್ದಗಿಮಠರು ಅನ್ನೋ ಹೆಸರನ್ನಾದರೂ ಪೂರ್ತಿ ಬರೀಬಾರದೆ? ಅವರು ಹುಟ್ಟಿದ್ದು, ಬೆಳೆದಿದ್ದು, ತೀರಿದ್ದು ಯಾವುದೂ ಅದರಲ್ಲಿ ಇಲ್ಲ. ವಿಶ್ವಕೋಶಕ್ಕೆ ಸಂಬಂಧಪಟ್ಟಂತಹ ಚಂದ್ರಶೇಖರ ಕಂಬಾರರಿಗಾಗಲಿ, ಹಂಪನಾ ಅವರಿಗಾಗಲಿ ಗದ್ದಗಿಮಠರ ಬಗ್ಗೆ ಗೊತ್ತಿದ್ದಿಲ್ಲವೆ? ಅವರ ಬಗ್ಗೆ ಓದಿರಲಿಲ್ಲವೆ? ೧೯೮೫ ರಲ್ಲಿ ಈ ವಿಶ್ವ ಕೋಶ ಹೊರ ಬಂದದ್ದು. ಅಷ್ಟೊತ್ತಿಗಾಗಲೇ ಜಾನಪದ ಸಾಹಿತ್ಯ ಅದ್ಭುತವಾಗಿ ಬೆಳೆದಿತ್ತು.

ಬಹಳಷ್ಟು ಪ್ರಗತಿಯತ್ತ ಬಂದಿತ್ತು. ನಮ್ಮ ಜನತೆಗೆ ಚಾರಿತ್ರಿಕ ಘನತೆ ಗೊತ್ತಿಲ್ಲಾಂತ ಹೇಳಬೇಕಾಗುತ್ತೆ.

ಗದ್ದಗಿಮಠರಂತಹ ಮಹನಿಯರು ನಮ್ಮ ಜಾನಪದ ವಿಕಾಸಕ್ಕಾಗಿ, ತಿಳುವಳಿಕೆಗಾಗಿ, ಅರ್ಥವಂತಿಕೆಗಾಗಿ ಎಷ್ಟೊಂದು ಅದ್ಭುತ ಕೆಲಸ ಮಾಡಿದರು ಅನ್ನೋದನ್ನ ನಾವಿಂದು ಸ್ಮರಿಸಿಕೊಳ್ಳಬೇಕಾಗಿದೆ. ಈಗಾಗಲೇ ಸ್ಮರಿಸಿದ್ದೇವೆ ಆದರೂ ಇನ್ನು ನಾವು ಹೆಚ್ಚು ಹೆಚ್ಚಾಗಿ ಸ್ಮರಿಸಿಕೊಳ್ಳಬೇಕು. ಅವರ ಸಾಹಿತ್ಯ ಕೃತಿಗಳ ಬಗ್ಗೆ, ಪ್ರಕಟನೆಗಳ ಬಗ್ಗೆ ಈಗಾಗಲೇ ಸ್ನೇಹಿತರೆಲ್ಲ ಹೇಳಿದ್ದಾರೆ.

ಜಾನಪದ ಅಕಾಡೆಮಿ ಈ ಕಡೆ ಗಮನ ಕೊಟ್ಟಿದ್ದು ಒಂದು ವಿಶೇಷವಾದದ್ದು, ಗವೀಶ ಹಿರೇಮಠರಾಗಲಿ ಶಂಭು ಹೆಗಡೆಯವರಾಗಲಿ ಈ ಕಾರ್ಯಕ್ರಮಕ್ಕೆ ಮನಸ್ಸು ಮಾಡಿದ್ದು ಬಹಳ ಸಂತೋಷ. ಯಾಕೆಂದರೆ ಯಾವಾಗಲೂ ನಮ್ಮ ಕಂಪ್ಲೇಂಟ್ ಇದ್ದಿದ್ದೆ. ಬೆಂಗಳೂರಿನವರಿಗೆ ಉತ್ತರ ಕರ್ನಾಟಕದವರ ಬಗ್ಗೆ ಗಮನ ಇರೋದಿಲ್ಲ. ಯಾಕೆಂದರೆ ೩೫೦ ಕಿಲೋ ಮೀಟರ್ ದೂರದಲ್ಲಿದ್ದೀವಿ ನಾವು. ಅದಕ್ಕೆ ಅವರಿಗೆ ಈ ಭಾಗದವರ ಹೆಸರು ಗೊತ್ತಿರೋದಿಲ್ಲ. ಆದರೆ ಇವತ್ತಿನ ವಿಶೇಷ ಕಾರ್ಯಕ್ರಮಕ್ಕೆ ಕೆರೆಮನೆ ಶಂಭು ಹೆಗಡೆಯವರು ಬಂದು ಉದಾರ ಮನಸ್ಸಿನ ಮಾತುಗಳನ್ನಾಡಿದರು. ಜಾನಪದ ಸಾಹಿತ್ಯದ ವೈಭವ, ವೈಶಿಷ್ಟ್ಯ ಬರೀ ಮನರಂಜನೆಯಲ್ಲ ಅನ್ನೋ ಮಾತನ್ನು ಹೇಳಿದರು. ಅವರು ಹೇಳಿದ್ದು "ಈ ಶ್ರೇಷ್ಠತೆಯ ಅನಂತತೆ ಈ ಜನಪದದಲ್ಲಿದೆ". ಹೌದು ಶ್ರೇಷ್ಠತೆಯ ಅನಂತತೆಯ ಕುರುಹುಗಳನ್ನು ತೋರಿಸಿಕೊಟ್ಟವರು ಡಾ. ಬಿ. ಎಸ್. ಗದ್ದಗಿಮಠರು. ಎಷ್ಟೊಂದು ಅಭಿಮಾನದಿಂದ, ಎಷ್ಟೊಂದು ಅಭಿಲಾಷೆಯಿಂದ, ಎಷ್ಟೊಂದು ವ್ಯಾಮೋಹದಿಂದ ಆ ಕೆಲಸ ಮಾಡಿದರಲ್ಲ ಅದು ನಮಗ ಈಗ ಆಶ್ಚರ್ಯವಾಗುತ್ತೆ.

ಎಲ್ಲಾ ಸೌಕರ್ಯಗಳು, ವ್ಯವಸ್ಥೆಗಳು, ಸಂಬಳಗಳು, ಸ್ಥಾನಮಾನಗಳು ಗೌರವ ಕೀರ್ತಿ ಇರುವಂತಹ ನಾವೆಲ್ಲ ಅವರ ಮುಂದೇನೂ ಅಲ್ಲ. ಆರ್ಥಿಕ ಸಹಾಯವಿಲ್ಲದೆ, ಸ್ಥಾನಮಾನಗಳಿಲ್ಲದೆ, ಯಾರದೂ ಬೆಂಬಲವಿಲ್ಲದೆ; ವ್ಯವಸ್ಥೆಗಳಿಲ್ಲದೆ ಇಂಥ ಅದ್ಭುತ ಕೆಲಸ ಮಾಡಿದರಲ್ಲ ಅನ್ನೋದು ನಾವಿಂದು ಸ್ಮರಿಸಿಕೊಳ್ಳಬೇಕಾಗಿದೆ. ಅವರ ಒಂದು ವಿದ್ವತ್ ಪ್ರಪಂಚದ ವೈಶಿಷ್ಟ್ಯವನ್ನು ನಾವಿವತ್ತು ಗುರುತಿಸಿದ್ದೇವೆ. ನಾನಿಂದು ಒಂದು ಮಾತನ್ನು ಹೇಳ್ತೀನಿ ಅಪ್ಪಗ ಅಪ್ಪ ಅನ್ನೋ ಜನರು ನಾವಲ್ಲ. ಕ್ಷಮಿಸಬೇಕು ಬಹಳ ನೋವಿನ ಮಾತಿದು. ನಾ ಹುಟ್ಟಿದ್ದು ನಮ್ಮ ಅಪ್ಪನಿಂದ ನಮ್ಮ ತಾತನಿಂದ. ನಾವು ಅವರ ನೆನಪು ಮಾಡಿಕೊಂಡು ಹ್ಯಾಗ ಹಿರೇರ ಹಬ್ಬ ಮಾಡತೀವೊ, ಹ್ಯಾಗೆ ಶ್ರಾದ್ಧಾ ಮಾಡ್ತಿವೋ ಹಾಗೆ ಇವತ್ತು ಅವರನ್ನ ಸ್ಮರಿಸಿಕೊಳ್ಳಬೇಕು. ಶ್ರಾದ್ಧ ಅನ್ನೋದು ಶ್ರದ್ಧೆಯಿಂದ ಬಂದದ್ದು. ಶ್ರಾದ್ಧಾ ಮಾಡುವ ಉದ್ದೇಶ ಶ್ರದ್ಧೆಯನ್ನು ನೆನಪು ಮಾಡಿಕೊಳ್ಳುವಂತಹದ್ದು.

ಗದ್ದಗಿಮಠರ ಬಗ್ಗೆ ನಾವೆಲ್ಲ ಏನು ಮಾಡಿದ್ದೇವೆ, ಎಷ್ಟು ಸ್ಮರಿಸಿದ್ದೇವೆ ಅನ್ನೋದನ್ನ ನಾವಿಂದು ಯೋಚಿಸಬೇಕು. ನಾವಿಂದು ಇಷ್ಟು ಜಾನಪದ ಸಾಹಿತ್ಯ ಸಮ್ಮೇಳನವನ್ನು ಮಾಡಿದ್ವಿ. ಒಂದು ಸಮ್ಮೇಳನದಲ್ಲಾದ್ರೂ ಅವರ ಬಗ್ಗೆ ಅವರ ಸಾಹಿತ್ಯದ ಬಗ್ಗೆ ಸಮಗ್ರವಾಗಿ ಒಂದು ವಿಚಾರ ಸಂಕಿರಣ ಮಾಡಲಿಲ್ಲ. ಕನ್ನಡ ಅಧ್ಯಯನ ಪೀಠದಲ್ಲಿ ನಾವೇ ಅವರ ಬಗ್ಗೆ ಚಿಂತಿಸಲಿಲ್ಲ ನಾನೀಗ ದೋಷ ಪ್ರಜ್ಞೆಯಿಂದ ಈ ಮಾತನ್ನು ಹೇಳತಾ ಇದ್ದೀನಿ. ಇನ್ಮೇಲಾದರೂ ನಾವದನ್ನು ಬೆಳೆಸಿಕೊಳ್ಳಬೇಕು.

ಪ್ರಸಾರಾಂಗದ ಹಿಂದಿನ ನಿರ್ದೇಶಕರಾದ ಎಸ್. ಬಿ. ನಾಯಕ ಅವರು ಇಲ್ಲಿದ್ದಾರೆ. ಗದ್ದಗಿಮಠ ಅವರೊಡನೆ ಕೆಲಸ ಮಾಡಿದವರು. ಆ ಪ್ರಸಾರಾಂಗ ಅವರನ್ನೂ ಮರತು ಬಿಟ್ಟಿದೆ ಅನಿಸುತ್ತೆ. ಅವರ ಯಾವ ಪುಸ್ತಕವನ್ನು ಮರು ಮುದ್ರಣ ಮಾಡಿದ್ದು ನನ್ನ ಗಮನಕ್ಕೆ ಬಂದಿಲ್ಲ. ಖಂಡಿತ ಮಾಡಬೇಕಾಗಿತ್ತು. ದೇಶಕ್ಕೆ ಬಡತನ ಇದ್ದೇ ಇದೆ, ನಮ್ಮ ವಿಶ್ವವಿದ್ಯಾಲಯಕ್ಕೂ ಬಡತನ ಇದ್ದೇ ಇದೆ. ನಮ್ಮ ಮಾನಸಿಕ ಬಡತನಾನೂ ಇದ್ದೇ ಇದೆ. ಆದರೂ ಕೂಡ ಮಾಡಬೇಕೆನ್ನುವ ಛಲ ಇದ್ರೇ ಆ ಕೆಲಸ ಮಾಡೇ ಮಾಡಬಹುದು. ಪ್ರತಿ ವರ್ಷ ಒಂದೊಂದು ಪ್ರಸಾರಾಂಗದ ಕಾರ್ಯಕ್ರಮದಲ್ಲಿ ಅವರ ಪುಸ್ತಕಗಳನ್ನು ರೀ ಪ್ರಿಂಟ್ ಮಾಡಿದರ ಅವರ ಗೌರವವನ್ನು ನಾವು ಕಾಪಾಡಿದಂಗ.

ಕನ್ನಡ ಅಧ್ಯಯನ ಪೀಠದ ಮಿತ್ರರಿಗೆ ನಾ ಅವತ್ತಿನ ಒಂದು ಮಾತು ಹೇಳತೀನಿ ನಮ್ಮಲ್ಲಿ ಜಾನಪದ ಅಧ್ಯಯನವನ್ನು ಶಿಸ್ತಾಗಿ ಬೆಳಸಬೇಕು ಎನ್ನುವಂತಹ ಅಭಿಮಾನ ನನ್ನ ಗುರುಗಳಾದ ಡಾ. ಆರ್. ಸಿ. ಹಿರೇಮಠ, ಡಾ. ಸಂಕಾಪೂರ ಅವರಿಗೆ ಇರಲಿಲ್ಲ. ಶಾಸ್ತ್ರೀಯ ಸಾಹಿತ್ಯ, ಪರಂಪರೆಯ ಸಾಹಿತ್ಯ, ವಚನ ಸಾಹಿತ್ಯದ ಬಗ್ಗೆ ವಿಶೇಷ ಕಾಳಜಿ ಅವರಿಗೆ. ಆದರೆ ನಾನು ಹಳ್ಳಿ ಮನುಷ್ಯ. ನನ್ನ ಗುರುಗಳಿಗೆ ಗಂಟು ಬಿದ್ದು ಸರ್ ಇದಾಗಬೇಕು ಇದಾಗಬೇಕು ಅಂತ ಒತ್ತಾಯ ಮಾಡಿದೆ. ಸುದೈವ ಎನ್ನುವಂತೆ ಜಾನಪದ ಅಧ್ಯಯನ ಪ್ರಾರಂಭ ಆಯ್ತು. ಮುಂದೆ ನಡೀತು.

ಇದನ್ನು ಮಾಡೋ ಉದ್ದೇಶ ಏನೆಂದರೆ, ಹೆಚ್ಚು ಜನ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಿಂದ ಬಂದೋರು, ನಾವು ನಗರಕ್ಕೆ ಒಲಿದು ಹೋಗುತಾ ಇದ್ದೀವಿ. ಅದಕ್ಕನ ನಾ ಹೇಳಿದ್ದು, ಅಪ್ಪಗ ಅಪ್ಪ ಅನ್ನೋ ಜನ ನಾವಲ್ಲ ಅಂತ. ಹಳ್ಳಿಲಿಂದ ಏನ ಸಂಪತ್ತು ತಂದಿದ್ದೇವೆ ಅನ್ನದನ್ನ ಮರೀತಿವಿ. ಅದನ್ನ ಹೇಳೋದೂ ಇಲ್ಲ. ಏನೋ ಒಂದಿಷ್ಟು ಇಂಗ್ಲೀಷ್ ಕಲಿತು ತಪ್ಪು ತಪ್ಪು ಮಾತಾಡೋದು ಏನು ಮಹಾ ಅಲ್ಲ. ಸುಮಾರು ಎರಡು ಸಾವಿರ ಇಂಗ್ಲೀಷ್ ಶಬ್ದಗಳಲ್ಲಿ ಮುಗಿದು ಹೋಯ್ತು ಇಂಗ್ಲೀಷ್. ಆದರೆ ನೀವು ಐವತ್ತು ಸಾವಿರ ಕನ್ನಡ ಶಬ್ದಗಳನ್ನು ಇಟ್ಟಕೊಂಡರು ಕೂಡ ಅರ್ಥವಾಗದ ಶಬ್ದಗಳಿವೆ. ಸಣ್ಣ ಉದಾಹರಣೆ ಹೇಳತೀನಿ ಬೆರೆಸು ಅನ್ನೋ ಶಬ್ದ, ಅಕ್ಕ ಮಹಾದೇವಿ ವಚನದಲ್ಲಿ ಬರುತ್ತೆ.

ಓ ! ಅದೃಷ್ಟವೇ ಗಿರಿಯನೇರಿದೊಡೆ
ಗಿರಿಯ ಬೆರೆಸಿದೆ
ಮರವನೇರಿದೊಡೆ
ಮರವ ಬೆರೆಸಿದೆ ॥

ಈ ಬೆರಸು ಅನ್ನೋ ಶಬ್ದವನ್ನು ಡಿ. ಎಲ್. ನರಸಿಂಹಾಚಾರ್ಯರಿಂದ ಹಿಡಿದು ಎಲ್ಲರೂ ಪ್ರಶ್ನಾರ್ಥಕ ಚಿನ್ಹೆ ಇಟ್ಟುಕೊಂಡು ಬಂದರು. ಏನಿದು ಬೆರೆಸು ಅನ್ನೋ ಶಬ್ದ? ಏನಿದಕ್ಕೆ ಅರ್ಥ ? ಗೊತ್ತಾಗಲಿಲ್ಲ. ಇದಕ್ಕೆ ಹಳ್ಳಿಯ ಒಬ್ಬ ರೈತನಿಂದ ಸರಳ ಉತ್ತರ ಇದೆ. ನಾನೊಮ್ಮೆ ತೋಟಕ್ಕೆ ಹೋದಾಗ "ಅಪ್ಪಾರ ಮಂಗ್ಯಾ ಹೊಡದೆ ಬೆರಸಗೊಂಡು ಹೋಗಿ ಬಿಟ್ಟವರಿ" ಹೀಗೆ ಅನೇಕ ವಿಶೇಷ ಶಬ್ದಗಳು ನಮ್ಮ ಜನರ ಆಡು ನುಡಿಯಲ್ಲಿವೆ. ಹಳ್ಳಿಯ ಮಕ್ಕಳಾದ ನಾವು ಅವುಗಳನ್ನು ಉಳಿಸಿಕೊಳ್ಳಬೇಕು.

ಜಾನಪದ ಅನ್ನೋದು ಒಂದು ಜೀವಂತ ಶಕ್ತಿ ಅದನ್ನು ಉಳಿಸಿಕೊಂಡು ಬಂದೋರು ನಮ್ಮ ಹಳ್ಳಿಯ ತಾಯಂದಿರು. ನಮ್ಮ ಹಳ್ಳಿಯ ಅಣ್ಣಂದಿರು ಅವರೇ ಅದನ್ನ ಉಳಿಸಿಬೆಳೆಸೋರು. ನಾವೆಲ್ಲ ಅದರ ಬಗ್ಗೆ ಅಭ್ಯಾಸ ಮಾಡಿ ಡಿ.ವಿ.ಡಿ., ಟಿ.ವಿ. ತಗೋಳ್ಳರು. ಪುಸ್ತಕ ಬರಿಯೋರು. ಡಿಗ್ರಿ ತಗೊಳ್ಳೋರು ಅಷ್ಟೇ. ಪಾಂಡವರ ಬಗ್ಗೆ ನಮ್ಮ ಹಳ್ಳಿಯ ತಾಯಿ ಹೇಳೋ ಮಾತು.

"ಒಂದು ಗೋದಿಯ ಬೀಸಿ – ಒಂಭತ್ತು ಹೋಳಿಗೆ ಮಾಡಿ
ಬನ್ನಿಯ ಎಲೆ ಹಾಸಿ ಎಡೆ ಮಾಡಿ
ಉಂಡು ಹೋಗ್ಯಾರೋ ಪಾಂಡವರು"

ಮತ್ತೇ ಹೇಳತಾಳೆ ;

"ಕಲ್ಲು ಕಡಬು ಮಾಡಿ ಮುಳ್ಳು ಶ್ಯಾವಿಗಿ ಮಾಡಿ
ನೆಲೆಗುಳುಕದ ಕಾಯಿ ತೊಗೆ ಮಾಡಿ
ಉಂಡು ಹೋಗ್ಯಾರೋ ಪಾಂಡವರು

ಮಹಾಭಾರತದ ಕಥೆಯನ್ನೆಲ್ಲ ಸಮಗ್ರವಾಗಿ ಎರಡು ತ್ರಿಪದಿಯಲ್ಲಿ ಹಳ್ಳಿಯ ಓದು ಬರಹ ಬರದ ಹೆಣ್ಣುಮಗಳು ಹೇಳಿ ಬಿಟ್ಟಳು.

ಹೀಗೆ ಸಹಜವಾಗಿ ಮೂಡಿ ಬರುವಂತಹ ಹಾಡುಗಳಲ್ಲಿ ಇತಿಹಾಸವಿದೆ, ಸಂಗತಿಗಳಿವೆ. ಜೀವನ ಸಮೃದ್ಧಿ ಇದೆ ಅನ್ನೋದು ನಾವು ತಿಳಿದುಕೊಳ್ಳಬೇಕು. ಜನಪದ ಕಲೆಗಳಿಂದ ಆನಂದ ಪಡಿಸಬೇಕು, ಆನಂದವೇ ಜೀವನಕ್ಕೆ ಸ್ಫೂರ್ತಿ ಅಂತ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

❖

## ಗೋಷ್ಠಿ : 2

# ಡಾ. ಬಿ. ಎಸ್. ಗದ್ದಗಿಮಠ ಅವರು ಸಂಗ್ರಹಿಸಿದ ಜನಪದ ಸಾಹಿತ್ಯ ಸಂಕಲನಗಳು

ಬಿ. ವ್ಹಿ. ಮಲ್ಲಾಪುರ

◆

ಡಾ. ಬಿ. ಎಸ್. ಗದ್ದಗಿಮಠ ಅವರ ಮನೆತನ ಜನಪದ ಹಾಡುಗಳನ್ನು ಹಾಸಿ, ಜನಪದ ಹಾಡುಗಳನ್ನು ಹೊದ್ದು, ಜನಪದ ಹಾಡುಗಳನ್ನು ರಚಿಸಿ, ಜನಪದ ಹಾಡುಗಳನ್ನು ಹಾಡಿ, ಜನಪದ ಹಾಡುಗಳನ್ನು ಸಂಶೋಧಿಸಿ, ಸಂಗ್ರಹಿಸಿ, ಸಂಕಲಿಸಿ, ಪ್ರಕಟಿಸುವ ಮಹತ್ವದ ಕಾರ್ಯ ಮಾಡಿದ ಉತ್ತರ ಕರ್ನಾಟಕದ ಒಂದು ಅಪರೂಪದ ಮನೆತನ. ಜನಪದ ಸಾಹಿತ್ಯದ ಮುಖ್ಯ ಅಂಗವಾದ ಜನಪದ ಹಾಡುಗಳನ್ನು ತಲೆ ತಲಾಂತರದಿಂದ ಹಾಡುತ್ತ ಹಾಡುಗಾರಿಕೆಯ ಒಂದು ಪರಂಪರೆಯನ್ನೇ ನಿರ್ಮಿಸಿದ ವಿಷಯವನ್ನು ಡಾ. ಬಿ. ಎಸ್. ಅವರು ತಾವು ಸಂಕಲಿಸಿ ಪ್ರಕಟಿಸಿದ ಮೊದಲ ಕೃತಿ 'ನಾಲ್ಕು ನಾಡ ಪದಗಳು' ಎಂಬ ಗ್ರಂಥದಲ್ಲಿ ವಿಸ್ತಾರವಾಗಿ ಹೇಳಿಕೊಂಡಿದ್ದಾರೆ. ಅದು ಅವರ "ಅರಿಕೆ" ಭಾಗದಲ್ಲಿ ಬಂದಿದೆ.

ಅವರ ಪ್ರಕಾರ ಆ ಹಾಡುಗಾರಿಕೆಯ ಪರಂಪರೆ ಅವರ ಗಂಡಜ್ಜಿ (ತಂದೆಯ ತಾಯಿ) ಮತ್ತು ಅವಳ ತಂಗಿ ಶಾವಂತ್ರವ್ವಳಿಂದ ಆರಂಭಗೊಳ್ಳುತ್ತದೆ. ಬಿ. ಎಸ್. ಅವರ ಈ ಚಿಕ್ಕಜ್ಜಿ ಹಲವಾರು ಜನ ಶಿವಶರಣರಿಗೆ ಮತ್ತು ರಾಮಾಯಣ ಮಹಾಭಾರತಗಳಿಗೆ ಸಂಬಂಧಿಸಿದ ಹಾಡುಗಳನ್ನು ಶ್ರಾವಣ ಮಾಸದಲ್ಲಿ ಹಾಗು ದೀಪಾವಳಿಯಂತಹ ಹಬ್ಬದ ಪ್ರಸಂಗಗಳಲ್ಲಿ ನೂರೊಂದು ಜನಪದ ದಾಟಿಗಳಲ್ಲಿ ಹಾಡಿ ಜನಮನವನ್ನು ತಣಿಸುತ್ತಿದ್ದರಂತೆ. ಅವಳೊಬ್ಬ ಶಿವಶರಣೆಯಾಗಿದ್ದಳೆಂದು ಬಿ. ಎಸ್. ಹೇಳುತ್ತಾರೆ. ಚಿಕ್ಕವಳಾಗಿದ್ದಾಗಲೇ ಗಂಡನನ್ನು ಕಳೆದುಕೊಂಡ ಅವಳು ಬಿ. ಎಸ್. ಅವರ ಅಜ್ಜಿಯ ಬಳಿಯಲ್ಲಿಯೇ ಉಳಿಯಬೇಕಾಯಿತಂತೆ. ಅವಳ ಅಕ್ಕ ಎಂದರೆ ಬಿ. ಎಸ್. ಅವರ ಗಂಡಜ್ಜಿಗೆ ಓದು ಬರಹ ಬರುತ್ತಿರಲಿಲ್ಲ. ಆದರೆ, ಅವರ ಮನೆತನದಲ್ಲಿ ಮೊದಲಿನಿಂದಲೂ ಮುಂದುವರಿದುಕೊಂಡು ಬಂದ ಆ ವಿಶಿಷ್ಟ ಪರಿಸರ ಹಾಗೂ ಪರಂಪರೆಯ ಪ್ರಭಾವ ಅವರ ಮೇಲೆ ಬೀಳದೆ ಹೋಗಲಿಲ್ಲ. ಅವರು ತಮ್ಮ ಗಂಡ (ಬಿ. ಎಸ್. ಅವರ ಗಂಡಜ್ಜ)

ನಿಂದ ವಚನ ಶಾಸ್ತ್ರ ಮತ್ತು ಶರಣ–ಶರಣೆಯರ ಚರಿತ್ರೆಗಳನ್ನು ತಿಳಿದುಕೊಂಡು ಅವುಗಳನ್ನು ಹಾಡಿನ ರೂಪದಲ್ಲಿ ಹಾಡುತ್ತಿದ್ದರು. ಅದೆಲ್ಲ, ಅವರ ವಿಧವೆ ತಂಗಿ ಶಾವಂತ್ರೆವ್ವಗೆ ಬಳುವಳಿಯಾಗಿ ಬಂದಿತು. ಹಾಡುವ ಪರಂಪರೆ ಮುಂದುವರಿಯಿತು.

ಬಿ. ಎಸ್. ಅವರ ತಂದೆ ಸಾವಳಿಗೆಯ್ಯನವರು ಆರು ತಿಂಗಳ ಕೂಸಾಗಿದ್ದಲೇ ತಮ್ಮ ತಂದೆಯನ್ನು ಕಳೆದುಕೊಂಡರಂತೆ. ಆದರೂ, ಬಹಳ ಧೈರ್ಯವಂತೆಯಾದ ಅಜ್ಜಿ ತನ್ನ ಕೂಸನ್ನು, ವಿಧವೆ ತಂಗಿಯನ್ನೂ ಬಹಳ ಕಷ್ಟದಿಂದ ಸಲುಹುತ್ತ ಬಂದರು. ಸಾವಳಿಗೆಯ್ಯನವರು ದೊಡ್ಡವರಾಗಿ ತಮ್ಮ ಮನೆತನವನ್ನು ತೂಗಿಸಿಕೊಂಡು ಹೋಗುವ ಹೊತ್ತಿಗೆ ಅವರ ತಾಯಿ ಶಿವನ ಪಾದ ಸೇರಿದಳು. ಮುಂದೆ, ಸಾವಳಿಗೆಯ್ಯನವರು ತಮ್ಮ ಚಿಕ್ಕಮ್ಮನ ಮಾರ್ಗದರ್ಶನದಲ್ಲಿಯೇ ಬಾಳನ್ನು ಸಾಗಿಸಿದರು. ಅವರೇ ಸಾವಳಿಗೆಯ್ಯನವರಿಗೆ ವಚನಶಾಸ್ತ್ರ, ಶಿವಶರಣರ ಕಥೆ ಪುರಣಾದಿಗಳನ್ನು ಹಾಡಲು ಕಲಿಸಿದರಂತೆ. ಸಾವಳಿಗೆಯ್ಯನವರ ವಿವಾಹವಾಗಿ, ಬಿ. ಎಸ್. ಅವರು ಹುಟ್ಟಿದ ಕೆಲವು ದಿನಗಳಾದ ಮೇಲೆ, ಅವರ ಚಿಕ್ಕಮ್ಮ ಶಾವಂತ್ರೆವ್ವ ಶತಾಯುಷಿಗಳಾಗಿ ಲಿಂಗೈಕ್ಯರಾದರಂತೆ. ಅವರು ಹಾಡುತ್ತಿದ್ದುದರ ನೆನಪು ಬಿ. ಎಸ್. ಅವರಿಗೆ ಬಹಳ ಮಸಕು ಮಸುಕಾಗಿದ್ದ ಬಗ್ಗೆ ಅವರೇ ಹೇಳಿದ್ದಾರೆ.

ತಮ್ಮ ಚಿಕ್ಕಮ್ಮನ ಹಾಡಿಕೆಯ ವಾರಸುದಾರರಾದ ಸಾವಳಿಗೆಯ್ಯನವರು, ಅವರು ಕಲಿಸಿದ ಹಾಡುಗಳನ್ನು ಬಹಳ ಸುಶ್ರಾವ್ಯವಾಗಿ ಹಾಡುವ ಜೊತೆಗೆ, ಸ್ವತಃ ತಾವೇ ಕೆಲವು ಶಿವಶರಣರ ಚರಿತ್ರೆಗಳನ್ನು ಹಂತಿಯ ಹಾಡಿನ ದಾಟಿಯಲ್ಲಿ ಹಾಡುತ್ತಿದ್ದರಂತೆ. ಆ ಭಾಗದ ರೈತರು ಅದನ್ನು ಕೇಳಿ ಕಲಿತು ತಾವೂ ಹಾಡುತ್ತಿದ್ದ ಬಗ್ಗೆ ತಿಳಿದು ಬರುತ್ತದೆ. ಸಣ್ಣವರಾಗಿದ್ದಾಗ ತಮ್ಮ ತಂದೆ ಸಾವಳಿಗೆಯ್ಯನವರು ಹಾಡುತ್ತಿದ್ದ ಹಾಡುಗಳನ್ನು ಕೇಳುತ್ತ ಬಂದ ಬಿ. ಎಸ್. ಅವರಿಗೆ ಹಾಡುವ ಬಯಕೆಯುಂಟಾಗಿ ತಾವೂ ಹಾಡಲಾರಂಭಿಸಿದ್ದರಂತೆ.

ಮುಂದೆ, ತಮ್ಮ ಆಂಗ್ಲ ವಿದ್ಯಾಭ್ಯಾಸವನ್ನು ಮುಂದುವರಿಸಿದ ಫಲವಾಗಿ ಬಿ. ಎಸ್. ಅವರಿಗೆ ತಂದೆಯವರು ಹಾಡುತ್ತಿದ್ದ ಹಾಡುಗಳನ್ನು ಸಂಕಲಿಸುವ ಮನಸ್ಸಿದ್ದರೂ ಅಭ್ಯಾಸದಲ್ಲಿ ತೊಡಗಿಕೊಂಡ ಅವರಿಗೆ ಸಮಯ ದೊರೆಯದೇ ಹೋಯಿತು. ಬಿ. ಎ. ಪದವಿ ಪಡೆದ ನಂತರ (೧೯೪೩) ಬಿ. ಎಸ್. ಅವರು ಹಾಡುಗಳನ್ನು ಸಂಗ್ರಹಿಸಲಾರಂಭಿಸಿದರು ಕೆಲ ಕಾಲ ಅದು ಮುಂದುವರಿಯಿತು. ಆದರೆ, ಮನೆತನದ ಅಡಚಣೆಯಿಂದಾಗಿ ನೌಕರಿ ಹಿಡಿಯಬೇಕಾದುದರಿಂದ ಸಂಗ್ರಹ ಕಾರ್ಯ ತೃಪ್ತಿಕರವಾಗಿ ನಡೆಯದೇ ಹೋಯಿತು. ಬಿಡುವು ದೊರೆತಾಗ ಮಾತ್ರ ಒಂದಿಷ್ಟು ಸಂಗ್ರಹ ಕಾರ್ಯ ನಡೆಯುತ್ತಿತ್ತು. ಮುಂದೆ, ತಂದೆಯವರು ತೀರಿಕೊಂಡರು (೧೯೪೯). ಅದರಿಂದಾಗಿ, ಅವರು ಹಾಡುತ್ತಿದ್ದ ಪುರಾತನರ ಎಲ್ಲ ಹಾಡುಗಳನ್ನು ಸಂಗ್ರಹಿಸಲು ಬಿ. ಎಸ್. ಅವರಿಗೆ ಸಾಧ್ಯವಾಗಲಿಲ್ಲ. ಇದು ಜನಪದ ಸಾಹಿತ್ಯದ ಒಂದು ದೊಡ್ಡ ಹಾನಿ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಮಹತ್ವದ ಅಂಶವಿದೆ. ಬಿ. ಎಸ್. ಅವರ ಅಜ್ಜ ಮತ್ತು ತಂದೆ ಹಾಡುತ್ತಿದ್ದ ಹಾಡುಗಳನ್ನು ಕೇಳುತ್ತ ಅದೇ ಪರಿಸರದಲ್ಲಿಯೇ ದಿನಗಳೆದ ಅವರ ತಾಯಿ ಶಿವಗಂಗವ್ವ ಆ ಹಾಡುಗಳನ್ನು ಹಾಡುವ ಜೊತೆಗೆ ಗುಣಸಾಗರಿ, ಸತ್ತ ಗಂಡನನ್ನು ಮರಳಿ ಪಡೆದ ಗಂಗವ್ವ ಮೊದಲಾದವರ ಹಾಡುಗಳನ್ನು ಹಾಡುತ್ತಿದ್ದರಂತೆ. ಅವರು ತಮ್ಮ ಮೂವರು ಗೆಳತಿಯರೊಡಗೂಡಿ ಹಾಡುತ್ತಿದ್ದ ಮಹಾಭಾರತದ ಹಾಡನ್ನು ಬಿ. ಎಸ್. ಅವರು ಸಂಕಲಿಸಿದ ಬಗ್ಗೆಯು ಹೇಳಲಾಗುತ್ತದೆ. ಆದರೆ, ಅದು ಎಲ್ಲಿ ಹೋಯಿತು?

ಈ ಹಾಡುಗಬ್ಬಗಳ ಜೊತೆಗೆ ಬಿ. ಎಸ್. ಅವರ ತಾಯಿ, ಸಾವಳಿಗೆಯ್ಯನವರು ರಚಿಸಿದ ಕೆಲವು ಹಂತಿಯ ಹಾಡುಗಳನ್ನು ಶಿವನ ಸೋಲ್ಲುಗಳ ಪಲ್ಲವಿಗಳಲ್ಲಿ ಜೋಡಿಸಿ ಜನಪದದ ನೂರೊಂದು ದಾಟಿಯಲ್ಲಿ ಹಾಡುತ್ತಿದ್ದರಂತೆ. ಬಿ. ಎಸ್. ಅವರ ಧರ್ಮಪತ್ನಿಯವರು ಕೂಡ ಅನೇಕ ಹಾಡುಗಳನ್ನು ಬಹಳ ಸೊಗಸಾಗಿ ಹಾಡುತ್ತಿದ್ದರು. ಅವರ ಮಕ್ಕಳು ಕೂಡ ಮುಖ್ಯವಾಗಿ ಒಬ್ಬಳೇ ಮಗಳು ಅಕ್ಕಮ್ಮ ಸುಶ್ರಾವ್ಯವಾಗಿ ಹಾಡುತ್ತಿದ್ದುದನ್ನು ನಾನು ಕೇಳಿದ್ದೇನೆ. ಹೀಗೆ ನಾಲ್ಕೈದು ತಲೆಮಾರಿನುದ್ದಕ್ಕೂ ಜನಪದ ಹಾಡುಗಳನ್ನು ಹಾಡುವ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವ ಮನೆತನಗಳು ಉತ್ತರ ಕರ್ನಾಟಕದಲ್ಲಿ ತುಂಬಾ ವಿರಳ.

ಬಿ. ಎಸ್. ಗದ್ದಗಿಮಠ ಅವರು, ತಮ್ಮ ಮನೆತನದವರು ಪರಂಪರಾಗತವಾಗಿ ಹಾಡುತ್ತ ಬಂದ, ಹಾಡುಗಳನ್ನು ಸಂಗ್ರಹಿಸುವ ಜೊತೆಗೆ ಕರ್ನಾಟಕದ ಬೇರೆ ಭಾಗಗಳಲ್ಲಿ ಕ್ಷೇತ್ರ ಕಾರ್ಯ ಕೈಕೊಂಡು ವಿಪುಲ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವರಲ್ಲಿ ಜನಪದ ಹಾಡುಗಳ ಬಹು ದೊಡ್ಡ ಸಂಗ್ರಹವಿದ್ದುದನ್ನು ಹಲವಾರು ವಿದ್ವಾಂಸರು ಉಲ್ಲೇಖಿಸಿದ್ದಾರೆ. ತಾವು ಸಂಗ್ರಹಿಸಿದ ಹಾಡುಗಳನ್ನು ಪ್ರಕಟಿಸುವುದಕ್ಕಾಗಿ ತಾವೇ 'ಜಾನಪದ ಕಾವ್ಯ ಮಾಲೆ' ಎಂಬ ಹೆಸರಿನ ಪ್ರಕಾಶನ ಸಂಸ್ಥೆಯೊಂದನ್ನು ಬಿ. ಎಸ್. ಅವರು ಸ್ಥಾಪಿಸಿ ಅದರ ಮೂಲಕ ತಮ್ಮ ಕೆಲವು ಸಂಕಲನಗಳನ್ನು ತಂದರು. ಬೇರೆ ಪ್ರಕಾಶನ ಸಂಸ್ಥೆಗಳು ಅವರ ಜನಪದ ಹಾಡುಗಳ ಸಂಕಲನಗಳನ್ನು ಪ್ರಕಟಿಸಿವೆ. ನನಗೆ ತಿಳಿದ ಮಟ್ಟಿಗೆ ಬಿ. ಎಸ್. ಅವರ ಒಟ್ಟು ಆರು ಜನಪದ ಹಾಡುಗಳ ಸಂಕಲನಗಳು ಬಂದಿವೆ.

೧. ನಾಲ್ಕು ನಾಡ ಪದಗಳು : ಪ್ರ : ಜಾನಪದ ಕಾವ್ಯಮಾಲೆ (೧೯೫೨)
೨. ಕಂಬಿಯ ಹಾಡುಗಳು : ಪ್ರ : ಜಾನಪದ ಕಾವ್ಯಮಾಲೆ (೧೯೫೫)
೩. ಜನತಾ ಗೀತೆಗಳು : ಪ್ರ : ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಧಾರವಾಡ (೧೯೫೭)
೪. ಮಲ್ಲಮಲ್ಲಾಣಿ : ಪ್ರ : ಜಾನಪದ ಕಾವ್ಯಮಾಲೆ (೧೯೫೯)
೫. ಕುಮಾರ ರಾಮನ ದುಂದುಮೆ : ಪ್ರ : ಜಾನಪದ ಕಾವ್ಯಮಾಲೆ (೧೯೫೯)

೬. ಲೋಕ ಗೀತೆಗಳು : ಪ್ರ : ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು (೧೯೬೦)

ಈಗ ಇವುಗಳಲ್ಲಿ ಒಂದೊಂದನ್ನು ತೆಗೆದುಕೊಂಡು ಅವುಗಳ ಪರಿಚಯಕ್ಕೆ ತೊಡಗಬಹುದು. ಇಲ್ಲಿ ಡಾ. ಬಿ. ಎಸ್. ಗದ್ದಗಿಮಠ ಅವರು ಸಂಗ್ರಹಿಸಿ ಸಂಕಲಿಸಿದ ಕೃತಿಗಳಲ್ಲಿ ಬರುವ ಹಾಡುಗಳ ವಿಮರ್ಶೆಗಿಂತ, ಅವರು ಆಯಾ ಸಂಕಲನಗಳಿಗೆ ಬರೆದಿರುವ 'ಅರಿಕೆ' ರೂಪದ ಮುನ್ನುಡಿಗಳ ವಿಮರ್ಶೆ ವಿಶ್ಲೇಷಣೆಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ.

## ೧. ನಾಲ್ಕು ನಾಡ ಪದಗಳು :

ತಮ್ಮ ತಾಯಿ ಮತ್ತು ಅವರ ಮೂವರು ಗೆಳತಿಯರು ಕೂಡಿ ಹಾಡುತ್ತಿದ್ದ ಶರಣ ಶರಣೆಯರನ್ನು ಕುರಿತ ನಾಲ್ಕು ಹಾಡುಗಳು ಇಲ್ಲಿ ಸಂಕಲನಗೊಂಡಿವೆ. ಅವೆಂದರೆ:

೧. ಬಿಜ್ಜ ಮಹಾದೇವಿ (೯೦ ತ್ರಿಪದಿಗಳು)
೨. ಬೇಡರ ಕನ್ನಯ್ಯ (೮೦ ತ್ರಿಪದಿಗಳು)
೩. ಕೋಳೂರ ಕೊಡಗೂಸು (೬೧ ತ್ರಿಪದಿಗಳು)
೪. ಗೊಲ್ಲಾಳ (೬೬ ತ್ರಿಪದಿಗಳು)

ಇವರೆಲ್ಲ ಮುಗ್ಧ ಶರಣ – ಶರಣೆಯರು. ಈ ಕೃತಿಗೆ ಪ್ರೊ. ವಿ. ಜಿ. ಕುಲಕರ್ಣಿ ಅವರು ಒಂದು ಉಪಯುಕ್ತ ಮುನ್ನುಡಿ ಬರೆದಿದ್ದಾರೆ. ಅದರಲ್ಲಿ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಇಂತಹ ಜನಪದ ಹಾಡುಗಳಿಗಿರುವ ಮಹತ್ವವನ್ನು ಸೋದಾಹರಣ ತಿಳಿಸಿ, ಹಾಡುಗಳಲ್ಲಿರುವ ಕಥೆಗಳ ಬಗ್ಗೆ, ತ್ರಿಪದಿ ಛಂದಸ್ಸಿನ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ.

ಬಿ. ಎಸ್. ಅವರು ಜನಪದ ಸಾಹಿತ್ಯದ ವೈಫಲ್ಯ ವೈವಿಧ್ಯ ಹಾಗೂ ವೈಶಿಷ್ಟ್ಯಗಳ ಬಗ್ಗೆ ತಮ್ಮ 'ಅರಿಕೆ'ಯಲ್ಲಿ ಪ್ರಸ್ತಾಪಿಸುತ್ತ "ಬಹು ಹುಲುಸಾದ ಆದ್ಯಂತಗಳನ್ನು ಅರಿಯಲು ಕಷ್ಟಕರವಾದ ಸಾಹಿತ್ಯವಿದು. ಜನಾಂಗದೊಡನೆ ಬೆಳೆದು ಜನಾಂಗಕ್ಕಾಗಿ ಇರುವ ಸಾಹಿತ್ಯ ಈ ಜನಪದ ಸಾಹಿತ್ಯ.

ಓದು ಬರಹವನ್ನು ಅರಿಯದ ಸಾವಿರಾರು ಲಹರಿಯ ಝರಿಯಲ್ಲಿ ಒಂದೇ ಸವನೆ ಧಾರಾಳಾಗಿ ಇದು ಪ್ರವಹಿಸುತ್ತಾ ಬಂದಿದೆ. ಕನ್ನಡದ ಮನೆಮಾತುಗಳು ಮಜಲುಗಳಾಗಿ ಪೋಣಿಸಲ್ಪಟ್ಟು ರಾಗವನ್ನೊಳಗೊಂಡು ಕಿವಿಗೆ ಅತೀ ಇಂಪಾಗಿ ಕೇಳಿ ಬರುತ್ತವೆ. ಇದಕ್ಕೆ ಮಾಧ್ಯಮವಾಗಿ ತ್ರಿಪದಿ ಛಂದಸ್ಸು ಬಂದಿದೆ. ಅದರಲ್ಲಿರುವ ಬ್ರಹ್ಮ ಗಣ ಹಾಡನ್ನು ಹಾಡುವ ಸಂದರ್ಭದಲ್ಲಿ ಏರಿಳಿತಗಳ ಕೋಚನ್ನೆತ್ತಿ ಧ್ವನಿಯು ತುಂಬಿ ಬರುವಂತೆ ಸಹಾಯ ಮಾಡುತ್ತದೆ". –ಮುಂತಾಗಿ ತುಂಬಾ ಅರ್ಥಪೂರ್ಣವಾಗಿ ಹೇಳಿದ್ದಾರೆ.

ಬೆಳವಲ ನಾಡಿನ ಹಂತಿಗಳ ಬಗ್ಗೆ, ಆ ಸಂದರ್ಭದಲ್ಲಿ ಬೆಳ್ಗಂ ಬೆಳಗು ಹಾಡುವ ತ್ರಿಪದಿ ರೂಪದ ಹಂತೀ ಪದಗಳ ಬಗ್ಗೆ ಬಹಳ ಮಾರ್ಮಿಕವಾದ ಕೆಲವು ಮಾತುಗಳನ್ನು ತಮ್ಮ 'ಅರಿಕೆ'ಯಲ್ಲಿ ಪ್ರಸ್ತಾಪಿಸಿದ್ದಾರೆ.

ಪ್ರಸ್ತುತ ಕೃತಿಯಲ್ಲಿ ಬರುವ ಹಾಡುಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಪಲ್ಲವಿಗಳನ್ನು ಹಾಕಿ ಹೆಣ್ಣು ಮಕ್ಕಳು ಸುಮಧುರವಾಗಿ, ಅತ್ಯಂತ ಇಂಪಾಗಿ ಹಾಡುತ್ತಿದ್ದುದರ ಬಗ್ಗೆಯೂ ಉಲ್ಲೇಖಿಸಿರುವುದು ಗಮನಾರ್ಹವಾಗಿದೆ. ತಾಳಕ್ಕೆ ತಕ್ಕಂತೆ ಲಯ ಬದ್ಧವಾಗಿ ಹೊರ ಹೊಮ್ಮುವ ಆ ಮಧುರ ಸ್ವರಾಲಾಪಕ್ಕೆ ಹಿಮ್ಮೇಳದ ಹೆಣ್ಣು ಮಕ್ಕಳು ಆ ಪಲ್ಲವಿಗಳಿಗೆ ಹೊಂದಿಕೊಂಡು 'ಸೋ' ಎತ್ತುತ್ತಿದ್ದುದನ್ನು ತಿಳಿಸಿದ್ದಾರೆ. ಕೆಲವು ಪಲ್ಲವಿಗಳನ್ನು ತಮ್ಮ 'ಅರಿಕೆ'ಯಲ್ಲಿ ಉದ್ಧರಿಸಿದ್ದಾರೆ. ಹಾಡುವಾಗ ಮತ್ತೆ ಮತ್ತೆ ಆವರ್ತನಗೊಳ್ಳುವ ಈ ಪಲ್ಲವಿಗಳನ್ನು ಬಿ. ಎಸ್. ಅವರು 'ಶಿವನ ಸೊಲ್ಲು' ಎಂದು ಕರೆದಿದ್ದಾರೆ. ಆ ಹಾಡುಗಳೆಲ್ಲ ಶಿವನವು, ಅವನ್ನು ಕವಿಯು ಮೂಲಕ ಹಾಡಿಸಿದ ಎಂಬ ಭಾವನೆ ಪ್ರಾಯಃ ಅವರದಾಗಿರಬೇಕು ಈ ಪಲ್ಲವಿಗಳನ್ನಿಟ್ಟುಕೊಂಡೇ ಈ ಹಾಡುಗಳನ್ನು ಹಾಡಬೇಕೆಂಬ ಕಟ್ಟುಪಾಡುಗಳಿಲ್ಲ. ತಮಗೆ ಗೊತ್ತಿದ್ದ ಜನಪದ ಪಲ್ಲವಿಗಳನ್ನು ಉದಾಹರಣೆಗಾಗಿ "ರನ್ನದ ಕೋಲು ಕೋಲೆನ್ನ ಕೋಲೆ" "ಕೋಲು ಕೋಲೆ" ಇತ್ಯಾದಿಗಳನ್ನು ಜೋಡಿಸಿಯೂ ಹಾಡಬಹುದೆಂದು ತಿಳಿಸಿದ್ದಾರೆ"

ಪ್ರಸ್ತುತ ಕೃತಿಯಲ್ಲಿರುವ ಹಾಡುಗಳನ್ನು ವಿಶೇಷವಾಗಿ ಶ್ರಾವಣ, ದೀಪಾವಳಿಗಳಲ್ಲಿ ಬಹಳ ಭಕ್ತಿಯಿಂದ ಹಾಡುತ್ತಿದ್ದರಂತೆ. ಕೆಲವು ಜನ ಹೆಣ್ಣ ಮಕ್ಕಳು ಹತ್ತಿ ಬಿಡಿಸುವಾಗ, ಗೋಧಿಯ ಹುಲ್ಲು ಕೀಳುವಾಗ ಆಯಾಸದ ಅನುಭವವಾಗದಿರಲೆಂದೂ ಇವನ್ನು ಹಾಡುತ್ತಿದ್ದರು. ರೈತರು ಸುಗ್ಗಿಯ ಕಾಲದಲ್ಲಿ ಡೊಳ್ಳು ದಪ್ಪುಗಳ ಭಾಜನೆಯ ಹಿನ್ನೆಲೆಯಲ್ಲಿ ಈ ಹಾಡುಗಳನ್ನು ಹಾಡುತ್ತಿದ್ದುದಕ್ಕೆ ಆಧಾರವಾಗಿ ಗೊಲ್ಲಯ್ಯನ ಹಾಡಿನ ಆರಂಭದಲ್ಲಿ ಬರುವ ಉಗ್ಗಡಣೆಯನ್ನು ಬಿ. ಎಸ್. ಅವರು ಕೊಟ್ಟಿದ್ದಾರೆ. ಪ್ರತಿಯೊಂದು ಹಾಡಿನ ಆರಂಭದಲ್ಲಿ, ಇಡೀ ಹಾಡಿನ ಸಾರಾಂಶವನ್ನೊಳಗೊಂಡ ಒಂದು ತ್ರಿಪದಿ ಇದ್ದು, ಅದನ್ನು 'ಸೂಚಕಪದ' ಎಂದು ಹೆಸರಿಸಲಾಗಿದೆ. ಇದೆಲ್ಲ ಹಾಡಿಗೆ ಒಂದು ವ್ಯವಸ್ಥೆ ಕೊಡಲು ಬಿ. ಎಸ್. ಅವರು ಮಾಡಿಕೊಂಡಿದ್ದಿರಬೇಕು. ಬೇರೆ ಕಡೆ "ಹೊರಮುಚುಕ" ಪದವನ್ನು ಅವರು ಬಳಸಿರುವುದು ಕಂಡು ಬರುತ್ತದೆ.

ಪ್ರಸ್ತುತ ಕೃತಿಯಲ್ಲಿ ಕವಿ ಸ್ವವಿಷಯವನ್ನು ಯಾವ ಹಾಡಿನಲ್ಲಿಯೂ ಹೇಳಿಕೊಂಡಿಲ್ಲ. ಇಲ್ಲಿಯ ಪ್ರತಿಯೊಂದು ಹಾಡಿನ ಕೊನೆಯಲ್ಲಿ "ಹಂತಿಯ ಹಾಡೆಂದು ಪಂತ ಕಟ್ಟಲು ಬೇಡ" ಎಂದೂ "ಶರಣ ಶರಣೆಂಬುವೆವು" ಎಂದು ಆರಂಭವಾಗುವ ಎರಡು ತ್ರಿಪದಿಗಳು ಬಂದೇ ಬರುತ್ತವೆ. ಕೊನೆಯ ತ್ರಿಪದಿಯಲ್ಲಿ ಕಥಾ ನಾಯಕನ ಅಥವಾ ನಾಯಕಿಯ ಹೆಸರು ಬರುತ್ತದೆ, ಹಾಗೆಯೇ ರಾಶಿಗೆ ಮತ್ತು ಆಯಾ

ಹಾಡುಗಳಿಗೆ ಸಂಬಂಧಿಸಿದಂತೆ ಒಂದೋ ಎರಡೋ ತ್ರಿಪದಿಗಳು ಕಥೆಯ ಕೊನೆಯ ಭಾಗದಲ್ಲಿ ಬರತ್ತವೆ. ಆದರೆ, ಕವಿಯ ಹೆಸರು ಮಾತ್ರ ಬರುವುದಿಲ್ಲ. ಕವಿ, ಸಾಕ್ಷರಿಯಾಗಿದ್ದರೂ ಅವನಿಗೆ ಕವಿತ್ವ ಶಕ್ತಿ ದೈವದತ್ತವಾಗಿ ಸಹಜವಾಗಿ ಬಂದಿತ್ತೆಂಬುದು ಇಲ್ಲಿಯ ಹಾಡುಗಳನ್ನು ಆಸ್ವಾದಿಸಿದಾಗ ಯಾರಿಗಾದರೂ ಮನವರಿಕೆಯಾಗದಿರದು.

ಈ ಸಂಕಲನದಲ್ಲಿ ಸಮಾವೇಶಗೊಳ್ಳದ (ಅದು ಇನ್ನು ಅಚ್ಚಾಗಿಲ್ಲ) ಆಗ ಬಿ. ಎಸ್. ಅವರಿಗೆ ಇನ್ನೂ ಅಪರಿಚಿತನಾಗಿದ್ದ "ಹೂಗಾರ ಮಾದಯ್ಯ" ನ ಹಾಡಿನಲ್ಲಿ ಕವಿಯ ಬಗ್ಗೆ ಕೆಲವು ವಿಷಯಗಳು ತಿಳಿದು ಬರುವುದನ್ನು ಅವರು ನೋಡಿದ್ದಾರೆ. ಹೂಗಾರ ಮಾದಯ್ಯ ತನ್ನ ವೃತಿಯ ಜೊತೆಗೆ ಸಮಾಧಿ ಕ್ರಿಯಾ ಕಾಯಕ ಮಾಡುತ್ತಿದ್ದ ಒಬ್ಬ ಶರಣ ಅವನನ್ನು ಕುರಿತ ಹಾಡಿನಲ್ಲಿ ಬರುವ ಕೆಲವು ತ್ರಿಪದಿಗಳನ್ನು ಬಿ. ಎಸ್. ಅವರು ಉದ್ಧರಿಸಿದ್ದಾರೆ: ಸುಗ್ಗಿ ದಾಸೋಹವೆಂದು ಹಿಗ್ಗಿ ಬೆಳವಲು ನೋಡು! ಹುಗ್ಗಿ ಹೋಳಿಗೆಯು ನನ್ನಾಡು! ಸುಗ್ಯೂಟು!! ನಗ್ಗೇಡು ಇಕದೆ ಮಲೆನಾಡು (೮೮ ನೇ ಪದ್ಯ) ಹಾರಿ ಬರುವುದು ಹುಲುಸು ಏರಿ ಮಾದನ ಪತ್ರಿ! ಸೂರಿ ಹಾಡುವೆನು ನಿನ್ನಾಡೇ ಬೆಳತನಕ ! ಯಾರು ಕೈತಟ್ಟಿ ನಿಲ್ಲವುರು (೮೯) ಒಡೆದು ಹಾಡುವೆನೆಂದು ಎಡವಿ ಬೀಳುವರೆಷ್ಟೂ ಜಡಮತಗಳೆಲ್ಲ ತಡಪಡಿಸಿ ! ನಿನ್ನಾಡ ! ಮಿಡಿಯುದಕೆ ಬಾಯಿ ಕಳಕೊಂಡು (೯೦) ರಾಚಯ್ಯ ನಿನ ಮಗನು ಊಚಸಾವಳಿಗೇಶ ಕೋಚೆತ್ತಿ ಕಣಕೆ ಹಾಡಿದನು । ಬೆಳತನಕ । ನಾಚಿ ಕತ್ತಲೆಯು ಬೆಳಗಾತು (೯೧) ನನ್ನ ಕಾಯಕ ಕೇಳೋ ನನ್ನಿಯಲಿ ಹಾಡುವುದು । ಕುನ್ನಿ ನಾ ಜನನೆ ಅಕ್ಕರವ ಕಲಿತಿಲ್ಲ । ಸು (ಸೊ) ನ್ನಿ ಬರೆಯುದಕೆ ಕೈಯೆಲ್ಲ ? (೯೨) ಸೊನ್ನಿಯಲಿ ಹಾಡುದಕೆ । ನನ್ನವ್ವ ಕಲಿಸಿದಳು । ಬಿನ್ನಾಣವೆನಗೆ ಹಾಡುದಕೆ । ಹಡದವ್ವ । ಸನ್ನುತದ ಸರಣಿ ಶಿವ ಪದಕೆ (೯೩).

ಇದರಿಂದ ಬಿ. ಎಸ್. ಅವರ ತಂದೆ ಸಾವಳಿಗೆಯ್ಯನವರು ಒಬ್ಬ ಪ್ರತಿಭಾವಂತ ಜನಪದ ಹಾಡುಗಾರನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಜನಪದ ಕವಿಯಾಗಿದ್ದ ತಮ್ಮ ತಂದೆ ಸಾವಳಿಗೆಯ್ಯ ಅವರಿಗೆ ತಮ್ಮ ಪ್ರಥಮ ಸಂಕಲನ 'ನಾಲ್ಕು ನಾಡ ಪದಗಳು' ಕೃತಿಯ ಮೂರು ತ್ರಿಪದಿಗಳನ್ನು ತಾವೇ ಬರೆದು ಮುಡಿಪಾಗಿ ಅರ್ಪಿಸಿದ್ದಾರೆ.

ಪ್ರಸ್ತುತ ಸಂಕಲನದಲ್ಲಿ ಸಮಾವೇಶಗೊಂಡಿರುವ ನಾಲ್ಕು ಹಾಡುಗಳಲ್ಲಿ ಬರುವ ಕಥೆಗಳು ಶಿಷ್ಟ ಕವಿಗಳ ಕಾವ್ಯಗಳಲ್ಲಿಯೂ ಬರುತ್ತವೆ. ಕಥೆ ಒಂದೇ ಆದರೂ ಹೇಳಿರುವ ರೀತಿ ಬೇರೆಯಾಗಿದೆ. ಇಲ್ಲಿ ಬರುವ ಪಾತ್ರ ಹಾಗೂ ಸನ್ನಿವೇಶಗಳ ನಿರೂಪಣೆಯಲ್ಲಿ ಜನಪದೀಯತೆ ಎದ್ದು ಕಾಣುತ್ತದೆ. ಅಲ್ಲಿ ಬುದ್ಧಿಗೆ ಪಾಂಡಿತ್ಯಕ್ಕೆ ಪ್ರಾಧ್ಯಾನ್ಯ. ಇಲ್ಲಿ ಭಾವಕ್ಕೆ ಸಹಜತೆಗೆ ಪ್ರಾಧಾನ್ಯ. ಅದರಿಂದಾಗಿ, ಇಲ್ಲಿಯ ಪಾತ್ರಗಳು ನಮಗೆ ತೀರ ಹತ್ತಿರವಾಗುತ್ತವೆ. ತಮ್ಮಲ್ಲಿಯ ಭಾವ ಭಾವನೆಗಳನ್ನು ಅಲ್ಲಿಯ ಪಾತ್ರಗಳಲ್ಲಿಯೂ ಹಳ್ಳಿಗರು ಕಾಣುವುದರಿಂದ ಅವರೆಲ್ಲ ಇವರಿಗೆ ಅಪ್ಯಾಯಮಾನವಾಗುತ್ತಾರೆ, ಇಷ್ಟವಾಗುತ್ತಾರೆ.

ಕವಿಗೆ ನಿಸರ್ಗ ಸೌಂದರ್ಯವೆಂದರೆ ಬಹಳ ಪ್ರೀತಿ. ನಿಸರ್ಗದ ಒಂದು ಭಾಗವಾದ ಸೂರ್ಯೋದಯದ ವರ್ಣನೆ ಬಿಜ್ಜ ಮಹಾದೇವಿ ಕಥೆಯ ೮೪ನೆಯ ಪದ್ಯದಲ್ಲಿ ಬಹಳ ಸೊಗಸಾಗಿ ಅಷ್ಟೇ ಸುಂದರವಾಗಿ ಬಂದಿದೆ.

ಕಸುಕಾದ ದಾಳಿಂಬ ರಸ ತುಂಬಿ ಒಡೆದಂತೆ
ನಸುಗೆಂಪು ಒಡೆದು ಮೂಡಲವು । ಶಿವಭಕ್ತಿ ।
ಹಸುಗಂಪು ಹರಿದು ಜಗತುಂಬಿ

ಇಲ್ಲಿ ಬರುವ ಉಪಮೆಗಳು ತುಂಬಾ ಹೃದ್ಯ ಮತ್ತು ಅರ್ಥಪೂರ್ಣ. ಅವುಗಳನ್ನು ಪರಿಶೀಲಿಸುತ್ತ ಹೋದಾಗ ಇಡೀ ಸೂರ್ಯೋದಯದ ಒಂದು ಸುಂದರ ಚಿತ್ರ ನಮ್ಮ ಕಣ್ಣ ಮುಂದೆ ಬರುತ್ತದೆ. ಸೂರ್ಯೋದಯ ಸಮಯದಲ್ಲಿ ನಸುಗೆಂಪು ಸುತ್ತೆಲ್ಲ ಹರಡಿದಂತೆ ಶಿವಭಕ್ತಿಯೂ ಪ್ರಪಂಚದಲ್ಲಿ ಹರಡಿತು ಎಂಬ ಮಾತಂತೂ, ಕವಿಯೇ ಶಿವಭಕ್ತಿಯ ಪರಾಕಾಷ್ಠೆಯನ್ನು ಸೂಚಿಸುತ್ತದೆ.

ಮೀಸಲಕೆ ವರಗನ್ನೆ ವಾಸನೆಯು ಕಮರಿತ್ತು
ನಾಶವಾಗದಾ ಶಿವಭಕ್ತಿ । ಆ ಶರಣೆ
ಈಶನೋಂಪಯೊಳು ಹಗಲಿರುಳು ॥ ೭ ॥

ಶಿವನಿಗೆ ಮಾತ್ರ ತನ್ನ ಭಕ್ತಿಯನ್ನು ಮೀಸಲಾಗಿತ್ತು ಬಿಜ್ಜ ಮಹಾದೇವಿಯಲ್ಲಿ ಕಾಮವಾಸನೆ ಕಮರಿ ಹೋಯಿತೆಂಬ ಮಾತು ಅತ್ಯಂತ ಶಕ್ತಿಯುತವಾಗಿದ್ದು ಅವಳ ವ್ಯಕ್ತಿತ್ವದ ಹಿರಿಮೆಯನ್ನು ನಮಗೆಲ್ಲ ಮನವರಿಕೆ ಮಾಡಿ ಕೊಡುತ್ತದೆ.

'ಓಣಿಯಲಿ ಕೂಸುಗಳ ಕಾಣುತಲಿ ಎತ್ತಿಳಿಸಿ
ಮಾಣಿ ಸುವಸತರ ನೋವುಗಳ ನಿತ್ಯದಲಿ
ಜಾಣೆ ಮಾದೇವಿ ಶಿವ ಶರಣೆ ॥ ೮ ॥

ಇಂತಹ ವ್ಯಕ್ತಿ ಚಿತ್ರಣ ಜನಪದ ಕವಿಯಿಂದ ಮಾತ್ರ ಸಾಧ್ಯವೇ ಹೊರತು ಶಿಷ್ಟ ಕವಿಗಳಿಂದ ಸಾಧ್ಯವಿಲ್ಲ. ಇಂತಹ ವಿಶೇಷತೆಯನ್ನೊಳಗೊಂಡ ತ್ರಿಪದಿಗಳು ಬಿಜ್ಜ ಮಹಾದೇವಿಯ ಈ ಕಥೆಯಲ್ಲಿ ಹಲವಾಗಿವೆ. ಗಂಭೀರ ಸನ್ನಿವೇಶಗಳಗಳ ರುಚಿಯನ್ನು ಸವಿಯುವ ಬಯಕೆ ನಿಮ್ಮದಾಗಿದ್ದರೆ ಬಿಜ್ಜ ಮಹಾದೇವಿಯ ಹಾಡಿನಲ್ಲಿ ಬರುವ ೭ ಕೊನೆಯ ಪದ್ಯಕ್ಕೆ ಹೋಗಬೇಕು. ಶಿಶು ರೂಪದ ಶಿವನಿಗೆ ಆರೋಗ್ಯ ಕೆಟ್ಟು ಅವಳು ಗೋಳಿಡುವ ದೃಶ್ಯ ಕರುಣ ರಸಭರಿತವಾಗಿದೆ. ಕೂಸಿಗೆ ಬಂದ ರೋಗ ಗುಣವಾಗದಿದ್ದಾಗ, ತಾನೇ ಜೀವ ಕೊಡಲು ಸಿದ್ಧಳಾದ ಆ ಗಂಭೀರ ಸನ್ನಿವೇಶ

ಗೋ । ಹಾರಿದೆನು ಶಿವನೆ ಛೀ ಹೋಗಲೀ ಜೀವ
ಭೋ । ಹೇಳೆಂದು ಉಪ್ಪರಗಿ ಮೇಲಿಂದ
ಹೋ ಹೋಕಾಲವೆ ಶಿವಲಿಂಗ

ಎಂಬ ತ್ರಿಪದಿಯಲ್ಲಿ ಅದ್ಭುತವಾಗಿ ಬಂದಿದೆ. ಇಲ್ಲಿ ಬರು ಗೋ. ಛೀ, ಭೋ, ಹೋ ಉದ್ಗಾರಗಳು ಬರೀ ಉದ್ಗಾರಗಳಲ್ಲಿ ಅವಳ ಅಂತರಂಗದ ನೋವನ್ನು ಬಿಂಬಿಸುವ ಉದ್ಗಾರಗಳು. ಹೀಗೆ ಇನ್ನು ಹಲವಾರು ಸನ್ನಿವೇಶಗಳು ಕಾವ್ಯಾಂಶಗಳನ್ನೊಳಗೊಂಡಿದ್ದು, ಪರಿಭಾವನಾರ್ಹವಾಗಿವೆ. ಓದಿಯೇ ಅವನ್ನು ತಿಳಿಯಬೇಕು.

ಇಲ್ಲಿಯ ಭಾಷೆಯಲ್ಲಿ ಶಿಷ್ಟ ಪದಗಳ ಜೊತೆಗೆ ಜನಪದ ಪದಗಳೂ ಇವೆ. ಆದುದರಿಂದ, ಕೆಲವರಿಗೆ ಇದು ಕೃತ್ರಿಮವೆನಿಸಬಹುದು. ಕವಿ ನಿರಕ್ಷರಿಯಾಗಿದ್ದರೂ, ಅವನು ಬೆಳೆದು ಬಂದ ಆ ಪರಂಪರೆ, ಅವನಿಗೆ ದೊರೆತ ಆ ಸಂಸ್ಕಾರ ಇತ್ಯಾದಿಗಳನ್ನು ನೆನೆದಾಗ ಭಾಷೆ ಕೃತ್ರಿಮವೆನಿಸದು.

**೨. ಕಂಬಿಯ ಹಾಡುಗಳು :**

ಇದು ಬಿ. ಎಸ್. ಗದ್ದಗಿಮಠ ಅವರ 'ಜಾನಪದ ಕಾವ್ಯಮಾಲೆ' ಯಲ್ಲಿ ಅರಳಿದ ಎರಡನೆಯ ಪುಷ್ಪ. ಅವರು 'ನನ್ನ ನುಡಿ'ಯಲ್ಲಿ ಕಂಬಿ ಮತ್ತು ಕಂಬಿಯ ಹಾಡುಗಳಿಗೆ ಸಂಬಂಧಿಸಿದಂತೆ ಸವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಕಂಬಿಯ ಅಯ್ಯಗಳೇ ಹೆಚ್ಚಾಗಿ ಈ ಹಾಡುಗಳನ್ನು ಹಾಡುತ್ತಾರೆಂಬುದನ್ನು ತಿಳಿಸುತ್ತ, "ಜನಪದ ಹಾಡುಗಳ ಸಂಗ್ರಹದ ಆ ಮಹಾಯಾತ್ರೆಯ ಸಂದರ್ಭದಲ್ಲಿ, ಕಂಬಿಯ ಹಾಡುಗಳೂ ದೊರೆತಿವೆ. ಅವನ್ನು ಒಂದೆಡೆ ಸಂಕಲಿಸಿದರೂ, ಪ್ರಕಟನೆ ಅವರಿಗೆ ಸಾಧ್ಯವಾಗಲಿಲ್ಲ. ಮುಂದೆ, ಸುದೈವದಿಂದ ಶ್ರೀಶೈಲ ಮಲ್ಲಿಕಾರ್ಜುನನ ಪರಮ ಭಕ್ತರಾದ ಹುಬ್ಬಳ್ಳಿಯ ಗುರುಸಿದ್ಧಯ್ಯನವರು ತಮ್ಮ ತಂದೆಯ ಸ್ಮರಣಾರ್ಥ ಆ ಹಾಡುಗಳನ್ನು ಪ್ರಕಟಿಸಲು ಮುಂದೆ ಬಂದಾಗ ಕೃತಿಯ ಪ್ರಕಟನೆ ಸಾಧ್ಯವಾಯಿತು". (ಅವರ ಸಂಕ್ಷಿಪ್ತ ಪರಿಚಯವನ್ನು ಕೊಟ್ಟಿದ್ದಾರೆ)

ವೀರಶೈವ ಸಂಸ್ಕೃತಿ, ಸಂಪ್ರದಾಯ ಮತ್ತು ಇತಿಹಾಸ ಈ ಹಾಡುಗಳಲ್ಲಿ ಬಂದಿರುವುದರಿಂದ, ಸುದೀರ್ಘವಾದ ಪ್ರಸ್ತಾವನೆಯೊಡನೆ ಈ ಕೃತಿಯನ್ನು ಪ್ರಕಟಿಸಿದ್ದಾರೆ. ಪ್ರಯಾಣ ಸೌಕರ್ಯಗಳಿಲ್ಲದ ಅಂದಿನ ದಿನಮಾನಗಳಲ್ಲಿ ಶ್ರೀ ಶೈಲಕ್ಕೆ ಹೋಗುವ ಭಕ್ತರು ಗುಂಪು ಗುಂಪುಗಳಾಗಿ ಹೋಗುತ್ತಾರೆ. ಅವುಗಳನ್ನು ಪರ್ಸಿಯೆಂದು ಕರೆಯಲಾಗುತ್ತದೆ. ರಾಘವಾಂಕನ ಸಿದ್ಧರಾಮ ಚಾರಿತ್ರದಲ್ಲಿ ಈ ಪರ್ಸಿಗಳ ಉಲ್ಲೇಖ ಬರುತ್ತದೆ. ಶಾಸನಗಳಲ್ಲಿ ಬರುವ ಪರ್ಷೆ (ಶಕ್ತಿ ಪರ್ಷೆ ಸಿಂಹ ಪರ್ಕ್ಷೆ ಇತ್ಯಾದಿ)ಯ ೭ ಅಪಭ್ರಂಶವೆ ಪರ್ಸಿಯಾಗಿದೆ.

ಶ್ರೀ ಶೈಲಕ್ಕೆ ಹೋಗುವ ಭಕ್ತರು ಕಂಬಿಗೆ (ಕೋಲು) ಕಾವಡಿ (ನೆಲವುಗಳನ್ನು ತೂಗು ಹಾಕಿ ಅದರಲ್ಲಿ ಅವಶ್ಯಕ ವಸ್ತುಗಳನ್ನು ಇಟ್ಟುಕೊಳ್ಳುತ್ತಾರೆ. ಅಲ್ಲಿಗೆ ಹೋಗಲು ಸಾಧ್ಯವಾಗದ ಭಕ್ತರು, ಪರ್ಸಿಯವರಿಗೆ ತಮ್ಮ ಮುಡಿಪು, ಹರಕೆಗಳನ್ನು ಮಲ್ಲಯ್ಯನಿಗೆ ಮುಟ್ಟಿಸಲು ಕೊಡುತ್ತಿದ್ದರು. ಹಾದಿಯಲ್ಲಿ ಆ ಕಂಬಿಯ ಯಾತ್ರಿಕರಿಗೆ ಊಟ ವಸತಿಯ ವ್ಯವಸ್ಥೆ ಮಾಡುತ್ತಿದ್ದ ಜೊತೆಗೆ ಸತ್ಕಾರವನ್ನು ಮಾಡುತ್ತಿದ್ದರು. ಇಳಿಹಾಳು ಗೋಲಗೇರಿಗಳು

ಅಂಥ ಸ್ಥಳಗಳಾಗಿದ್ದವೆಂದು ಬಿ. ಎಸ್. ಅವರು ಹೇಳುತ್ತಾರೆ. ಶ್ರೀ ಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ ದರ್ಶನ ಪಡೆದು ಭಕ್ತರ ಮುಡಿಪುಗಳನ್ನು ಒಪ್ಪಿಸಿ ಯಾತ್ರಿಕರು ತಿರುಗಿ ಬರುವಾಗ ಹಾದಿಯಲ್ಲಿದ್ದ ಊರವರು ಅವರನ್ನು ಎದುರುಗೊಳ್ಳುತ್ತಿದ್ದರು. ಅವರ ಕಂಬಿಗಳಲ್ಲಿಯೇ ಪಾರವತಿ ಲಿಂಗಯ್ಯ ನೆಲಸಿರುವನೆಂದು ಅವರ ಭಾವನೆಯಾಗಿತ್ತು. "ಬರಬರುತ್ತ ಕೇವಲ ಕೋಲಾಗಿದ್ದ ಕಂಬಿ ಕಾವಡಿಗಳು ಬೇರೆ ರೂಪ ತೊಟ್ಟು ಕಂಬಿಯ ಮಲ್ಲಯ್ಯನೇ ಆದ" ಎಂಬ ಬಿ. ಎಸ್. ಅವರ ಮಾತುಗಳು ಪರಿಶೀಲನಾರ್ಹವಾಗಿವೆ. ಈ ಕಂಬಿಗಳ ಸ್ವರೂಪವನ್ನು ವಿವರವಾಗಿ ಅವರು ಕೊಟ್ಟಿದ್ದಾರೆ.

ಕಂಬಿಗಳನ್ನು ಶ್ರೀಶೈಲಕ್ಕೆ ಒಯ್ಯುವವರು ಬಸವಾದಿ ಪ್ರಮಥರ ಕಾಯಕ ಸಿದ್ಧಾಂತದ ಪ್ರಭಾವದಿಂದಾಗಿ ತಾವು ಮಾಡುತ್ತಿದ್ದ ಶ್ರೀ ಶೈಲ ಮಲ್ಲಿಕಾರ್ಜುನನ ಸೇವೆಯನ್ನು ಒಂದು ಕಾಯಕವಾಗಿ ಪರಿವರ್ತಿಸಿಕೊಂಡಿರಬಹುದೆಂದು ಬಿ. ಎಸ್. ಅವರು ಹೇಳುವುದು ವಿಚಾರಣೀಯ ಅಂಶವಾಗಿದೆ. ಆ ಕಾಯಕವನ್ನು 'ಕಂಬಿಯ ಕಾಯಕ'ವೆಂದೂ, ಆ ಕಾಯಕವನ್ನು ಮಾಡುವವರಿಗೆ ಕಂಬಿಯ ಅಯ್ಯಗಳೆಂದೂ ಕಾವಡಿ ಅಯ್ಯಗಳೆಂದೂ ಕರೆಯುವುದು ರೂಢಿಗೆ ಬಂತೆಂದೂ ಅವರು ಹೇಳುತ್ತಾರೆ.

ಕಲ್ಯಾಣ ಕ್ರಾಂತಿಯ ನಂತರ ಅಕ್ಕ ಮಹಾದೇವಿ, ಅಲ್ಲಮಪ್ರಭು, ರುದ್ರಮುನಿ ಮೊದಲಾದವರು ಶ್ರಿಶೈಲಕ್ಕೆ ಬರಲು, ಅವರು ಪ್ರತಿಪಾದಿಸಿದ ವೀರಶೈವ ಧರ್ಮವನ್ನು ಹಬ್ಬಿಸಲು ಈ ಕಂಬಿಯ ಕಾಯಕದವರಿಂದ ಹೆಚ್ಚು ಸಹಾಯವಾಯಿತು – ಎಂದು ಬಿ. ಎಸ್. ಹೇಳುವ ಮಾತು ಆಲೋಚನೀಯವಾಗಿದೆ. ಶ್ರೀಶೈಲಕ್ಕೆ ಹೋದ ಒಂದು ಇಲ್ಲಿಯ ಸುದ್ದಿ ಈ ಕಂಬಿಯ ಅಯ್ಯಗಳು ಅಲ್ಲಿಯ ಶಿವ ಶರಣರಿಗೆ ತಿಳಿಸಿ ಅವರು ಕೊಡುತ್ತಿದ್ದ ಧರ್ಮ ನಿರೂಪಣೆಗಳನ್ನು ಇಲ್ಲಿ ಪ್ರಚಾರ ಮಾಡುತ್ತಿದ್ದರು. ಹೀಗೆ ಧರ್ಮ ಪ್ರಸಾರ ಕಾರ್ಯದಲ್ಲಿ ಕಂಬಿಯ ಅಯ್ಯಗಳು ಮಾಡಿದ ಸೇವೆಯನ್ನು ಬಿ. ಎಸ್. ಅವರು ಎತ್ತಿ ತೋರಿಸಿರುವುದು ಮಹತ್ವದ್ದಾಗಿದೆ. ಒಂದು ಸಂಪ್ರದಾಯದಲ್ಲಿ ಧಾರ್ಮಿಕ ಇತಿಹಾಸದ ಎಳೆಗಳನ್ನು ಗುರುತಿಸಲು ಪ್ರಯತ್ನಿಸಿರುವ ಬಿ. ಎಸ್. ಅವರ ರೀತಿ ಅನುಕರಣೀಯ.

ಮಲ್ಲಿಕಾರ್ಜುನನ ಒಕ್ಕಲುಗಳಾದ ಕೆಲವು ಜನ ಶ್ರೀಮಂತ ವೀರಶೈವರು, ತಮ್ಮ ಮನೆಯಲ್ಲಿಟ್ಟುಕೊಂಡಿದ್ದ ಕಂಬಿಗಳನ್ನು ಪ್ರತಿ ವರ್ಷ ಕಂಬಿಯ ಅಯ್ಯಗಳಿಗೆ ದುಡ್ಡು ಕೊಟ್ಟು ಶ್ರೀ ಶೈಲಕ್ಕೆ ಕಳಿಸಿಕೊಡುತ್ತಿದ್ದರು. ಅವರು ಅಲ್ಲಿಂದ ತಿರುಗಿ ಬಂದು ವಾಲಗ ಮಾಡುವ ಸಂದರ್ಭದಲ್ಲಿ, ಕಂಬಿಯ ಅಯ್ಯಗಳು ಉಘೇ ಉಘೇ ಎನ್ನುತ್ತ, ದೀವಟಿಗೆ ಎತ್ತಿ ಹಿಡಿದು ಮಲ್ಲಿಕಾರ್ಜುನನ ಬಿರುದಾವಳಿಗಳನ್ನು ಹೇಳುತ್ತಾರೆ. ಅದನ್ನೇ ಉಗ್ಗಡಣೆ ಎನ್ನುತ್ತಾರೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳು ಮಂಗಳಾರತಿ ಪದಗಳು ಹರಕೆಗಳು ಸಾಕಷ್ಟಿವೆಯಂತೆ. ಈ ಉಗ್ಗಡಣೆಗಳು ಶ್ರೀ ಶೈಲದಲ್ಲಿರುವ ದೇವರುಗಳ ನಾಮಾವಳಿಗಳು.

ಈ ಉಗ್ಗಡಣೆಯ ನಂತರ, ನೂರಾರು ನುಡಿಗಿಂತಲೂ ಅಧಿಕವಾಗಿರುವ ಮಲ್ಲಿಕಾರ್ಜುನನನ್ನು ಕುರಿತ ಹಾಡುಗಳನ್ನು ಕಂಬಿಯ ಅಯ್ಯಗಳು ಹಾಡುತ್ತಾರೆ. ಅದರಲ್ಲಿ ಮಲ್ಲಿಕಾರ್ಜುನನ ಲೀಲೆಗಳ ಪ್ರಸ್ತಾಪ ಬರುತ್ತದೆ. ಅದು ಆರಂಭವಾಗುವುದು "ಮಲ್ಲಯ್ಯ ಮಲ್ಲಯ್ಯ ಶ್ರೀ ಗಿರಿ ಮಲ್ಲಯ್ಯನ ನೋಡುವ ಬನ್ನಿ" ಎಂದು. ಅದು ಶ್ರೀಶೈಲದ ಇಡೀ ಚಿತ್ರಣವನ್ನು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುವ ಜೊತೆಗೆ ಉತ್ತಮ ಜೀವನ ತತ್ವ ದರ್ಶನವೂ ಅಲ್ಲಿ ಇರುತ್ತದೆಂದು ಬಿ. ಎಸ್. ಅಭಿಪ್ರಾಯ ಪಡುತ್ತಾರೆ.

ಕಂಬಿ ಹಾಡಿನಲ್ಲಿ ಬರುವ ಕಂಬಿಯವರಿಗೆ ಸಂಬಂಧಿಸಿದ ಶರಣರೆಂದರೆ ಇಳೆಹಾಳ ಬೊಮ್ಮಯ್ಯ ಮತ್ತು ಗೊಲ್ಲಾಳಯ್ಯ. ಇಳೆಹಾಳ ಬೊಮ್ಮಯ್ಯನ ಬಿತ್ತಲು ಒಯ್ಯುತ್ತಿದ್ದ ನೆನೆಗಡಲೆ ಬೀಜಗಳನ್ನು ಪರ್ಸಿಗೆ ಹಂಚಿ ಬಿತ್ತದೆ ಬೆಳೆದ ಮಹಾ ಶರಣ. ಅದರ ಸ್ಮಾರಕವಾಗಿ ಈಗಲೂ ಶ್ರೀ ಶೈಲಕ್ಕೆ ಹೋಗುವ ಪರ್ಸಿಗೆ ನೆನೆಗಡಲೆ ಹಂಚುತ್ತಾರಂತೆ. ಈ ಇಳಹಾಳ ಬೊಮ್ಮಯ್ಯ ಬಸವಣ್ಣನಿಗಿಂತ ಪೂರ್ವದವನಾಗಿದ್ದು, ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿದ್ದ ಬಗ್ಗೆ ತಮ್ಮವೇ ಆದ ಆಧಾರಗಳ ಹಿನ್ನೆಲೆಯಲ್ಲಿ ಬಿ. ಎಸ್. ಅವರು ಪ್ರತಿಪಾದಿಸುತ್ತಾರೆ. ಗೊಲ್ಲಾಳಯ್ಯ ಒಬ್ಬ ಮುಗ್ಧ ಜೀವಿ. ಅವನು ಶ್ರೀ ಶೈಲಕ್ಕೆ ಹೊರಟ ಕಂಬಿಯ ಜಂಗಮನಿಗೆ, ಅಲ್ಲಿಂದ ಗಿರಿಲಿಂಗ ತರಲು ಕೇಳಕೊಳ್ಳುತ್ತಾನೆ. ಆದರೆ, ಆ ಜಂಗಮ ಅವನ ಬೇಡಿಕೆಯನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೇ ಶ್ರೀ ಶೈಲದಿಂದ ತಿರುಗಿ ಬರುತ್ತಾನೆ. ಗೊಲ್ಲಾಳಯ್ಯ ಅವನನ್ನು ಕಂಡು ಗಿರಿಲಿಂಗವನ್ನು ಕೊಡುವಂತೆ ಕೇಳಿದಾಗ ಅವನು ಕುರಿಯ ಹಿಕ್ಕಿಯನ್ನು ಲಿಂಗವೆಂದು ಕೊಡುತ್ತಾನೆ. ಕುರಿಯ ಹಿಕ್ಕಿಯನ್ನೇ ಲಿಂಗವೆಂದು ಗಟ್ಟಿಯಾಗಿ ನಂಬಿ ಅದನ್ನೇ ಪೂಜಿಸಿ ಗೊಲ್ಲಾಳಯ್ಯ ಶಿವಕೃಪೆಗೆ ಪಾತ್ರನಾಗಿ ಮುಕ್ತಿ ಪಡೆಯುತ್ತಾನೆಂದು ಹಂತಿಯ ಹಾಡಿನಲ್ಲಿ ಬರುತ್ತದೆ. ಈ ಗೊಲ್ಲಾಳಯ್ಯ ವೀರಶೈವ ಪುರಾಣಗಳ ಪ್ರಕಾರ ನವ ಮುಗ್ಧರಲ್ಲಿ ಒಬ್ಬ. ಆದುದರಿಂದ, ಇವನೂ ಬಸವ ಪೂರ್ವದವನೆಂದು ಬಿ. ಎಸ್. ಅವರ ಊಹೆ. ಬುನಾದಿಯಿಂದಲೂ ಕಂಬಿಯ ಅಯ್ಯಗಳು ಶ್ರೀಶೈಲದಿಂದ ಮಲ್ಲಯ್ಯನ ಗುರುತೆಂದು ತರುವ ವಸ್ತುಗಳಲ್ಲಿ 'ಗಿರಿಲಿಂಗ'ವೂ ಒಂದು. ಹೀಗೆ ಕಂಬಿಯ ಸಂಪ್ರದಾಯದಲ್ಲಿ ಬರುವ ಕೆಲವು ಆಚರಣೆಗಳನ್ನು ಆಧರಿಸಿ ಅದರ ಪ್ರಾಚೀನತೆಯನ್ನು ಬಸವ ಪೂರ್ವ ಯುಗಕ್ಕೆ ಬಿ. ಎಸ್. ಒಯ್ಯುತ್ತಾರೆ. ಇದು ಇನ್ನೂ ಗಟ್ಟಿ ಆಧಾರಗಳನ್ನು ಬಯಸುತ್ತದೆ. ಕಾವಡಿಯಲ್ಲಿ ನೀರಿನ ಬಿಂದಿಗೆಯನ್ನಿಟ್ಟುಕೊಂಡು ಹೋಗುವ ಸಂಪ್ರದಾಯದ ಸೂಚನೆ, ಕಂಬಿಯ ಹಾಡಿನಲ್ಲಿ ಬೆಡಗಿನ ರೂಪದಲ್ಲಿ ಬರುತ್ತದೆಂದೂ ಅವರು ಊಹಿಸುತ್ತಾರೆ.

ಮೊದಲಿಂದಲೂ ಭಾವುಕ ಜನಪದರಿಗೆ ಶ್ರೀಶೈಲವೆಂದರೆ ಕೈಲಾಸವೆಂಬ ನಂಬಿಕೆಯಿದೆ. ಕೆಲವು ಶರಣರು ಅಲ್ಲಿಗೆ ಹೋಗಿ ನೆಲಸಿದ ಮೇಲಂತೂ ಅದಕ್ಕೆ ಇನ್ನಷ್ಟು ಮಹತ್ವ ಬಂದು ವೀರಶೈವರಿಗೆ ಒಂದು ಧರ್ಮಪೀಠವೇ ಆಯಿತು.

ಉರ್ದು ಮಿಶ್ರಿತ ಕೆಲವು ಕಂಬಿಯ ಹಾಡುಗಳೂ ಬಿ. ಎಸ್. ಅವರಿಗೆ ದೊರೆತಿವೆ. ಅವುಗಳ ರಚನೆಗೆ ಕಾರಣ ಹುಡುಕುತ್ತ ಹೊರಟ ಅವರು ಅದರಲ್ಲಿ ವೀರಶೈವ ಇತಿಹಾಸದ ಎಳೆಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.

ಮುಸ್ಲಿಂ ಪಂಚಶಾಹಿಗಳ ಆಳಿಕೆ ಆರಂಭವಾದಾಗ ಕಂಬಿಯ ಅಯ್ಯಗಳು ಮುಸ್ಲಿಂ ರಾಜ್ಯದ ಮೂಲಕ ಶ್ರೀ ಶೈಲಕ್ಕೆ ಹೋಗಬೇಕಾಗಿತ್ತು. ಆಗ ಮತಾಂತರದ ಭೀತಿಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮುಸ್ಲಿಂರ ಗೋರಿಗಳನ್ನು ಹೋಲುವ ಚೌಕಗಳನ್ನು ಕಂಬಿಯ ಅಯ್ಯಗಳು ಹಾಕಿಕೊಂಡು ಅದರಲ್ಲಿ ತಮ್ಮ ಇಷ್ಟ ಲಿಂಗಗಳನ್ನು ಇಟ್ಟುಕೊಂಡು ಚೌಕವನ್ನು ಅವರಿಗೆ ತೋರಿಸಿ ತಾವೂ ಮುಸ್ಲಿಂ ಧರ್ಮದ ಅನುಯಾಯಿಗಳೆಂದು ನಂಬಿಸುತ್ತಿದ್ದರಂತೆ. ಆದರೂ, ಅವರ ಚೌಕಾಶಿ ಮುಂದುವರಿದಾಗ ಉರ್ದು ಶಬ್ದಗಳನ್ನು ಬಳಸಿ, ಕಂಬಿಯ ಅಯ್ಯಗಳು ಹಾಡುಗಳನ್ನು ಬರೆದಿರಬೇಕೆಂದು ಬಿ. ಎಸ್. ಹೇಳುತ್ತಾರೆ. ಹೀಗೆ ಮುಸ್ಲಿಂರ ಮಧ್ಯೆ ಉಪಾಯವಾಗಿ ಇದ್ದು, ವೀರಶೈವ ಧರ್ಮದ ಸಂಸ್ಕೃತಿಯನ್ನು ಉಳಿಸುಕೊಂಡು ಬರಲು ಕಂಬಿಯ ಅಯ್ಯಗಳು ಪ್ರಯತ್ನಿಸಿರುವುದು ಉಲ್ಲೇಖಾರ್ಹ. "ಐತಿಹಾಸಿಕ ದೃಷ್ಟಿಯಿಂದಲೂ ಧಾರ್ಮಿಕ ದೃಷ್ಟಿಯಿಂದಲೂ ಕಂಬಿಗಳಿಗೆ, ಕಂಬಿಯ ಅಯ್ಯಗಳಿಗೆ ಒಂದು ವಿಶಿಷ್ಟ ಮಹತ್ವದ ಸ್ಥಾನವಿದೆ" ಎಂಬ ಬಿ. ಎಸ್. ಅವರ ಮಾತಿನಲ್ಲಿ ನಿಜವಿರಬೇಕಾಗಿಸುತ್ತದೆ.

ಕೃತಿಯಲ್ಲಿ ಉಗ್ಗಡಣೆ (೧೪ ನುಡಿ),ಕಂಬಿಯ ಹಾಡು (೪೨ ನುಡಿ) ಉರ್ದು ಮಿಶ್ರಿತ ಕಂಬಿಯ ಹಾಡು (೯ ನುಡಿ) ಬಿರುದಾವಳಿಗಳು (ಮೂರು) ಮಂಗಳಾರತಿಗಳು (೪) ಎಂದು ಐದು ಭಾಗಗಳಿದ್ದು, ಒಂದೊಂದು ಭಾಗಕ್ಕೂ ಸಂಬಂಧಿಸಿದ ಹಾಡು ನುಡಿಗಳನ್ನು ಅವುಗಳಲ್ಲಿ ಅಳವಡಿಸಿದ್ದಾರೆ.

### ೩. ಜನತಾ ಗೀತೆಗಳು

ಬಿ. ಎಸ್. ಗದ್ದಗಿಮಠ ಅವರು ಸಂಗ್ರಹಿಸಿದ ಅಪಾರ ಜನಪದ ಸಾಹಿತ್ಯದಿಂದ ಆಯ್ದು ಕೆಲವು ಹಾಡುಗಳ ಸಂಕಲನವಾದ ಇದು ಅವರು ಪ್ರಕಟಿತ ಜನಪದ ಸಂಕಲನಗಳಲ್ಲಿ ಮೂರನೆಯದು. ಇದನ್ನು ಧಾರವಾಡದ ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಪ್ರಕಟಿಸಿದೆ (೧೯೫೭). ಪ್ರಕಾಶಕರು ಬಿ. ಎಸ್. ಅವರನ್ನು ಕುರಿತು ಅತ್ಯಂತ ಪ್ರಶಂಸಾಪರ ಮಾತುಗಳನ್ನು ಆಡಿದ್ದಾರೆ. "ಜನಪದ ಸಾಹಿತ್ಯದ ಕೋಶಾಗಾರರಾದ ಅವರಲ್ಲಿ ಲಕ್ಷಕ್ಕೂ ಮಿಕ್ಕಿ ಜಾನಪದ ಹಾಡುಗಳ ಸಂಗ್ರಹವಿದೆಯೆಂದು ಹೇಳಿದ್ದಾರೆ. ಆ ಹಾಡುಗಳಲ್ಲಿ ಹುದುಗಿರುವ ಕನ್ನಡ ಸಂಸ್ಕೃತಿಯ ಸಂಪತ್ತು, ಸಾಹಿತ್ಯ, ಜೀವನಗಳನ್ನು ಕುರಿತು ಅವರು ಹಲವಾರು ದೃಷ್ಟಿಯಿಂದ ಸಂಶೋಧಿಸಿ ಒಂದು ನೆಲೆಗೆ ನಿಂತಿದ್ದಾರೆ .......... ಶ್ರೀ ಗದ್ದಗಿಮಠ ಅವರು ಒಂದೊಂದು ತ್ರಿಪದಿಯನ್ನು ವಿವಿಧ ಧಾಟಿ ಮತ್ತು ರೀತಿಗಳಿಂದ ಪರಿಣಾಮಕಾರಿಯಾಗಿ ಹಾಡಬಲ್ಲವರಾಗಿದ್ದಾರೆ. ಅವರ ಜೀವನವೇ ಈ

ಗೀತೆಗಳ ಸಂಗ್ರಹ ಮತ್ತು ಪ್ರಕಾಶನಕ್ಕಾಗಿ ಮುಡುಪಾಗಿದೆಯೆಂದರೂ ಸಲ್ಲುವುದು" ಎಂದು ಹೇಳಿರುವುದನ್ನು ಗಮನಿಸಬೇಕು.

ಬಿ. ಎಸ್. ಗದ್ದಗಿಮಠ ಅವರು 'ಮೊದಲ ಮಾತು' ದಲ್ಲಿ ತಮ್ಮ ಜನಪದ ಸಾಹಿತ್ಯ ಸಂಗ್ರಹಕ್ಕೆ ಸಂಬಂಧಿಸಿದಂತೆ ಹಲವಾರು ಮಹತ್ವದ ಮಾತುಗಳನ್ನು ಹೇಳಿದ್ದಾರೆ. ಜನಪದ ಸಾಹಿತ್ಯದಲ್ಲಿ ಅವರಿಗೆ ಆಸಕ್ತಿ ಹುಟ್ಟುವಂತೆ ಮಾಡಿದವರು ಅವರ ತಂದೆ ತಾಯಿಗಳು. ಅವರ ಪ್ರಭಾವದಿಂದ ಹಳ್ಳಿಯ ಹಾಡುಗಳು ಹುಚ್ಚು ಹೆಚ್ಚಿಸಿಕೊಂಡ ಬಿ. ಎಸ್. ಅವರು ಅವುಗಳ ಸಂಗ್ರಹಕ್ಕಾಗಿ ಕರ್ನಾಟಕದ ಯಾವ ಭಾಗಗಳಲ್ಲಿ ಸಂಚರಿಸಿದರೆಂಬುದರ ವಿವರವನ್ನು ಅಲ್ಲಿ ನೀಡಿದ್ದಾರೆ. ಕೇವಲ ಸಂಗ್ರಹ ಮಾತ್ರದಿಂದ ತೃಪ್ತರಾಗದ ಅವರು ಆ ಅಪಾರ ಸಾಹಿತ್ಯವನ್ನು ಓದಿ ಮನನ ಮಾಡಿದಾಗ ಅದರಲ್ಲಿದ್ದ ಗೂಢಾರ್ಥ ಅವರಿಗೆ ಮನವರಿಕೆಯಾಗುತ್ತ ಹೋಯಿತಂತೆ.

ಇಷ್ಟು ಹೇಳಿದ ನಂತರ ಬಿ. ಎಸ್. ಅವರು ಜನಪದ ಸಾಹಿತ್ಯದ ವಿವಿಧ ರೂಪಗಳು, ಅಲ್ಲಿ ಕಂಡು ಬರುವ ಸಹಜತೆ, ವಿವಿಧ ಮುಖಿಯಾಗಿ ಹರಿದು ಬಂದ ಅದು ಬೇರೆ ಬೇರೆ ಹಾಡುಗಳಲ್ಲಿ ಎರಕಗೊಂಡ ರೀತಿ ಇತ್ಯಾದಿ ಹತ್ತು ಹಲವು ವಿಷಯಗಳನ್ನು ತಮ್ಮ 'ಮೊದಲ ಮಾತು' ದಲ್ಲಿ ವಿಶದ ಪಡಿಸಿದ್ದಾರೆ.

ಪ್ರಸ್ತುತ ಕೃತಿಯಲ್ಲಿ ಬಿ. ಎಸ್. ಅವರು ಹಾಡುಗಳನ್ನು ಅವು ಒಳಗೊಂಡಿರುವ ವಿಷಯಕ್ಕೆ ಅನುಗುಣವಾಗಿ ಸಂಪ್ರದಾಯದ ಹಾಡುಗಳು, ಹಂತಿ ಹಾಡುಗಳು ದೊಡ್ಡ ಹಾಡುಗಳು ಮುಂತಾಗಿ ಐದು ಶೀರ್ಷಿಕೆಗಳಡಿ ವಿಭಾಗಿಸಿರುವ ಜೊತೆಗೆ ಮತ್ತೆ ಅವುಗಳಲ್ಲಿ ಒಂದೊಂದರಲ್ಲೂ ಉಪ ವಿಭಾಗಗಳನ್ನು ಮಾಡಿಕೊಂಡಿದ್ದಾರೆ.

ನಾಗಪ್ಪನನ್ನು ಪೂಜಿಸುವ ಗೌರಿ ಶಿವೆಯರನ್ನು ಕೂಡಿಸುವ, ಅರಳೆಲೆ ಬಸವನನ್ನು ಪ್ರಾರ್ಥಿಸುವ ಹೆಣ್ಣು ಮಕ್ಕಳ ಸಂಪ್ರದಾಯದ ಹಾಡುಗಳು ಅವರ ಮಣ್ಣಿನ ಪೂಜೆಯ ದ್ಯೋತಕವೆನ್ನುತ್ತಾರೆ. ಬಿ. ಎಸ್. ಹೀಗೆ ಜನಪದದ ಒಂದೊಂದು ಸಂಪ್ರದಾಯಕ್ಕೂ ಒಂದೊಂದು ಹಿನ್ನೆಲೆಯಿರುವುದನ್ನು ಗುರುತಿಸಲು ಬಿ. ಎಸ್. ಪ್ರಯತ್ನಿಸಿದ್ದಾರೆ. ಅದೆಲ್ಲದರ ವಿವರಣೆಗೆ ಕೈ ಹಾಕದೆ ಗುರ್ಚಿ ಸಂಪ್ರದಾಯವನ್ನು ಕುರಿತು ಅವರು ಹೇಳಿರುವ ಹೊಸ ವಿಚಾರಗಳನ್ನು ಉದಾಹರಣೆಗಾಗಿ ಪರಿಶೀಲಿಸಬಹುದೆನಿಸುತ್ತದೆ. "ಗುರ್ಚಿಯು ಗುರುಸಿದ್ಧ ಶಬ್ದದ ವಿಕೃತ ರೂಪ. ಈ ಗುರುಸಿದ್ಧನೆ ಎರಗಂಬಳಿ ಮಠದ ಗುರುಸಿದ್ಧಲಿಂಗಯತಿಯೆಂದು ಸಂಶೋಧನೆಯಿಂದ ತಿಳಿದು ಬರುತ್ತದೆ. ಈ ವಿರಕ್ತನು ೧೪ನೆಯ ಶತಮಾನದಲ್ಲಿ ಕರ್ನಾಟಕದಲ್ಲಿಯೇ ಆಗಿ ಹೋದನು ............ ಈ ವಿರಕ್ತನ ಕಾಲದಲ್ಲಿ ಕರ್ನಾಟಕಕ್ಕೆ ಬರ ಬೀಳಲು ............... ಈ ಎರಗಂಬಳಿ ಮಠದ ಗುರು ಸಿದ್ಧ ಲಿಂಗಯತಿಯು ತಾನು ಹೊದ್ದು ಕೊಂಡ ಕರಿಯ ಕಂಬಳಿಯನ್ನು ಬೀಸಲು ಮೋಡವಿಲ್ಲದೆ ಮಳೆ ಬಂದಿತು" ಅವನ

ಮರಣಾನಂತರ ಮಳೆಯಾಗದಿದ್ದಾಗ ಲಿಂಗದ ಕೃತಿಯನ್ನು ಮಾಡಿ ಅದರ ನೆತ್ತಿಯಲ್ಲಿ ಕರಕಿಯ ಪತ್ರಿಯನ್ನಿಟ್ಟು ಗುರುಸಿದ್ಧಲಿಂಗವೆಂದು ಅವನ ಸ್ಮಾರಕವನ್ನು ಮಾಡಲಾರಂಭಿಸಿದರು. ಮುಂದೆ, ಅದೇ ಒಂದು ಸಂಪ್ರದಾಯವಾಗಿ ಬೆಳೆದುಕೊಂಡು ಬಂದಿತಂತೆ. ಜೋಕುಮಾರನ ಸಂಪ್ರದಾಯ ಬೆಳೆದು ಬರಲು ಕಾರಣವನ್ನು ಅವನ ಬಗ್ಗೆ ಜನಪದರಲ್ಲಿ ಪ್ರಚಲಿತವಿರುವ ಕಥೆಗಳ ಹಿನ್ನೆಲೆಯಲ್ಲಿ ಹುಡುಕಲು ಬಿ. ಎಸ್. ಪ್ರಯತ್ನಿಸಿದ್ದಾರೆ.

ಹಂತಿಯ ಸಂದರ್ಭದಲ್ಲಿ ಪೂಜೆಗೊಳ್ಳುವ ಬೂದನ ಬಗ್ಗೆ ಬಿ. ಎಸ್. ಹೇಳುವ ಮಾತುಗಳು ಕಡ ಆಲೋಚನೀಯವಾಗಿವೆ. ರೈತನ ದೃಷ್ಟಿಯಲ್ಲಿ 'ಬೂದ' ಸುಗ್ಗಿಯ ಲಿಂಗ, ಬುದ್ಧಿವಂತ ಲಿಂಗ. ಆ ಬುದ್ಧಿವಂತ ಲಿಂಗನೇ 'ಬೂದಯ್ಯ'ನಾದನೆಂದು ಬಿ. ಎಸ್. ಹೇಳುವ ಮಾತು ಸರ್ವಗ್ರಾಹ್ಯವಾದುದು. ತಮ್ಮ ಬೇಸಾಯಕ್ಕೆ ತುಂಬಾ ನೆರವಾಗುವ ಬಸವಣ್ಣನನ್ನು ರೈತ ಹೇಗೆ ಮರೆತಾನು ? ಬಸವನ ಬಗ್ಗೆ ಅವರು ತೋರುವ ಭಕ್ತಿ, ಗೌರವ, ಆದರಗಳು, "ಭೂಮಿ ಹುಟ್ಟಿದ ಮೊದಲು ಭೂಮಿ ಕಟ್ಟಿದ ಮೊದಲು ಭೂಪ ಹುಟ್ಟಿದ ಬಸವಯ್ಯ ಮ್ಯಾಗಿನ । ಶಿವಗೇಳು ದಿನಕ ಹಿರಿಯಾನ ॥ ಎಂಬ ತ್ರಿಪದಿಯಲ್ಲಿ ಪ್ರತಿಫಲಿಸಿವೆ.

ಕಂಪಲಿ, ಕಿತ್ತೂರು, ವಿಜಯ ನಗರದ ದೊರೆಗಳ ದುರಂತ ಕಥೆ ಕೇಳಿ ರೈತ, ಸ್ಪಂದಿಸಿರುವ ಬಗೆಯನ್ನು ಇಲ್ಲಿ ಬರುವ ಅವರನ್ನು ಕುರಿತ ತ್ರಿಪದಿಗಳು ಎತ್ತಿ ತೋರಿಸುತ್ತವೆ. ಅವರ ದುಃಖಾಂತ ಕತೆಯನ್ನು ಯಾವ ಮುಚ್ಚುಮರೆಯಿಲ್ಲದೆ ಜನಪದ ಕವಿ ತನ್ನ ಹಾಡಿನಲ್ಲಿ ಬಿಚ್ಚಿಟ್ಟಿದ್ದಾನೆ. ಅವರ ದುರಂತಕ್ಕೆ ಕಾರಣಗಳನ್ನು ಮತ್ತು ಕಾರಣರಾದವರನ್ನು ಕವಿ ಕಂಡ ದೃಷ್ಟಿ ಅವರನ್ನು ಕುರಿತ ತ್ರಿಪದಿಗಳಲ್ಲಿ ಅಭಿವ್ಯಕ್ತಗೊಂಡಿದೆ.

ಇದೇ ರೀತಿ ಚಂದ್ರಗುತ್ತಿಯ ಅರಸ, ಗರತಿ ಗಂಗವ್ವ ಮತ್ತು ಚೇಡರ ದಾಸಿಮಯ್ಯರನ್ನು ಕುರಿತಂತೆ ಜಾನಪದ ಹಾಡುಗಳಲ್ಲಿ ಬಂದಿರುವ ವಿವರಗಳು ಸಂಶೋಧನೀಯವಾಗಿವೆ. ಆ ವಿವರಗಳನ್ನೊಳಗೊಂಡ ಕಥೆಯ ಸಾರಾಂಶವನ್ನು ಬಿ. ಎಸ್. ಅವರು ಕೊಟ್ಟಿದ್ದಾರೆ. ಅದೇ ರೀತಿ ಜನಪದ ಸೋಬಾನೆಗಳಲ್ಲಿ ಬರುವ ಬಡಗಿ ಮತ್ತು ವಡ್ಡಯ್ಯಗಳನ್ನು ಕುರಿತ ಅಂಶಗಳು ಗಮನೀಯವಾಗಿ, ನವೀನವಾಗಿವೆ. ಜನಪದದ ಪ್ರಕಾರ ವಡ್ಡಯ್ಯ ಬ್ರಹ್ಮನ ಮಗ. ಹಾಗೆಯೇ ಮಕ್ಕಳಾಟದ ಹಾಡು 'ಗುಜಗುಜು ಮಾಪ್ಪರೆ ! ಹಾಡುಗಳಲ್ಲಿ "ನಮ್ಮ ಸಂಸ್ಕೃತಿಯ ಲಗ್ನ ಸಂಸ್ಕಾರದ ಸಾರಸತ್ವವಿದೆ ಅದರಲ್ಲಿ ನಮ್ಮ ಸಂಸಾರದ ಅನುಕರಣವೇ ಬರುವದು" ಎಂದು ಬಿ. ಎಸ್. ಹೇಳಿರುವ ಮಾತು ಚಿಂತನೀಯ.

ಹೋಳಿಯ ಸಂಪ್ರದಾಯದ ಆರಂಭದ ಬಗ್ಗೆ ಪುರಾಣಗಳಲ್ಲಿ ಬರುವ ಕಥೆಗಿಂತ ಜನಪದದ ಹಾಡುಗಳಲ್ಲಿ ಬರುವ ಕಥೆ ವಿಭಿನ್ನವಾಗಿದೆ. ಕೂಡಿದ ಸಭೆಯಲ್ಲಿ ಶಿವನು

ಚೆಲುವನಾರೆಂದು ಸವಾಲು ಹಾಕಿದಾಗ ಏಕೋ ಭಾವದಿಂದ ಪಾರ್ವತಿಯು ಕಾಮಣ್ಣನೇ ತೀರಾ ಚೆಲುವನೆಂದು ಹೇಳುತ್ತಾಳೆ ಅದರಿಂದ ಸಿಟ್ಟಾದ ಶಿವನು ಕಾಮದೇವನನ್ನು ಸುಟ್ಟು ಬಿಟ್ಟನಂತೆ. ಇಲ್ಲಿ ಮಾನವನ ಸಹಜ ಭಾವನೆಗಳನ್ನು ಜನಪದ ಕವಿ ಶಿವನಲ್ಲಿ ಕಂಡಿರುವುದನ್ನು ಗಮನಿಸಬೇಕು.

ಹೀಗೆ ಇಡೀ ಮಾನವ ಜೀವನದ ಪ್ರತಿಬಿಂಬ ಪ್ರತಿಫಲನಗಳನ್ನು ಜನಪದ ಸಾಹಿತ್ಯದಲ್ಲಿ ಕಾಣುತ್ತೇವೆ. ಇಂಥ ಸಾಂಸ್ಕೃತಿಕ ಮೌಲ್ಯಗಳನ್ನೊಳಗೊಂಡ ಆದರೆ, ಶಿಷ್ಟರ ಅಲಕ್ಷ್ಯ, ಅಸಡ್ಡೆ ಮತ್ತು ಅನಾದರಗಳಿಗೊಳಗಾದ ಜನಪದ ಸಾಹಿತ್ಯದ ಶೋಧನ, ಸಂಗ್ರಹಣ, ಸಂಕಲನ ಮತ್ತು ಪ್ರಕಾಶನಗಳಿಗೆ ತಮ್ಮ ಜೀವಮಾನವನ್ನೇ ಮುಡಿಪಾಗಿಟ್ಟ ಡಾ. ಬಿ. ಎಸ್. ಗದ್ದಗಿಮಠ ಅವರು ನಿಜಕ್ಕೂ ಅಭಿನಂದಾರ್ಹರು.

## ೪. ಮಲ್ಲ ಮಲ್ಲಾಣಿ

ಇದೊಂದು ಹಾಡುಗಬ್ಬ. ಡಾ. ಬಿ. ಎಸ್. ಅವರ ಜಾನಪದ ಕಾವ್ಯ ಮಾಲೆಯಲ್ಲಿ ಪ್ರಕಟವಾದ ಮೂರನೆಯ ಕೃತಿ (ಎಪ್ರಿಲ್ ೧೯೫೫). ಇದನ್ನು ಬರೆದು ಹಾಡುತ್ತಿದ್ದವರು, ಬಿ. ಎಸ್. ಅವರ ಅಜ್ಜಿ ಶಿವ ಶಿರಣೆ ಶಾವಂತ್ರಾದೇವಿ. ಅದು, ಕೃತಿಯಲ್ಲಿ ಬರು "ಶಾವಂತ್ರಿ ಶಿವ ಶರಣೆ ಕಾಮ-ಕೋಮಲ ಹಾಡು ಹಗಲಿರುಳು ಸೊಸೆಗೆ ಕಲಿಸಿದಳು ॥ ಶಿ ॥ ಶಿವಗಂಗಾ ಸೊಲ್ಲೆತ್ತಿ ಹಾಡುವಳು ॥ ಶಿ ॥ (ಮಲ್ಲ ಮಲ್ಲಾಣಿ ಪುಟ ೧೨ ಪದ್ಯ ೪) ಎಂಬ ತ್ರಿಪದಿಯಿಂದ ತಿಳಿದು ಬರುತ್ತದೆ. ಇದಕ್ಕೆ ಬೇಂದ್ರೆಯವರ ಮುನ್ನುಡಿ ಇದೆ.

ಬಿ. ಎಸ್. ಅವರು ತಮ್ಮ ಈ ಹಾಡುಗಬ್ಬದ ಕಥೆಯನ್ನು ಮುದ್ರಣಗೊಳಿಸುವ ಮೊದಲೇ ಬೇಂದ್ರೆ ಅವರ ಜೊತೆ ಮಲ್ಲ ಮಲ್ಲಾಣಿಯರ ಕಥೆಯ ಬಗ್ಗೆ ಚರ್ಚಿಸಿದ್ದರಂತೆ. ಆಗ ಅವರು ಹರಿಹರನ ಕಥೆಯಲ್ಲಿ ಇಲ್ಲದ ಒಂದು ಸಾಮಾಜಿಕ ವಿಕಾರ ಈ ಕೃತಿಯ ಅಂಗವಾಗಿ ಬಂದಿದೆ. ಇಂಥ ಕಥೆ ಮುದ್ರಿತವಾಗಿ ಪ್ರಚಾರವಾಗುವುದು ಎಷ್ಟು ಹಿತ ಎಂದಿದ್ದರಂತೆ ಆದರೂ, ಬಿ. ಎಸ್. ಅವರು ಅದನ್ನು ಮುದ್ರಿಸಿ ಮುನ್ನುಡಿ ಬರೆಯಲು ಅವರಿಗೆ ಕೊಟ್ಟರಂತೆ.

ಬೇಂದ್ರೆ ಅವರು ಅದಕ್ಕೆ ಒಪ್ಪಿ ಮುನ್ನುಡಿ ಬರೆದಿದ್ದಾರೆ. ಆರಂಭದಲ್ಲಿ ಬಿ. ಎಸ್. ಅವರ ಜಾನಪದ ಸಂಗ್ರಹ ಕಾರ್ಯವನ್ನು ಶ್ಲಾಘಿಸಿ ಮುದ್ರಿತ ಕಾವ್ಯದಲ್ಲಿ ಕಂಡು ಬರುವ ವಿಭಾಗಗಳು ಮೂಲ ಕೃತಿಯವೋ ಇಲ್ಲವೇ ಈಗ ಬರವಣಿಗೆಯ ರೀತಿಯಲ್ಲಿ ಕಾಣಿಸಿಕೊಂಡಿದೆಯೋ ? ಎಂಬ ಬಗ್ಗೆ ಸಂಶಯ ತಾಳಿದ್ದಾರೆ. ಇಲ್ಲಿ ಮಲುಹಣಿಯ ತಾಯಿ ಪದ್ಮಾವತಿಯ ಮದುವೆ ಕಾಣದೆ ಹಾದರದ ಹಾದಿ ಹಿಡಿದ ಹಾರವರ ಪದ್ಮಕನಾಗಿದ್ದಾಳೆ. ಆಕೆ ಒಬ್ಬ ದೇವದಾಸಿ. ಕಾಶ್ಮೀರದ ಶೈವ ಬ್ರಾಹ್ಮಣನಾದ ಶ್ರೀಮಂತ ಮಲುಹಣ ಪದ್ಮಕನ ಹಾದರಕ್ಕೆ ಹುಟ್ಟಿದ ಮಗಳೊಡನೆ ರತಿ ಬೆಳಸುತ್ತಾನೆ. ಇಟ್ಟ ದುಡ್ಡನ್ನು

ಹಾಳು ಮಾಡಿಕೊಳ್ಳುತ್ತಾನೆ. ಮಲುಹಣೆಯ ತಾಯಿ ಪದ್ಮಕ್ಕ ತನ್ನ ಮಗಳು ಮಲುಹಣೆಯನ್ನು ಮಲುಹಣನಿಂದ ಅಗಲಿಸುತ್ತಾಳೆ. ಅವಳು ತಾಯಿಯ ವಶವರ್ತಿ. ಮಲುಹಣನ ಪ್ರೇಮ, ಪಾಶವನ್ನು ತಂದುಕೊಡುತ್ತದೆ. ಅವಳನ್ನು ಕೂಡಲು ಹಾತೊರೆಯುವ, ಅಲೆದಾಡುವ ಮಲಹಣನ ಚಿತ್ತ ಬಹಳ ಪರಿಣಾಮಕಾರಿಯಾಗಿ ಇಲ್ಲಿ ಬಂದಿದೆ. ತನ್ನ ವಿರಹ ತಾಪದಿಂದ ಬಳಲುತ್ತಿರುವ ಮಲುಹಣನಿಗೆ ಮಲುಹಣೆ ಆಡಿದ ಮಾತೇ ಅವನಿಗೆ ಶಿವ ಬೋಧೆ ತಂದು ಕೊಡುತ್ತದೆ .............. ಮಲುಹಣನಿಗೆ ಶಿವಸಾಕ್ಷಾತ್ಕಾರವಾದ ಮೇಲೆ ಮಲುಹಣ–ಮಲುಹಣೆಯರ ಸಂಬಂಧ ವಾಗುತ್ತದೆಂದು ಕವಿಯತ್ರಿ ಹೇಳಿರುವುದು ವಿಚಾರಣೀಯ. ಅವರಿಬ್ಬರ ಜೀವನ ಸ್ಥಿತಿಯ ಪೂರ್ವ ಭಾಗ ಘಟನಾಂತರಗಳಿಂದ ಕೂಡಿದೆ. ಆದರೆ, ಆ ಮೇಲಿನ ನೂರು ವರ್ಷದ ಜೀವನ, ಸತಿ–ಪತಿಗಳ ಶಿವ ರತಿ ಭೋಗದಲ್ಲಿಯೇ ಕಳೆದು ಹೋಯಿತೆಂದು ತೃಪ್ತಿ ಕೊಟ್ಟುಕೊಳ್ಳ ಬೇಕಾಗುತ್ತದೆ" ಎಂದು ಇಲ್ಲಿ ಹೇಳುವ ಬೇಂದ್ರೆಯವರು ತಮ್ಮ ಮೊದಲಿನ ಅಭಿಪ್ರಾಯ ವನ್ನು ಬದಲಿಸಿಕೊಂಡು ಹೊಸ ರಾಗ ಹಾಡಿರುವುದು ಸುವ್ಯಕ್ತ. ಎಂತಲೆ "ಯಾವ ಭಾವವನ್ನು ಅಂತಃಕರಣ ಪೂರ್ವಕ ಶಿವಾರ್ಪಣ ಮಾಡಿದರೆ ಅದರಿಂದ ಕೈಲಾಸ ಪ್ರಾಪ್ತಿ ಎಂಬ ಮಾತು ಹರಿಹರ ಪೂರ್ವದಿಂದಲೂ ಶೈವ ಜನಮನದಲ್ಲಿ ನೆಲೆಯೂರಿದೆ. ಈ ಮೂಲಕ ಇಂತಹ ಈ ಕಥೆಯನ್ನು ಮತ್ತೇ ನವೀನವಾಗಿ ಹೇಳುವ ಪ್ರೇರಣೆ ಹುಟ್ಟುತ್ತದೆ" ಎಂಬಂತಹ ಮಾತುಗಳನ್ನು ಬೇಂದ್ರೆ ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ.

'ನನ್ನ ನುಡಿ'ಯಲ್ಲಿ ಬಿ. ಎಸ್. ಅವರು, ಬೇಂದ್ರೆ ಅವರ ಮೊದಲಿನ ವಿಚಾರಕ್ಕೆ ಉತ್ತರವೆಂಬಂತೆ "ಈ ಹಾಡುಗಬ್ಬದ ಕವಯತ್ರಿ ಮೂಲ ಕಥೆಯಲ್ಲಿ ಕೆಲವು ಒಡದು ಕಾಣುವ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಆದರೆ, ಕಥಾ ವ್ಯತ್ಯಾಸವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಆ ವ್ಯತ್ಯಾಸ ಅಥವಾ ಮಾರ್ಪಾಡು ಒಂದು ಜಾತಿ ಅಥವಾ ಕುಲದ ಅವಹೇಳನಕ್ಕಾಗಿ ಮಾಡಿದುದಲ್ಲವೆಂಬುದು ಸ್ಪಷ್ಟವಾಗುತ್ತದೆ. ಅದನ್ನು ಬಿ. ಎಸ್. ಅವರು ಮನುಸ್ಮೃತಿಯ "ಅಷ್ಟವರ್ಷೇ ಭವೇತ್‌ಕನ್ಯಾ" ಎಂಬ ಲಗ್ನ ವಿಧಾನದಿಂದ ಭಾರತದ ಮಹಿಳಾ ಸಮಾಜದಲ್ಲಿ ಬ್ರಾಹ್ಮಣ ಸ್ತ್ರೀಯರಿಗಾದ ಅನ್ಯಾಯವನ್ನು ಕಂಡು, ಆ ಕಟ್ಟಳೆಯನ್ನು ವಿರೋಧಿಸಿ ಗೆದ್ದ ಬಸವಣ್ಣನವರ ಸಂಪ್ರದಾಯದ ವೀರಶೈವ ಮಹಿಳೆಯ ಕೂಗು ಅಲ್ಲಿರುವುದೆಂದು" ಬಹಳ ಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ.

ಈ ಹಾಡುಗಬ್ಬದಲ್ಲಿ ಮಲುಹಣೆಯ ಮೂಲ ಹೆಸರು "ಗಂಗಾ–ಜಮುನಾ"ಎಂದೂ ಅವಳ ತಾಯಿಯ ಹೆಸರು ಪದ್ಮಕ್ಕನೆಂದೂ, ಶಿವ ಭಕ್ತ ಮಲುಹಣನ ಸೋಬತಿಯಿಂದ ಗಂಗಾ–ಜಮುನಾ, ಮಲುಹಣೆಯಾದಳೆಂದೂ ಹೇಳಲಾಗಿದೆ.

ಈ ಹಾಡುಗಳನ್ನು ಬರೆದು ಹಾಡಿದ ಶಾವಂತ್ರಾದೇವಿ ಬಿ. ಎಸ್. ಅವರ ತಂದೆ ಸಾವಳಗೆಯ್ಯನ ಚಿಕ್ಕಮ್ಮ ಬಾಲ್ಯದಲ್ಲಿಯೇ ವಿಧವೆಯಾದ ಅವಳು ಶಿವ ಶರಣೆಯಾಗಿ ನೂರು ವರ್ಷ ಬಾಳಿ ೧೯೨೩ರಲ್ಲಿ ತೀರಿಕೊಂಡರು.

ಆಶುಕವಿಯಾದ ಶಿವಶರಣೆ ಶಾವಂತ್ರವ್ವ ಜನಪದದಲ್ಲಿ ಪರಂಪರೆಯಾಗಿ ಬಂದ ಮಲುಹಣಿಯ ಹಾಡನ್ನೂ ಕೇಳಿ ಅದರ ಪಡಿನೆಳಲೆಂಬಂತೆ ತನ್ನ ಅಪ್ರತಿಮ ಪ್ರತಿಭೆಯಿಂದ ರಸಸ್ಪಂದಿಯಾದ ಮಲ್ಲಮಲ್ಲಾಣಿಯ ಹಾಡು ಬರೆದಿದ್ದಾರೆ. ಅವರು ಹಾಡುತ್ತಿದ್ದ ಕೆಲವು ಹಾಡುಗಬ್ಬವನ್ನು ಅವರ ಕೈಯಲ್ಲಿ ನುರಿತು, ಈ ಹಾಡುಗಳನ್ನು ಕಲಿತ ನಾಲ್ಕಾರು ಹೆಣ್ಣು ಮಕ್ಕಳ ಬಾಯಿಂದ ಕೇಳಿ ಅವನ್ನು ಸಂಕಲಿಸಿರುವುದಾಗಿ ಬಿ. ಎಸ್. ಹೇಳಿಕೊಂಡಿದ್ದಾರೆ.

ಹಾಡುಗಬ್ಬಗಳಲ್ಲಿ ಬರುವ ಸೊಲ್ಲು, ಪಲ್ಲವಿಗಳ ಬಗ್ಗೆ, ಅವುಗಳ ಧಾಟಿ ಧರತಿಯ ಬಗ್ಗೆ, ಅವುಗಳ ಸ್ವರೂಪದ ಬಗ್ಗೆ ಬಿ. ಎಸ್. ಅವರು ತಮ್ಮ ಮುನ್ನುಡಿಯಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಮಲುಹಣನ ಕಥೆ ಹರಿಹರನಿಂದ ಮೊದಲುಗೊಂಡು ಬಸವ ಪುರಾಣ, ಪ್ರೌಢದೇವರಾಯನ ಕಾವ್ಯ, ವೃಷಭೇಂದ್ರ ವಿಜಯ, ಶರಣ ಲೀಲಾಮೃತ, ದೀಪಕಲಿಯಾರ ಕಾವ್ಯ – ಇತ್ಯಾದಿ ವೀರಶೈವ ಕಾವ್ಯಗಳಲ್ಲಿ ಬಂದಿರುವುದನ್ನು ಸೂಚಿಸಿದ್ದಾರೆ. 'ಹೊರವಮುಚುಕ' ಭಾಗದಲ್ಲಿ ಹೇಳಿರುವ ವಿಷಯಗಳು ವಿಚಾರಣೀಯವಾಗಿವೆ.

ಈ ಹಾಡುಗಬ್ಬದ ೧) ಜನಸೊಲ್ಲು ೨) ಶಿವಸೊಲ್ಲು ೩) ಧೀರಸೊಲ್ಲು ಭಾಗಗಳಲ್ಲಿ ದೇವದೇವತೆಗಳ, ಶರಣರ ಪ್ರಾರ್ಥನೆ ಸ್ಮರಣೆ ಬರುತ್ತದೆ.

ಇದಾದನಂತರ ಮೂಲ ಕಥೆಯನ್ನು ೧) ಪೀಠಿಕೆ ೨) ಮಲ್ಲಾಣನ ಬೇಟೆ ೩) ಮಲ್ಲ ಮಲ್ಲಾಣಿ ಸೋಬತ ೪) ಶಿವ ದರ್ಶನ ಎಂಬ ನಾಲ್ಕು ಶೀರ್ಷಿಕೆಗಳಡಿ ವಿಂಗಡಿಸಿ, ಕಥೆಯನ್ನು ಮುಂದುವರಿಸಿಕೊಂಡು ಬರಲಾಗಿದೆ.

ಮಹಾತ್ಮರನ್ನು ನೆನೆಯುವ ತ್ರಿಪದಿಗಳಲ್ಲಿ ಕವಯತ್ರಿಯ ವಿಶಾಲ ವ್ಯಾಪಕ ಮನೋಭಾವವಿದೆ. ವೈಷ್ಣವ ಸಂಪ್ರದಾಯದ ಸೀತೆ ದ್ರೌಪದಿಯರು ಈ ಶೈವ ಪ್ರಬಂಧದಲ್ಲಿ ಗೌರವದಿಂದ ಸೇರ್ಪಡೆಯಾಗಿರುವುದು ಗಮನಿಸಬೇಕಾದ ಅಂಶ.

ಈ ಹಾಡುಗಬ್ಬದ ತುಂಬ ಬರುವ ಸೊಲ್ಲಿನ ವೈವಿಧ್ಯ ಮತ್ತು ಸೊಗಸು ಹಾಡನ್ನು ಕವಿಯಾಗಿ ಕೇಳಲು ಸಾಧ್ಯವಾಗಿದ್ದು. ಇಲ್ಲಿಯ ಕೆಲವೊಂದು ಸೊಲ್ಲುಗಳ ಔಚಿತ್ಯ ಜೇನಿನ ಹನಿಗಳಂತಿರುವ ಅವುಗಳ ರಸೋದ್ದೀಪಕತೆ ನಮ್ಮನ್ನು ಕಲ್ಪನಾ ಲೋಕದಲ್ಲಿ ತೇಲಿಸುತ್ತದೆ.

ಮಲುಹಣ–ಮಲುಹಣೆಯರ ಪರಸ್ಪರ ಅನುರಾಗ, ಅವರ ಪ್ರಖರ ಲಾವಣ್ಯ, ಶಿವ ಪೂಜೆಯ ಸಂದರ್ಭದಲ್ಲಿ ಮಲುಹಣ ಹೂಗಳನ್ನು ಎತ್ತುವಾಗ ಅವುಗಳಿಗೆ ಶಿವಪೂಜೆಯ ಸಂದರ್ಭದಲ್ಲಿ ಆಮಂತ್ರಿಸುವ ಆ ಆತ್ಮೀಯ ಭಾವ, ಕಾವ್ಯಮಯತೆ ಆಸ್ವಾದಾರ್ಹವಾಗಿದೆ.

**೫. ಕುಮಾರರಾಮನ ದುಂದುಮೆ :**

ಜನಪದ ಹಾಡುಗಳ ಸಂಗ್ರಹದಲ್ಲಿ ಸಂಪೂರ್ಣ ತೊಡಗಿಕೊಂಡಿದ್ದ ಬಿ. ಎಸ್.

ಅವರಿಗೆ ಕುಮ್ಮಟ ದುರ್ಗದ ಕುಮಾರ ರಾಮನಿಗೆ ಸಂಬಂಧಿಸಿದಂತೆ ಅನೇಕ ಹಾಡುಗಳು, ಕತೆ, ಬಯಲಾಟ, ಗಾದೆ, ಒಗಟು ಹಾಗೂ ಸೊಲ್ಲುಗಳು ದೊರೆಯುತ್ತ ಹೋದಂತೆ ಅವನ ಬಗ್ಗೆ ಕುತೂಹಲಿಗಳಾದ ಅವರು ಕುಮಾರ ರಾಮನನ್ನು ಕುರಿತು ಸಂಶೋಧನೆಗೆ ತೊಡಗಿದರು. ತತ್ಫಲವಾಗಿ ಅವರಿಗೆ ಕುಮಾರ ರಾಮನ ಬಗ್ಗೆ ಎರಡು ಕಾವ್ಯಗಳು ವಿದೇಶಿ ಪ್ರವಾಸಿಗರ ವರದಿಗಳು ಹಾಗೆಯೇ ಶಾಸನಗಳೂ ದೊರೆತವು. ಅವು ಒಳಗೊಂಡಿರುವ ಐತಿಹಾಸಿಕ ಅಂಶಗಳನ್ನು ಆಧರಿಸಿ, ನಾಲ್ವತ್ತು ಪುಟಗಳಷ್ಟು ವಿಸ್ತಾರವಾಗಿ ತಮ್ಮ ಮಹಾ ಪ್ರಬಂಧದಲ್ಲಿ ಕುಮಾರ ರಾಮನನ್ನು ಕುರಿತು ಚರ್ಚಿಸಿರುವುದಾಗಿ ಪ್ರಸ್ತುತ ಕೃತಿಯ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ಸಂಶೋಧನೆಯ ಸಂದರ್ಭದಲ್ಲಿ ಅವರು ಕಂಡುಕೊಂಡ ಇನ್ನೊಂದು ಮಹತ್ವದ ಅಂಶವೆಂದರೆ, ಕುಮಾರ ರಾಮನನ್ನ ಕುರಿತು ಹೊಗಳುವವರು ಮತ್ತು ಹಾಡುವವರು ಹೆಚ್ಚಾಗಿ ಲಿಂಗಾಯತರೆಂಬುದು. ಲಿಂಗಾಯತರ ಓದಿಸುವ ಮಠಗಳ ಪತ್ರಗಳಲ್ಲಿ ಕುಮಾರರಾಮನನ್ನು ಕುರಿತಂತೆ ಕೆಲವು ಸಾಂಗತ್ಯ ಪದ್ಯಗಳಿರುವುದನ್ನು ಬಿ. ಎಸ್. ಅವರು ನೋಡಿದ ಬಗ್ಗೆ ತಿಳಿಸಿದ್ದಾರೆ. ತಮ್ಮ ಭಾಗದ ಒಕ್ಕಲಿಗರು ಕುಮಾರರಾಮನನ್ನು ಹಂತಿಯ ಹಾಡುಗಳಲ್ಲಿ, ಹೆಣ್ಣು ಮಕ್ಕಳು ತಮ್ಮ ಬೀಸುವ ಹಾಗೂ ಸೋಬಾನೆ ಹಾಡುಗಳಲ್ಲಿ ಹಾಡುತ್ತಿರುವುದರತ್ತಲೂ ನಮ್ಮ ಗಮನ ಸೆಳೆದಿದ್ದಾರೆ. ಕುಮಾರ ರಾಮನನ್ನು ಕುರಿತ ಹಾಡುಗಬ್ಬಗಳನ್ನು ಜನರೇ ಮೈಮರೆತು ಹಾಡುವ ಮತ್ತು ಗೊಂದಲಿಗರು ತಾಳ ಮದ್ದಲಗಳ ಹಿನ್ನೆಲೆಯಲ್ಲಿ ಅವನ್ನು ಹಾಡುತ್ತ ಜನರನ್ನು ರಂಜಿಸುವ ಪ್ರಸಂಗಗಳನ್ನು ತಾವು ಸ್ವತಃ ಕಂಡು ಆನಂದಿಸಿರುವ ಬಗ್ಗೆಯೂ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ್ದಾರೆ.

ಕನ್ನಡಿಗರ ಜೀವನ ಮೌಲ್ಯಗಳಲ್ಲಿ ಆದರ್ಶಪ್ರಾಯವಾದ ವೀರ ಮತ್ತು ಶೌಚರ್ಯಗಳನ್ನು ಪ್ರತಿನಿಧಿಸುವ ಕುಮಾರರಾಮನನ್ನು ಕನ್ನಡ ಜನಪದರು ಕಂಡ ಬಗೆಯನ್ನು ತಿಳಿಯಲು ಸಹಾಯಕವಾಗಬಲ್ಲ 'ಕುಮಾರರಾಮನ ದುಂದುಮೆ' ಎಂಬ ಚಿಕ್ಕ ಹಾಡುಗಬ್ಬವನ್ನು ಮೈಸೂರು ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ನಾಟಕ ಪತ್ರಿಕೆ'ಯಲ್ಲಿ ಬಿ. ಎಸ್. ಪ್ರಕಟಿಸಿ, ತದನಂತರ ಅದನ್ನು ತಮ್ಮ 'ಜಾನಪದ ಕಾವ್ಯಮಾಲೆ'ಯ ನಾಲ್ಕನೇಯ ಗ್ರಂಥವಾಗಿ ಪ್ರಕಾಶಪಡಿಸಿದ್ದಾರೆ. ಇದು ಅವರ ಐದನೆಯ ಸಂಕಲನ.

ದುಂದುಭಿ ಮತ್ತು ದುಂದುಮೆ ಹಾಡುಗಳನ್ನು ಕುರಿತು ಬಹಳ ಉಪಯುಕ್ತ ಮಾಹಿತಿಯನ್ನು ಬಿ. ಎಸ್. ಅವರು ಒದಗಿಸಿರುವುದು ತುಂಬಾ ಮಹತ್ವದ್ದು, ಅವರ ಅಭಿಪ್ರಾಯದ ಪ್ರಕಾರ ದುಂದುಭಿ ಮತ್ತು ದುಂದುಮೆ ಶಬ್ದಗಳ ಅರ್ಥ ಒಂದೇ. ಪರಸಿ ಕೂಡಿದಾಗ ಒಂದು ವಿಶಿಷ್ಟ ಉದ್ದೇಶದ ಸಾಧನೆಗಾಗಿ ಹಾಡುವ ಒಂದು ಚಿಕ್ಕ ಹಾಡುಗಬ್ಬವಿದು. ಇದರಲ್ಲಿ ನಾಡಿನ ಶರಣರ, ಸಾಧುಸಂತರ ಇಲ್ಲವೆ ವೀರರ ಚರಿತ್ರೆ ಬರುತ್ತದೆ. ಕೆಲವೊಮ್ಮೆ ಈ ಹಾಡುಗಳಲ್ಲಿ ಸಾಮಾಜಿಕ, ಧಾರ್ಮಿಕ ಇಲ್ಲವೇ ಐತಿಹಾಸಿಕ

ಘಟನೆಗಳು ಕೂಡ ನಿರೂಪಣೆಗೊಂಡಿರುವುದುಂಟು. ಆಯಾ ಪ್ರದೇಶದ ಜನಮನವನ್ನು ಇದು ಬಹುವಾಗಿ ಆಕರ್ಷಿಸುತ್ತದೆ. ಅದಕ್ಕೆ ಕಾರಣ, ಹಾಡಲ್ಲಿ ಬರುವ ಏರಿಳಿವಿನ ಲಯ ವಿನ್ಯಾಸ ವಾದ್ಯ ಸಂಯೋಜನೆ ಮತ್ತು ತಾಳಮೇಳಗಳ ಸಂಯೋಗ. ಈ ಜನಪದ ಕಾವ್ಯ ಪ್ರಕಾರದಲ್ಲಿ ಬಳಕೆಗೊಂಡಿರುವ ಛಂದಸ್ಸು ಕಥೆಯ ಕುಕ್ಕೋಟಕ್ಕೆ ತುಂಬಾ ಸಹಾಯಕಾರಿಯಾಗಿದ್ದು, ಹುಸಿ ಪೆಟ್ಟುಗಳ ಸಂದರ್ಭದಲ್ಲಿ ಹಾಡುಗರು ಎತ್ತುವ ಕೋಟು ಕೇಳುಗರನ್ನು ಮಂತ್ರಮುಗ್ಧವಾಗಿಸುತ್ತದೆ.

ದುಂದುಮೆಯ ಬಗ್ಗೆ ಯಾವ ಪ್ರಾಚೀನ ಛಂದೋಗ್ರಂಥಗಳಲ್ಲಿ ಉಲ್ಲೇಖ ಬರುವುದಿಲ್ಲ. ಯಾವ ಶಿಷ್ಟ ಕನ್ನಡ ಕವಿಯೂ ಇದನ್ನು ತನ್ನ ಕಾವ್ಯದ ಮಾಧ್ಯಮವನ್ನಾಗಿ ಮಾಡಿಕೊಂಡಿಲ್ಲ. ಜನಸಾಮಾನ್ಯರ ಸೃಷ್ಟಿಯಾದ ಇದು ಸಹಜತೆ ಹಾಗೂ ಸರಳತೆಗಳಿಂದ ಕೂಡಿದ್ದು, ಅಂಶಲಯದಲ್ಲಿ ವಿನ್ಯಾಸಗೊಂಡಿರುತ್ತದೆ.

ಕಿತ್ತೂರು ದೊರೆಗಳನ್ನು ಬಿಟ್ಟರೆ ಬೇರಾವ ಅರಸರೂ ಈ ದುಂದುಮೆ ಛಂದೋಬಂಧದಲ್ಲಿ ಬರೆದ ಕವಿಗಳಿಗೆ ಆಶ್ರಯ ಕೊಟ್ಟಂತೆ ತೋರುವುದಿಲ್ಲ. ದುಂದುಮೆ ದುಂದುಭಿ ಲಾವಣಿ ರಿವಾಯತ ಇತ್ಯಾದಿ ಹಾಡುಗಳೂ ಹಾಡುಗಬ್ಬ ಪ್ರಕಾರಗಳೂ ಕಿತ್ತೂರು ನಾಡು ಕನ್ನಡಕ್ಕೆ ಕೊಟ್ಟ ಒಂದ ವಿಶೇಷ ಕಾಣಿಕೆ. ಕಿತ್ತೂರು ಅರಸರ ಕಾಲದಲ್ಲಿ ಈ ಜನಪದ ಕಾವ್ಯ ಪ್ರಕಾರ ಜನಸಾಮಾನ್ಯರಿಂದ ತನ್ನೆಲ್ಲ ಆಯಾಮಗಳೊಂದಿಗೆ ಅವತರಣಗೊಂಡಿದೆ ಎಂಬ ಡಾ. ಬಿ. ಎಸ್. ಅವರ ಅಭಿಪ್ರಾಯ ಗಮನೀಯವಾಗಿದೆ.

ದುಂದುಭಿಯೇ ಹರವಾಗಿ ದುಂದುಮೆಯಾಗಿದೆ ಎನ್ನುವ ಅವರು, ಆರು, ಒಂಭತ್ತು, ಹದಿನೈದು ಸಾಲಿನ ಚೌಕಗಳಲ್ಲಿ ಅದು ಕಾಣಿಸಿಕೊಂಡಿರುವುದನ್ನು ತಿಳಿಸುತ್ತ, ಒಂಭತ್ತ ಸಾಲಿನ ಚೌಕದ ಐದನೆಯ ಸಾಲು, ಹದಿನೈದು ಸಾಲಿನ ಚೌಕದ ಏಳನೆಯ ಸಾಲು ಪಾತವಾದಾಗ, ಮೂರು ಕಿರು ಸಾಲಾಗಿ ನಿಲ್ಲುವುವು. ಇಲ್ಲಿಂದಲೇ ಲಾವಣಿ ಹಾಗೂ ರಿವಾಯತುಗಳು ಆರಂಭವಾದುವೆಂದು ಹೇಳುವ ಅವರ ಮಾತು ಪರಿಶೀಲನಾರ್ಹವೆನಿಸುತ್ತದೆ. ದುಂದುಭಿಯ ಛಂದೋಬಂಧವನ್ನು ಕುರಿತು ಇನ್ನೂ ಕೆಲವು ಮಹತ್ವಪೂರ್ಣ ಮಾತುಗಳನ್ನು ಬಿ. ಎಸ್. ಅವರು ತಮ್ಮ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. 'ಲಾವಣಿ' ಪ್ರಕಾರದ ಬಗ್ಗೆ ಅವುಗಳನ್ನು ಹಾಡುವವರ ಬಗ್ಗೆ ಅವರ ಕುಣಿತದ ಬಗ್ಗೆ, ಅವರು ಬಳಸುವ ವಾದ್ಯಗಳ ಬಗ್ಗೆ ಅವರ ಪ್ರಸ್ತಾವನೆಯಲ್ಲಿ ಅನೇಕ ವಿವರಗಳು ಬರುತ್ತವೆ. ಲಾವಣಿಯ ಮೇಳಗಳನ್ನು ಕುರಿತಂತೆ ಕೆಲವು ಮಾತುಗಳನ್ನು ಅಲ್ಲಿ ಕಾಣುತ್ತೇವೆ. ಅವುಗಳ ಕಾಲದ ಬಗ್ಗೆಯೂ ಬಿ. ಎಸ್. ಅವರು ಚರ್ಚಿಸಿದ್ದಾರೆ. ಉತ್ತರ ಕರ್ನಾಟಕದ ಈ ಭಾಗದಲ್ಲಿ ದುಂದುಭಿ ದುಂದುಮೆಗಳ ಸೊಲ್ಲು ಬಳಸಿ ಹೋಳಿಯ ಪದಗಳನ್ನು ಹಾಡುವ ಪರಿಪಾಠವಿರುವುದನ್ನು ಸೂಚಿಸುವ ಬಿ. ಎಸ್. ಅವರು ಆ ಹೋಳಿಯ ಪದಗಳಲ್ಲಿ ಅಶ್ಲೀಲ ಪ್ರವೇಶಿಸಿರುವತ್ತಲೂ ನಮ್ಮ ಗಮನ ಸೆಳೆದಿದ್ದಾರೆ.

ಅದಕ್ಕೆ ಕಾರಣ, ಮರಾಠಿ 'ತಮಾಷಾ'ಗಳ ಪ್ರಭಾವವೆಂದು ಹೇಳುವ ಅವರ ಮಾತಿನಲ್ಲಿ ಸತ್ಯಾಂಶವಿದೆ.

ಪ್ರಸ್ತುತ ಕುಮಾರ ರಾಮನ ದುಂದುಮೆಯನ್ನು ಬರೆದವನು ಗೋಕಾವಿಯ 'ಗುರುವರ ಸಿದ್ಧ ಸೇವಕ' ಎಂಬುದು ಕೃತಿಯ ಕೊನೆಯಲ್ಲಿ ಬರುವ ಪದ್ಯದಿಂದ ತಿಳಿದು ಬರುತ್ತದೆ. "......... ಅಂದು ಬರುತಿರೆ ಮಹಾಲಿಂಗಪುರದೊಳವನು ವಸ್ತಿ ಇರುತಿರಲು ರಾಮನಾಟವ ನೋಡಿದನು ಇದರ ಚರತನ ನೋಡಿ ಕವಿತೆ ಬರೆದನು । ರಸಿಕರು ಅರತುಳ್ಳ ರಸಿಕರು ಕೇಳಿರಿ ಲಾಲಿಸಿದನು" ಎಂಬ ಆ ಹಾಡನ್ನು ಮಹಾಲಿಂಗಪುರದ ಸಮೀಪದಲ್ಲಿರುವ ಬುದ್ನಿ ಗ್ರಾಮದಲ್ಲಿ ಮತ್ತು ಗೋಕಾವಿಯ ಸಮೀಪದ ಮಣ್ಣೂರು ಕೇಳಿ ಸಂಗ್ರಹಿಸಿರುವುದಾಗಿ ತಿಳಿಸಿದ್ದಾರೆ.

'ಕುಮಾರ ರಾಮನ ದುಂದುಮೆ' ಕೃತಿಯ ಕಥಾಸಾರ ಸಂಕ್ಷಿಪ್ತವಾಗಿ ಹೀಗಿದೆ:

ಆರಂಭದಲ್ಲಿ, ಗುರು ಶಿವ ಪಾರ್ವತಿ ಗಣಪತಿ ಗುಹ ವೀರಭದ್ರ, ಹರಿಶರಣರ ಸ್ತುತಿ ಬರುತ್ತದೆ. ತದನಂತರ ಬಾಣಂತಿಯಾಗಿದ್ದ ಪದ್ಮಿನಿಗೆ ಅವಳ ದೂತಿಯರು, ಕುಮಾರ ರಾಮನು ಅಳಿದನೆಂದು ಹೇಳಿದಾಗ ಅವಳು ದುಃಖಿಸುವ ಘಟನೆಯಿಂದ ಕಥೆ ಆರಂಭವಾಗುತ್ತದೆ.

ಕುಮ್ಮಟ ನಗರ – ದೊರೆ ಕಂಪಿಲರಾಯ – ಅರಸಿ ಹರಿಯಾಲಮ್ಮ – ಕರ ಚೆಲುವಿ ರತ್ನಿಯನ್ನು ದೊರೆ ಮಹಲಿನಲ್ಲಿ ಇಟ್ಟಿದ್ದು – ಮಂತ್ರಿ ಬೈಚಪ್ಪ – ರಾಜಧಾನಿಯ ವರ್ಣನೆ – ದೊರೆಗೆ ಮಕ್ಕಳಿಲ್ಲದ ಚಿಂತೆ – ಜಂಗಮನೊಬ್ಬ ಬಂದು ಫಲ ಪ್ರಸಾದ ಕೊಟ್ಟಿದ್ದು – ಅರಸಿ ಹಣ್ಣಿನ ತಿರುಳನ್ನು, ದಾಸಿ ತೊಗಟೆಯನ್ನು, ಕತ್ತೆಯು ಬೀಜವನ್ನು ತಿಂದದ್ದು – ಹರಿಯಾಲಿಗೆ ಕುಮಾರ ರಾಮ, ದಾಸಿಗೆ ಹೋಲ್ಕೀರಾಮ ಮತ್ತು ಕತ್ತೆಗೆ 'ಬೊಲ್ಲೆ' ಎಂಬ ಕುದುರೆ ಹುಟ್ಟಿದ್ದು – ಕುಮಾರರಾಮನ ಬಾಲ್ಯ, ಹರೆಯ, ವಿದ್ಯಾಭ್ಯಾಸ – ರಾಣಿ ಹರಿಯಾಲಳ ಅಣ್ಣ ಬೈಚಪ್ಪ ಮಂತ್ರಿಯ ಮಗಳು ರಾಮಲದೇವಿಯ ಜೊತೆ ಕುಮಾರ ರಾಮನ ವಿವಾಹ – ಹೋಲ್ಕೀ ರಾಮನೂ ಪದ್ಮಿನಿಯನ್ನು ವಿವಾಹವಾದದ್ದು – ಕ್ಷಾತ್ರ ವಿದ್ಯೆ, ಕುದುರೆ ಸವಾರಿಯಲ್ಲಿ ಪರಿಣತಿ ಪಡೆದ ಕುಮಾರ ರಾಮ ನೀರಾಟವಾಡಿದ್ದು – ಹೋಲ್ಕೀರಾಮನ ಹೆಂಡತಿ ಪದ್ಮಿನಿಗೆ ಗಂಡು ಮಗು ಹುಟ್ಟಿದ್ದು –

ಗೆಳೆಯರೊಡಗೂಡಿ ಚೆಂಡನ್ನು ಆಡಲು ಬಯಸಿದ ರಾಮ ತಾಯಿ ಹರಿಯಾಲ ದೇವಿಯ ಬಳಿ ಹೋಗಿ ಮುತ್ತಿನ ಚೆಂಡನ್ನು ಕೊಡಲು ಆಗ್ರಹಿಸಿದ್ದು – ಪೂಜಿಸುವ ಚೆಂಡನ್ನು ಆಡಲು ಬಳಸಿದರೆ ಅನಾಹುತವಾಗುವುದೆಂದು ಉದಾಹರಣೆ ಕೊಟ್ಟು ಹರಿಯಾಲಮ್ಮ ಮಗನಿಗೆ ನೀಡಿದ ವಿವರ – ಮುತ್ತಿನ ಚೆಂಡನ್ನು ನೋಡಿದ ಹೆಣ್ಣಿನ ಮನ ಚಂಚಲವಾಗುವುದೆಂದು ತಿಳಿಸಿ ತನ್ನ ಕುತ್ತಿಗೆ ಕೊಯ್ದು ಚೆಂಡನ್ನು ಒಯ್ಯಲು

ಹೇಳಿದ್ದು – ಪರನಾರೀ ಸೋದರನಾದ ತನ್ನ ಮನ ಬೇರೆ ಹೆಣ್ಣನ್ನು ಬಯಸದೆಂದು ರಾಮ ವಚನ ಕೊಟ್ಟು ಶಿವನಾಣೆಯಿಟ್ಟದ್ದು – ಹರಿಯಾಲದೇವಿ

ರತ್ನಾಜಿಯ ಮನೆಯ ವಿಶಾಲ ಅಂಗಳದಲ್ಲಿ ಚೆಂಡಾಟ – ರಾಮನ ಹೊಡೆತಕ್ಕೆ ಚೆಂಡು ರತ್ನಾಜಿಯ ನಡು ಮನೆಯಲ್ಲಿ ಹೋಗಿ ಬಿದ್ದದ್ದು – ಯಾರಿಗೂ ಚೆಂಡನ್ನು ಕೊಡದ ರತ್ನಾಜಿ ಮನಸ್ಸಿನಿಂದ ಬರಲು ತಿಳಿಸಿದ್ದು ರಾಮನನ್ನು ನೋಡಿ ಅವಳಲ್ಲಿ ಮೋಹವುಂಟಾಗಿ ತನ್ನನ್ನು ಕೂಡುವಂತೆ ಒತ್ತಾಯಿಸಿ ಅವನನ್ನು ಅಪ್ಪಿಕೊಳ್ಳಲು ಬಂದಾಗ ಅವಳ ಕೈಯಲ್ಲಿದ್ದ ಚೆಂಡನ್ನು ರಾಮ ತೆಗೆದುಕೊಂಡು ಹೋದದ್ದು – ಸಿಟ್ಟಿಗೆದ್ದ ರತ್ನಾಜಿ ತನ್ನ ಮೈಯನ್ನೆಲ್ಲ ಪರಚಿಕೊಂಡು ತನ್ನ ಮಾನ ಹಾನಿ ಮಾಡಲು ಬಂದನೆಂದು ಕಂಪಿಲರಾಯನಿಗೆ ದೂರಿದ್ದು – ಕುಪಿತನಾದ ಕಂಪಿಲರಾಯ, ಕುಮಾರರಾಮನನ್ನು ಕೊಲ್ಲುವಂತೆ ಮಂತ್ರಿ ಬೈಚಪ್ಪನಿಗೆ ಆಜ್ಞಾಪಿಸಿದ್ದು – ಬೇರೆ ದಾರಿ ಕಾಣದೆ ಕುಮಾರರಾಮನ ಶಿರಚ್ಛೇದ ಮಾಡಲು ಅವನನ್ನು ನಟ್ಟಡುವಿಗೆ ಕರೆದೊಯ್ದದ್ದು – ರಾಮನ ಬದಲಾಗಿ ಅವನನ್ನೇ ಹೋಲುವ ತನ್ನನ್ನು ಕೊಲ್ಲುವಂತೆ ಹೋಲ್ಕೀರಾಮ ಬೇಡಿಕೊಂಡದ್ದು – ಹೋಲ್ಕೀರಾಮ ಹಾಗೂ ಕುಮಾರರಾಮರ ಮಧ್ಯೆ ನಡೆದ ಸಂವಾದ – ತಡವಾಗುವುದೆಂದು ಕುಮಾರ ರಾಮನನ್ನು ಹಿಡಿದೆಳದು ಬೈಚಪ್ಪ ಅವನ ಶಿರಚ್ಛೇದನಕ್ಕೆ ಸಿದ್ಧನಾದಾಗ ಹೋಲ್ಕೀ ರಾಮನು ಮಂತ್ರಿ ಬೈಚಪ್ಪನನ್ನೇ ತಾನು ಕೊಲ್ಲುವುದಾಗಿ ಆರ್ಭಟಿಸಿ ತನ್ನನ್ನೇ ಕೊಲ್ಲುವಂತೆ ರಾಮಲಿಂಗನ ಆಣೆಯಿಟ್ಟದ್ದು – ಆಗ ಬೈಚಪ್ಪ ಕುಮಾರ ರಾಮನನ್ನು ಅಡವಿಯಲ್ಲಿ ಬಚ್ಚಿಟ್ಟು ಹೋಲ್ಕೀರಾಮನ ತಲೆ ಕಡಿದು ಅದನ್ನು ರಾಜನಿಗೆ ತೋರಿಸಿ, ಭಾರವಾದ ಮನದಿಂದ ಮನೆಗೆ ಬಂದು ಮಲಗಿದ್ದು – ಪದ್ಮಿನಿಗೆ ಸುದ್ದಿ ತಿಳಿದಾಗ ಅವಳ ಗೋಳಾಟ – ಗಂಡನನ್ನು ಕೊಂದ ಮಂತ್ರಿಯನ್ನು ಕೊಲ್ಲಲು ಪದ್ಮಿನಿ ನುಗ್ಗಿ ಬಂದಾಗ, ಅವನು ನಡೆದ ಘಟನೆಯನ್ನು ಅವಳಿಗೆ ತಿಳಿಸಿ, ಒಡೆಯನಿಗಾಗಿ ತಾನೇ ತನ್ನ ತಲೆಯನ್ನು ಕೊಟ್ಟ ಹೋಲ್ಕೀರಾಮನ ಸ್ವಾಮಿ ಭಕ್ತಿಯನ್ನು ಕೊಂಡಾಡಿ ತನ್ನ ಸಂಪತ್ತನ್ನೆಲ್ಲ ಅವಳಿಗೆ ಕೊಟ್ಟು ರಕ್ಷಿಸುವುದಾಗಿ ಆಶ್ವಾಸನೆ ಇತ್ತದ್ದು –

ಇವೆಲ್ಲ ಘಟನೆಗಳು ಒಂದರ ಮೇಲೊಂದರಂತೆ ತುಂಬಾ ಪ್ರಭಾವ ಪೂರ್ಣವಾಗಿ ಇಲ್ಲಿ ಮೂಡಿ ಬಂದಿವೆ. ಇಲ್ಲಿ ಕೊಟ್ಟಿರುವುದು ಕಥೆಯ ಹಂದರ ಮಾತ್ರ. ಕೃತಿಯನ್ನು ಮನವಿಟ್ಟು ಓದುತ್ತ ಹೋದಾಗ, ಅಲ್ಲಿ ಹಾಸು ಹೊಕ್ಕಾಗಿ ಬಂದಿರುವ ಜನಪದೀಯ ಅಂಶಗಳು, ರಸಸ್ಪಂದಿಯಾದ ವಿವಿಧ ಸನ್ನಿವೇಶಗಳು ನಮ್ಮನ್ನು ಮಂತ್ರ ಮುಗ್ಧಗೊಳಿಸುತ್ತವೆ. ಗ್ರಾಮೀಣ ಪ್ರತಿಭೆ ತನ್ನ ಕರಾಮತ್ತನ್ನು ತೋರಿರುವ ರೀತಿ ನಿಜಕ್ಕೂ ಇಲ್ಲಿ ಆಶ್ಚರ್ಯಕರವಾಗಿದೆ.

### ೬. ಲೋಕ ಗೀತೆಗಳು :

ಇದು ಬಿ. ಎಸ್. ಅವರು ಸಂಗ್ರಹಿಸಿದ ಜನಪದ ಹಾಡುಗಳ ಆರನೆಯ

ಸಂಕಲನ. ಇದನ್ನು ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು ಪ್ರಕಟಿಸಿದೆ (ಕ್ರಿ. ಶ. ೧೯೭೦). ಇದೇ ಇಲಾಖೆಯ ಎರಡು ಸಾವಿರ ರೂಪಾಯಿಗಳ ಬಹುಮಾನವೂ ಈ ಸಂಕಲನಕ್ಕೆ ಬಂದಿರುವುದು ಒಂದು ವಿಶೇಷ. ಇದರಲ್ಲಿ ಕನ್ನಡ 'ಸೋಬಾನ'ಗಳು ಮತ್ತು 'ಕೋಲು ಪದ'ಗಳು ಎರಡು ಮುಖ್ಯ ಭಾಗಗಳಿವೆ.

ಸೋಬಾನಗಳನ್ನು ಮತ್ತೆ ೧. ಮದುವೆಯ ಸೋಬಾನಗಳು ೨. ಮಂಗಲ ಸೋಬಾನಗಳು ಎಂದು ಎರಡು ವಿಧವಾಗಿ ವಿಂಗಡಿಸಿ, ಆಯಾ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ತಾವು ಸಂಗ್ರಹಿಸಿದ ಜನಪದ ಹಾಡುಗಳನ್ನು ಅಳವಡಿಸಿದ್ದಾರೆ.

'ಮದುವೆಯ ಸೋಬಾನಗಳು' ಭಾಗದ ಆರಂಭದಲ್ಲಿ ಬರುವ 'ಸೋಬಾನ' ಹುಟ್ಟಿದ್ದನ್ನು ತಿಳಿಸುವ ಎರಡು ಮತ್ತು 'ಸೋಬಾನದಾರುತಿ' ಎಂಬ ಒಂದು – ಹೀಗೆ ಮೂರು ಹಾಡುಗಳನ್ನು ಬಿಟ್ಟರೆ ತದನಂತರದ ಹಾಡುಗಳಲ್ಲಿ : ಹಾಸಕ್ಕಿ ಹಾಕುವುದು, ಒರಳ ಕಲ್ಲು ಪೂಜೆ ಮಾಡುವುದು, ಬೀಗರನ್ನು ಇದಿರುಗೊಳ್ಳುವುದು, ಅರಿಷಿಣ ಹಚ್ಚುವುದು, ಹಾಲಗಂಬ–ತಾಳಿ–ಐರಣಿ–ಬಾಸಿಂಗ–ದಂಡೆ ಇತ್ಯಾದಿಗಳನ್ನು ತರುವುದು, ಸುರಗಿ ಸುತ್ತುವುದು, ಬೀಗ ಬೀಗರು ಪರಸ್ಪರರನ್ನು ಹಾಸ್ಯ ಮಾಡುವುದು, ಅಕ್ಕೀಕಾಳು ಹಾಕುವುದು, ಕಾಲು ಹಿಡಿಯುವುದು, ಅಡಕಿ ಆಡುವುದು, ಕಾಲು ತೊಳೆಯುವುದು, ಮೆರವಣಿಗೆ ತೆಗೆಯುವುದು, ಹೆಣ್ಣೊಪ್ಪಿಸುವುದು – ಇವೇ ಮೊದಲಾದ ಮದುವೆಯ ಇನ್ನೂ ವಿವಿಧ ಆಚರಣೆಗಳಿಗೆ ಸಂಬಂಧಿಸಿದಂತೆ ಇರುವ ಹಾಡುಗಳನ್ನು ಸೇರಿಸಲಾಗಿದೆ.

'ಮಂಗಲದ ಸೋಬಾನ' ಹಾಡುಗಳಲ್ಲಿ, ಹೆಣ್ಣ ಮಗಳು ಮೈನೆರೆದಾಗ, ಅವಳ ಉಡಿ ತುಂಬುವಾಗ, ಅವಳಿಗೆ ಗರ್ಭಿಣಿಯ ಬಯಕೆಗಳು ಉಂಟಾದಾಗ, ಅವಳು ಬೇನೆ ತಿನ್ನುವಾಗ, ಅವಳು ಹಡೆದ ಮಗುವನ್ನು ತೊಟ್ಟಿಲಲ್ಲಿ ಹಾಕುವಾಗ, ಜನಪದರು ಹಾಡುವ ಇನ್ನೂ ಹಲವಾರು ಹಾಡುಗಳನ್ನು ಸೇರಿಸಲಾಗಿದೆ. ಜೋಗುಳ ಹಾಡುಗಳಲ್ಲಿ ಅಲ್ಲಮಪ್ರಭುದೇವ, ಕೃಷ್ಣ, ಚೆನ್ನಬಸವ, ಮಾನಯ್ಯ, ಕೋಟ್ಯಾಳ, 'ಮುಗತಂಕಾರ' – ಇವರ ಹಾಡುಗಳಿವೆ.

'ಕನ್ನಡ ಕೋಲು ಪದಗಳು' ಭಾಗದಲ್ಲಿ ಗೌರಿಯನ್ನು ಕರೆಯಲು ಬಂದರು, ಗೌರಿ–ಗಂಗೆಯರ ಜಗಳ, ಶಿವನ ಭಿಕ್ಷಾಟನೆ, ಗೌರಿ–ಗಂಗೆಯರ ಸಂವಾದ (೮೫ ಪದ್ಯಗಳು), ಶಿವ–ಗೌರಿ–ಗಂಗೆಯರ ಸಂಸಾರ, ಗೌರಿ–ಗಂಗೆಯರ ಬಳೆ, ಸೀಗಮ್ಮ ಶಿವ–ಗೌರಿ ಸಂಭಾಷಣೆ, ಶಿವ–ಗೌರಿ ವಾದ, ಚೆಲುವಿ ಗೌರಿ, ಶಿವ ಸಿಂಪಿಗ, ಶಿವ ಕೊರವಂಜಿ, ಹರ–ಗಿರಿಜೆಯರ ಮೋಹದ ವಾದ, ಗೌರಿ–ಗಂಗೆಯರ ಆರುತಿ – ಇವೇ ಮೊದಲಾದ ಇನ್ನೂ ಕೆಲವು ಹಾಡುಗಳು ಕೇವಲ ಶಿವ, ಗೌರಿ, ಗಂಗೆಯರಿಗೆ ಸಂಬಂಧಿಸಿದಂತೆ ಬಂದಿವೆ.

ಕೋಲು ಪದಗಳಲ್ಲಿಯ ಮತ್ತೊಂದು ಭಾಗ 'ನಾಡ – ಕೋಲು ಪದಗಳು'. ಇದರಲ್ಲಿ ಮಲವ್ವೆಸಟ್ಟ, ಅತ್ತೆ – ಸೊಸೆ ಜಗಳ, ಕುಸುಬಿ ಬಡಿಯುವುದು ಐದ್ವಾಕು ಚಿನ್ನದ ಕೋಲು, ನರಗುಂದ, ಬಾದಾಮಿ ಬಾನಿ ಕೊತ್ತಲಿ, ಶಿರಿಯಾಳ – ಚೆಂಗಳಿ, ಕೊರವಂಜಿ, ರುಕ್ಮಿಣಿ – ಸತ್ಯ ಭಾಮೆಯರು, ಕಸ್ತೂರಿ ರಂಗ ಗೋಕುಲ ಗೋಪಿಯರು, ದ್ಯಾಮವ್ವ ದೇವತೆ, ಬಸವಣ್ಣ – ಹೀಗೆ ವ್ಯಕ್ತಿ, ಸ್ಥಳ, ದೇವತೆಗಳು ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ಹಾಡುಗಳು ಸಮಾವೇಶವಾಗಿವೆ. ಇಲ್ಲಿ ಹಾಡುಗಳನ್ನು ಹೊಂದಿಸುವಲ್ಲಿ ಕೊರತೆಯಿದೆ. ಅವು ಒಂದು ವ್ಯವಸ್ಥೆಗೆ ಒಳಪಟ್ಟು ಬಂದಿಲ್ಲವೆನಿಸುತ್ತದೆ.

ಕಿತ್ತೂರು ಸಂಸ್ಥಾನಕ್ಕೆ, ಕಿತ್ತೂರು ದೊರೆಗಳಿಗೆ, ಅವರ ರಾಣಿಯವರಿಗೆ ಹಾಗೂ ವೀರರಿಗೆ ಸಂಬಂಧಿಸಿರುವ ಹಾಡುಗಳನ್ನು 'ಕಿತ್ತೂರು ಕೋಲ ಪದಗಳು' ಶೀರ್ಷಿಕೆಯಡಿ ಕ್ರೋಢೀಕರಿಸಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಮಹತ್ವದ ಅಂಶವೆಂದರೆ, 'ಹೊರಮುಚುಕ' ತಲೆ ಬರಹದಡಿ ಹಾಡಿನ ಆಯಾ ಪ್ರಕಾರಗಳಿಗೆ ಸಂಬಂಧಿಸಿದಂತೆ ಬಹಳ ಮುಖ್ಯವೆನಿಸಬಹುದಾದ ವಿಷಯಗಳನ್ನು ವಿವರಿಸಿರುವುದು.

ಯಥಾ ಪ್ರಕಾರ ಬಿ. ಎಸ್. ಅವರು, ವಿವಿಧ ಶೀರ್ಷಿಕೆಗಳಡಿ, ಈ ಸಂಕಲನದಲ್ಲಿ ಸಮಾವೇಶಗೊಂಡಿರುವ ಹಾಡಿನ ಪ್ರಕಾರಗಳನ್ನು ಕುರಿತು, ಅವುಗಳ ಸ್ವರೂಪ ಲಕ್ಷಣಗಳನ್ನು ಕುರಿತು ಹಲವಾರು ಹೊಸ ಮತ್ತು ಮಹತ್ವದ ಮಾತುಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ಹೇಳಿರುವುದು ಗಮನೀಯ ಅಂಶ. ಅದಕ್ಕೆ ಹಿನ್ನೆಲೆಯೆಂಬಂತೆ ಜನಪದ ಸಾಹಿತ್ಯದ ಅಧ್ಯಯನದ ಒಂದಿಷ್ಟು ಇತಿಹಾಸವೂ ಇದೆ.

ಒಂದು ಜನಾಂಗದ ಸಾಂಸ್ಕೃತಿಕ ಜೀವನದ ಅಧ್ಯಯನಕ್ಕೆ ಆ ಜನಾಂಗದ ಜಾನಪದ ಸಾಹಿತ್ಯ ನೀಡುವ ಅಪಾರ ನೆರವನ್ನು ಮೊದಲು ಗುರುತಿಸಿದ ಪಾಶ್ಚಾತ್ಯ ವಿದ್ವಾಂಸರು ಅದರ ಕೂಲಂಕುಷ ಅಧ್ಯಯನಕ್ಕೆ ತೊಡಗಿದುದನ್ನು ಆಧಾರ ಸಹಿತ ಬಿ. ಎಸ್. ಅವರು ತಮ್ಮ ಪ್ರಸ್ತಾವನೆಯಲ್ಲಿ ನೀಡಿರುವ ಜೊತೆಗೆ ಅದರ ಪ್ರಭಾವ ಭಾರತೀಯರ ಮೇಲೆ ಆದುದನ್ನು ತಿಳಿಸಿದ್ದಾರೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಅವರು "ಕರ್ನಾಟಕದಲ್ಲಿ ಈ ಸಾಹಿತ್ಯಾಭ್ಯಾಸವು ಕ್ರಿ. ಶ. ೧೯೩೦ ರಿಂದಲೇ ಪ್ರಾರಂಭವಾಯಿತೆಂದು ಹೇಳಬಹುದು. ಇದರ (ಜನಪದ ಸಾಹಿತ್ಯದ) ಸಂಕಲನವನ್ನು ಪ್ರಪ್ರಥಮವಾಗಿ ಪ್ರಾರಂಭಿಸಿ, ಇದರ ಸಂಬಂಧ ಜನತೆಯಲ್ಲಿ ಆದರ ಅಭಿಲಾಷೆಯನ್ನು ಹುಟ್ಟಿಸಿದ ಕೀರ್ತಿಯು ಹಲಸಂಗಿಯ ಗೆಳೆಯರ ಗುಂಪಿನ ಕವಿ ಮಧುರ ಚೆನ್ನರಿಗೆ ಸಲ್ಲುವುದು" ಎಂದು ಹೇಳುತ್ತ ಮುಂದುವರಿದು ಕಳೆದ ಇಪ್ಪತ್ತು ವರ್ಷಗಳಿಂದ ತಾವು ಜನಪದ ಸಾಹಿತ್ಯದ ಒಂದು ಪ್ರಮುಖ ಅಂಗವಾದ ಜನಪದ ಹಾಡುಗಳ ಸಂಗ್ರಹದಲ್ಲಿ ಸಂಪೂರ್ಣ ತೊಡಗಿಸಿಕೊಂಡಿರುವುದನ್ನು ಪ್ರಸ್ತಾಪಿಸಿದ್ದಾರೆ.

'ಶಿವ' ಶಬ್ದದ ಉತ್ಪತ್ತಿ ಹಾಗೂ ಅರ್ಥ ವ್ಯಾಪ್ತಿಯನ್ನು ಕುರಿತು ಬಿ. ಎಸ್. ಅವರು ಪ್ರಸ್ತಾವನೆಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ವಿಚಾರಾರ್ಹವಾಗಿವೆ. 'ಕೆಂಪು' ಎಂಬರ್ಥ ಕೊಡುವ ದ್ರಾವಿಡ ಶಬ್ದ 'ಶಿವ್' ಎಂಬುದರಿಂ 'ಶಿವ' ಶಬ್ದ ಹುಟ್ಟಿದೆ ಎನ್ನುವ ಅವರು ಕನ್ನಡ ಸೋಬಾನ ಹಾಡುಗಳ 'ಸೊಲ್ಲು'ಗಳಲ್ಲಿ ಶಿವ ಶಬ್ದದ ಅರ್ಥ ಇದೇ ಎಂದರೆ ಕೆಂಪೇ ಆಗಿರುವುದೆಂದು ಹೇಳುತ್ತಾರೆ. ಸೋಬಾನಗಳನ್ನು ಈ ಕೆಂಪು ಅಥವಾ 'ಕೆಂಚ' ಅರ್ಥದ ಶಿವನೇ (ಹಳ್ಳಿಗರ ಉಚ್ಚಾರಣೆಯಲ್ಲಿ) 'ಸೋ' ಆಗಿದೆ. ಈ ಸೋ + ಪಾನ (= ಸೇವನ ಉಚ್ಚಾರಣ) ವೇ 'ಸೋಬಾನ' ಆಗಿದೆ ಅಥವಾ ಮಂತ್ರೋಚ್ಚಾರಣೆಯಾಗಿದೆ. ಇದರಂತೆಯೇ "ಶಿವನೇ ಲಿಂಗ" "ಲಿಂಗವೇ ಶಿವ" ಆದಕಾರಣ ಶಿವಲಿಂಗವೇ 'ಸೋಲಿಂಗ'ವಾಗಿದೆ" ಎಂದು ವಿವರಣೆ ನೀಡಿದ್ದಾರೆ.

ಸೋಬಾನದ ಹಾಡುಗಳನ್ನು ಎಂದಿನಿಂದ ರೂಢಿಗೆ ಬಂದಿರಬಹುದೆಂಬುದರ ಬಗ್ಗೆ ಅವರದೇ ಅದ ಒಂದು ಅಭಿಪ್ರಾಯವಾಗಿದೆ. ಅದಕ್ಕೆ ಪ್ರಸ್ತುತ ಕೃತಿಯಲ್ಲಿ ಬರುವ

"ಸೋಬಾನವೆನ್ನೋದು ಯಾರು ಮಾಡ್ಯಾರ ಗುರುವೆ
ದೇವ ಶ್ರೀ ಚೆನ್ನಬಸವಯ್ಯ । ಸೋ । ಸೊಗಲದ
ಸೋಮಯ್ಯ ಮದುವಿ ಮಾಡ್ಯಾರ ॥ ಸೋ ॥ ಎಂಬ ಪದ್ಯ

(ಪುಟ ೧೦, ಪದ್ಯ ೨)

ಇದನ್ನು ಆಧರಿಸಿ "ಕಲ್ಯಾಣದ ಕ್ರಾಂತಿಯಾದ ನಂತರ ಚೆನ್ನ ಬಸವಣ್ಣನ್ನೊಳಗೊಂಡ ಶಿವ ಶರಣರ ತಂಡ ಸೊಗಲದಲ್ಲಿ ತಂಗಿದಾಗ ಸೋಮೇಶ್ವರನ ಲಗ್ನ ಮಹೋತ್ಸವವನ್ನು ಪ್ರಾರಂಭಿಸಿದರೆಂದೂ ಆ ಸಂದರ್ಭದಲ್ಲಿ ಸೋಬಾನ ಹಾಡಿದರೆಂದೂ ಸ್ಪಷ್ಟವಾಗುವುದು" ಎನ್ನುತ್ತಾರೆ ಬಿ. ಎಸ್.

'ಸೋಬಾನ' ಸೊಲ್ಲಿನಂತೆ 'ಸುವ್ವಾಲೆ' ಸೊಲ್ಲು ಕೂಡಾ ಒಂದು ಶಿವನ ಸೊಲ್ಲು ಎನ್ನು ಬಿ. ಎಸ್. ಅವರು 'ಸುವ್ವಾಲೆ ! ಪದದ ಉತ್ಪತ್ತಿಯ ಬಗ್ಗೆಯೂ ವಿವೇಚಿಸಿದ್ದಾರೆ. ಹಾಗೆಯೇ 'ಕೋಲು' 'ಕೋಲಾಟ' ಶಬ್ದಗಳ ಬಗ್ಗೆಯೂ ಚರ್ಚಿಸಿದ್ದಾರೆ. 'ಸೋಬಾನ' 'ಸುವ್ವಾಲೆ' ಶಬ್ದಗಳ ಬಗ್ಗೆ ಬಿ. ಎಸ್. ವ್ಯಕ್ತ ಪಡಿಸಿರುವ ಅಭಿಪ್ರಾಯಗಳ ಬಗ್ಗೆ ಚಿಂತನ ಮಂಥನಗಳು ನಡೆಯುವ ಅವಶ್ಯಕತೆಯಿದೆ.

❖

# ಡಾ. ಬಿ. ಎಸ್. ಗದ್ದಗಿಮಠ ಅವರ ಕನ್ನಡ ಜಾನಪದ ಗೀತೆಗಳು

ಡಾ. ಕೆ. ಆರ್. ದುರ್ಗಾದಾಸ

◆

ಡಾ. ಬಿ. ಎಸ್. ಗದ್ದಗಿಮಠ ಅವರ 'ಕನ್ನಡ ಜಾನಪದ ಗೀತೆಗಳು' ೧೯೫೫ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ಮಹಾ ಪ್ರಬಂಧವಾಗಿದೆ. ಇದು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ೧೯೬೩ ರಲ್ಲಿ ಪ್ರಕಟವಾಗಿ, ನಂತರ ೧೯೯೯ ರಲ್ಲಿ ಎರಡನೇ ಮುದ್ರಣ ಕಂಡಿದೆ. ಜಾನಪದ ಕ್ಷೇತ್ರದಲ್ಲಿ ಮೊದಲ ಪಿಎಚ್. ಡಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ಈ ಕೃತಿ ತನ್ನಲ್ಲಿ ಅಡಗಿಸಿಟ್ಟುಕೊಂಡಿರುವ ಮಾಹಿತಿ ಮತ್ತು ವಿಚಾರಗಳಿಂದ ಗಮನ ಸೆಳೆಯುತ್ತದೆ.

ಜನಪದ ಸಾಹಿತ್ಯ ಸಂಗ್ರಹಣೆಯನ್ನು ಮೊದಲು ಆರಂಭಿಸಿದವರು ಹಲಸಂಗಿ ಗೆಳೆಯರು. ಅವರು ಬೆಳಕಿಗೆ ತಂದ 'ಗರತಿಯ ಹಾಡು' (೧೯೩೧): 'ಜೀವನ ಸಂಗೀತ' (೧೯೩೩); "ಮಲ್ಲಿಗೆ ದಂಡೆ" (೧೯೩೫) ಕೃತಿಗಳು ಜನಪದ ಸಾಹಿತ್ಯದ ಸಮೃದ್ಧತೆಗೆ ಸಾಕ್ಷಿಯಾದವು. ವಿಜಾಪುರದ ಚಿಕ್ಕ ಹಳ್ಳಿ 'ಹಲಸಂಗಿ' ಈ ಕಾರಣದಿಂದ ಕರ್ನಾಟಕ ಮಟ್ಟದಲ್ಲಿ ಜನಪ್ರಿಯವಾಯಿತು. ಡಾ. ಬಿ. ಎಸ್. ಗದ್ದಗಿಮಠ ಅವರಿಗೆ ಜನಪದ ಸಾಹಿತ್ಯದಲ್ಲಿ ಅಭಿರುಚಿ ಹುಟ್ಟಲು ಹಲಸಂಗಿ ಗೆಳೆಯರು ಹೊರ ತಂದ ಜನಪದ ಸಾಹಿತ್ಯ ಸಂಗ್ರಹಗಳೇ ಕಾರಣವಾದವೆಂಬುದನ್ನು ಇಲ್ಲಿ ನೆನೆಯಬಹುದು.

ಡಾ. ಬಿ. ಎಸ್. ಗದ್ದಗಿಮಠ ಅವರ ತಂದೆ ಮತ್ತು ತಾಯಿ ಇಬ್ಬರೂ ಜನಪದ ಹಾಡುಗಾರರಾಗಿದ್ದುದು. ಅವರಿಗೆ ಈ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಹುಟ್ಟಲು ಕಾರಣವಾಯಿತು. ಡಾ. ಗದ್ದಗಿಮಠ ಅವರೇ ಹೇಳುವಂತೆ "ನನ್ನ ತೀರ್ಥರೂಪರು ನೂರೊಂದು ಶಿವಶರಣರ ಅಮೂಲ್ಯವಾದ ಹಂತಿಯ ಕಥನ ಕವನಗಳನ್ನು ಸುಗ್ಗಿಯ ಕಾಲದಲ್ಲಿ ಬೆಳಗು ಹರಿಯುವವರೆಗೂ ಬಲು ಹುಮ್ಮಸದಿಂದ ಕೋಚೆತ್ತಿ ಹಾಡುತ್ತಿದ್ದರು. ಅವುಗಳ ನಿರರ್ಗಳ ಶೈಲಿ, ಕಥೆಯ ಬೆಡಗು, ರಸಪಾಕ, ಮಾರ್ದವತೆ, ನವೀನತೆ ಮೊದಲಾದವು ನನ್ನ ಮನವನ್ನು ಸೆಳೆಯಲು ಕಾರಣವಾದವು. ಅಂದಿನಿಂದ, ಅವುಗಳ ಮಹತ್ವವನ್ನು ಅರಿತು, ಬಿಡುವು

ದೊರೆತಾಗ ಕಲೆ ಹಾಕುತ್ತ ಬಂದೆ. ನನ್ನ ತಂದೆಯು ಪಂತಿಯಲ್ಲಿ ಹಾಡುವ ಶಿವಶರಣರ ಹಾಡುಗಳನ್ನು, ತಾಯಿಯು ತನ್ನ ಮೂವರು ಗೆಳತಿಯರೊಡನೆ ಅನೇಕ ಧಾಟಿಯಲ್ಲಿ ಶಿವಸೊಲ್ಲಗಳನ್ನು ಹಾಕಿ ಶ್ರಾವಣ ಮಾಸದಲ್ಲಿ ಹಾಡುತ್ತ ಬಂದಿದ್ದರು. ಅಲ್ಲದೆ, ಅವರು ಮಹಾಭಾರತ, ರಾಮಾಯಣ, ಮಳೆರಾಜನ ಹಾಡು, ಶಿವಶರಣೆ ಚೆನ್ನಮ್ಮನ ಹಾಡು, ಗುಣಸಾಗರಿಯ ಹಾಡು, ರಡ್ಡೇರ ಅವ್ವಣ್ಣೆವ್ವನ ಹಾಡು ಇವೇ ಮೊದಲಾದ ದೊಡ್ಡ ಹಾಡುಗಳನ್ನು ಹಾಡುತ್ತಿದ್ದರು. ಈ ಮಾತುಗಳನ್ನು ಗಮನಿಸಿದರೆ ಡಾ. ಗದ್ದಗಿಮಠ ಅವರಿಗೆ ಜನಪದ ಸಾಹಿತ್ಯದ ಬಗೆಗೆ ಆಸಕ್ತಿ ಹುಟ್ಟಲು ಅವರ ತಂದೆ-ತಾಯಿಗಳೇ ಮೂಲ ಪ್ರೇರಣೆಯಾಗಿದ್ದರು.

'ಕನ್ನಡ ಜಾನಪದ ಗೀತೆಗಳು' ಎಂಬ ವಿಷಯವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಮೇಲೆ ಡಾ. ಗದ್ದಗಿಮಠರು ಮಾಹಿತಿ ಸಂಗ್ರಹಣೆಗಾಗಿ ವಿಸ್ತೃತವಾದ ಕ್ಷೇತ್ರ ಕಾರ್ಯವನ್ನು ಮಾಡಿದ್ದಾರೆ. ವಿಜಾಪುರ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳ ನೂರಾರು ಹಳ್ಳಿಗಳನ್ನು ಸಂದರ್ಶಿಸಿ, ಜನಪದ ಹಾಡುಗಾರ್ತಿಯರಿಂದ ಹೊಸದಾಗಿ ನೂರಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಪ್ರಬಂಧದ ಒಳಗೆ ವಿಷಯ ಪ್ರತಿಪಾದನೆಗೆ ಉದಾಹರಣೆಯಾಗಿ ಕೊಟ್ಟಿರುವ ಜನಪದ ಗೀತೆಗಳ ಬಿಡಿ ಪದ್ಯಗಳನ್ನು ನೋಡಿದರೆ, ಗದ್ದಗಿಮಠರು ಆಯ್ಕೆಯಲ್ಲಿ ತೋರಿರುವ ಗುಣಗ್ರಾಹಿತ್ವ ಮತ್ತು ಅವರ ಸದಭಿರುಚಿಗಳು ಗಮನ ಸೆಳೆಯುತ್ತವೆ.

ಡಾ. ಬಿ. ಎಸ್. ಗದ್ದಗಿಮಠ ಅವರ 'ಕನ್ನಡ ಜಾನಪದ ಗೀತೆಗಳು' ಕೃತಿಯಲ್ಲಿ ಪ್ರಸ್ತಾವನೆಯಿಂದ ಆರಂಭವಾಗಿ ಸ್ತುತಿ ಪದಗಳು, ಸುಗ್ಗಿಯ ಹಾಡುಗಳು, ಹಳ್ಳಿಯ ಕುಣಿತಗಳು ರಸಾವೇಶದ ಹಾಡುಗಳು, ಬಾಳಿನಲ್ಲಿ ಆಸರಿಕೆ-ಬೇಸರಿಕೆ, ಪ್ರಣಯ ಹಾಗೂ ದಾಂಪತ್ಯ ಮುಂತಾದ ಹಲವು ಉಪಶೀರ್ಷಿಕೆಯಲ್ಲಿ ವಿಷಯ ಮಂಡನೆ ಇದೆ. ಜನಪದ ಗೀತೆಗಳನ್ನು ಮೊದಲ ಬಾರಿಗೆ ಸಾಂಸ್ಕೃತಿಕವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ, ಇಡೀ ಕೃತಿಯಲ್ಲಿ ಕನ್ನಡ ಜನಪದ ಸಂಸ್ಕೃತಿಯ ಉನ್ನತ ಮೌಲ್ಯಗಳನ್ನು ಅನಾವರಣಗೊಳಿಸುವ ಪ್ರಯತ್ನವಿದೆ. ಜೊತೆಗೆ ಸಂಶೋಧನೆಗೆ ಬೇಕಾದ ಶಿಸ್ತು, ಸಂಯಮದ ನಿರೂಪಣೆ ಮತ್ತು ವಿಶಾಲ ದೃಷ್ಟಿಕೋನ ಎಲ್ಲವನ್ನೂ ಡಾ. ಗದ್ದಗಿಮಠರು ಕರಗತ ಮಾಡಿಕೊಂಡಿದ್ದರು ಎನಿಸುತ್ತದೆ. ಈ ಕೃತಿಯು ಮೊದಲಲ್ಲಿ ಬರುವ ಪ್ರಸ್ತಾವನೆಯನ್ನೇ ಗಮನಿಸಿದರೆ ಅಲ್ಲಿ ಜನಪದ ಸಾಹಿತ್ಯದ ಜಾಗತಿಕ ಕಲ್ಪನೆ, ಭರತ ಖಂಡದಲ್ಲಿ ಅದರ ನೆಲೆ, ಆ ನಂತರ ಕರ್ನಾಟಕದಲ್ಲಿ ಅದರ ಪರಿಸ್ಥಿತಿ – ಈ ಎಲ್ಲಾ ಅಂಶಗಳನ್ನೂ ಸ್ಥೂಲವಾಗಿ ಪರಿಚಯಿಸುತ್ತಾ, ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಜಾನಪದ'ದ ಬಗೆಗೆ ಹಿಂದಿನ ಕವಿಗಳ ದೃಷ್ಟಿಕೋನಗಳೇನಿದ್ದವು ? ಎಂಬುದನ್ನು ಅವರು ವಿಶ್ಲೇಷಣೆ ಮಾಡಿದ್ದಾರೆ. ಹಾಗೆ ನೋಡಿದರೆ ಕನ್ನಡದ ಕೆಲವು ಪ್ರಾಚೀನ ಕವಿಗಳು ಜಾನಪದವನ್ನು ಹೀಯ್ಯಾಳಿಸಿ ಮಾತಾಡಿರುವ ಅಂಶವನ್ನೂ ಗದ್ದಗಿಮಠರು ಪ್ರಸ್ತಾಪ

ಮಾಡಿದ್ದಾರೆ. ಆದರೆ, ಕವಿರಾಜ ಮಾರ್ಗಕಾರ ಜನಪದರನ್ನು ಕುರಿತು 'ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂದು ಕೊಂಡಾಡಿರುವ ಅಂಶ ಅವರ ಗಮನ ಸೆಳೆದಿದೆ. ಇದರ ಜೊತೆಗೆ ಕರ್ನಾಟಕದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆ ಮತ್ತು ಆ ಕುರಿತ ಅಧ್ಯಯನ ಹೇಗೆ ಆರಂಭವಾಯಿತು ಎಂಬ ಅಂಶವನ್ನು ಮೊದಲಿಗೆ ಚರ್ಚಿಸಿದ್ದಾರೆ. ಇದು ಆಯಾ ಕ್ಷೇತ್ರದಲ್ಲಿ ಸಂಶೋಧನೆಗೆ ತೊಡಗುವವರು ಅದರ ಹಿನ್ನೆಲೆ, ಮುನ್ನೆಲೆಗಳನ್ನು ಅರಿತಿರಬೇಕು ಎಂಬುದಕ್ಕೆ ನಿದರ್ಶನವಾಗಿದೆ.

ಮೊದಲಿಗೆ 'ಸ್ತುತಿ ಪದಗಳು' ಎಂಬ ಭಾಗವಿದ್ದು ಜನಪದರು ಯಾವುದೇ ಕಾರ್ಯದ ಆರಂಭದಲ್ಲಿ 'ಸ್ತುತಿ' ಮಾಡುವುದರ ಮಹತ್ವ ಮತ್ತು ಸ್ತುತಿ ಮಾಡುವ ಪದ್ಧತಿಯ ವಿಶಾಲ ತಳಹದಿ ಏನು ಎಂಬುದನ್ನು ಡಾ. ಗದ್ದಗಿಮಠರು ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಅವರ ಪ್ರಕಾರ 'ನಮ್ಮ ಒಕ್ಕಲಿಗನಿಗೆ ಧರ್ಮಕ್ಕಿಂತ ದೇವರ ಭಾವನೆಯೇ ದೊಡ್ಡದು. ಅವನಿಗೆ ಊರ ಮುಂದಿನ ಪಾದಗಟ್ಟೆಯ ಬಸವನೂ ಬೇಕು; ಊರ ಹೊರಗಿನ ಗರುಡ ಗಂಬದೆದುರಿನ ಹನುಮನೂ ಬೇಕು; ರೋಗಾದಿ ಪೀಡೆಯಾದರೆ ಮಾರಿಮಸಣಿ ಮೊದಲಾದ ದೇವತೆಗಳೂ ಬೇಕು, ಭೂತ ಪಿಶಾಚಿಗಳ ಕಾಟ, ಉಪಟಳವಾದರೆ ನವಗ್ರಹಾದಿಗಳ ಬಲವೂ ಬೇಕು. ಹೀಗಾಗಿ ಅವನಲ್ಲಿ ದೇವರೆಂಬ ಭಾವನೆಯು ಸ್ಥಿರವಿರದೆ ಸ್ಥಿತಿಗತಿಗಳ ಎಳೆತದ ಪ್ರಕಾರ ಹೊಯ್ದಾಡಿ ಧರ್ಮದ ಗಡಿಗಳನ್ನು ಮೀರಿ ದೂರ ದೂರದವರೆಗೆ ಹೋಗುವುದು. ಒಮ್ಮೊಮ್ಮೆ ಸಂಪ್ರದಾಯದಿಂದ ಬಂದ ಮನೆಯ ದೇವರನ್ನ ಸಹ ಬಿಟ್ಟುಕೊಟ್ಟು ತನಗೆ ಹಿತವಾಗುವುದೆಂದು ಕಂಡು ಬಂದರೆ ಬೇರೆ ದೇವರನ್ನೂ ಭಕ್ತಿಯಿಂದ ಪೂಜಿಸುವನು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಈ ಕಾರಣದಿಂದ ಜನಪದರು ಎಲ್ಲಾ ಬಗೆಯ ದೇವರನ್ನೂ ಸ್ತುತಿಸುವ ಮನೋಭಾವ ಹೊಂದಿದ್ದಾರೆ. ದೇವತೆಗಲ್ಲಿ ಗಂಡು ಹೆಣ್ಣೆನ್ನದೆ ಸಂಗಮೇಶ್ವರ, ಮಹಾಕೂಟೇಶ್ವರ, ಸೋಮೇಶ್ವರ, ವೀರಭದ್ರರಿಂದ ಹಿಡಿದು ಎಲ್ಲವ್ವಾ, ಬನಶಂಕರಿ, ಕಾಳವ್ವ, ದ್ಯಾಮವ್ವ, ದುರಗವ್ವನಂತಹ ಗ್ರಾಮದೇವತೆ, ಊರ ದೇವತೆಗಳನ್ನು ಅವರು ಪೂಜಿಸುತ್ತಾ ಬಂದಿದ್ದಾರೆ. ಅಲ್ಲದೆ ಹಿಂದಿನ ಸಂಪ್ರದಾಯದಿಂದ ಬಂದ ಮಳೆರಾಜ, ಭೂ-ತಾಯಿ, ಜೋಕುಮಾರನಂತಹ ದೇವತೆಗಳು, ಬಸವೇಶ್ವರ, ಚೆನ್ನಬಸವೇಶ್ವರ, ಸಿದ್ಧರಾಮೇಶ್ವರ ನಂತಹ ಶಿವಶರಣರು, ಶಿವಯೋಗಿಗಳು, ಸಾಧುಸತ್ಪುರುಷರೂ ಅವರಿಗೆ ದೇವತೆಗಳೇ. ಜೊತೆಗೆ ಭರಮಪ್ಪ, ಬ್ರಹ್ಮ ರಾಕ್ಷಸ, ಏಳು ಮಕ್ಕಳ ತಾಯಿ, ಕೊಳ್ಳಿಯ ದೆವ್ವದಂತಹ ಭೂತಾದಿ ದೇವತೆಗಳನ್ನು ಅವರು ಮರೆತಿಲ್ಲ. ಏಕದೇವೋಪಾಸನೆಗೆ ವಿರುದ್ಧವಾಗಿ 'ಬಹುದೇವೋಪಾಸನೆ' ಜನಪದರದಲ್ಲಿರುವ ಅಂಶವನ್ನು ಡಾ. ಗದ್ದಗಿಮಠ ಅವರು ಚೆನ್ನಾಗಿಯೇ ಗುರುತಿಸಿದ್ದಾರೆ.

ಜನಪದರು ದೇವರ ಬಗೆಗೆ ಇರಿಸಿಕೊಂಡಿರುವ ಭಾವನೆಗಳು ತುಂಬಾ ಕೋಮಲವಾಗಿವೆ. ಚೇತನಾ ಚೇತನ ವಸ್ತುಗಳಲ್ಲಿ ದೇವರನ್ನು ಕಾಣುವ ಬಗೆಯೇ ವಿಶಿಷ್ಟವಾದುದು. 'ಕೂಡಲ ಸಂಗಮನಾಥ'ನನ್ನು ಸ್ತುತಿಸುವ ಪದ್ಯ ಹೀಗಿದೆ:

ಕೂಡಲ ಸಂಗಯ್ಯ ಹೊಳಿಯಾಗ ಹ್ಯಾಂಗಿದ್ದಿ
ಹಳ್ಳೊತ್ತಿ ಸಣ್ಣ ಮಳಲೊತ್ತಿ । ಗಂಗೀಯ ॥
ನೀರೊತ್ತಿ ಲಿಂಗನೆದಾವ ।

ಸ್ಥಾವರದಲ್ಲಿ ಜಂಗಮತ್ವವನ್ನು ಕಾಣುವ ದೃಷ್ಟಿಗೆ ಇದು ಒಳ್ಳೇ ನಿದರ್ಶನ. ಹೊಳೆಯ ಮಧ್ಯದಲ್ಲಿರುವ ಲಿಂಗ ರೂಪದ ಸಂಗಮನಾಥನಿಗೆ 'ಹಳ್ಳೊತ್ತಿ, ಮಳಲೊತ್ತಿ, ಗಂಗೆಯ ನೀರೊತ್ತಿ ಲಿಂಗ ನೆನೆದಿದೆ' ಎಂಬ ಕಲ್ಪನೆಯೇ ಅದ್ಭುತವಾದದ್ದು.

ಜನಪದರು ಒಂದೊಂದು ದೇವರಿಗೂ ಒಂದೊಂದು ಕಥೆ ಕಟ್ಟಿದ್ದಾರೆ. ಆಯಾ ಕಥೆಗಳಲ್ಲಿ ವರ್ಣಿಸಲ್ಪಟ್ಟ ದೇವರುಗಳು ಒಂದೊಂದು ಸಾಹಸವನ್ನು ಮೆರೆದು ತೋರಿದ್ದಾರೆ. ಅಂತಹ ಒಂದು ಪದ್ಯವನ್ನು ಗದ್ದಗಿಮಠರು ಸಂಗ್ರಹಿಸಿ ಕೊಟ್ಟಿದ್ದಾರೆ.

ಕುಂಟೋಜಿ ಬಸವಣ್ಣ ಬಂಟಾಗಿ ಕಾದಾಡಿ
ಕುಂಟಾದ ಕಾಲ ಮುರಕೊಂಡು । ಪರಿಸ್ಯಾಗ
ಮಂಟಪದ ಮುಂದ ಮಲಗ್ಯಾನ ॥

ಶಿವನ ವಾಹನವೆಂದು ಗುರುತಿಸಲ್ಪಟ್ಟ ಬಸವಣ್ಣ (ಎತ್ತು) ಕೃಷಿಕರ ದೇವರೂ ಆಗಿದ್ದಾನೆ. ಮಂಟಪದ ಮುಂದೆ ಕಾಲು ಮುರಿದುಕೊಂಡು ಮಲಗಿದ್ದಾನೆ ಎಂಬುದೇ ವಿಶಿಷ್ಟ ಕಲ್ಪನೆ.

ಡಾ. ಗದ್ದಗಿಮಠ ಅವರು ಕನ್ನಡ ಜನಪದ ಗೀತೆಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಅವರು ವಿಷಯವನ್ನು ವರ್ಗೀಕರಿಸಿರುವ ರೀತಿಯೇ ಇದಕ್ಕೆ ನಿದರ್ಶನವಾಗಿದೆ. ಗೀತೆಗಳ ವಸ್ತುವನ್ನಾಧರಿಸಿ ಸುಗ್ಗಿಯ ಹಾಡುಗಳು, ಬಾಳಿನಲ್ಲಿ ಆಸರಿಕೆ–ಬೇಸರಿಕೆ, ಪ್ರಣಯ ಹಾಗೂ ದಾಂಪತ್ಯ ಮುಂತಾದ ಉಪಶೀರ್ಷಿಕೆಗಳಲ್ಲಿ ಗೀತೆಗಳನ್ನು ವರ್ಗೀಕರಿಸಿ ವಿಶ್ಲೇಷಣೆ ಮಾಡಿದ್ದಾರೆ. ಈ ವರ್ಗೀಕರಣದಲ್ಲಿ ಒಂದೇ ವಿಷಯವನ್ನು ಎರಡು ಕಡೆ ಚರ್ಚಿಸಿರುವುದರಿಂದ ಪುನರಾವರ್ತನೆಯಾಗಿದೆ. ಉದಾಹರಣೆಗೆ : ಸುಗ್ಗಿಯ ಹಾಡುಗಳು, ಸುಗ್ಗಿಯ ಸಂಪ್ರದಾಯ, ಹಂತಿಯ ಹಾಡುಗಳು – ಇವೆಲ್ಲವನ್ನು ಒಂದೇ ಶೀರ್ಷಿಕೆಯಲ್ಲಿ ವಿವರಿಸಬಹುದಿತ್ತು.

ಡಾ. ಗದ್ದಗಿಮಠ ಅವರು ಗೀತೆಗಳ ಆಯ್ಕೆಯಲ್ಲಿ ಒಳ್ಳೇ ಅಭಿರುಚಿಯನ್ನು, ವಿಶ್ಲೇಷಣೆಯಲ್ಲಿ ಸಮತೂಕವನ್ನು ಕಾಯ್ದುಕೊಂಡಿದ್ದಾರೆ. ಜನಪದ ಗೀತೆಗಳನ್ನು ಕುರಿತು

ಅಧ್ಯಯನ ಮಾಡುವ ಮೂಲಕ ಒಟ್ಟಾರೆ, ಜನಪದ ಸಂಸ್ಕೃತಿಯನ್ನು ಪುನರ್ರೂಪಿಸುವ ಪ್ರಯತ್ನವನ್ನು ಅವರು ಇಲ್ಲಿ ಮಾಡಿದ್ದಾರೆ. ಇದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಜನಪದ ಗೀತೆಗಳು ಎಷ್ಟೊಂದು ಮಹತ್ವದ ಆಕರ ಸಾಮಾಗ್ರಿಗಳಾಗಿವೆ ಎಂಬ ಅಂಶವೂ ಇಲ್ಲಿ ದೃಢಪಟ್ಟಿದೆ. ಉದಾಹರಣೆಗೆ: ಸುಗ್ಗಿಯ ಹಾಡುಗಳಲ್ಲಿ 'ಗಣಪತಿ ಪೂಜೆ' ಇಲ್ಲದಿರುವಿಕೆಗೆ ಕಾರಣಗಳನ್ನು ಶೋಧಿಸುತ್ತಾ ಆರ್ಯ-ದ್ರಾವಿಡ ಸಂಸ್ಕೃತಿಯ ಮೂಲ ಆಚರಣೆಗಳತ್ತ ಲಕ್ಷ್ಯ ಸೆಳೆಯುತ್ತಾರೆ. 'ಆರ್ಯರು ಭರತ ಖಂಡಕ್ಕೆ ಬರುವ ಮುನ್ನ ಮೂಲ ಜನಾಂಗ ದ್ರಾವಿಡರು ತಮ್ಮ ಸಂಸ್ಕೃತಿಯ ಹೆಗ್ಗುರುತಾದ ಕೃಷಿ ಕಾರ್ಯದಲ್ಲಿ ನಿಪುಣರಿದ್ದರು. ಅವರ ಮೇಲೆ ಆರ್ಯ ಸಂಸ್ಕೃತಿಯ ಗಣಪತಿ ಪೂಜೆಯು ಏನೂ ಪ್ರಭಾವ ಮಾಡಿದಂತೆ ಕಂಡು ಬರುವುದಿಲ್ಲ' ಎಂದು ಅಭಿಪ್ರಾಯ ಪಡುತ್ತಾರೆ. ಅದಕ್ಕೆ ಉದಾಹರಣೆಯಾಗಿ ಒಂದು ಗೀತೆಯನ್ನು ಕೊಟ್ಟಿದ್ದಾರೆ.

ಹಂತಿ ಪದಕೊಂದಿಲ್ಲ ನಿಂತು ಬೆನಕನ ಪೂಜೆ
ಹಂತಿಯೊಳು ಪೂಜೆ ಶರಣರಿಗೆ । ಗಣಪತಿಗೆ
ಸ್ವಂತ ನೆನೆಯೆಂದ ಒಕ್ಕಲಿಗ ॥

ಡಾ. ಗದ್ದಗಿಮಠ ಅವರ ಅಭಿಪ್ರಾಯವನ್ನು ಇಲ್ಲಿ ಪೂರ್ತಿಯಾಗಿ ಒಪ್ಪುವುದು ಕಷ್ಟ. ಏಕೆಂದರೆ, ಶಿವ ಮತ್ತು ಗಣೇಶನ ಕಲ್ಪನೆ ಆರ್ಯರದ್ದು ಎಂದು ಹೇಗೆ ಹೇಳುವುದು? ಬಯಲಾಟಗಳಲ್ಲಿ ಗಣೇಶ ಸ್ತುತಿಗೆ ಹೆಚ್ಚಿನ ಪ್ರಾಧಾನ್ಯತೆ ಸಂದಿರುವಾಗ ಅದನ್ನು ಆರ್ಯರದ್ದು ಎಂದು ಹೇಳುವುದು ಕಷ್ಟ. ಕೃಷಿ ಕಾರ್ಯದಲ್ಲಿ ಶರಣರನ್ನು ನೆನೆಯುವ ಪದ್ಧತಿ ವಿಜಾಪೂರ ಜಿಲ್ಲೆಯಲ್ಲಿ ಹೆಚ್ಚು ರೂಢಿಯಲ್ಲಿ ಬಂದಂತೆ ಕಾಣುತ್ತದೆ.

ಡಾ. ಗದ್ದಗಿಮಠ ಅವರು ವಿಷಯ ನಿರೂಪಣೆಗೆ ಸಂಬಂಧಿಸಿ ವಿಪುಲವಾದ ಗೀತೆಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ; ಮಾತ್ರವಲ್ಲ ಆಯಾ ವಿಷಯದ ಹಿನ್ನೆಲೆಗಳನ್ನು ವಿವರಿಸುವಾಗಲೂ ಅಪಾರವಾದ ಮಾಹಿತಿಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ : ಸುಗ್ಗಿ ಸಂಪ್ರದಾಯ, ಹಳ್ಳಿಗರ ಹಬ್ಬಗಳು, ಹಂತಿಯ ಹಾಡುಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿ ಅಪರೂಪದ ಮಾಹಿತಿಗಳನ್ನು ಕೊಟ್ಟಿದ್ದಾರೆ. ಗೀತೆಗಳನ್ನು ಆಯಾ ಸಂದರ್ಭದಲ್ಲಿ ಇಟ್ಟು ವಿಶ್ಲೇಷಣೆ ಮಾಡಿರುವುದರಿಂದ ಜಾನಪದ ಗೀತೆಗಳ ಅಧ್ಯಯನಕ್ಕೆ ಸಾಂಸ್ಕೃತಿಕ ಮಹತ್ವ ಬಂದಿದೆ.

ಡಾ. ಗದ್ದಗಿಮಠ ಅವರು ಜನಪದ ಗೀತೆಗಳಲ್ಲಿ ಹೊರ ಹೊಮ್ಮಿರುವ ಜನಪದ ಜೀವನದ ಒಟ್ಟು ಸ್ವರೂಪವನ್ನ ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾರೆ. ಜನಪದ ಗೀತೆಗಳ ಅಧ್ಯಯನದ ಮೂಲಕ ಜನಪದ ಸಂಸ್ಕೃತಿಯನ್ನು ಪುನರ್ರಚಿಸುವ ಪ್ರಯತ್ನ ಇಲ್ಲಿ ಎದ್ದು ಕಾಣುತ್ತದೆ. ಕೊನೆಯಲ್ಲಿ ಸಂಗ್ರಹಿತ ಹಾಡುಗಳಲ್ಲಿ ಹಂತಿಯ ಹಾಡುಗಳನ್ನೂ ಅನುಬಂಧದಲ್ಲಿ ಕೊಡಲಾಗಿದೆ. ಕಲ್ಯಾಣ ಬಸವಯ್ಯ, ಹರಳಯ್ಯ, ಮಡಿವಾಳ

ಮಾಚಯ್ಯ, ಕಿನ್ನರಿ ಬೊಮ್ಮಯ್ಯ, ಮೇದರ ಕೇತಯ್ಯ, ಇಳಿಹಾಳ ಬೊಮ್ಮಯ್ಯ, ಹೂಗಾರ ಮಾದಯ್ಯ, ಜಾತಿಗರ ಚೌಡಯ್ಯ, ನೇಗಿಯ ಅಮುಗಯ್ಯ, ಕುಂಬಾರ ಗುಂಡಯ್ಯ, ಮಾದಾರ ಚೆನ್ನಯ್ಯ, ಅರ್ಜುನ ಜೋಗಿಯ ಹಾಡುಗಬ್ಬ – ಎಂಬ ಅಪರೂಪದ ಹಾಡುಗಳು ಇಲ್ಲಿವೆ. ಶಿವ ಶರಣರ ಬಗೆಗೆ ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿರುವ ಈ ಮಾಹಿತಿಗಳು ಈ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವವರಿಗೆ ಮಹತ್ವದ ದಾಖಲೆಗಳಾಗಿವೆ.

❖

# ಗೋಷ್ಠಿಯ ಅಧ್ಯಕ್ಷೀಯ ಭಾಷಣ

ಡಾ. ಸೋಮಶೇಖರ ಇಮ್ರಾಪೂರ

◆

ಅತ್ಯಂತ ಹಿರಿಯ ವಿದ್ವಾಂಸರಾಗಿದ್ದ ಡಾ. ಬಿ. ಎಸ್. ಗದ್ದಗೀಮಠ ಅವರ ವಿಚಾರ ಸಂಕಿರಣದಲ್ಲಿ ಇದುವರೆಗೆ ಮಾತನಾಡಿದ ನನ್ನ ವಿದ್ಯಾ ಗುರುಗಳಾದ ಡಾ. ಬಿ. ವ್ಹಿ. ಮಲ್ಲಾಪುರ ಅವರೇ ಇನ್ನೊಬ್ಬ ಸ್ನೇಹಿತರಾದ ಡಾ. ದುರ್ಗದಾಸ ಅವರೇ,

ಬೆಳಗ್ಗೆಯಿಂದ ಅನೇಕ ವಿದ್ವಾಂಸರ ವಿಚಾರಗಳನ್ನು ಕೇಳಿದ್ದೀರಿ. ಗದ್ದಗೀಮಠ ಅವರ ಬಗ್ಗೆ ಏನೂ ಗೊತ್ತಿಲ್ಲದವರಿಗೆ ಗೊತ್ತಾಯ್ತು, ಅರ್ಧಮರ್ಧ ಗೊತ್ತಿದ್ದವರಿಗೆ ಪೂರ್ಣ ಗೊತ್ತಾಯ್ತು. ಸಂಶಯ ಇಟ್ಟಕೊಂಡವರಿಗೆ ಸಂಶಯ ನಿವಾರಣೆಯಾಯ್ತು. ಅಧ್ಯಯನ ಶೀಲರಾದವರಿಗೆ ಅಧ್ಯಯನಕ್ಕೆ ಅನುಕೂಲವಾಯ್ತು .

ಇಲ್ಲಿ ವಿದ್ವಾಂಸರೆಲ್ಲ ಡಾ. ಗದ್ದಗಿಮಠ ಅವರನ್ನ ಕುರಿತು ಒಳ್ಳೊಳ್ಳೆಯದನ್ನು ಹೇಳಿದ್ದಾರೆ. ಕೆಲವೊಂದು ಮೌಲಿಕ ಮಾತುಗಳು ಇಲ್ಲಿ ಬಂದಿವೆ. ಸಾಮಾನ್ಯರ ದೃಷ್ಟಿಯಲ್ಲಿ ಕೇಳುವಂತಹ ಮಾತುಗಳು; ವಿದ್ವಾಂಸರ ದೃಷ್ಟಿಯಲ್ಲಿಯೇ ಅರ್ಥ ಮಾಡಿಕೊಳ್ಳುವಂತಹ ಮಾತುಗಳು. ಆ ದೃಷ್ಟಿಯಿಂದ ವಿದ್ವಾಂಸರ ದೃಷ್ಟಿಯಲ್ಲಿ ಅರ್ಥ ಮಾಡಿಕೊಳ್ಳುವಂತಹ ಅನೇಕ ವಿಷಯಗಳನ್ನು ಡಾ|| ವೀರಣ್ಣ ದಂಡೆಯವರು ಬೆಳಗ್ಗೆ ತಮ್ಮ ಪ್ರಬಂಧ ಮಂಡಿಸುವಾಗ ಗಂಭೀರವಾದಂತಹ ವಿಷಯಗಳನ್ನು ಹೇಳಿದರು.

ಇಲ್ಲಿ ನನ್ನ ಅನಿಸಿಕೆಯೆಂದರೆ, ಕೃತಿಗಳ ವಿಷಯಗಳ ಬಗ್ಗೆ ಮಾತಾಡೋದು, ವಿಮರ್ಶೆ ಮಾಡೋದು ಬಹಳ ಕಠಿಣ. ಯಾಕೆಂದರೆ ಇವೆಲ್ಲ ಸಂಕಲನ ಗ್ರಂಥಗಳು. ಸೃಜನಾತ್ಮಕ ಕೃತಿಗಳಲ್ಲ. ಇಂಥಲ್ಲಿ ನಾವು ಬೇರೆ ದೃಷ್ಟಿಕೋನದಿಂದ ಒಬ್ಬ ವಿದ್ವಾಂಸನಾಗಿ, ಸಂಶೋಧಕನಾಗಿ, ಕೃತಿಗಳ ಅಧ್ಯಯನ ಮಾಡಬೇಕೇ ವಿನಃ ಹೊಸ ವಿಮರ್ಶೆಗೆ ಹೋಗಬಾರದು. ಯಾಕೆಂದರೆ, ಅವೆಲ್ಲ ಅವರದಲ್ಲ, ಇದು ನನ್ನ ಅಭಿಪ್ರಾಯ.

ಎರಡನೇ ನನ್ನ ಅಭಿಪ್ರಾಯ ಸಣ್ಣಾಟ ಮೊದಲೊ ದೊಡ್ಡಾಟ ಮೊದಲೊ ಅನ್ನೋ ಚರ್ಚಾತ್ಮಕ ವಿಷಯಿದ್ದು, ನನ್ನ ದೃಷ್ಟಿಯಲ್ಲಿ ಪೌರಾಣಿಕವಾದಂತಹ ದೊಡ್ಡಾಟ ಪ್ರಥಮ. ಆಮೇಲೆ ಕಾಲ ಕಡಿಮೆ ಮಾಡಿಕೊಂಡು ಕೇವಲ ಪೌರಾಣಿಕ ಕಥೆಗಳನ್ನಷ್ಟೇ

ಯಾಕ ಮಾಡಬೇಕು, ಸಾಮಾಜಿಕ ವಸ್ತುಗಳನ್ನು ಅಳವಡಿಸಿಕೊಳ್ಳಬಹುದಲ್ಲ ಅಂತ ಯೋಚಿಸಿದಾಗ ಸಣ್ಣಾಟಗಳು ಹುಟ್ಟಿಕೊಂಡವು, ಇದು ನನ್ನ ಅಭಿಪ್ರಾಯ.

ಇನ್ನು ನಾನು ಗದ್ದಗಿಮಠರನ್ನ ಕುರಿತು ವಿಚಾರಿಸಿದಾಗ ಗದ್ದಗಿಮಠರ ಸಾಹಿತ್ಯಕ್ಕೆ ಮತ್ತು ಜಾನಪದ ಅಧ್ಯಯನಕ್ಕೆ ಪ್ರೇರಣೆಯಾದ ಸಂಗತಿಗಳಾವವು ? ಗದ್ದಗಿಮಠರ ಸಂಪಾದಕತ್ವದಲ್ಲಿ ಸಂಪಾದಿತ ಕೃತಿಗಳಲ್ಲಿ ಬಳಸಿದಂತಹ ಸಿದ್ಧಾಂತಗಳಾವವು ? ಗದ್ದಗಿಮಠರ ಈ ಪೂರಕವಾದಂತಹ ಅನೇಕ ಸಂಗತಿಗಳನ್ನು ನಾವಿಲ್ಲಿ ವಿಚಾರ ಮಾಡುವಂತಹ ಅಗತ್ಯ ಇದೆ.

ಮೊದಲನೆಯದಾಗಿ ಅವರ ಪಿಎಚ್. ಡಿ. ಮಹಾ ಪ್ರಬಂಧದ ಬಗ್ಗೆ ಸ್ನೇಹಿತರಾದ ಡಾ. ದುರ್ಗಾದಾಸ ಬಹಳ ಔಚಿತ್ಯ ಪೂರ್ಣವಾಗಿ ಮಾತಾಡಿದರು. ಅವರು ಇಡೀ ಥೀಸಿಸ್ಸಿನಲ್ಲಿ ಮೂರು ಭಾಗವಾಗಿ ವಿಂಗಡಿಸಿದ್ದಾರೆ. ಭಾಗ ೧ ರಲ್ಲಿ ಜಾನಪದ ಸಾಹಿತ್ಯ ಸ್ತುತಿ ಸ್ತವನಗಳು. ಇದರಲ್ಲಿ ಸುಗ್ಗಿ ಹಾಡು ರಸನಿಮಿಷಗಳು ಮಕ್ಕಳ ಹಾಡು ಹೀಗೆ ಒಂಭತ್ತು ಭಾಗ ಮಾಡಿದ್ದಾರೆ. ೨ನೇ ಭಾಗದಲ್ಲಿ ಐತಿಹಾಸಿಕ ಸಂಗತಿಗಳು, ಅದರಲ್ಲಿ ಶಿವಶರಣರ ಹಾಡು, ಕಂಬಿ ಹಾಡು, ಕಲ್ಯಾಣ ಕ್ರಾಂತಿ ಹೀಗೆ ಹೇಳ್ತಾ ಕೊನೆಗೆ ಚಿತ್ರ ವಿಚಿತ್ರಗಳು ಅನ್ನೋದನ್ನ ಸೇರಿಸಿದ್ದಾರೆ. ಈ ಚಿತ್ರ ವಿಚಿತ್ರಗಳು ಅಂದರೇನು ? ಅವರ ಪರಿಕಲ್ಪನೆ ಏನು ಅನ್ನೋದು ಮುಖ್ಯವಾಗುತ್ತೆ. ಭಾಗ ೩ ರರಲ್ಲಿ ಹಂತಿಯ ಕಥನ ಕವನಗಳ, ಜಾನಪದ ಛಂದಸ್ಸು, ಜಾನಪದ ರಾಮಾಯಣ, ಮಹಾಭಾರತ ಕೊನೆಗೆ ಇತರ ದೊಡ್ಡ ಹಾಡುಗಳು ಎಂದಿದ್ದಾರೆ.

ಡಾ. ಗದ್ದಗಿಮಠರ ಜಾನಪದ ಆಸಕ್ತಿಗೆ ಮೂಲ ತಂದೆ-ತಾಯಿ ಮನೆ ತಾವು ವಾಸಿಸುತ್ತಿದ್ದ ಓಣಿ ಪರಿಸರ ಇವೆಲ್ಲ ಕಾರಣ ಆಗತಾವು. ಸ್ವತಃ ಹಾಡುತ್ತಿದ್ದರು ಹಾಗೂ ಹಾಡಿನ ಗತಿ ಬಲ್ಲವರಾಗಿದ್ದರು ಯಾವ ಜನಪದ ಸಾಹಿತಿಗೆ ಹಾಡಲಿಕ್ಕೆ ಬರುತ್ತೆ ಅವನಿಗೆ ಸಂಗ್ರಹ ಮಾಡಲಿಕ್ಕೆ ಬರುತ್ತ ಅಂತ ನಾವು ತಿಳಕೊಳ್ಳಬೇಕು. ಧಾಟಿಗಳನ್ನು ಹಿಡಿಯುವಂತಹ ತಾಕತ್ತು ಅವರಿಗಿತ್ತು. ಅವರ ಇಡೀ ಕುಟುಂಬವೇ ಹಾಗೆ ಅವರಿಗೆಲ್ಲ ರಕ್ತಗತವಾಗಿ ಬಂದಿದೆ. ಗದ್ದಗಿಮಠರ ಮಗಳು ಶ್ರೀಮತಿ ಅಕ್ಕಮಹಾದೇವಿ ಇದೀಗ ಹಾಡಿದರು ಅವರ ತಾಯಿನೂ ಹಾಡುತ್ತಿದ್ದುದನ್ನು ಕೇಳೀದ್ದೀನಿ.

ಡಾ. ಗದ್ದಗಿಮಠರು ಆ ಕಾಲದಲ್ಲಿ ಮಾಡಿದ್ದು ದೊಡ್ಡ ಕೆಲಸ. ಅವರು ಆವಾಗಲೇ ಅನೇಕ ಪಾಶ್ಚಿಮಾತ್ಯ ವಿದ್ವಾಂಸರ ಪುಸ್ತಕಗಳನ್ನು ಓದಿದ್ದರು ಅನ್ನೋದು ಅವರ ಥೀಸಿಸಿನಲ್ಲಿ ಕೊಟ್ಟ ರೆಫರೆನ್ಸ್ ಗ್ರಂಥಗಳಿಂದ ತಿಳಿದ ಬರುತ್ತೆ. ಅನೇಕ ನಮ್ಮ ಹಿರಿಯ ಸಾಹಿತಿಗಳ ಪುಸ್ತಕ ಅವರಿಗೆ ಪ್ರೇರಣೆಯಾಗಿವೆ. ದೇವುಡುರವರ ಕರ್ನಾಟಕ ಸಂಸ್ಕೃತಿ, ಮಾಸ್ತಿಯವರ ಜನಪದ ಸಾಹಿತ್ಯ ಅವೆಲ್ಲ ಪುಸ್ತಕಗಳು ಸುಪ್ರಸಿದ್ಧ ಪುಸ್ತಕಗಳು. ಅವೆಲ್ಲವುಗಳನ್ನು ಅಭ್ಯಾಸ ಮಾಡಿದ್ದರು. ವಿಜಾಪೂರ, ಧಾರವಾಡ, ಬೆಳಗಾಂವ ಜಿಲ್ಲೆಗಳ ಹಳ್ಳಿ ಹಳ್ಳಿಗೆ ಹೋಗಿ

ಹಾಡುಗಳನ್ನು ಸಂಗ್ರಹ ಮಾಡಿದ್ದಾರೆ. ಆ ಕಾಲದಲ್ಲಿ ೧೯೪೦ ರ ಕಾಲದಲ್ಲಿ ಇನ್ನೂ ಜಾನಪದ ಅನ್ನೋದೇ ಗೊತ್ತಿರದ ದಿನಗಳಲ್ಲಿ ಗದ್ದಗಿಮಠರು ಮಾಡಿದ್ದು ದೊಡ್ಡ ಕೆಲಸ. ಇವತ್ತಿನವರು ಬೇಕಾದವರು ಬೇಕಾದ್ದ ಅನ್ನಬಹುದು. ಯಾಕಂದ್ರ, ಅವರಿಗೆ ಗೊತ್ತಿಲ್ಲ ಅವರ ಕ್ಷೇತ್ರ ಕಾರ್ಯದ ಬಗ್ಗೆ. ಎಲ್ಲೋ ಹೋಗಿ ಒಂದಿಷ್ಟು ಹಾಡುಗಳನ್ನು ಟೇಪ್ ಮಾಡಿಕೊಂಡ ಬಂದು ನಾನು ಮಾಡಿದೆ ಅನ್ನೋ ಜನಕ್ಕೆ ಏನ ಗೊತ್ತಾಗಬೇಕು. ಅವರೆಲ್ಲ ಕೃತಿಗಳಲ್ಲಿ ತಾತ್ವಿಕವಾದಂತಹ ಕ್ಷೇತ್ರ ಕಾರ್ಯದ ಸಿದ್ಧಾಂತಗಳಿವೆ. ಅವೆಲ್ಲ ಯೋಗ್ಯವಾದಂತಹ ಸಂಗ್ರಹ ಕೃತಿಗಳು ಯೋಗ್ಯವಾದಂತಹ ಸಂಪಾದನೆ ಕೃತಿಗಳು.

ಜಾನಪದ ಸಾಹಿತ್ಯ ಪಿಎಚ್.ಡಿ. ಗೆ ಬರುತ್ತೆ ಅನ್ನೋದನ್ನ ಸಿದ್ಧಪಡಿಸಿಕೊಟ್ಟವರು ಗದ್ದಗಿಮಠರು. ಅವರು ಸಂಗ್ರಹ ಮಾಡಿದಂತಹ ಇಡೀ ಸಂಪತ್ತಿನ ಮೂಲ ದ್ರವ್ಯ ಅಂದರೆ, ಮೂಲ ಆಶಯ ಅಂದರೆ; ಅದು ಆಧ್ಯಾತ್ಮ. ಪ್ರತಿಯೊಂದರಲ್ಲಿ ಆಧ್ಯಾತ್ಮ ಕಾಣತೀವೆ. ನಿಸರ್ಗದ ಪದಗಳು ಬಂದರೂ ಕೂಡ ಅಲ್ಲಿನೂ ಆಧ್ಯಾತ್ಮ. ಅವರ ಮನೆಯಲ್ಲೂ ಆಧ್ಯಾತ್ಮ, ಬದುಕಿನಲ್ಲಿಯೂ ಆಧ್ಯಾತ್ಮ. ಅವರ ಸಂಗ್ರಹ ದೃಷ್ಟಿಯಲ್ಲಿಯೂ ಆಧ್ಯಾತ್ಮ ಅವರ ಪಿಎಚ್.ಡಿ ಪ್ರಬಂಧದಲ್ಲಿಯೂ ಆಧ್ಯಾತ್ಮಕ್ಕೆ ಸಂಬಂಧಪಟ್ಟಂತಹ ತ್ರಿಪದಿಗಳೇ ಇವೆ. ಕೊನೆಗೆ ಅನುಬಂಧದಲ್ಲಿ ಸೇರಿದ ಶರಣರ ಹಂತಿ ಹಾಡುಗಳು ಅವುಗಳಂತೂ ಜಾನಪದ ಕ್ಷೇತ್ರಕ್ಕೆ ಅತ್ಯಂತ ದೊಡ್ಡ ಕೊಡುಗೆ.

ಇಂಥ ಒಬ್ಬ ಮಹಾ ವ್ಯಕ್ತಿಯ ಬಗ್ಗೆ ಎಷ್ಟು ಹೇಳಿದರೂ ಕಡಿಮೆ. ಇನ್ನೂ ನನ್ನ ಹತ್ತಿರ ಹೇಳೋ ವಿಷಯ ಬಹಳ ಇದೆ. ಆದರೆ ಸಮಯ ಇಲ್ಲ ಇನ್ನೂ ಸಮಾರೋಪ ಸಮಾರಂಭ ನಡೀಬೇಕು. ನಾ ಹೇಳೋದ್ದಿಷ್ಟೇ ಇಂತಹ ವಿಚಾರ ಸಂಕಿರಣಗಳು ಮೇಲಿಂದ ಮೇಲೆ ಆಗಬೇಕು. ಇದಕ್ಕೂ ಮೊದಲು ಹಂಪಿಯಲ್ಲಿ ಆದ ನೆನಪು ನನಗೆ. ಅಲ್ಲಲ್ಲಿ ನಡಿದಿದ್ದರೂ, ಇಲ್ಲಿ ನಡದದ್ದು ಪ್ರಥಮ. ಇಂಥ ಒಂದು ಆವರಣದಲ್ಲಿ ವಿದ್ವತ್ ವಲಯದಲ್ಲಿ, ವಿದ್ಯಾ ಮಂದಿರದಲ್ಲಿ ನಡದದ್ದು ಬಹಳ ಸ್ತುತ್ಯವಾದಂತಹದ್ದು. ಅದಕ್ಕಾಗಿ ಜಾನಪದ ಅಕಾಡೆಮಿಯವರಿಗೆ, ಎಲ್ಲರಿಗೂ ನಮಸ್ಕಾರ.

❖

# ಸಮಾರೋಪ ಸಮಾರಂಭ

# ಮುಖ್ಯ ಅತಿಥಿಗಳ ಭಾಷಣ

ಡಾ. ವೀರಣ್ಣ ರಾಜೂರ

◆

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದಂತಹ ಶ್ರೀ ಶಂಭು ಹೆಗಡೆಯವರೇ, ಈ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿರುವ ಡಾ. ಎಸ್. ಆರ್. ಗುಂಜಾಳ ಅವರೇ, ಇನ್ನೊಬ್ಬ ಮುಖ್ಯ ಅತಿಥಿಗಳಾಗಿರುವ ಡಾ. ರಾಜೇಂದ್ರ ಯರನಾಳೆಯವರೇ, ವೇದಿಕೆಯ ಮೇಲಿರುವ ಕನ್ನಡ ಅಧ್ಯಯನ ಪೀಠದ ಅಧ್ಯಕ್ಷರಾಗಿರುವ ಡಾ. ಬಿ. ಆರ್. ಹಿರೇಮಠರೇ, ಜಾನಪದ ಅಕಾಡೆಮಿ ಸದಸ್ಯರಾಗಿರುವ ಗವೀಶ ಹಿರೇಮಠರೇ, ಡಾ. ಗದ್ದಗಿಮಠರ ಕುಟುಂಬದ ಎಲ್ಲ ಸದಸ್ಯರೇ ಹಾಗೂ ಇಲ್ಲಿ ಸೇರಿರುವ ಸಹೃದಯ ಸಭಿಕರೆ,

ಇವತ್ತು ಬೆಳಗಿನಿಂದ ನಾವೆಲ್ಲ ಗದ್ದಗಿಮಠರ ಲೋಕದಲ್ಲಿಯೇ ಇದ್ದೇವೆ, ಅವರದೇ ಗುಂಗಿನಲ್ಲಿ ಮುಳುಗಿದ್ದೇವೆ. ಗದ್ದಗಿಮಠರರದು ಜಾನಪದ ಲೋಕದಲ್ಲಿ ಎಂದೂ ಮರೆಯದಂತಹ ಬಹು ದೊಡ್ಡ ಹೆಸರು. ಅವರ ವಿಷಯದಲ್ಲಿ ಇದುವರೆಗೂ ಮಾತನಾಡಿದಂತಹ ಎಲ್ಲ ವಿದ್ವಾಂಸರು ಇದೇ ಅಭಿಪ್ರಾಯಪಟ್ಟಿದ್ದಾರೆ. ಜಾನಪದ ಕ್ಷೇತ್ರದಲ್ಲಿ ವಿಶೇಷ ಕೆಲಸವೇನೂ ಆಗದ ಸಂದರ್ಭದಲ್ಲಿ ಪಿಎಚ್.ಡಿ. ಸಂಶೋಧನೆ ಕೈಕೊಂಡು ಜನಪದ ಸಾಹಿತ್ಯ ಎಷ್ಟು ಉನ್ನತವಾದದ್ದು ಅನ್ನೋದನ್ನ ಗುರುತಿಸಿ ಕೊಟ್ಟರು. ಕರ್ನಾಟಕ ಅಷ್ಟೇ ಅಲ್ಲ ಭಾರತದಲ್ಲಿಯೇ ಪ್ರಥಮ ಜಾನಪದ ಪಿಎಚ್.ಡಿ ಪಡೆದ ಪದವೀಧರರೆಂಬ ಖ್ಯಾತಿಗೆ ಪಾತ್ರರಾದರು. ಇಂಥ ಮಹಾ ವ್ಯಕ್ತಿಯನ್ನು ಎಷ್ಟು ಸ್ಮರಿಸಿದರೂ ಕಡಿಮೆಯೆ.

ಈಗಾಗಲೇ ಬಹಳಷ್ಟು ಜನ ಹೇಳಿದ ಹಾಗೆ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಅಭ್ಯಾಸ ಮಾಡೋರಿಗೆ ಆರ್. ನರಸಿಂಹಾಚಾರ್ ಅವರ ಕವಿಚರಿತೆ ಸಂಪುಟಗಳು, ಶಾಸನ ಕ್ಷೇತ್ರದಲ್ಲಿ ಸಾಂಸ್ಕೃತಿಕ ಅಧ್ಯಯನ ಮಾಡೋರಿಗೆ ಡಾ. ಚಿದಾನಂದ ಮೂರ್ತಿಯವರ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಅನ್ನೋ ಗ್ರಂಥ ಹೇಗೆ ಮುಖ್ಯವಾಗಿವೆಯೋ ಹಾಗನೇ ಜಾನಪದ ಕ್ಷೇತ್ರದಲ್ಲಿ ಡಾ. ಗದ್ದಗೀಮಠರ "ಕನ್ನಡ ಜಾನಪದ ಗೀತೆಗಳು" ಅನ್ನೋ ಗ್ರಂಥ ಮುಖ್ಯ ಆಕರವೆನಿಸಿದೆ. ಜಾನಪದ ಕ್ಷೇತ್ರದಲ್ಲಿ ಅಭ್ಯಾಸ ಕೈಕೊಳ್ಳುವ ಪ್ರತಿಯೊಬ್ಬ ವಿದ್ಯಾರ್ಥಿ ಈ ಕೃತಿ ನೋಡಿಯೆ ಮುಂದೆ ಹೋಗಬೇಕು.

ಇಂಥ ಅಮೂಲ್ಯ ಕಾರ್ಯಮಾಡಿದ ಡಾ. ಗದ್ದಗಿಮಠರನ್ನು ಅನೇಕರು ಹೇಳಿದಂತೆ ನಾವು ಮರತ ಬಿಟ್ಟದ್ದಿವೇನೋ ಅನಿಸುತ್ತೆ. ಉಪೇಕ್ಷಿತ ವಿದ್ವಾಂಸರಲ್ಲಿ ಅವರೂ ಒಬ್ಬರಾಗಿದ್ದಾರೆ ಎನಿಸುತ್ತೆ. ಅವರ ಬಗ್ಗೆ ಬಂದಂತಹ ಗ್ರಂಥಗಳಾಗಲಿ, ಲೇಖನಗಳಾಗಲಿ ವಿಮರ್ಶೆಗಳಾಗಲಿ ತೀರ ಕಡಿಮೆ. ಅವರು ಕರ್ನಾಟಕ ವಿಶ್ವ ವಿದ್ಯಾಲಯದ ಪ್ರಸಾರಾಂಗದ ಸಹ ನಿರ್ದೇಶಕರಾಗಿದ್ದರು. ಆದರೆ ಅದೇ ಪ್ರಸಾರಾಂಗದಿಂದ ಅವರ ಬಗ್ಗೆ ಒಂದು ಪ್ರಚಾರೋಪನ್ಯಾಸ ಮಾಲಿಕೆಯ ಪುಸ್ತಕ ಸಹಿತ ಬರದೇ ಇರುವುದು ಖೇದದ ಸಂಗತಿ.

ನಾವಿಂದು ನಾಲ್ಕಾರು ಪುಸ್ತಕ ಬರೆದವರ ಬಗ್ಗೆ ಪಿಎಚ್.ಡಿ. ಮಾಡಸ್ತೀವಿ. ಆದರೆ ಇಷ್ಟೊಂದು ಅಗಾಧವಾದ ಕೆಲಸ ಮಾಡಿದ, ಗ್ರಂಥಗಳನ್ನು ರಚಿಸಿದ ಡಾ. ಗದ್ದಗಿಮಠರ ವಿಷಯದಲ್ಲಿ ಒಂದೂ ಪಿಎಚ್. ಡಿ. ಆಗಿಲ್ಲ ಅನ್ನೋದು ಅಚ್ಚರಿ ಉಂಟು ಮಾಡುತ್ತದೆ. ಅಲ್ಲಲ್ಲಿ ವಿಶ್ವಕೋಶದೊಳಗೆ, ಪ್ರಾಸಂಗಿಕವಾಗಿ ಜಾನಪದಕ್ಕೆ ಸಂಬಂಧಿಸಿದಂತೆ ಚರಿತ್ರೆ ಬರಿಯೋ ಸಂದರ್ಭದಲ್ಲಿ, ವಿಮರ್ಶೆ ಮಾಡುವ ಸಂದರ್ಭದಲ್ಲಿ ಇವರ ಹೆಸರನ್ನು ಉಲ್ಲೇಖ ಮಾಡತ್ತಾರೆ ಅಷ್ಟೇ ಹೊರತಾಗಿ ಇವರ ಸಮಗ್ರ ಕಾರ್ಯದ ಬಗ್ಗೆ, ಸಾಹಿತ್ಯದ ಬಗ್ಗೆ ಘಿವರವಾದ ಬರಹಗಳೇ ಇಲ್ಲ.

ಇಂಥ ಒಂದು ಸಮಯದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರು, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದವರ ಸಹಯೋಗದೊಂದಿಗೆ ವಿಚಾರ ಸಂಕಿರಣ ಏರ್ಪಡಿಸಿ ಗದ್ದಗಿಮಠರನ್ನು ಸ್ಮರಿಸುವಂತಹ, ಅವರನ್ನು ಕುರಿತು, ಅವರ ಸಾಹಿತ್ಯ ಕುರಿತು ಚಿಂತಿಸುವಂತಹ ಸದಾವಕಾಶ ದೊರಕಿಸಿ ಕೊಟ್ಟದ್ದು ಒಂದು ಉತ್ತಮ ಕಾರ್ಯ ಅಂತ ನಾನು ಭಾವಿಸ್ತೀನಿ. ಆದ್ದರಿಂದ, ಅಕಾಡೆಮಿ ಅಧ್ಯಕ್ಷರನ್ನು, ಕನ್ನಡ ಅಧ್ಯಯನ ಪೀಠದ ಅಧ್ಯಕ್ಷರನ್ನು ಈ ಸಂದರ್ಭದಲ್ಲಿ ತುಂಬು ಹೃದಯದಿಂದ ಅಭಿನಂದಿಸ್ತೀನಿ.

ಈಗಾಗಲೇ ಇಮ್ರಾಪುರ ಅವರು ಹೇಳಿದರು, ಈ ವಿಚಾರ ಸಂಕಿರಣದಿಂದ ಗದ್ದಗಿಮಠ ಅವರು ಗೊತ್ತಿಲ್ಲದವರಿಗೆ ಗೊತ್ತಾದರು. ಅರ್ಧಮರ್ಧ ತಿಳಿಕೊಂಡವರಿಗೆ ಪೂರ್ತಿ ತಿಳಿದರು ಅಂತ. ಅಂದರ, ಅವರು ಮಾಡಿದಂತಹ ಕೆಲಸ, ಅವರ ವ್ಯಕ್ತಿತ್ವ, ಅವರ ಸ್ವಭಾವ, ಅವರ ಅಧ್ಯಯನನಿಷ್ಠೆ – ಹೀಗೆ ಎಲ್ಲವನ್ನೂ ಅನೇಕ ವಿದ್ವಾಂಸರು ಬಿಡಿ ಬಿಡಿಯಾಗಿ ತಿಳಿಸಿಕೊಟ್ಟರು. ಆರಂಭದ ಉದ್ಘಾಟನಾ ಭಾಷಣದಿಂದ ಹಿಡಿದು ಈ ಸಮಾರೋಪ ಸಮಾರಂಭದವರೆಗೂ ಎಲ್ಲರೂ ಅವರ ಸಾಹಿತ್ಯನ ಎಳೆ ಎಳೆಯಾಗಿ ಬಿಡಿಸಿದ್ರು. ಎರಡೂ ಗೋಷ್ಠಿಗಳಲ್ಲಿ ನಾಲ್ಕು ಜನ ವಿದ್ವಾಂಸರು, ಇಬ್ಬರು ಅಧ್ಯಕ್ಷರು ಬೇರೆ ಬೇರೆ ಪ್ರಕಾರದ ಒಟ್ಟು ಅವರ ಸಾಹಿತ್ಯ ಮತ್ತು ಬದುಕಿಗೆ ಸಂಬಂಧಿಸಿದಂತೆ ಮೌಲಿಕವಾದ ವಿಚಾರಗಳನ್ನು ಮಂಡಿಸಿದ್ದಾರೆ.

ಗದ್ದಗಿಮಠರು ಬಹುಮುಖ ಪ್ರತಿಭೆಯುಳ್ಳವರು. ಬಹಳ ಜನ ಅವರು ಜಾನಪದ ಕ್ಷೇತ್ರದಲ್ಲಿ ಮಾತ್ರ ಕೆಲಸ ಮಾಡಿದಂಥವರು ಅಂತನೇ ತಿಳಕೊಂಡಿದ್ದಾರೆ. ಆದರೆ ಅವರು ಸೃಜನ ಮತ್ತು ಸೃಜನೇತರ ಎರಡೂ ಕ್ಷೇತ್ರದಲ್ಲಿ ಬಹಳಷ್ಟು ಶ್ರದ್ಧೆಯಿಂದ ಕೆಲಸ ಮಾಡಿದ್ದಾರೆ. ಮೂಲತಃ ಅವರು ಸೃಜನಶೀಲ ಲೇಖಕರು. ಈಗಾಗಲೇ ಅವರೇ ರಚಿಸಿಥ ಕೆಲವು ಹಾಡುಗಳನ್ನು ಅವರ ಮಗಳಾದ ಅಕ್ಕಮಹಾದೇವಿ ಹಾಡಿದ್ರು. ಸುಮಾರು ೧೬೩ ಕವನಗಳನ್ನು ಅವರು ರಚಿಸಿದ್ದರು ಅಂತ ಕೇಳಿದ್ದೀವಿ. ಅವುಗಳನ್ನು ಅಕ್ಕಮಹಾದೇವಿ ಪ್ರಕಟಿಸುವ ವಿಷಯ ಪ್ರಸ್ತಾಪಿಸಿದ್ದಾರೆ. ಪ್ರಕಟಗೊಂಡು ಆ ಕೃತಿ ಹೊರ ಬಂದಾಗ ನವೋದಯ ಕಾಲದ ಮೌಲ್ಯಗಳನ್ನು ಅವರ ಕಾವ್ಯದಲ್ಲಿ ಎಷ್ಟರ ಮಟ್ಟಿಗೆ ಹ್ಯಾಗ ಬಿಂಬಿಸಿದ್ದಾರೆ ಅನ್ನೋದು ಗೊತ್ತಾಗುತ್ತ. ಅವರೊಬ್ಬ ಕವಿ ಅನ್ನೋದನ್ನ ಬಿಂಬಿಸಲಿಕ್ಕೆ ಸಾಧ್ಯವಾಗುತ್ತ.

ಅವರ ಜಾನಪದ ಕ್ಷೇತ್ರದ ಕಾರ್ಯವಂತೂ ಸರಿಯೇ ಸರಿ. ಅದರ ಜೊತೆಗೆ ಅವರು ಎಷ್ಟರ ಮಟ್ಟಿಗೆ ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ಆಸಕ್ತಿ ಇಟಗೊಂಡಿದ್ದರು ಅಂದ್ರ – ಹಸ್ತ ಪ್ರತಿ ಸಂಗ್ರಹ, ಶಾಸನಗಳ ಸಂಗ್ರಹ, ನಾಣ್ಯಗಳ ಸಂಗ್ರಹ, ಶಿಲ್ಪಗಳ ಸಂಗ್ರಹ ಹೀಗೆ ಸಂಸ್ಕೃತಿಗೆ ಸಂಬಂಧಿಸಿದ ಎಲ್ಲಾ ವಸ್ತು ಸಂಗತಿಗಳನ್ನು ಅವರು ಸಂಗ್ರಹ ಮಾಡಿದರು. ಆಗಿನ ಕಾಲದ ವಿದ್ವಾಂಸರ ಮನೋಧರ್ಮನೇ ಹಾಗೆ ಕಾಣಿಸುತ್ತೆ. ನಾವಿವತ್ತು ನಮ್ಮನ್ನು ಒಂದೊಂದು ಕ್ಷೇತ್ರಕ್ಕೆ ಸೀಮಿತಗೊಳಿಸಿಕೊಂಡು ಬಿಟ್ಟೀವಿ. ನಮ್ಮದು ಕನ್ನಡ – ಅದರಲ್ಲೂ ಹಳಗನ್ನಡ, ಹೊಸಗನ್ನಡ ಹೀಗೇನೆ ಹೊರಟೀವಿ. ಆದರೆ ಗದ್ದಗಿಮಠರು ಎಲ್ಲಾ ಕ್ಷೇತ್ರದಲ್ಲಿ ಕೈಚಾಚಿ ಅಲ್ಲಿದ್ದಂತಹ ಸಂಪತ್ತನ್ನು ತಮ್ಮದನ್ನಾಗಿ ಮಾಡಿಕೊಂಡು ತಾವು ಬೆಳೀತಾ ಆ ಕ್ಷೇತ್ರವನ್ನೂ ಬೆಳೆಸಿದರು. ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಕಾರ್ಯ ಮಾಡಿದ್ದರೂ ಕೂಡ ನಾವು ಅವರನ್ನ ಜಾನಪದ ವಿದ್ವಾಂಸರಂತನೇ ಗುರುತಿಸೂದಕ್ಕ ಕಾರಣ ಆ ಕ್ಷೇತ್ರದಾಗ ಎದ್ದುಕಾಣುವಂಥ ಕೆಲಸ ಮಾಡಿದ್ದಾರೆ.

ಇದುವರೆಗೂ ಅವರ ಸಾಹಿತ್ಯ ಕುರಿತು ಬಹಳ ಜನ ಮಾತಾಡಿದ್ದಾರೆ. ನಾನು ಹೆಚ್ಚಿಗೆ ಮಾತಾಡದೇ ಕೆಲವು ಸೂಚನೆಗಳನ್ನು ಕೊಡ ಬಯಸ್ತೀನಿ. ಈಗಾಗಲೇ ಡಾ. ಇಮ್ರಾಪುರ ಹೇಳಿದರು ಅವರ ಮೂಲ ಪ್ರಬಂಧ ಎಷ್ಟೊಂದು ದೊಡ್ಡದಾಗಿತ್ತು ಅನ್ನೋದನ್ನ, ಬಹಳ ವಿಸ್ತಾರವಾದ ಪ್ರಬಂಧ ಅದು. ಅದರ ಅರ್ಧ ಭಾಗ ಮಾತ್ರ ಈಗ ಪ್ರಕಟವಾಗಿದೆ. ಅದು ಸಂಪೂರ್ಣ ಪ್ರಕಟವಾಗಿದ್ದರೆ ಗದ್ದಗಿಮಠರ ಸಮಗ್ರ ಕಾರ್ಯ ವ್ಯಾಪ್ತಿ ಗೊತ್ತಾಗುತ್ತಿತ್ತು. ಅವರ ಇನ್ನುಳಿದ ಪ್ರಮುಖ ಕೃತಿಗಳೂ ಹೊರಬರಲಿಲ್ಲ, ಒಟ್ಟು ೨೧ ಗ್ರಂಥಗಳನ್ನು ರಚಿಸಿದ್ದರು ಅನ್ನೋದು ಗೊತ್ತಾಗುತ್ತೆ. ಅದರಲ್ಲಿ ೮ ಮಾತ್ರ ಪ್ರಕಟವಾಗಿವೆ. ಇನ್ನೂ ೧೩ ಗ್ರಂಥಗಳು ಎಲ್ಲಿ ಹೋದವು? ಅವರು ಸಂಗ್ರಹಿಸಿದ ಜಾನಪದ ರಾಮಾಯಣ–ಮಹಾಭಾರತ ಹಸ್ತಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಗೆ ಪ್ರಕಟಣೆಗಾಗಿ ಕೊಟ್ಟಿದ್ದರಂತೆ. ಆದರೆ ಅವು ಪ್ರಕಟ ಆಗಲಿಲ್ಲ. ತಿರಿಗೂ ಬರದೆ ಅಲ್ಲೇ ಕಳೆದು ಹೋದವು ಅನ್ನೊ ವಿಷಯ ತಿಳಿದು ತುಂಬ ನೋವೆನಿಸುತ್ತದೆ. ರಾಮಾಯಣ–ಮಹಾಭಾರತ ಎರಡೂ ಗ್ರಂಥಗಳ ಬಗ್ಗೆ ಅವರ ಪಿಎಚ್. ಡಿ ಪ್ರಬಂಧದಲ್ಲಿ ಒಂದು ಅಧ್ಯಾಯ ಇದೆ. ಅದನ್ನಾದರೂ ಸಮಗ್ರವಾಗಿ ಪ್ರಕಟಿಸಿ, ಅವು ಯಾವ ರೀತಿ ಇದ್ದವು ಅನ್ನೋದು ಗೊತ್ತಾಗುತ್ತಿತ್ತು. ಅವುಗಳನ್ನ ಪ್ರಕಟಿಸುವಂತಹ ಯೋಜನೆಯನ್ನು ಅಕಾಡೆಮಿ ಇಲ್ಲವೇ ಸಂಸ್ಕೃತಿ ಇಲಾಖೆ ಅಥವಾ ಕನ್ನಡ ಅಧ್ಯಯನ ಪೀಠ ಹಾಕಿಕೊಳ್ಳಬೇಕು. ಅವರ ಹೆಸರಿನಲ್ಲಿ ಒಂದು ಟ್ರಸ್ಟ್ ರಚನೆ ಆಗಬೇಕು.

ಇದು ಸಮಗ್ರ ಸಂಪುಟಗಳ ಪ್ರಕಟಣೆಯ ಯುಗ. ಸಮಗ್ರ ಕಾವ್ಯ, ಸಮಗ್ರ ಗದ್ಯ, ಸಮಗ್ರ ಲೇಖನ ಹೀಗೆ ಎಲ್ಲವೂ ಸಮಗ್ರವಾಗಿ ಬರುವಂತಹ ಈ ಸಮಯದಲ್ಲಿ ಗದ್ದಗಿಮಠರ ಸಮಗ್ರ ಸಾಹಿತ್ಯನೂ ಹೊರತರಬೇಕು. ಆ ನಿಟ್ಟಿನಲ್ಲಿ ಕೆಲಸ ಆಗಬೇಕು.

ಗದ್ದಗಿಮಠರು ಬರೀ ಹಾಡುಗಳನ್ನು ಸಂಗ್ರಹಿಸಲಿಲ್ಲ, ಅವುಗಳಿಗೆ ಬರೆದಂತಹ ಪ್ರಸ್ತಾವನೆ ಇದೆಯಲ್ಲ ಅದರಲ್ಲಿ ಸಂಸ್ಕೃತಿಶೋಧ ಮಾಡಿದ್ದಾರೆ. ಸಂಶೋಧನೆಯಲ್ಲಿ ಎರಡು ಮುಖ್ಯವಾದ ಕೆಲಸಗಳು. ಒಂದು ಆಕರ ಸಂಗ್ರಹ. ಇನ್ನೊಂದು ಆಶಯ ಶೋಧ ಮಾಡೋದು. ಗದ್ದಗಿಮಠರು ಇವೆರಡನ್ನೂ ಮಾಡಿದ್ದಾರೆ. ಜನಪದ ಹಾಡುಗಳನ್ನು ಸಂಗ್ರಹ ಮಾಡಿದ್ದಾರೆ. ಆ ಸಂಗ್ರಹದ ಜೊತೆ ಅದರಲ್ಲೇನಿದೆ ಅನ್ನೋದನ್ನು ಶೋಧಿಸಿದ್ದಾರೆ. ಅದರ ಜೊತೆಗೆ ಪ್ರಬಂಧ ಬರೆದು ವಿಸ್ತಾರಗೊಳಿಸಿದ್ದಾರೆ. ಅವರ ಅಧ್ಯಯನ ಮೂರು ನೆಲೆಗಳಲ್ಲಿ ನಡೆದಿದೆ. ಮೊದಲನೆಯದು ಸಂಗ್ರಹ, ಎರಡನೆಯದು ಸಂಪಾದನೆ ಆಮೇಲಿನದು ವಿವೇಚನೆ.

ಇನ್ನೊಂದು ಅವರು ಮಾಡಿದ ಬಹು ಮುಖ್ಯ ಕೆಲಸವೆಂದರೆ ಜಾನಪದ ಶಬ್ದಕೋಶ ಸಿದ್ಧಪಡಿಸಿದ್ದು. ಅದರ ಜೊತೆಗೆ 'ಶಿವ ಶಬ್ದಕೋಶ' ಅಂತ ಮಾಡಿದ್ದಾರೆ. ಶಿವ ಅನ್ನೋ ಶಬ್ದ ಎಲ್ಲೆಲ್ಲಿ ಬರುತ್ತೋ ಅವುಗಳನ್ನು ಸಂಗ್ರಹಿಸಿ ಒಂದು ಕೋಶ ಮಾಡಿದ್ದು ಒಂದು ವಿಶಿಷ್ಟವಾದಂತಹ ಕೆಲಸ. ಆ ಕೋಶಗಳು ಇಂದು ಕಳೆದು ಹೋದದ್ದು ನಮ್ಮ ದುರದೃಷ್ಟ. ಅದು ಇದ್ದಿದ್ದರೆ ಬಹುಶಃ ಕಿಟಲ್ ಕೋಶದಷ್ಟೇ ಮಹತ್ವ ಜಾನಪದಕ್ಕೆ ಸಂಬಂಧಿಸಿದಂತೆ ಬರುತ್ತಿತ್ತೇನೋ. ಜಾನಪದ ಹಾಡುಗಳ ಜೊತೆ ಅವರು ಮಾಡಿದ ಇತರ ಪ್ರಮುಖ ಸಂಗ್ರಹ ಕಾರ್ಯವೆಂದರೆ, ಗಾದೆಗಳ ಸಂಗ್ರಹ. ನಾಲ್ಕು ಸಾವಿರ ಮುನ್ನೂರು ಎಪ್ಪತ್ತೊಂದು ಗಾದೆಗಳನ್ನು ಸಂಗ್ರಹಿಸಿದ್ದಾರೆಂದು ತಿಳಿಯುತ್ತದೆ. ಅದು ಕೂಡ ಪ್ರಕಟವಾಗಿಲ್ಲ.

ಹೀಗೆ ಅವರ ಎಲ್ಲಾ ಅಪ್ರಕಟಿತ ಕೃತಿಗಳನ್ನು ಹುಡುಕಿ ಪ್ರಕಟಿಸಿ ಜನತೆಗೆ ಕೊಟ್ಟರೆ, ಗದ್ದಗಿಮಠರು ಮಾಡಿದಂಹ ಒಟ್ಟು ಕಾರ್ಯದ ಬೃಹತ್ತು, ಮಹತ್ತು ಮತ್ತು ಮೌಲಿಕತೆಗಳನ್ನು

ಎತ್ತಿ ತೋರಿಸಲಿಕ್ಕೆ ಸಾಧ್ಯ ಆಗುತ್ತೆ. ಬೆಳ್ಳಿಗ್ಗೆಯಿಂದ ನಡೆದ ಈ ಕಾರ್ಯಕ್ರಮದಲ್ಲಿ ಗದ್ದಗಿಮಠರ ಇಡೀ ಕುಟುಂಬದ ಸದಸ್ಯರು ಬಹಳ ಆಸಕ್ತಿಯಿಂದ, ಪ್ರೀತಿಯಿಂದ ಭಾಗವಹಿಸಿದ್ದಾರೆ. ಹೀಗಾಗಿ ಇದೊಂದು ಆತ್ಮೀಯ ವಾತಾವರಣದಲ್ಲಿ ನಡೆದ ವಿಶಿಷ್ಟ ಸಮಾರಂಭವೆನಿಸಿದೆ. ಅದಕ್ಕೆ ಕಾರಣರಾದಂತಹ ಎಲ್ಲರಿಗೂ ಕೃತಜ್ಞತೆ ಹೇಳುತ್ತಾ ಗದ್ದಗಿಮಠರನ್ನು ನೆನೆಯುವ ಈ ಅಪೂರ್ವ ಸಮಾರಂಭದಲ್ಲಿ ಭಾಗಿಯಾಗುವ ಭಾಗ್ಯ ನನಗೂ ದೊರೆಯಿತಲ್ಲ ಎಂಬ ಧನ್ಯತಾ ಭಾವದೊಂದಿಗೆ ನನ್ನ ಮಾತುಗಳನ್ನು ಮುಗಿಸ್ತೀನಿ ನಮಸ್ಕಾರ.

❖

# ಸಮಾರೋಪ ಭಾಷಣ

ಡಾ. ರಾಜೇಂದ್ರ ಯರನಾಳೆ

ಡಾ. ಬಿ. ಎಸ್. ಗದ್ದಗಿಮಠರ ಬದುಕು ಬರಹ ಕುರಿತ ಇಂದಿನ ಒಂದು ದಿನದ ವಿಚಾರ ಸಂಕಿರಣದ ಸಮಾರೋಪ ಕಾರ್ಯಕ್ರಮದಲ್ಲಿ ಹೇಳಬೇಕಾದ ವಿಷಯವೇ ಇಲ್ಲವೆಂದು ಭಾವಿಸಿರುವೆ. ಕಾರಣ ಇಷ್ಟೇ, ಗದ್ದಗಿಮಠರ ಜೀವನ ಸಾಧನೆ, ಬದುಕು ಬರಹ ಕುರಿತು ಸವಿಸ್ತಾರವಾಗಿ ಮಾತನಾಡಿದ ವಿದ್ವಾಂಸರ ಮಾತುಗಳೆಲ್ಲವನ್ನೂ ಆಲಿಸಿದಿರಿ. ಡಾ. ಸೋಮಶೇಖರ ಇಮ್ರಾಪುರ ಅವರು ಮಾತನಾಡುತ್ತ "ಇಂದಿನ ವಿಚಾರ ಸಂಕಿರಣದಿಂದ ಗದ್ದಗಿಮಠರ ಕುರಿತು ಏನೂ ತಿಳಿಯದವರು ಸ್ವಲ್ಪ ತಿಳಕೊಂಡರು, ಸ್ವಲ್ಪ ತಿಳಕೊಂಡವರು ಪೂರ್ಣ ತಿಳಿದುಕೊಂಡರು ಪುನರಾವಲೋಕನ ಮಾಡಿಕೊಂಡೆವು" ಎಂಬ ಮಾತನ್ನು ಮುಂದುಮಾಡಿಕೊಂಡು ಒಂದೇ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಪೌರಾಣಿಕ ಕಥೆಯಲ್ಲಿರುವಂತೆ ನಾರದ ಮುನಿಗಳು ಭಗವಂತನನ್ನು ಕುರಿತು ಒಂದು ಪ್ರಶ್ನೆ ಕೇಳಿದರಂತೆ. ಅದೇಂದರೆ; ಸತ್ಪುರುಷರ ದರ್ಶನದಿಂದ ಏನು ಲಾಭ ಸಿಗುತ್ತದೆ. ಇದಕ್ಕೆ ಭಗವಂತ ಆ ಒಂದು ಕಾಡಿನ ಮರದಲ್ಲಿ ಒಂದು ಗಿಳಿ ಕೂತಿದೆ ತಾವು ಹೋಗಿ ಆ ಗಿಳಿಯನ್ನು ಕೇಳಿದರೆ, ಅದು ನಿಮ್ಮ ಪ್ರಶ್ನೆಗೆ ಉತ್ತರ ಹೇಳುತ್ತದೆ ಎಂದನಂತೆ.

ನಾರದರು ಕಾಡಿನಲ್ಲಿ ಗಿಳಿಯನ್ನು ಹುಡುಕಿಕೊಂಡು ಹೋಗಿ ಈ ರೀತಿ ವಿಚಾರಿಸುತ್ತಾರೆ. ಸತ್ಪುರುಷರ ದರ್ಶನದಿಂದ ಏನು ಲಾಭ ಸಿಗುತ್ತದೆ ಎಂದು ? ಗಿಳಿ ಇವರನ್ನು ನೋಡಿ ಏನೋ ಹೇಳಬೇಕೆನ್ನುತ್ತಿದೆ ಎಂಬಂತೆ ಕುತ್ತಿಗೆ ತಿರುಗಿಸುತ್ತ ಮರದಿಂದ ಕೆಳಗೆ ಬಿದ್ದುಬಿಡುತ್ತದೆ. ನೋಡಿದರೆ, ಅದು ಸತ್ತೇ ಹೋಗಿದೆ. ನಾರದರು ದುಃಖದಿಂದ ಭಗವಂತನ ಹತ್ತಿರ ಬಂದು ಇದ್ದ ವಿಷಯ ಅರುಹುತ್ತಾರೆ. ಭಗವಂತನು ಹೀಗಾಯಿತೇ ಹಾಗಾದರೆ, ಈಗ ತಾನೇ ಅಲ್ಲಿರುವ ಒಂದು ಕೊಟ್ಟಿಗೆಯಲ್ಲಿ ಆಕಳು ಒಂದು ಕರುವಿಗೆ

ಜನ್ಮ ನೀಡಿದೆ. ಆ ಆಕಳ ಕರುವನ್ನು ವಿಚಾರಿಸಿದರೆ ನಿಮ್ಮ ಸಮಸ್ಯೆಗೆ ಉತ್ತರ ಸಿಗುವುದೆಂದರು. ನಾರದರು ಕೊಟ್ಟಿಗೆಯನ್ನು ಹುಡುಕಿಕೊಂಡು ಬಂದು ಆಗ ತಾನೇ ಜನ್ಮ ಪಡೆದ ಕರುವನ್ನು ಕುರಿತು ಸತ್ಪುರುಷರ ದರ್ಶನದಿಂದ ಏನು ಲಾಭ ತಿಳಿಸುವೆಯಾ? ಎಂದು ಕೇಳುತ್ತಾರೆ. ಅದಾಗಲೇ ಜನ್ಮ ತಾಳಿದ ಕರುವು ನಾರದರನ್ನು ಕುತ್ತಿಗೆ ಎತ್ತಿ ನೋಡಿ ಧೊಪ್ಪನೆ ಕೆಳಗೆ ಬಿದ್ದು ಅದೂ ಸತ್ತುಹೋಗುತ್ತದೆ. ನಾರದರಿಗೆ ಇದೇನಿದು ನಾನು ಪ್ರಶ್ನೆ ಮಾಡಿದ ಕೂಡಲೇ ಸತ್ತು ಹೋಯಿತಲ್ಲ ಎಂದು ಚಿಂತಾಕ್ರಾಂತರಾಗಿ ಪುನಃ ಭಗವಂತನಲ್ಲಿಗೆ ಬಂದು ನಡೆದ ವೃತ್ತಾಂತವೆಲ್ಲ ತಿಳಿಸುತ್ತಾರೆ. ಆವಾಗ ಭಗವಂತ ಎಲ್ಲವೂ ಒಳ್ಳೆಯದಕ್ಕೆ ಆಗುತ್ತದೆ. ನಿಮ್ಮ ಪ್ರಶ್ನೆಗೆ ಉತ್ತರ ಸಿಗಬೇಕಾದರೆ, ರಾಜರ ಮನೆಯಲ್ಲಿ ಒಂದು ಮಗು ಜನ್ಮ ತಾಳಿದೆ ಅದಕ್ಕೆ ಹೋಗಿ ವಿಚಾರಿಸಿದರೆ, ನಿಮಗೆ ಖಂಡಿತ ಉತ್ತರ ಸಿಗುತ್ತದೆ ಎಂದರು. ನಾರದರು ಗಾಬರಿಯಾಗಿ ಹಿಂದೆ ಗಿಳಿಗೆ ವಿಚಾರಿಸಿದರೆ ಅದು ಸತ್ತು ಹೋಯಿತು, ಆಕಳ ಕರುವನ್ನು ವಿಚಾರಿಸಿದರೆ ಅದೂ ಸತ್ತು ಹೋಯಿತು. ಈಗ ರಾಜರ ಮನೆಯಲ್ಲಿ ಜನ್ಮ ತಾಳಿದ ಮಗುವನ್ನು ವಿಚಾರಿಸಿದರೆ, ಮತ್ತೇನು ಘಟಿಸುವುದೋ ಎಂದು ಚಿಂತಾಕ್ರಾಂತರಾದರು. ಆದರೂ ಭಗವಂತನ ಇಚ್ಛೆ ಎಂದು ರಾಜರ ಮನೆಗೆ ಹೊರಟರು. ಅಲ್ಲಿಯ ನವಜಾತ ಶಿಶುವನ್ನು ಕುರಿತು ಸತ್ಪುರುಷರ ದರ್ಶನದಿಂದ ಏನು ಲಾಭ ? ಎಂದು ಕೇಳುವಷ್ಟರಲ್ಲಿ ಆ ತೊಟ್ಟಿಲಲ್ಲಿದ್ದ ಮಗು ಇವರನ್ನು ನಮಸ್ಕರಿಸಿ ಮಾತನಾಡಲು ಪ್ರಾರಂಭಿಸಿತು. ಇದರಿಂದ ಅಲ್ಲಿದ್ದರಿಗೆಲ್ಲ ಪರಮಾಶ್ಚರ್ಯ. ಮಾತು ಮುಂದುವರಿಸಿ ಮಗು ಹೇಳಿದ್ದೇನೆಂದರೆ; ಪೂಜ್ಯ ನಾರದರೆ ಸತ್ಪುರುಷರ ದರ್ಶನದಿಂದ ಏನು ಲಾಭ ಎಂಬುದಕ್ಕೆ ನಾನು ಮಾತನಾಡುವುದೇ ಸಾಕ್ಷಿ. ನಾನು ಹಿಂದಿನ ಜನ್ಮದಲ್ಲಿ ಗಿಳಿಯಾಗಿದ್ದೆ ತಾವು ನನ್ನನ್ನು ಮಾತನಾಡಿಸಲು ಬಂದಾಗ ತಮ್ಮ ದರ್ಶನ ಮಾತ್ರದಿಂದ ನನ್ನ ಕರ್ಮಾದಿಗಳಿಗೆಲ್ಲ ಪರಿಹಾರವಾಗಿ ತಕ್ಷಣ ಮುಕ್ತಿ ದೊರೆಕಿತು, ಹಾಗಾಗಿ ಸಾವನ್ನಪ್ಪಿದೆ. ಆದರೆ ಪುಣ್ಯಕೋಟಿ ಎನಿಸಿರುವ ಆಕಳ ಕರುವಾಗಿ ಜನ್ಮಿಸಿದೆ. ನನ್ನ ಸುದೈವ ಅಲ್ಲಿಯೂ ತಮ್ಮ ದರ್ಶನವಾಯಿತು. ಹಾಗಾಗಿ ಕರ್ಮಗಳನ್ನನುಭವಿಸದೇ ಮುಕ್ತಿ ದೊರಕಿತು. ಅಷ್ಟೇ ಅಲ್ಲ ಮಹಾರಾಜರ ಮಗುವಾಗಿ ಸಕಲ ಐಶ್ವರ್ಯಗಳನ್ನನುಭವಿಸಲು ಇಲ್ಲಿ ಜನ್ಮ ತಾಳಿದೆ. ನಿಜಕ್ಕೂ ನಾನು ಧನ್ಯ. ಇದೆಲ್ಲವೂ ಸತ್ಪುರುಷರ ದರ್ಶನ ಮಾತ್ರದಿಂದ ಆದದ್ದು, ಇನ್ನು ಸತ್ಕಾರ್ಯದಿಂದ ಏನಾಗಬೇಡ ! ಎಂದಿತು.

ಡಾ. ಬಿ. ಎಸ್. ಗದ್ದಗಿಮಠರ ವಿಚಾರ ಸಂಕಿರಣ, ಅವರ ಜೀವನ ಸಾಧನೆ ಕುರಿತು ಇಡೀ ಒಂದು ದಿವಸ ಚಿಂತನೆಯಲ್ಲಿ ತೊಡಗಿರುವ ನಾವುಗಳೆಲ್ಲರೂ ಸತ್ಪುರುಷರ ದರ್ಶನ ಹಾಗೂ ಸತ್ಕಾರ್ಯದಲ್ಲಿಯೇ ತೊಡಗಿದಂತೆಯೇ. ಬಹುಶಃ ಇದಕ್ಕಿಂತ ಉತ್ತಮ ಉದಾಹರಣೆ ಮತ್ತೊಂದಿಲ್ಲ ಎಂದು ಭಾವಿಸಿರುವೆ.

ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರು ಕನ್ನಡ ಅಧ್ಯಯನ ಪೀಠದ ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ ಸದಸ್ಯರು ಹಾಗೂ ಅಧ್ಯಯನ ಪೀಠದ ಎಲ್ಲ ಬೋಧಕ ವರ್ಗದ ವಿದ್ವಾಂಸರು ಇರುವುದರಿಂದ ತಾವು ಮನಸ್ಸು ಮಾಡಿದರೆ ಆಗದ ಕೆಲಸವೇನಿಲ್ಲ. ಈ ವಿಚಾರ ಸಂಕಿರಣದ ಒಟ್ಟಾರೆ ಹಿನ್ನೆಲೆ ಡಾ. ಬಿ. ಎಸ್. ಗದ್ದಗಿಮಠರು ಈ ವಿಶ್ವವಿದ್ಯಾಲಯದಲ್ಲಿ ಹಾಗು ಈ ನಾಡಿನಲ್ಲಿ ಜಾನಪದಕ್ಕಾಗಿ ದುಡಿದವರು. ಅವರ ಕುರಿತು ಹೆಚ್ಚಿನ ಅಧ್ಯಯನ ಆಗಬೇಕು, ಹೆಚ್ಚು ತಿಳಿದುಕೊಳ್ಳಬೇಕು ಹಾಗೂ ಅವರಿಗೆ ಗೌರವ ಸಲ್ಲಬೇಕು ಎಂಬುದು. ಈ ಹಿನ್ನೆಲೆಯಾಗಿ ಇಲ್ಲಿಯ ಜಾನಪದ ಅಧ್ಯಯನ ವಿಭಾಗಕ್ಕೆ ಡಾ. ಬಿ. ಎಸ್. ಗದ್ದಗಿಮಠ ಜಾನಪದ ಅಧ್ಯಯನ ವಿಭಾಗವೆಂದು ನಾಮಕರಣ ಮಾಡುವುದು. ಇದರಿಂದ ದಿನನಿತ್ಯ ನಾವು ಡಾ. ಗದ್ದಗಿಮಠರನ್ನು ನೆನೆದಂತಾಗುತ್ತೆ ಹಾಗೂ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ.

ಇಂದಿನ ವಿಚಾರ ಸಂಕಿರಣ ಎರಡು ಮೂರು ದೃಷ್ಟಿಯಿಂದ ಮಹತ್ವ ಪಡೆದುಕೊಂಡಿದೆ. ಮೊದಲನೆಯದಾಗಿ ಅವರ ಕಾರ್ಯಕ್ಷೇತ್ರವಾದ ಈ ಅಧ್ಯಯನ ಪೀಠದಲ್ಲಿ ವಿಚಾರ ಸಂಕಿರಣ ಏರ್ಪಡಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಉತ್ತಮ ಕಾರ್ಯ ಮಾಡಿದೆ. ಎರಡನೆಯದಾಗಿ ಗದ್ದಗಿಮಠರ ಗೀತೆಗಳನ್ನು ರಾಗಬದ್ಧವಾಗಿ ಹಾಡುವ ಮೂಲಕ ಒಂದು ರೀತಿಯ ಪ್ರಾತ್ಯಕ್ಷಿಕೆ ಆದಂತಾಗಿರುವುದು. ಇನ್ನೂ ಮಹತ್ವದ್ದೆಂದರೆ, ಜಾನಪದಕ್ಕಾಗಿ ದುಡಿದ ವಿದ್ವಾಂಸರನ್ನು ವಿಚಾರ ಸಂಕಿರಣದಲ್ಲಿ ಜನಪದ ಕಲಾವಿದರನ್ನು ಕರೆಸಿ ಅವರಿಂದ ಜನಪದ ಗೀತೆಗಳನ್ನು ಹಾಡಿಸಿ ಗೌರವದಿಂದ ಕಂಡು ಸನ್ಮಾನಿಸಿರುವುದು.

ಡಾ. ಬಿ. ಎಸ್. ಗದ್ದಗಿಮಠರ ಜನಪದ ಸಂಗ್ರಹದ ಕೆಲವು ಗೀತೆಗಳು, ತ್ರಿಪದಿಗಳು ಗದ್ದಗಿಮಠರು ಸಂಗ್ರಹಿಸಲೇ ಇಲ್ಲ; ಅವುಗಳು ಸ್ವತಃ ಗದ್ದಗಿಮಠರೇ ರಚಿಸಿ ಸಂಗ್ರಹದಲ್ಲಿ ಸೇರಿಸಿರಬೇಕು ಎಂಬ ವಾದವೂ ಇದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಸ್ವಂತ ರಚನೆಯನ್ನು ಸಂಗ್ರಹವೆನ್ನಬೇಕಾದರೆ ತಮ್ಮನ್ನು ತಾವು ಸಂಪೂರ್ಣ ಕ್ಷೇತ್ರ ಕಾರ್ಯದಲ್ಲಿ ತೊಡಗಿಸಿಕೊಂಡು ಅದರಲ್ಲಿಯೇ ಪರಿಪೂರ್ಣತೆ ಪಡೆದರೆ ಆ ರೀತಿ ರಚಿಸಲಿಕ್ಕೆ ಸಾಧ್ಯ. ಜಾನಪದದ ಸಂಪೂರ್ಣ ರಸವನ್ನು ಮೈ ಉಂಡಾಗ ಹಾಗೂ ತಾನೇ ಜಾನಪದ ಜಾನಪದವೇ ತಾನು ಎಂಬಂತೆ ಅದರಲ್ಲಿಯೇ ಮುಳುಗಿದಾಗ ಆಗಿರುವ ಕಾರ್ಯವೆಂದು ಭಾವಿಸಬಹುದು. ಕಾರಣ, ಅವರೇ ರಚಿಸಿರಬೇಕು ಎಂಬ ಪದಗಳು ಜನಪದರ ನಾಲಿಗೆಯ ಮೇಲೆ ಇರಬೇಕಾದರೆ, ರಚಿಸಿ ಸಂಗ್ರಹವೆಂದು ಹೇಳದ, ಸಂಗ್ರಹಿಸಿದ ಸಾಹಿತ್ಯ ಸಂಪಾದನೆ ಕಾರ್ಯದಲ್ಲಿ ಶುದ್ಧಗೊಳಿಸಿರಬಹುದು ಅಥವಾ ಹಲವಾರು ಪಾಠಾಂತರಗಳ ಆಧಾರದ ಮೇಲೆ ಮೂಲ ಆಶಯದಂತೆ ಕೆಲವನ್ನು ರಚಿಸಿರಲೂಬಹುದು ಎನಿಸುತ್ತದೆ. ಜಾನಪದ ಅಧ್ಯಯನದ ಆರಂಭ ಕಾಲದಲ್ಲಿ

ಡಾ. ಗದ್ದಗಿಮಠರು ಮಾಡಿರುವ ಕಾರ್ಯ, ಸಂಗ್ರಹ ಮೊದಲಾಗಿ ಇಂದು ಜಾನಪದ ಆಸಕ್ತರಿಗೆ ಬುನಾದಿ ಎಂಬುದರಲ್ಲಿ ಎರಡು ಮಾತಿಲ್ಲ. ಈ ನಿಟ್ಟಿನಲ್ಲಿ ಡಾ. ಗದ್ದಗಿಮಠರು ಸದಾ ಸ್ಮರಣೀಯರು.

ಕೊನೆಯದಾಗಿ ಒಂದು ಚಿಂತನೆ ವಿದ್ವಾಂಸರಿಗೆ ಬಿಟ್ಟು ನನ್ನ ಮಾತು ಮುಗಿಸುತ್ತೇನೆ. ಅದೇನೆಂದರೆ: ಜಾನಪದ ನಿಂತ ನೀರಲ್ಲ, ಅದು ಸದಾ ಹರಿಯುವ ನದಿ ಎನ್ನುವ ವಿಚಾರದಲ್ಲಿ ಕೆಲವು ಬದಲಾವಣೆಗಳಲ್ಲಿ ಆಧುನಿಕತೆ ಸೇರುವುದನ್ನು ನಾವು ಜಾನಪದವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಉದಾ: ಚಿಮಣಿ ಕಂದೀಲು, ಗೋಲಾ, (ಪೆಟ್ರೋಮ್ಯಾಕ್ಸ್)ಗಳನ್ನು ಇಂದು ಜಾನಪದವೆಂದು ಜನಪದ ವಸ್ತು ಸಂಗ್ರಹಗಳಲ್ಲಿ ಇಡುತ್ತೇವೆ, ಒಪ್ಪಿಕೊಳ್ಳುತ್ತೇವೆ. ಇವುಗಳು ಪ್ರಚಲಿತವಿದ್ದ ಕಾಲದಲ್ಲಿ ಇವುಗಳು ಶಿಷ್ಟವೆನಿಸಿದರೂ ಇದಕ್ಕೂ ಪೂರ್ವದಲ್ಲಿದ್ದ ಹಣತಿಗೆ ದೀಪ, ದೀವಟಿಗೆ ಅಂದು ಜನಪದ ಎನಿಸಿದವು. ಒಂದರರ್ಥದಲ್ಲಿ ಪುರಾತನ ಆದ ವಸ್ತು ವಿಷಯಗಳಲ್ಲೂ ಕೆಲವನ್ನು ಜನಪದವೆಂದು ಇಂದು ಹೇಳುವಾಗ ಇಂದಿನ ಲೈಟು–ಟ್ಯೂಬ್‌ಗಳು ಮುಂದೊಂದು ದಿನ ಜನಪದ ವಸ್ತುಗಳೆಂದು ಒಪ್ಪಿಕೊಳ್ಳುವ ಕಾಲವೂ ಬರಬಹುದು. ಈ ಹಿನ್ನೆಲೆಯಲ್ಲಿ ಇಂದು ಹಲಗೆ ಬಾರಿಸುವವ, ಡೊಳ್ಳು ಬಾರಿಸುವವ ಅಥವಾ ಯಾವುದೋ ಒಂದು ಜನಪದ ಕಲೆ ಬಾರಿಸುವವ ಅವನು ನಿರಂತರ ಅದನ್ನೇ ಮಾಡುತ್ತಿರಬೇಕೆ? ಸರಕಾರ ಉಚಿತವಾಗಿ ಹಲಗೆ ನೀಡಬಹುದು, ಡೊಳ್ಳು ನೀಡಬಹುದು. ಹೀಗೆ ನೀಡಿದಾಕ್ಷಣ ಕಲಾವಿದರಿಗೆ ಉಪಕಾರ ಮಾಡಿದಂತಾಗದು. ಇದು ಒಂದು ರೀತಿಯ ಶೋಷಣೆ. ಅವನಿಗೆ ಬದುಕಲು ಒಂದು ಬೇರೆಯೇ ದಾರಿ ತೋರಬೇಕು, ಎಂಬುದು ಪ್ರಗತಿಪರವಾದ ವಿಚಾರ. ಇಲ್ಲಿ ಸೂಕ್ಷ್ಮವಾಗಿ ಚಿಂತಿಸಬೇಕಾಗಿರುವುದು ಜನಪದ ಹಾಗೂ ಜನಪದ ಕಲೆಯ ಉಳಿವು ಹಾಗೂ ಬೆಳವಣಿಗೆ. ಹಲಗೆ ಹಾಗೂ ಡೊಳ್ಳು ಬಾರಿಸುವವ ಆ ವೃತ್ತಿಯನ್ನು ಅಥವಾ ಹವ್ಯಾಸ ಅಥವಾ ಕಲೆಯನ್ನು ಬಿಟ್ಟರೆ ಮತ್ತೊಬ್ಬ ಯಾರಾದರೂ, ಆ ಕಲೆಯನ್ನು ಮುಂದುವರಿಸಲೇಬೇಕು. ಅಂದಾಗ ಮಾತ್ರ ಆ ಕಲೆ ಉಳಿಯುತ್ತದೆ. ಇಲ್ಲಿ ಇದರಲ್ಲಿಯೇ ಇನ್ನೊಂದು ಸೂಕ್ಷ್ಮ ವಿಚಾರ ಒಳಗೊಂಡಿದೆ. ಹಲಗೆ ಹಾಗೂ ಡೊಳ್ಳೂ ಇಂದು ಚರ್ಮ ಹಾಗೂ ಕಟ್ಟಿಗೆಯಿಂದ ತಯಾರಿಸದೆ ಕಬ್ಬಿಣದ ಹೊರ ಮೈ ಚರ್ಮದ ಬದಲಾಗಿ ಪ್ಲಾಸ್ಟಿಕ್ ಬಳಸಿ ತಯಾರಿಸುವುದನ್ನು ಕಾಣುತ್ತೇವೆ ಹಾಗೂ ಬಾರಿಸುತ್ತೇವೆ. ಇದರಂತೆಯೇ ಒಬ್ಬ ಜನಪದ ವ್ಯಕ್ತಿ ಮಾತ್ರ ಜನಪದ ವಾದ್ಯ ನುಡಿಸದೆ ಶಿಷ್ಟ ವ್ಯಕ್ತಿ ಹಲಗೆ ಹಾಗೂ ಡೊಳ್ಳು ನುಡಿಸಿದಾಗ ಶಿಷ್ಟ ವ್ಯಕ್ತಿಯನ್ನು ಜನಪದ ಕಲಾವಿದ ಹಾಗೂ ಆಧುನಿಕತೆಯಿಂದ ತಯಾರಾದ ಪರಿಕರಗಳನ್ನು ಜನಪದ ವಸ್ತುಗಳೆಂದು ಸ್ವೀಕರಿಸಲೇಬೇಕಾದ ಅನಿವಾರ್ಯತೆ ಇದೆ ಎಂದು ಭಾವಿಸಿರುವೆ. ಇದನ್ನು ಸ್ವೀಕರಿಸದಿದ್ದಲ್ಲಿ ಜನಪದ ಕಲೆಗಳು ನಿಂತು ಹೋಗುತ್ತವೆ, ಜನಪದ ಕಲಾವಿದರು ಅದನ್ನೇ

ವೃತ್ತಿಯಾಗಿಸಿಕೊಂಡು ಜೀವನದಲ್ಲಿ ಹೊಸತನ ಕಾಣದೆ ಶೋಷಿತರೆನಿಸುತ್ತಾರೆ. ಈ ಕುರಿತು ಎಲ್ಲರಿಗೂ ಒಂದು ಚಿಂತನೆ ಒದಗಿಸಿರುವೆನೆಂದು ಭಾವಿಸಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾದ ಸ್ನೇಹಿತ ಶ್ರೀ ಗವೀಶ ಹಿರೇಮಠರಿಗೂ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆಯವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತ ಸರ್ವರಿಗೂ ವಂದನೆಗಳು.

❖

# ಅಧ್ಯಕ್ಷೀಯ ಭಾಷಣ

ಡಾ. ಎಸ್. ಆರ್. ಗುಂಜಾಳ

◆

ಸಮಾರೋಪ ಸಮಾರಂಭದಲ್ಲಿ ಉಪಸ್ಥಿತರಿರುವ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾದ ಶ್ರೀ ಶಂಭು ಹೆಗಡೆಯವರೇ, ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದ ಅಧ್ಯಕ್ಷರಾದ ಡಾ. ಬಿ. ಆರ್. ಹಿರೇಮಠರೇ, ಇಲ್ಲಿ ನೆರೆದಂತಹ ಅನೇಕ ವಿದ್ವಾಂಸರೇ, ಈಗಾಗಲೇ ಮಾತನಾಡಿದ ಡಾ. ರಾಜೂರ, ಡಾ. ರಾಜೇಂದ್ರ ಯರನಾಳೆ ಅವರೇ, ಸಭಿಕರೇ ನಿಮಗೆಲ್ಲ ನನ್ನ ವಂದನೆಗಳು.

ಇಂದಿನ ಸಮಾರೋಪ ಭಾಷಣದಲ್ಲಿ ನಾನು ಅಧ್ಯಕ್ಷತೆ ವಹಿಸಿದ್ದು ಒಂದು ಅಪರೂಪದ ಪ್ರಸಂಗ. ಯಾವುದೋ ಒಂದು ಶಕ್ತಿ. ಯಾರ ಯಾರನೋ ಹಿಡಕೊಂಡು ತಂದು ಒಂದೆಡೆ ಕೂಡಿಸಿ ತನ್ನ ಕಾರ್ಯವನ್ನ ಮಾಡಿಸಿಕೊಳ್ಳುತ್ತೆ ಅನ್ನೋ ಭಾವನೆ ನಂದು. ಗದ್ದಗಿಮಠರನ್ನ ನೋಡಿದವರು, ಅವರ ಜೊತೆ ಇದ್ದವರು; ಅವರ ಜೊತೆ ಕೆಲಸ ಮಾಡಿದವರು ಇಲ್ಲಿದ್ದಾರೆ. ಹೀಗೆ ಅವರ ಒಡನಾಟದಲ್ಲಿದ್ದವರಲ್ಲಿ ನಾನೂ ಒಬ್ಬ. ಅವರು ಬೆಳಗಾಂವದಲ್ಲಿದ್ದಾಗ ಅವರ ಜೊತೆ ಆತ್ಮೀಯರಾಗಿದ್ದ ಇನ್ನೊಬ್ಬರು ಡಾ॥ ಎಂ. ಎಸ್. ಲಠ್ಠೆ. ನಾವಿಬ್ಬರೂ ಅವರನ್ನ ಕಣ್ಣ ತುಂಬ ನೋಡಿದವರು. ಅವರ ಜೊತೆ ಅತಿಯಾಗಿ ಸಲ್ಲಾಪ ಮಾಡಿದವರು ನಾವಿಬ್ಬರೆ ಏನೋ ಅನಿಸುತ್ತೆ.

ನಾನಿಲ್ಲಿ ವಿಶ್ವ ವಿದ್ಯಾಲಯದಲ್ಲಿದ್ದಾಗ, ಅವರೂ ಇಲ್ಲೇ ಇದ್ದರು. ನಾನಾಗ ಅವರನ್ನ ಮೇಲಿಂದ ಮೇಲೆ ಕಾಣತಿದ್ದೆ. ಹಾಗೆ ಕಂಡಾಗೆಲ್ಲ ಅವರು ಹೇಳುತ್ತಿದ್ದ ಮುಖ್ಯ ವಿಷಯ ನೀವು ಎಲ್ಲೇ ಹಳ್ಳಿಗೆ ಹೋದ್ರ ಅಲ್ಲಿ ಜಾನಪದ ಹಾಡು ಹಾಡೋರು ಇದ್ದರ ಬಂದ ನನಗ ಹೇಳರಿ. ಇದು ಅವರಿಗಿದ್ದ ಜಾನಪದ ಸಾಹಿತ್ಯದ ಹಾಡುಗಳ ಸಂಗ್ರಹದ ಕಾಳಜಿ, ಕಳಕಳಿ.

ನಾನಿಲ್ಲಿ ಹೆಚ್ಚಿಗೆ ಭಾಷಣ ಮಾಡಲಿಕ್ಕೆ ಹೋಗೋದಿಲ್ಲ. ಬೆಳಗ್ಗೆಯಿಂದ ಸಂಜೆವರಿಗೂ ಇಡೀ ದಿವಸ ಅವರ ಬಗ್ಗೆ ಮಾತಾಡಿದ್ದಾರೆ. ಅವರ ಗ್ರಂಥಗಳ ಬಗ್ಗೆ ಚರ್ಚಿಸಿದ್ದಾರೆ. ಈ ಸಂದರ್ಭದಲ್ಲಿ ಒಂದು ಘಟನೆ ಹೇಳಲಿಕ್ಕೆ ಇಚ್ಛೆ ಪಡತೀನಿ ಒಮ್ಮೆ ಬಿ. ಎಂ. ಶ್ರೀಯವರು ಬಿಜಾಪುರಕ್ಕೆ ಕಾರ್ಯಕ್ರಮದ ಅತಿಥಿಯಾಗಿ ಹೊರಟಿದ್ದರಂತೆ ದಾರಿಯಲ್ಲಿ ಮುಧೋಳಕ್ಕೆ ಇಳಿದು ಅಲ್ಲಿಯ ಮಣ್ಣನ್ನು ಹಣೆಗೆ ಹಚ್ಚಿಕೊಂಡರಂತೆ

ಅದನ್ನು ನೋಡಿದ ಹತ್ತಿರದ ವ್ಯಕ್ತಿ ಗಾಬರಿಯಾದನಂತೆ. ಬಿಜಾಪುರಕ್ಕೆ ಹೋದಾಗ ನನಗೇನ ತೋರಿಸ್ತೀರಿ ಅಂದಾಗ ಕರಕೊಂಡು ಹೊರಟ ಕಾರ್ಯಕರ್ತ ಅಲ್ಲಿ ಜಗತ್ಪ್ರಸಿದ್ಧ ಗೋಳಗುಮ್ಮಟಕ್ಕೆ ಕರಕೊಂಡು ಹೋಗತೀನಿ ಅಂದಾಗ ಅದಕ್ಕೀನ ದೊಡ್ಡ ಗುಮ್ಮಟ ಇಲ್ಲಿ ಇದೆ, ಅದನ್ನ ತೋರಿಸು ಮೊದಲು ಅಂದಾಗ ಆ ವ್ಯಕ್ತಿ ಗಾಬರಿ ಆದನಂತೆ. ಆಗ ಅವರೇ ಹೇಳಿದರಂತೆ. ಇಲ್ಲಿ ವಚನ ಸಾಹಿತ್ಯ ಸಂಗ್ರಹದ ದೊಡ್ಡ ವ್ಯಕ್ತಿ ಫಕೀರಪ್ಪ ಹಳಕಟ್ಟಿ ಅಂತ ಇದ್ದಾರ, ಅಲ್ಲಿ ಹೋಗೋಣ ಮೊದಲು ಅಂತ ಹೇಳಿ, ಅಲ್ಲಿ ಹೋಗಿ ಅವರನ್ನ ಕಂಡು ಮುಂದೆ ಹೋಗಿ ಭಾಷಣದಲ್ಲಿ ಈ ವಿಷಯವನ್ನು ಅವರೇ ಹೇಳಿದರಂತೆ.

ಈ ಮಾತನ್ನು ಯಾಕ ಹೇಳಿದೆ ಅಂದರೆ, ಒಂದೊಂದು ಕ್ಷೇತ್ರಕ್ಕೆ, ಒಂದೊಂದು ಊರಿಗೆ, ಒಂದೊಂದು ಸ್ಥಳಕ್ಕೆ ಅಲ್ಲಿ ದುಡಿದಂತಹ ಮಹನೀಯರಿಂದ ಹೆಸರು ಬರುತ್ತೆ. ಜಾನಪದ ಕ್ಷೇತ್ರದ ಮೊದಲ ಹರಿಕಾರ ಇವರು ಜಾನಪದ ಹಾಡುಗಳಿಗೆ ಪಲ್ಲವಿ ಹಾಕಿದ ಮೊದಲಿಗರು. ಇವರು ಜಾನಪದ ಸಾಹಿತ್ಯದಿಂದ ಪಿ.ಎಚ್‌ಡಿ ಮಾಡಬಹುದು ಅನ್ನೋದರ ಮಹತ್ವ ತೋರಿಸಿಕೊಟ್ಟ ಭಾರತದಲ್ಲಿಯೇ ಮೊದಲಿಗರು ಇವರು. ಇವತ್ತು ಇವರಿಂದ ಜಾನಪದ ಕ್ಷೇತ್ರಕ್ಕೆ ಹೆಸರು ಬಂದಿದೆ.

ಡಾ. ಬಸವಯ್ಯ ಗದ್ದಗಿಮಠರು ಆಗಿನ ಕಾಲದಲ್ಲಿ ಉತ್ತರ ಕರ್ನಾಟಕದ ಹಳ್ಳಿಗಳಿಗೆ ತಿರುಗಾಡಿ ಉಪವಾಸವಿದ್ದು, ವನವಾಸವಿದ್ದು, ಹಾಡುಗಳನ್ನು ಸಂಗ್ರಹಿಸಿದರು. ಅವುಗಳಿಗೆ ವಿಶ್ಲೇಷಣೆ ಬರೆದರು ನಂತರ ಪಿಎಚ್. ಡಿ. ಥೀಸಿಸ್ ರಚಿಸಿದರು. ಅವರ ಸಂಗ್ರಹದ ಎಷ್ಟೋ ಮಹತ್ವದ ಕೃತಿಗಳು ಕಳದದ್ದು ನಮ್ಮ ದುರ್ದೈವ. ಇರುವ ಕೃತಿಗಳೆಲ್ಲ ಚೊಕ್ಕ ಚಿನ್ನ, ಕೃತಿಗಳ ಬಗ್ಗೆ ಈಗಾಗಲೇ ವಿದ್ವಾಂಸರು ಮಾತಾಡಿದ್ದಾರೆ.

ಈ ಅಧ್ಯಕ್ಷೀಯ ಭಾಷಣದಲ್ಲಿ ನಾನು ಹೇಳಬೇಕಾದ ಒಂದೆರಡು ಪ್ರಮುಖ ಮಾತುಗಳು. ನಾನು ಇಂಗ್ಲೆಂಡಿಗೆ ಹೋದಾಗ ಅಲ್ಲಿ ಕಂಡದ್ದು, ಯಾವುದೇ ಪ್ರಮುಖ ಕಾರ್ಯ ಆಗಿದ್ದನ್ನ ದಾಖಲಿಸುವುದು. ಇತಿಹಾಸದಲ್ಲಿ ಹಿಡದಿಡುವಂತಹದ್ದು. ಗಣ್ಯ ವ್ಯಕ್ತಿಗಳ, ಹುತಾತ್ಮರ ಸ್ಮಾರಕಗಳನ್ನು ನಿರ್ಮಿಸೋದು. ಆದರೆ ನಮ್ಮಲ್ಲಿ ?

ನಾನು ಪತ್ರಿಕೆಗಳಲ್ಲಿ ಓದಿದ ಸಂಗತಿ ಹೇಳತೀನಿ ಡಿ. ವ್ಹಿ. ಗುಂಡಪ್ಪನವರ ಊರೊಳಗ ಏನೂ ಇಲ್ಲ. ಕುವೆಂಪು ಅವರ ಮನೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಕಾರಂತರ ಬಾಲವನ ನಾಶ ಆಗುವ ಸ್ಥಿತಿಯಲ್ಲಿದೆ. ಹೀಗೆ ದೊಡ್ಡ ದೊಡ್ಡ ಕವಿಗಳ ಬಗ್ಗೆ ಇರೋ ನಿರ್ಲಕ್ಷ ಭಾವನೆ ನಮ್ಮದು. ಯಾವ ಜನರನ್ನು ತಮ್ಮ ಕಾವ್ಯ ಶಕ್ತಿಯಿಂದ ಕುಣಿಸಿದರೋ ಕನ್ನಡಿಗರನ್ನ ಬೆಳೆಸಿದರೊ ಅಂಥವರ ಬಗ್ಗೆನೇ ನಿರ್ಲಕ್ಷ. ಇತ್ತೀಚೆಗೆ ಅದೂ ಜನರು ಜಾಗೃತವಾದ ಮೇಲೆ ಸರಕಾರ ಅಲ್ಲಲ್ಲಿ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ ಸ್ಮಾರಕಗಳು, ಅವುಗಳ ರಕ್ಷಣೆ ತಕ್ಕ ಮಟ್ಟಿಗೆ ನಡೀತಾ ಇದೆ.

ಗದ್ದಗಿಮಠರ ಬಗ್ಗೆ ಆಗಬೇಕಾದ ನನ್ನ ಕೆಲವು ವಿಚಾರಗಳನ್ನು, ಭಾವನೆಗಳನ್ನು ನಾನಿಲ್ಲಿ ತಮ್ಮ ಮುಂದೆ ಪ್ರಸ್ತಾಪ ಮಾಡತೀನಿ. ಮೊದಲನೆಯದು, ಈಗಾಗಲೇ ಡಾ॥

ರಾಜೇಂದ್ರ ಯರನಾಳೆ ಹೇಳಿದಂತೆ ಡಾ. ಗದ್ದಗಿಮಠರ ಹೆಸರನ್ನ ಇಲ್ಲಿಯ ಕರ್ನಾಟಕ ವಿಶ್ವ ವಿದ್ಯಾಲಯದ ಜಾನಪದ ವಿಭಾಗಕ್ಕೆ ಇಡಬೇಕು. ಎರಡನೇಯದೆಂದರೆ, ಡಾ. ಗದ್ದಗಿಮಠರ ಹೆಸರನ್ನು ಪ್ರಸಾರಗೊಳಿಸಬೇಕಾದರೆ, ಅವರ ಮಕ್ಕಳು ಒಂದು ಪ್ರತಿಷ್ಠಾನ ಮಾಡಬೇಕು. ಮಕ್ಕಳೆಲ್ಲ ಸ್ಥಿತಿವಂತರಿದ್ದಾರೆ ಯಾರೂ ಬಡವರಿಲ್ಲ, ಅವರೆಲ್ಲ ಮನಸ್ಸು ಮಾಡಿದ್ರೆ ಇದೇನು ದೊಡ್ಡ ಕೆಲಸವಲ್ಲ. ಪ್ರತಿಷ್ಠಾನ ಸ್ಥಾಪಿಸಿ, ಪ್ರತಿವರ್ಷ ಅದರಿಂದ ವಿಚಾರ ಸಂಕಿರಣಗಳು, ಭಾಷಣಗಳು, ವಿದ್ವಾಂಸರಿಗೆ ಪ್ರಶಸ್ತಿಗಳು ಹೀಗೆ ಕಾರ್ಯ ನಡೀಬೇಕು ಅದರಿಂದ ಅವರ ತತ್ವಗಳು ಅವರ ವಿಚಾರಗಳು ಪ್ರಸಾರಾಗಬೇಕಂತ ಹೇಳಿ ನನ್ನ ಒಂದೆರಡು ಮಾತುಗಳನ್ನು ಮುಗಿಸ್ತೀನಿ, ಮತ್ತೊಮ್ಮೆ ತಮ್ಮೆಲ್ಲರಿಗೂ ನಮಸ್ಕಾರ.

❖



ಕರ್ನಾಟಕದಲ್ಲಿ ಜಾನಪದ ವಿಷಯದಲ್ಲಿ ಸಂಶೋಧನಾ ಅಧ್ಯಯನವನ್ನು ನಡೆಸಿ, ಪ್ರಪ್ರಥಮ ಪಿಹೆಚ್.ಡಿ. ಪದವಿ ಪಡೆದ ಹೆಗ್ಗಳಿಕೆ, ಡಾ. ಬಿ. ಎಸ್. ಗದ್ದಗಿಮಠರದ್ದು. ಒಂದು ಸಂಸ್ಥೆ ಮಾಡಬಹುದಾದ ಕೆಲಸವನ್ನು ಆ ಕಾಲದಲ್ಲಿ ಡಾ. ಗದ್ದಗಿಮಠರೊಬ್ಬರೇ ಮಾಡಿರುತ್ತಾರೆ. ಉತ್ತರ ಕರ್ನಾಟಕದ ಗೀತ ಪ್ರಕಾರಗಳ ಶೋಧದೊಂದಿಗೆ ಜನಪದ ಆಚರಣೆಗಳು, ಜನಪದ ಕಲೆಗಳು, ಜನಪದ ವಾಸ್ತುಶಿಲ್ಪ ಮುಂತಾದವುಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿ, ಜಾನಪದದ ಬಗ್ಗೆ ಹೊಸ ಪರಿಕಲ್ಪನೆಯನ್ನು ನೀಡಿರುತ್ತಾರೆ. ಡಾ. ಗದ್ದಗಿಮಠರ ಜಾನಪದ ಅಧ್ಯಯನ, ಪರಂಪರೆಯಾಗಿ ಈ ಭಾಗದಲ್ಲಿ ಮುಂದುವರೆದಿಲ್ಲದಿರುವುದು ಹಾಗೂ ಜಾನಪದ ಸಂಗ್ರಹಕಾರ್ಯಗಳು ಸಾಕಷ್ಟು ಹೊರ ಬಂದಿಲ್ಲದಿರುವುದು ವಿಷಾದದ ಸಂಗತಿ.

ತಮ್ಮ ಜೀವನವನ್ನೇ ಜಾನಪದ ಸಂಗ್ರಹ ಹಾಗೂ ಅಧ್ಯಯನಗಳಿಗೆ ಮುಡಿಪಾಗಿಟ್ಟ ಡಾ. ಗದ್ದಗಿಮಠರನ್ನೇ ಕುರಿತು ಹೆಚ್ಚಿನ ಅಧ್ಯಯನಗಳಾಗದಿರುವುದು ಮತ್ತೊಂದು ದೊಡ್ಡಕೊರತೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿ ಧಾರವಾಡದಲ್ಲಿಯೇ ವಿಚಾರಸಂಕಿರಣವನ್ನು ನಡೆಸಿ, ಲೇಖನಗಳನ್ನು ಗ್ರಂಥರೂಪದಲ್ಲಿ ತರುತ್ತಿರುವುದು ಸ್ತುತ್ಯಾರ್ಹ.

ಕನ್ನಡದಲ್ಲಿ ಜಾನಪದ ಆದ್ಯ ಸಂಶೋಧಕರಾದ ಡಾ. ಗದ್ದಗಿಮಠರ ಜಾನಪದ ಕ್ಷೇತ್ರಕಾರ್ಯ ವಿಧಾನ, ಸಂಗ್ರಹಣಾ ಪದ್ಧತಿ, ಸಂಶೋಧನಾ ಸ್ವರೂಪ ಮುಂತಾದವುಗಳನ್ನು ಕುರಿತು ಆಳವಾದ ಅಧ್ಯಯನ, ಚರ್ಚೆ, ಶೋಧಗಳು ನಡೆಯಬೇಕಾದ ಆವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಶ್ರೀ ಗವೀಶ ಹಿರೇಮಠರು ಹೆಚ್ಚಿನ ಕಾಳಜಿವಹಿಸಿ, ಅಕಾಡೆಮಿಯ ಪರವಾಗಿ ವಿಚಾರಸಂಕಿರಣ ನಡೆಸಿ, ನಡಾವಳಿಯನ್ನು ಗ್ರಂಥರೂಪದಲ್ಲಿ ಹೊರತರುತ್ತಿರುವದು ಸಮಾಧಾನದ ವಿಷಯ ಮತ್ತು ವಿಚಾರಸಂಕಿರಣದಲ್ಲಿ ಮಂಡಿಸಿದ ಎಲ್ಲ ಬರಹಗಳನ್ನೂ ಅವರು ಪ್ರಕಟಣೆಗೆ ದೊರಕಿಸಿಕೊಂಡಿರುವುದು ಅವರ ಸಂಘಟನಾ ಸಾಮರ್ಥ್ಯವನ್ನು ಹಾಗೂ ವಿದ್ವಾಂಸರು ಡಾ. ಗದ್ದಗಿಮಠರ ಮೇಲಿಟ್ಟಿರುವ ಅಭಿಮಾನವನ್ನೂ ಸೂಚಿಸುತ್ತದೆ. ಈ ಗ್ರಂಥದ ಲೇಖನಗಳು ಡಾ. ಬಿ. ಎಸ್. ಗದ್ದಗಿಮಠರ ಜಾನಪದ ಕೊಡುಗೆಯನ್ನು ಗುರುತಿಸಿರುವುದರೊಂದಿಗೆ ಅವರ ಅಧ್ಯಯನದ ಬಗ್ಗೆ ಹೆಚ್ಚಿನ ಕುತೂಹಲ ಹುಟ್ಟಿಸುವಲ್ಲಿ ಸಮರ್ಥವಾಗಿವೆ.

**ಡಾ. ಶಾಲಿನಿ ರಘುನಾಥ**
ಅಧ್ಯಕ್ಷರು, ಜಾನಪದ ಅಧ್ಯಯನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು–೫೬೦ ೦೦೨